ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಫಿಟ್‌ನೆಸ್ ಹೆಸರಿನಲ್ಲಿ ದೇಹ ಕಟೆಯಲು ಹೊರಟವರು ಏನು ಮಾಡಬೇಕು, ಏನು ಮಾಡಬಾರದು?

ಆಂಧ್ರದಲ್ಲಿ ಮಳೆ, ಪ್ರವಾಹ: 25 ಸಾವು 4
ಕೃಷಿ ಕಾಯ್ದೆ ಹಿಂಪಡೆಯುವ ನಿರ್ಧಾರದ ಬಗ್ಗೆ ತಜ್ಞರ ವಿಶ್ಲೇಷಣೆ
ದಾವಣಗೆರೆ: ಮಳೆಗೆ ಮೂವರ ಸಾವು 4
'ತಾನೇ ಎತ್ತಿದ ಕತ್ತಿ ತನಗೇ ಭಾರವಾದಾಗ' 7

ಸಂಧಿಲಿನ್
ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ!
ತಯಾರಕರು
SDM ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ–574 118, ಉಡುಪಿ ಜಿಲ್ಲೆ, ಕರ್ನಾಟಕ.
Ph: 0820-2520852, 8970977513

ಸುದರ್ಶನ್ ಜ್ಯುವೆಲರ್ಸ್
ಚಿನ್ನ ❖ ಬೆಳ್ಳಿ ❖ ಚಿನ್ನದ ಆಭರಣಗಳು
916 Hallmark Gold Rate
₹4495/-gm
ಬೆಳ್ಳಿ ₹ 62,000/-
ಚಿಕ್ಕಪೇಟೆ: 41300355

'ಪ್ರತಿಭಟನೆ ನಿಲ್ಲದು'

ಪ್ರಜಾವಾಣಿ ವಾರ್ತೆ

ನವದೆಹಲಿ: ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವ ಪ್ರಧಾನಿ ನರೇಂದ್ರ ಮೋದಿ ನಿರ್ಧಾರವನ್ನು ರೈತ ಸಂಘಟನೆಗಳು ಸ್ವಾಗತಿಸಿವೆ. ಆದರೆ, ಸಂಸತ್ತಿನ ಕಾರ್ಯವಿಧಾನಗಳ ಮೂಲಕ ಘೋಷಣೆ ಜಾರಿಗೆ ಬರುವವರೆಗೆ ದೆಹಲಿಯ ವಿವಿಧ ಗಡಿಗಳಲ್ಲಿ ನಡೆಯುತ್ತಿರುವ ಪ್ರತಿಭಟನೆ ಮುಂದುವರಿಸುವುದಾಗಿ ಹೇಳಿವೆ.

ಪೂರ್ವನಿಗದಿತ ಪ್ರತಿಭಟನೆಗಳನ್ನು ಮುಂದುವರಿಸುವುದಾಗಿ ರೈತ ಸಂಘಟನೆಗಳ ಒಕ್ಕೂಟ 'ಸಂಯುಕ್ತ ಕಿಸಾನ್ ಮೋರ್ಚಾ' ಶನಿವಾರ ತಿಳಿಸಿದೆ.

ಸಂಸತ್ ಚಳಿಗಾಲದ ಅಧಿವೇಶನದ ವೇಳೆ ಪ್ರತಿನಿತ್ಯ ಸಂಸತ್ ಭವನದ ವರೆಗೆ ಹಮ್ಮಿಕೊಂಡಿರುವ ಟ್ರ್ಯಾಕ್ಟರ್ ಜಾಥಾ ಹಾಗೂ ಲಖನೌನಲ್ಲಿ ಆಯೋಜಿಸಲಾಗಿರುವ ರೈತ ಮಹಾ ಪಂಚಾಯತ್ ಕಾರ್ಯಕ್ರಮಗಳು ನಿಗದಿಯಂತೆ ನಡೆಯಲಿವೆ. ನವೆಂಬರ್ 26ಕ್ಕೆ ರೈತರ ಪ್ರತಿಭಟನೆಗೆ ಒಂದು ವರ್ಷ ಸಲ್ಲುತ್ತಿರುವ ಹಿನ್ನೆಲೆಯಲ್ಲಿ, ನಿತ್ಯ 500 ಟ್ರ್ಯಾಕ್ಟರ್‌ಗಳ ಮೂಲಕ ಸಂಸತ್ ಭವನಕ್ಕೆ ಜಾಥಾ ನಡೆಸುವುದಾಗಿ ಇದೇ ತಿಂಗಳ ಆರಂಭದಲ್ಲಿ ರೈತ ಸಂಘಟನೆಗಳು ಘೋಷಿಸಿದ್ದವು.

4ನೇ ಪುಟ ನೋಡಿ

ಅಜಯ್ ಮಿಶ್ರಾ ವಿರುದ್ಧ ಕ್ರಮಕ್ಕೆ ಆಗ್ರಹ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ, ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆಯುವ ನಿರ್ಧಾರವನ್ನು ಈ ಮೊದಲೇ ಪ್ರಕಟಿಸಿದ್ದರೆ, ನೂರಾರು ಅಮಾಯಕ ಜೀವಗಳು ಉಳಿಯುತ್ತಿದ್ದವು ಎಂದು ಬಿಜೆಪಿ ಸಂಸದ ವರುಣ್ ಗಾಂಧಿ ಹೇಳಿದ್ದಾರೆ.

ವರುಣ್ ಗಾಂಧಿ

ಈ ಬಗ್ಗೆ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿರುವ ಅವರು, ಲಖಿಂಪುರ– ಖೇರಿಯಲ್ಲಿ ನಡೆದ ಹಿಂಸಾಚಾರ– ರೈತರ ಸಾವು ಪ್ರಕರಣದ ತನಿಖೆಯು ನ್ಯಾಯಯುತವಾಗಿ ನಡೆಯಲು, ಕೇಂದ್ರ ಸಚಿವ ಅಜಯ್‌ಮಿಶ್ರಾ ಅವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

4ನೇ ಪುಟ ನೋಡಿ

ಸತ್ತವರ ನೆರಳಿನ ಹುಡುಕಾಟ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಕೋವಿಡ್ ಆಕ್ರಮಣ ತಡೆಗಾಗಿನ ಲಾಕ್‌ಡೌನ್ ತಂದಿತ್ತ ಆರ್ಥಿಕ ಆಘಾತ, ಹುತ್ತಗಟ್ಟುತ್ತಲೇ ಹೋದ ಅಭದ್ರತೆಯ ಕರಿನೆರಳು ಕುಟುಂಬ ಆತ್ಮಹತ್ಯೆಯ 'ವಿನಾಶಕಾರಿ' ನಡೆಗೆ ದಾರಿ ಮಾಡಿಕೊಟ್ಟವು. ಸಾಮಾಜಿಕ ಕ್ಷೋಭೆಯ ಪರಿಣಾಮದಿಂದಾದ ಮನೋವ್ಯಾಕುಲತೆಯೂ ಹೆಚ್ಚಾಗಿ ಮನೆಮಂದಿಯೆಲ್ಲ ಕೂಡಿ ಆತ್ಮಹತ್ಯೆ ಮಾಡಿಕೊಳ್ಳುವ ದುರಂತ ಪ್ರಕರಣಗಳು ಸರಣಿಯೋಪಾದಿಯಲ್ಲಿ ನಡೆಯುತ್ತಲೇ ಹೋದವು. ಸಾವೇ ಪರಿಹಾರ ಎಂದು ನಿಶ್ಚಯಕ್ಕೆ ಬಂದಂತಿರುವ ಜನರಲ್ಲಿ ವಿಶ್ವಾಸ ಮೂಡಿಸಿ, ಜೀವ ಉಳಿಸುವ ಮಂತ್ರದಂಡ ಯಾವುದು ಎಂಬುದು ಸರ್ಕಾರ, ಸಮಾಜ, ವೈದ್ಯಲೋಕದ ಮುಂದಿರುವ ಸವಾಲು.

2020ರ ಜೂನ್‌ನಲ್ಲಿ ಚಾಮರಾಜನಗರ ತಾಲ್ಲೂಕಿನ ಮೂಕನಹಳ್ಳಿಯ ರೈತ ಮಹಾದೇವಸ್ವಾಮಿ ಪತ್ನಿ ಮತ್ತು ಇಬ್ಬರು ಹೆಣ್ಣು ಮಕ್ಕಳೊಂದಿಗೆ ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಘಟನೆಯ ನಂತರ ಆಗಾಗ ಇಂತಹ ಪ್ರಕರಣಗಳು ಮರುಕಳಿಸುತ್ತಲೇ ಇವೆ. ಬೆಳಗಾವಿ ಜಿಲ್ಲೆಯೊಂದರಲ್ಲೇ ವರ್ಷ ಕಳೆಯುವುದರೊಳಗೆ ಇಂತಹ ಮೂರು ಪ್ರಕರಣಗಳು ನಡೆದಿವೆ.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ₹ 1.5 ಲಕ್ಷ ಸಾಲದ ಹೊರೆ ತಾಳಲಾರದೆ ಕುಟುಂಬವೊಂದು ನೇಣಿಗೆ ಕೊರಳೊಡ್ಡಿತು. ಬಿಎಂಟಿಸಿಯಲ್ಲಿ ಚಾಲಕನಾಗಿದ್ದ ಪತಿಯನ್ನು ಕೋವಿಡ್‌ನಿಂದ ಕಳೆದುಕೊಂಡ ಮಹಿಳೆಯೊಬ್ಬರು ಇಬ್ಬರು ಮಕ್ಕಳೊಂದಿಗೆ ಜೀವನಕ್ಕೆ ವಿದಾಯ ಹೇಳಿದ್ದರು. ಕೌಟುಂಬಿಕ ಕಲಹದಿಂದ ನಲುಗಿಹೋಗಿದ್ದ ಕುಟುಂಬವೊಂದರ ತಾಯಿ ಮತ್ತು ಮೂವರು ಮಕ್ಕಳು ಹಾಲುಗಲ್ಲದ ಹಸುಳೆಯೊಂದನ್ನು ಉಸಿರುಗಟ್ಟಿಸಿ, ನಂತರ ತಾವೆಲ್ಲರೂ ಆತ್ಮಹತ್ಯೆ ಮಾಡಿಕೊಂಡ ಹೃದಯವಿದ್ರಾವಕ ಘಟನೆಗೆ ಬೆಂಗಳೂರು ಎರಡು ತಿಂಗಳ ಹಿಂದಷ್ಟೇ ಸಾಕ್ಷಿಯಾಗಿತ್ತು.

ಮಗು ಅಪಹರಣದ ಆರೋಪವುಳ್ಳ ದೂರಿಗೆ ಸಂಬಂಧಿಸಿದಂತೆ ಪೊಲೀಸ್ ಠಾಣೆಯಲ್ಲಿ ಹಿಂಸಿಸಿ, ಅವಮಾನಿಸಲಾಗಿದೆ ಎಂಬ ಕಾರಣಕ್ಕೆ ಕೋಲಾರ ನಗರದ ಒಂದೇ ಕುಟುಂಬದ ಐವರು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದು ಈ ಪಟ್ಟಿಗೆ ಸೇರಿರುವ ಇತ್ತೀಚಿನ ಘಟನೆ.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಒಳನೋಟ
ಈ ಸಾವು ನ್ಯಾಯವೇ?
ಪ್ರತಿಕ್ರಿಯಿಸಿ: 9606038256
feedback@prajavani.co.in

ರಾಜ್ಯದಲ್ಲಿ ನಡೆದ ಆತ್ಮಹತ್ಯೆ ಪ್ರಕರಣಗಳ ವಿವರ



ಬಹು ಆಯಾಮದ ಸಮಸ್ಯೆ

ಸಾಮೂಹಿಕ ಆತ್ಮಹತ್ಯೆ ಹೆಚ್ಚಳಕ್ಕೆ ಬಹು ಆಯಾಮಗಳಿವೆ. ಹೆಚ್ಚು ಪ್ರಕರಣಗಳಲ್ಲಿ ಆರ್ಥಿಕ ಕಾರಣ ಇರಬಹುದು. ಅದಕ್ಕಿಂತಲೂ ಮುಖ್ಯವಾಗಿ ಬದಲಾದ ಸಾಮಾಜಿಕ ವ್ಯವಸ್ಥೆಯೇ ಕಾರಣ. ದಿಢೀರ್ ಶ್ರೀಮಂತರಾಗುವ, ಯಾವುದೋ ಅನುಕೂಲ ಪಡೆಯುವ ಆಸೆಯಿಂದ ಮೋಸಕ್ಕೊಳಗಾಗುವುದು ಹೆಚ್ಚುತ್ತಿದೆ. ಆಗ ಹತಾಶೆಯಿಂದ ಆತ್ಮಹತ್ಯೆಯ ದಾರಿ ಹಿಡಿಯುವವರು ಇದ್ದಾರೆ ಎನ್ನುತ್ತಾರೆ ಆರ್ಥಿಕ ತಜ್ಞ ಪ್ರೊ.ಟಿ.ಆರ್. ಚಂದ್ರಶೇಖರ

ಯಾರಿಗೂ ವ್ಯವಧಾನ ಇಲ್ಲದಂತಹ ವಾತಾವರಣ ಈಗ ಇದೆ. ಈ ಸಮಸ್ಯೆಗೆ ಪರಿಹಾರ ದೊರಕಬೇಕಾದರೆ ಕೌಟುಂಬಿಕ ಆಪ್ತ ಸಮಾಲೋಚನೆಯ ಸೌಲಭ್ಯವನ್ನು ಹೆಚ್ಚು ವ್ಯವಸ್ಥಿತಗೊಳಿಸಬೇಕು ಮತ್ತು ವಿಸ್ತರಿಸುವ ಕೆಲಸ ಆಗಬೇಕು ಎಂದು ಅವರು ಸಲಹೆ ನೀಡುತ್ತಾರೆ.

ಪ್ರತ್ಯೇಕ ವಿವರ ಅಲಭ್ಯ

ರಾಜ್ಯ ಅಪರಾಧ ದಾಖಲೆಗಳ ಬ್ಯೂರೊ (ಎಸ್‌ಸಿಆರ್‌ಬಿ), ಎನ್‌ಸಿಆರ್‌ಬಿ ಸೇರಿದಂತೆ ಎಲ್ಲಿಯೂ ಸಾಮೂಹಿಕ ಆತ್ಮಹತ್ಯೆ ಪ್ರಕರಣಗಳ ಮಾಹಿತಿಯನ್ನು ಪ್ರತ್ಯೇಕವಾಗಿ ದಾಖಲಿಸುವ ಪ್ರಕ್ರಿಯೆ ನಡೆದಿಲ್ಲ. ಹೀಗಾಗಿ ಈ ಪ್ರಕರಣಗಳ ನಿರ್ದಿಷ್ಟ ಅಂಕಿಅಂಶವೇ ಲಭ್ಯವಿಲ್ಲ.

ಎಲ್ಲ ಆತ್ಮಹತ್ಯೆ ಪ್ರಕರಣಗಳನ್ನೂ ಬಿಡಿ ಬಿಡಿಯಾಗಿಯೇ ದಾಖಲಿಸಲಾಗುತ್ತದೆ. ಅದೇ ಮಾಹಿತಿಯನ್ನು ಸಂಗ್ರಹಿಸಿ, ವಿಶ್ಲೇಷಣೆ ನಡೆಸಲಾಗುತ್ತಿದೆ. ಹೀಗಾಗಿ ಸಾಮೂಹಿಕ ಆತ್ಮಹತ್ಯೆ ಪ್ರಕರಣಗಳ ಕುರಿತು ಈವರೆಗೂ ಪ್ರತ್ಯೇಕವಾದ ವಿಶ್ಲೇಷಣೆಗಳು ನಡೆದಿಲ್ಲ ಎನ್ನುತ್ತವೆ ಗೃಹ ಇಲಾಖೆ ಮೂಲಗಳು.

ಕಸಾಪ ಚುನಾವಣೆ: ಇಂದು ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ರಾಜ್ಯ ಘಟಕದ ಅಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷ ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷ ಸ್ಥಾನಕ್ಕೆ ಭಾನುವಾರ ಬೆಳಿಗ್ಗೆ 8ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ.

ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ 21 ಅಭ್ಯರ್ಥಿಗಳು ಸ್ಪರ್ಧೆಯಲ್ಲಿ ಇದ್ದಾರೆ. 3.10 ಲಕ್ಷ ಮಂದಿ ಮತ ಚಲಾಯಿಸಲು ಅರ್ಹರಾಗಿದ್ದು, 420 ಮತಗಟ್ಟೆಗಳನ್ನು ಗುರುತಿಸಲಾಗಿದೆ.

3B ಪುಟ ನೋಡಿ

ಚಿನಕುರಳಿ
ಪ್ರಕಾಶ್ ಶೆಟ್ಟಿ

ಸ್ವಚ್ಛತೆಯೆಡೆಗೆ ಕರ್ನಾಟಕ ಕೇಂದ್ರದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸ್ವಚ್ಛತೆಯೆಡೆಗೆ ತ್ವರಿತವಾಗಿ ಸಾಗುತ್ತಿರುವ ರಾಜ್ಯ' ವಿಭಾಗದ ಪ್ರಶಸ್ತಿಗೆ ಕರ್ನಾಟಕ ಭಾಜನವಾಗಿದೆ.

ಕೇಂದ್ರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ನೀಡುವ 2021ನೇ ಸಾಲಿನ ಸ್ವಚ್ಛ ಸರ್ವೇಕ್ಷಣಾ ವಿಭಾಗದ ವಿವಿಧ ಪ್ರಶಸ್ತಿಗಳಿಗೆ ರಾಜ್ಯದ 9 ನಗರ ಸ್ಥಳೀಯ ಸಂಸ್ಥೆಗಳು ಆಯ್ಕೆಯಾಗಿವೆ.

ನಗರ ಸ್ಥಳೀಯ ಸಂಸ್ಥೆಗಳು ಅಗತ್ಯ ಕ್ರಮ ಕೈಗೊಂಡಿದ್ದು, ಸ್ವಚ್ಛತೆ ಕುರಿತಂತೆ ರಾಜ್ಯದಲ್ಲಿ ಸಾಕಷ್ಟು ಪ್ರಗತಿ ಕಂಡು ಬರುತ್ತಿದೆ. ರಾಷ್ಟ್ರದ 4,360 ಪಟ್ಟಣ ಮತ್ತು ನಗರಗಳ ಸ್ಥಳೀಯ ಸಂಸ್ಥೆಗಳ ಕಾರ್ಯವೈಖರಿ ಬಗ್ಗೆ ಅವಲೋಕನ ಮತ್ತು ಸಮೀಕ್ಷೆ ನಡೆಸಿರುವ ಕೇಂದ್ರವು ಕರ್ನಾಟಕ ರಾಜ್ಯಕ್ಕೆ ಪ್ರಶಸ್ತಿ ಘೋಷಿಸಿದೆ. 100ಕ್ಕೂ ಅಧಿಕ ನಗರ ಸ್ಥಳೀಯ ಸಂಸ್ಥೆಗಳನ್ನು ಒಳಗೊಂಡಿರುವ ರಾಜ್ಯಗಳ ಪೈಕಿ ಛತ್ತೀಸಗಡವು ಸ್ವಚ್ಛ ರಾಜ್ಯ ಪ್ರಶಸ್ತಿ ಪಡೆದಿದ್ದು, ರಾಜ್ಯಕ್ಕೆ 4ನೇ ಸ್ಥಾನ ದೊರೆತಿದೆ. ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಹಾಗೂ ಇಲಾಖೆಯ ಅಧಿಕಾರಿಗಳು ಶನಿವಾರ ಇಲ್ಲಿ ನಡೆದ ಸಮಾರಂಭದಲ್ಲಿ ಕೇಂದ್ರ ಸಚಿವ ಹರದೀಪ್ ಸಿಂಗ್ ಪುರಿ ಅವರಿಂದ ಪ್ರಶಸ್ತಿ ಸ್ವೀಕರಿಸಿದರು.

ಬೃಹತ್ ಬೆಂಗಳೂರು ಮಹಾ ನಗರ ಪಾಲಿಕೆ (ಬಿಬಿಎಂಪಿ)ಯು 40 ಲಕ್ಷಕ್ಕಿಂತ ಅಧಿಕ ಜನಸಂಖ್ಯೆ ಇರುವ ನಗರಗಳ ಪೈಕಿ ಸ್ವಚ್ಛತೆಯೆಡೆಗೆ ಅತಿ ವೇಗದಲ್ಲಿ ಸಾಗುತ್ತಿರುವ ಮೆಗಾ ಸಿಟಿ ವಿಭಾಗದಲ್ಲಿ ಪ್ರಥಮ ರ‍್ಯಾಂಕ್ ಪಡೆದಿದೆ.

4ನೇ ಪುಟ ನೋಡಿ

ಎಸಿಬಿ ದಾಳಿ: ಎರಡನೇ ದಿನವೂ ಮುಂದುವರಿದ ಶೋಧ

ಬಿಡಿಎ: ₹ 200 ಕೋಟಿಗೂ ಹೆಚ್ಚು ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನ ಹಂಚಿಕೆಯಲ್ಲಿ ಅಕ್ರಮ, ಸರ್ಕಾರಿ ಜಮೀನುಗಳ ಹೆಸರಿನಲ್ಲಿ ಖಾಸಗಿ ವ್ಯಕ್ತಿಗಳಿಗೆ ಪರಿಹಾರ ಪಾವತಿ ಸೇರಿದಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ (ಬಿಡಿಎ) ₹ 200 ಕೋಟಿಗೂ ಹೆಚ್ಚು ಮೊತ್ತದ ಅಕ್ರಮ ನಡೆದಿರುವುದನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶನಿವಾರ ಪತ್ತೆಮಾಡಿದೆ.

ವ್ಯಾಪಕ ಅಕ್ರಮ, ಅವ್ಯವಹಾರ ನಡೆಯುತ್ತಿರುವ ದೂರುಗಳನ್ನು ಆಧರಿಸಿ ಶುಕ್ರವಾರ ಬಿಡಿಎ ಕೇಂದ್ರ ಕಚೇರಿ ಮೇಲೆ ದಾಳಿಮಾಡಿದ್ದ ಎಸಿಬಿ ಅಧಿಕಾರಿಗಳು, ₹ 100 ಕೋಟಿಗೂ ಹೆಚ್ಚು ಮೌಲ್ಯದ ಅಕ್ರಮಗಳಿಗೆ ಸಂಬಂಧಿಸಿದ ದಾಖಲೆಗಳನ್ನು ವಶಕ್ಕೆ ಪಡೆದಿದ್ದರು. ಕಾರ್ಯಾಚರಣೆ ಪೂರ್ಣಗೊಳ್ಳದ ಕಾರಣದಿಂದ ಕಚೇರಿಗಳ ಬಾಗಿಲುಗಳನ್ನು ಮೊಹರು ಮಾಡಲಾಗಿತ್ತು. ಶನಿವಾರ ಮತ್ತೆ ಶೋಧ ನಡೆಸಿದ್ದು, ಅಕ್ರಮಗಳ ಸರಮಾಲೆಯೇ ಪತ್ತೆಯಾಗಿದೆ.

'ನಕಲಿ ದಾಖಲೆಗಳನ್ನು ಸೃಷ್ಟಿಸಿ ಅರ್ಕಾವತಿ, ಕೆಂಪೇಗೌಡ ಮತ್ತು ವಿಶ್ವೇಶ್ವರಯ್ಯ ಬಡಾವಣೆಗಳಲ್ಲಿ ಅನರ್ಹ ವ್ಯಕ್ತಿಯೊಬ್ಬರಿಗೆ ₹ 75 ಕೋಟಿ ಮೌಲ್ಯದ ಆರು ನಿವೇಶನಗಳನ್ನು ಅಕ್ರಮವಾಗಿ ನೀಡಿರುವುದು ಪತ್ತೆಯಾಗಿದೆ. ಕೆಂಗೇರಿ ಹೋಬಳಿ ಉಲ್ಲಾಳ ಗ್ರಾಮದಲ್ಲಿ ವ್ಯಕ್ತಿಯೊಬ್ಬರ ಜಮೀನನ್ನು ಬಡಾವಣೆಗೆ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದು ನಕಲಿ ದಾಖಲೆ ಸೃಷ್ಟಿಸಿ ಪರಿಹಾರ ರೂಪದಲ್ಲಿ ₹ 1.5 ಕೋಟಿ ಮೌಲ್ಯದ ನಿವೇಶನ ನೀಡಿರುವುದನ್ನೂ ಪತ್ತೆಮಾಡಲಾಗಿದೆ' ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ನಕಲಿ ದಾಖಲೆ ಸೃಷ್ಟಿಸಿ ಚಂದ್ರಾ ಲೇಔಟ್ ಪ್ರದೇಶದಲ್ಲಿ ವ್ಯಕ್ತಿಯೊಬ್ಬರಿಗೆ ₹ 5 ಕೋಟಿ ಮೌಲ್ಯದ ನಿವೇಶನ ಮತ್ತು ಕೆಂಗೇರಿ ಉಪನಗರ ಬಳಿ ₹ 80 ಲಕ್ಷ ಮೌಲ್ಯದ ನಿವೇಶನ ನೀಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

4ನೇ ಪುಟ ನೋಡಿ

ವಿಮಾ ಸಂಸ್ಥೆಯಿಂದ ಬೆಳೆನಷ್ಟ ಪರಿಹಾರ

ಯಲಹಂಕ: ಕಟಾವಿನ ನಂತರ ಎರಡು ವಾರದೊಳಗೆ ಅಕಾಲಿಕ ಮಳೆ ಅಥವಾ ಚಂಡಮಾರುತದಿಂದ ಬೆಳೆ ನಾಶವಾದರೆ ಕರ್ನಾಟಕ ರೈತ ಸುರಕ್ಷಾ ಫಸಲ್ ಬಿಮಾ ಯೋಜನೆಯಡಿ ವಿಮಾ ಸಂಸ್ಥೆಯು ಬೆಳೆನಷ್ಟ ನಿರ್ಧರಿಸಿ ಪರಿಹಾರ ಇತ್ಯರ್ಥ ಪಡಿಸಲಿದೆ.

'ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ರಾಗಿ, ಭತ್ತ, ಮುಸುಕಿನ ಜೋಳ ಬೆಳೆಗಳನ್ನು ಈ ಯೋಜನೆಗೆ ಒಳಪಡಿಸಲಾಗಿದ್ದು, ವಿಮೆಗೆ ನೋಂದಾಯಿಸಿದ ರೈತರು, ವಿಮಾ ಸಂಸ್ಥೆಗಳು ಅಥವಾ ವಿಮೆ ಮಾಡಿಸಿದ ಬೆಳೆಯ ವಿವರ, ಹಾನಿಯ ವಿವರ ಮತ್ತು ಕಾರಣಗಳೊಂದಿಗೆ 72 ಗಂಟೆಯೊಳಗೆ ಕೃಷಿ ಇಲಾಖೆಗೆ ತಿಳಿಸಬಹುದು' ಎಂದು ಉತ್ತರ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಸಂಸ್ಥೆಯ ವಿಳಾಸ: ಫ್ಯೂಚರ್ ಜನರಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್, ಶ್ರಾವಣಿ ಕೃಷ್ಣ ಮ್ಯಾನ್ಷನ್, ಅಶೋಕ ಪಿಲ್ಲರ್ ರಸ್ತೆ, ಮಾದವನ್ ಪಾರ್ಕ್ ಹತ್ತಿರ, ಜಯನಗರ. ಸಂಪರ್ಕ:8105267067 (ಬೆಂಗಳೂರು ಪೂರ್ವ ಮತ್ತು ಯಲಹಂಕ)

ನಗರದ ಪ್ರಥಮ ಕಣ್ಣಿನ ಚಿಕಿತ್ಸೆ ಆಸ್ಪತ್ರೆಗೆ 125ನೇ ವರ್ಷದ ಸಂಭ್ರಮ

ಅಂಧರ ಜಗತ್ತಿಗೆ 'ಮಿಂಟೊ' ಮಿಂಚು

• ವರುಣ್ ಹೆಗಡೆ

ಬೆಂಗಳೂರು: ಕಣ್ಣಿನ ಸಮಸ್ಯೆಗಳಿಗೆ ಚಿಕಿತ್ಸೆ ಒದಗಿಸಲು ನಗರದ ಸಂತೆ ಪೇಟೆ ರಸ್ತೆಯಲ್ಲಿ ಶತಮಾನದ ಹಿಂದೆ ಪ್ರಾರಂಭವಾದ ಸಣ್ಣ ನೇತ್ರ ಚಿಕಿತ್ಸಾ ಕೇಂದ್ರ, ಮಿಂಟೊ ನೇತ್ರ ಚಿಕಿತ್ಸಾ ಪ್ರಾದೇಶಿಕ ಸಂಸ್ಥೆಯಾಗಿ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿದೆ. 125ನೇ ವರ್ಷಕ್ಕೆ ಕಾಲಿಟ್ಟಿರುವ ಈ ಸಂಸ್ಥೆಯು ಜಗತ್ತಿನ ಅತಿ ಹಳೆಯ ಕಣ್ಣಿನ ಆಸ್ಪತ್ರೆಗಳಲ್ಲಿ ಒಂದು.

ಟಿಪ್ಪು ಸುಲ್ತಾನ್ ಅರಮನೆ ರಸ್ತೆ, ಆಲೂರು ವೆಂಕಟರಾವ್ ರಸ್ತೆಯಲ್ಲಿ ಸಾಗುವಾಗ ಕಾಣಸಿಗುವ ಬ್ರಿಟಿಷರ ಕಾಲದ ಕಟ್ಟಡವು ಮೊದಲ ನೋಟಕ್ಕೆ ಯಾವುದೋ ಅರಮನೆಯಂತೆ ಕಾಣಿಸುತ್ತದೆ. ಈಗಲೂ ಸುಸಜ್ಜಿತವಾಗಿರುವ ಕಲ್ಲಿನ ಕಟ್ಟಡದ ಒಳಗಡೆ ಹೋದ ಬಳಿಕವೇ ಇದು ಆಸ್ಪತ್ರೆ ಎನ್ನುವುದು ಅರಿವಾಗುತ್ತದೆ. 1896 ರಲ್ಲಿ ಪ್ರಾರಂಭವಾದ ಈ ಚಿಕಿತ್ಸಾ ಕೇಂದ್ರ, ನಗರದ ಪ್ರಥಮ ಕಣ್ಣಿನ ಆಸ್ಪತ್ರೆಯಾಗಿದೆ. ಇಲ್ಲಿ ಲಕ್ಷಾಂತರ ಮಂದಿಗೆ ಶಸ್ತ್ರಚಿಕಿತ್ಸೆ ನಡೆಸಿ, ಅಂಧತ್ವ ದೂರ ಮಾಡಲಾಗಿದೆ.

ವೈಸರಾಯ್ ಮಿಂಟೊ ಅವರ ಸ್ಮರಣಾರ್ಥ ನೇತ್ರ ಚಿಕಿತ್ಸಾ ಕೇಂದ್ರಕ್ಕೆ 'ಮಿಂಟೊ ಆಸ್ಪತ್ರೆ' ಎಂದು ನಾಮಕರಣ ಮಾಡಲಾಯಿತು. ಕಣ್ಣಿನ ಸಮಸ್ಯೆಗಳಿಗೆ ಚಿಕಿತ್ಸೆ ನೀಡುವುದು ಮತ್ತು ಅಂಧತ್ವ ನಿವಾರಿಸುವುದು ಈ ಆಸ್ಪತ್ರೆಯ ಮೂಲ ಉದ್ದೇಶ. ಆಸ್ಪತ್ರೆಯು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಅಂಗಸಂಸ್ಥೆ.

ಆಸ್ಪತ್ರೆಯ ಈಗಿನ ಕಟ್ಟಡಕ್ಕೆ ಕೃಷ್ಣರಾಜ ಒಡೆಯರ್ ಅವರು 1903ರಲ್ಲಿ ಅಡಿಪಾಯ ಹಾಕಿದ್ದರು. 1913ರಲ್ಲಿ ಕಟ್ಟಡ ತಲೆಯೆತ್ತಿತ್ತು. 1917ರಲ್ಲಿ ಮಿಂಟೊದ ಹಾಸಿಗೆಗಳ ಸಾಮರ್ಥ್ಯವನ್ನು 100ಕ್ಕೆ ವಿಸ್ತರಿಸಲಾಯಿತು. 1956 ರಲ್ಲಿ ಬೋಧನಾ ಆಸ್ಪತ್ರೆ ಎಂದು ಗುರುತಿಸಲಾಯಿತು. 1960ರಲ್ಲಿ ಹಾಸಿಗೆಗಳ ಸಂಖ್ಯೆ 200ಕ್ಕೆ ಏರಿಕೆ ಕಂಡಿತು. ಮುಂದಿನ ಎರಡು ವರ್ಷಗಳ ಬಳಿಕ ಸ್ನಾತಕೋತ್ತರ ಕೋರ್ಸ್‌ಗಳನ್ನು ಇಲ್ಲಿ ಪ್ರಾರಂಭಿಸಲಾಯಿತು. ಆಸ್ಪತ್ರೆಯು 1982 ರಲ್ಲಿ ಮಿಂಟೊ ನೇತ್ರ ಚಿಕಿತ್ಸಾ ಪ್ರಾದೇಶಿಕ ಸಂಸ್ಥೆಯಾಗಿ ಮಾರ್ಪಾಡಾಯಿತು.

ಅತ್ಯಾಧುನಿಕ ತಂತ್ರಜ್ಞಾನ: ಆರಂಭದಲ್ಲಿ ಈ ಆಸ್ಪತ್ರೆಯಲ್ಲಿ ಕಣ್ಣು ಕೆಂಪಾಗುವಿಕೆ ಸಮಸ್ಯೆಗೆ ಮಾತ್ರ ಚಿಕಿತ್ಸೆ ನೀಡಲಾಗುತ್ತಿತ್ತು. ಈಗ ಅತ್ಯಾಧುನಿಕ ತಂತ್ರಜ್ಞಾನಗಳ ನೆರವಿನಿಂದ ವಿವಿಧ ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ನಡೆಸುತ್ತಿದೆ. ಕಣ್ಣಿನ ಬ್ಯಾಂಕ್ ಕೂಡ ಇಲ್ಲಿದೆ. ಗ್ಲಾಕೋಮಾ, ವಿಟ್ರಿಯೊ-ರೆಟಿನಾ, ಆರ್ಬಿಟ್ ಆ್ಯಂಡ್ ಆಕ್ಯುಲೋಪ್ಲಾಸ್ಟಿ, ದೃಷ್ಟಿ ಕೊರತೆ ಚಿಕಿತ್ಸೆ ಸೇರಿದಂತೆ ವಿವಿಧ ವೈದ್ಯಕೀಯ ಸೌಲಭ್ಯ ಹೊಂದಿದೆ.

ರಾಜ್ಯದಲ್ಲಿಯೇ ಅತಿ ದೊಡ್ಡ ಮಕ್ಕಳ ಚಿಕಿತ್ಸಾ ಘಟಕ, ದಕ್ಷಿಣ ಭಾರತದಲ್ಲಿಯೇ ಪ್ರಥಮ ಸರ್ಕಾರಿ ರಿಫ್ರಾಕ್ಟಿವ್ ಸರ್ಜರಿ ಘಟಕ ಹೊಂದಿದ ಗೌರವಕ್ಕೂ ಆಸ್ಪತ್ರೆ ಭಾಜನವಾಗಿದೆ.

ಮಿಂಟೊ ಕಣ್ಣಿನ ಆಸ್ಪತ್ರೆ – ಪ್ರಜಾವಾಣಿ ಚಿತ್ರ

ಹೊರ ರಾಜ್ಯದವರಿಗೂ ಚಿಕಿತ್ಸೆ

ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಹೊರ ರಾಜ್ಯಗಳಿಂದಲೂ ರೋಗಿಗಳು ಬರುತ್ತಾರೆ. ಪ್ರತಿ ವರ್ಷ 1 ಲಕ್ಷಕ್ಕೂ ಅಧಿಕ ಮಂದಿಗೆ ಚಿಕಿತ್ಸೆ ನೀಡಲಾಗುತ್ತಿದೆ. 8 ಸಾವಿರ ಕಣ್ಣಿನ ಪೊರೆ ಮತ್ತು 2 ಸಾವಿರ ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಗುತ್ತಿದೆ. ಆಸ್ಪತ್ರೆಯು 33 ಕಣ್ಣಿನ ತಜ್ಞರು ಹಾಗೂ 70 ಕಿರಿಯ ವೈದ್ಯರನ್ನು ಹೊಂದಿದೆ.

ಸಂಸ್ಥೆಯು ಪ್ರತಿ ವರ್ಷ 250 ಪದವಿ ವಿದ್ಯಾರ್ಥಿಗಳಿಗೆ, 27 ಸ್ನಾತಕೋತ್ತರ ಪದವೀಧರರಿಗೆ ಸೂಪರ್ ಸ್ಪೆಷಾಲಿಟಿ ಫೆಲೋಶಿಪ್ ಕೋರ್ಸ್‌ಗಳಿವೆ. ಅರೆವೈದ್ಯಕೀಯ ಕೋರ್ಸ್‌ನ ವಿದ್ಯಾರ್ಥಿಗಳಿಗೆ ಹಾಗೂ ನರ್ಸಿಂಗ್ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ.

ಬೆಂಗಳೂರು ನಮ್ಮ ಹೆಮ್ಮೆ...

ಅಂಕಿ-ಅಂಶಗಳು

300 ಆಸ್ಪತ್ರೆಯಲ್ಲಿನ ಹಾಸಿಗೆಗಳು

600-800 ಪ್ರತಿನಿತ್ಯ ಭೇಟಿ ನೀಡುವ ಹೊರರೋಗಿಗಳು

10 ಸಾವಿರ ಪ್ರತಿ ವರ್ಷ ಇಲ್ಲಿ ನಡೆಯುವ ಶಸ್ತ್ರಚಿಕಿತ್ಸೆಗಳು

ಖಾಸಗಿ ಆಸ್ಪತ್ರೆಗಳಿಗೆ ಕಡಿಮೆ ಇಲ್ಲದಂತೆ ಗುಣಮಟ್ಟದ ಚಿಕಿತ್ಸೆಯನ್ನು ಒದಗಿಸುತ್ತಿದ್ದೇವೆ. ಅತ್ಯಾಧುನಿಕ ತಂತ್ರಜ್ಞಾನಗಳನ್ನೂ ಅಳವಡಿಸಿಕೊಳ್ಳಲಾಗಿದೆ.
ಡಾ. ಸುಜಾತಾ ರಾಥೋಡ್
ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕಿ

ಸುದ್ದಿ 2 ನಿಮಿಷ

ಕುಂಬಾರರಿಗೆ ಪ್ರತ್ಯೇಕ ನಿಗಮ ಸ್ಥಾಪನೆಗೆ ಆಗ್ರಹ

ಬೆಂಗಳೂರು: 'ರಾಜ್ಯದಾದ್ಯಂತ ಇರುವ ಕುಂಭಕಾಯಕ (ಕುಂಬಾರ) ಸಮಾಜದವರ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ ರಚಿಸಬೇಕು ಹಾಗೂ ಮುಂದಿನ ಬಜೆಟ್‌ನಲ್ಲಿ ಹಣ ಮೀಸಲಿಡಬೇಕು' ಎಂದು ಶಿವಮೊಗ್ಗದ ಶಾಶ್ವತ ಸಮಿತಿ ರಾಜ್ಯ ಕುಂಭ ಕಲಾಲೋಕ ಪ್ರತಿಷ್ಠಾನದ ಅಧ್ಯಕ್ಷ ಸಿ.ಎನ್. ಮಹೇಶ್ವರಪ್ಪ ಚಕ್ರಸಾಲಿ ರಾಜ್ಯ ಸರ್ಕಾರಕ್ಕೆ ಆಗ್ರಹಪಡಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,'ರಾಜ್ಯದಲ್ಲಿ ಕುಂಬಾರ ಸಮುದಾಯದವರ ಜನಸಂಖ್ಯೆ 10 ಲಕ್ಷಕ್ಕೂ ಹೆಚ್ಚಿದೆ. ಇವರು ರಾಜಕೀಯ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿದ್ದಾರೆ. ಇವರ ಏಳಿಗೆಗಾಗಿ ಪ್ರತ್ಯೇಕ ನಿಗಮ ರಚನೆ ಅಗತ್ಯ' ಎಂದರು.

ನಿವೃತ್ತ ನ್ಯಾಯಾಧೀಶ ಎಂ.ರಾಜು, 'ಕುಂಬಾರ ಸಮುದಾಯವರಿಗೆ ಮಡಕೆ ಮಾರಾಟಕ್ಕೆ ಅನುಕೂಲವಾಗುವಂತೆ ಪ್ರತಿ ಜಿಲ್ಲೆಯಲ್ಲಿ 4 ಹಾಗೂ ತಾಲ್ಲೂಕುಗಳಲ್ಲಿ ತಲಾ 1ರಂತೆ ರಿಯಾಯಿತಿ ದರದಲ್ಲಿ ಮಳಿಗೆಗಳನ್ನು ಸ್ಥಾಪಿಸಬೇಕು' ಎಂದು ಒತ್ತಾಯಿಸಿದರು.

ಅಧ್ಯಯನಕಾರ ರಾಮಗಿರಿ ಕರಿಸಿದ್ದಪ್ಪ ಕುಂಬಾರ ಅವರ 'ಕುಂಬಾರ-ಕುಂಬಾರಿಕೆಯ ಸಮಗ್ರ ಅಧ್ಯಯನ'ದ ವರದಿಯನ್ನು ಕಾರ್ಯಕ್ರಮದಲ್ಲಿ ಬಿಡುಗಡೆಗೊಳಿಸಲಾಯಿತು.

'ವರದಿಯನ್ನು ಶೀಘ್ರವೇ ಹಿಂದುಳಿದ ವರ್ಗಗಳ ಆಯೋಗ ಹಾಗೂ ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ಕರಿಸಿದ್ದಪ್ಪ ಕುಂಬಾರ ಹೇಳಿದರು.

ರೈತ ಚಳವಳಿಗೆ ಜಯ: ಐಸಾ ಸಂಭ್ರಮಾಚರಣೆ

ಬೆಂಗಳೂರು: ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು ನಡೆಸಿದ ಚಳವಳಿಗೆ ಗೆಲುವು ಸಿಕ್ಕಿರುವ ಸಂಭ್ರಮದಲ್ಲಿ ಅಖಿಲ ಭಾರತ ವಿದ್ಯಾರ್ಥಿ ಸಂಘಟನೆಯ (ಐಸಾ) ಸದಸ್ಯರು ಮೈಸೂರು ಬ್ಯಾಂಕ್ ವೃತ್ತದಲ್ಲಿ ಶನಿವಾರ ವಿಜಯ ಜಾಥಾ ನಡೆಸಿದರು.

ರೈತ ಚಳವಳಿಯಲ್ಲಿ ಮೃತಪಟ್ಟ ರೈತರಿಗೆ ಕ್ರಾಂತಿಗೀತೆಗಳ ಮೂಲಕ ಗೌರವ ಸೂಚಿಸಲಾಯಿತು. ಘೋಷವಾಕ್ಯಗಳ ಮೂಲಕ ರೈತರ ಹೋರಾಟವನ್ನು ಸ್ಮರಿಸಲಾಯಿತು.

ಸಂಘಟನೆ ರಾಜ್ಯ ಸಂಚಾಲಕ ದೇವಯ್ಯ,'ಹೋರಾಟದಲ್ಲಿದ್ದ ರೈತರ ಮೇಲೆ ಶೋಷಣೆ ನಡೆಸಿದ ಮೋದಿ ಸರ್ಕಾರ ಕ್ಷಮಾಪಣೆ ಕೇಳಬೇಕು. ರಾಜ್ಯದಲ್ಲಿ ಜಾರಿಯಲ್ಲಿರುವ ರೈತ-ವಿರೋಧಿ ಕಾಯ್ದೆಗಳನ್ನೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹಿಂಪಡೆಯಬೇಕು' ಎಂದರು.

ಕಟ್ಟಡ ಶುಲ್ಕ ಇಳಿಸಿದ ಲೋಕೋಪಯೋಗಿ ಇಲಾಖೆ • ರುಪ್ಸ ಆಗ್ರಹ

'ಶುಲ್ಕ ಇಳಿಕೆಯಷ್ಟೆ ಅಲ್ಲ, ನಿಯಮ ಸಡಿಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಅನುದಾನಿತ, ಅನುದಾನರಹಿತ ಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳು ಹಳೆಯ 'ಕಟ್ಟಡಗಳಿಗೆ ಸುಸ್ಥಿರತೆ' ಪ್ರಮಾಣಪತ್ರ ಪಡೆಯಲು ವಿಧಿಸಿದ ಕಟ್ಟಡದ ಮೌಲ್ಯಮಾಪನ ಶುಲ್ಕ ಇಳಿಸಿದರಷ್ಟೆ ಸಾಲದು, ವಿಧಿಸಿರುವ ನಿಯಮಗಳನ್ನೂ ಸಡಿಲಿಸಬೇಕು ಎಂದು ಖಾಸಗಿ ಶಾಲಾ ಆಡಳಿತ ಮಂಡಳಿಗಳು ಆಗ್ರಹಿಸಿವೆ.

ಲೋಕೋಪಯೋಗಿ ಇಲಾಖೆ ನ. 10ರಂದು ಹೊರಡಿಸಿದ್ದ ಸುತ್ತೋಲೆಯಲ್ಲಿ ಕಟ್ಟಡದ ಮೌಲ್ಯದ ಶೇ 0.5ರಷ್ಟು ಮೊತ್ತವನ್ನು ಶುಲ್ಕವಾಗಿ ಕಟ್ಟಬೇಕು ಎಂದು ಸೂಚಿಸಿತ್ತು. ಇದಕ್ಕೆ ಖಾಸಗಿ ಶಾಲಾ ಆಡಳಿತ ಮಂಡಳಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದವು. ಈ ಬಗ್ಗೆ 'ಪ್ರಜಾವಾಣಿ'ಯ ನ. 20ರ ಸಂಚಿಕೆಯಲ್ಲಿ ವಿಶೇಷ ವರದಿ ಪ್ರಕಟವಾದ ಬೆನ್ನಲ್ಲೆ, ಈ ಮೊತ್ತವನ್ನು ಶೇ 0.05ಕ್ಕೆ ಇಳಿಸಿ ಪರಿಷ್ಕೃತ ಸುತ್ತೋಲೆ ಹೊರಡಿಸಲಾಗಿದೆ.

'ಪ್ರಮಾಣಪತ್ರಕ್ಕಾಗಿ ಸಲ್ಲಿಸುವ ಅರ್ಜಿಯ ಜೊತೆಗೆ ಸಲ್ಲಿಸಬೇಕಾದ ಇತರ ದಾಖಲೆಗಳ ವಿಷಯದಲ್ಲೂ ಸರ್ಕಾರ ವಿನಾಯಿತಿ ನೀಡದಿದ್ದರೆ, ಶೇ 80ರಷ್ಟು ಶಾಲೆಗಳು ಮುಚ್ಚಬೇಕಾದೀತು' ಎಂದು ಖಾಸಗಿ ಶಾಲಾ ಆಡಳಿತ ಮಂಡಳಿಗಳು ಹೇಳಿವೆ.

'ಕಟ್ಟಡದ ಸುಸ್ಥಿರ ಪ್ರಮಾಣಪತ್ರ ಕೋರಿ ಅರ್ಜಿ ಸಲ್ಲಿಸುವಾಗ ಒಂಬತ್ತು ನಿಯಮಗಳನ್ನು ಅನುಸರಿಸುವಂತೆ ಖಾಸಗಿ ಶಾಲಾ, ಕಾಲೇಜುಗಳಿಗೆ ಲೋಕೋಪಯೋಗಿ ಇಲಾಖೆ ಸೂಚಿಸಿದೆ. ಈ ನಿಯಮಗಳಿಂದ ಸರ್ಕಾರಿ ಶಾಲೆ, ಕಾಲೇಜುಗಳನ್ನು ಹೊರಗಿಡಲಾಗಿದೆ. ಸರ್ಕಾರಿ ಶಾಲೆ-ಕಾಲೇಜುಗಳಲ್ಲಿ ಕಲಿಯುವವರು ಸುರಕ್ಷಿತ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಓದುವ ಮಕ್ಕಳಿಗೆ ಮಾತ್ರ ರಕ್ಷಣೆಯ ಅವಶ್ಯಕತೆಯಿದೆ ಎಂಬ ಸರ್ಕಾರದ ಈ ಧೋರಣೆ ಖಂಡನೀಯ' ಎಂದು ನೋಂದಾಯಿತ ಅನುದಾನರಹಿತ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಸಂಘದ (ರುಪ್ಸ) ಅಧ್ಯಕ್ಷ ಲೋಕೇಶ್ ತಾಳಿಕಟ್ಟೆ ಆಕ್ರೋಶ ವ್ಯಕ್ತಪಡಿಸಿದರು.

'ಖಾಸಗಿ ಶಾಲೆಗಳು ಈಗಾಗಲೇ ಸಂಕಷ್ಟದಲ್ಲಿವೆ. ಇದೀಗ ಅನುಸರಿಸುವ ಇಬ್ಬಗೆ ನೀತಿಯಿಂದ ಮತ್ತಷ್ಟು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಸರ್ಕಾರ ತಕ್ಷಣ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ರಾಜ್ಯದಾದ್ಯಂತ ಶಾಲೆಗಳನ್ನು ಮುಚ್ಚಿ ಪ್ರತಿಭಟನೆ ನಡೆಸಬೇಕಾಗುತ್ತದೆ' ಎಂದೂ ಎಚ್ಚರಿಕೆ ನೀಡಿದರು.

'ಸದ್ಯ ವಿಧಿಸಿರುವ ನಿಯಮಗಳಡಿ ನಿರಾಕ್ಷೇಪಣಾ ಪತ್ರ ಪಡೆಯಲು ಕೆಲವು ವರ್ಷಗಳೇ ಹಿಡಿಯಬಹುದು. ಬೆಂಗಳೂರಿನಂಥ ನಗರಗಳಲ್ಲಿ ಅಭಿವೃದ್ಧಿ ಶುಲ್ಕ ಪಡೆಯುತ್ತಿಲ್ಲ. ಅಭಿವೃದ್ಧಿ ಶುಲ್ಕ ಪಡೆಯದೆ ಅನುಮೋದಿತ ನಕ್ಷೆ ದೊರೆಯುವುದಿಲ್ಲ. ಇದ್ಯಾವುದೂ ಇಲ್ಲದೆ ಸ್ವಾಧೀನಾನುಭವ ಪ್ರಮಾಣಪತ್ರ ದೊರೆಯುವುದಿಲ್ಲ. ಅಕ್ರಮ- ಸಕ್ರಮ ಪ್ರಕ್ರಿಯೆಗೆ ಅನುಮತಿ ದೊರೆಯದೆ ಈ ನಿಯಮಗಳ ಕುರಿತು ನಿರಾಕ್ಷೇಪಣಾ ಪತ್ರ ಪಡೆಯಲು ಸಾಧ್ಯವೇ ಇಲ್ಲ' ಎಂದರು.

'ಪ್ರಮಾಣಪತ್ರ ಪಡೆಯಲು ಸರ್ಕಾರ ಕೇಳಿದ ದಾಖಲೆಗಳನ್ನು ನೀಡಲು ಯಾವುದೇ ಶಾಲೆಗಳ ಆಡಳಿತ ಮಂಡಳಿಗಳಿಗೆ ಸಾಧ್ಯವೇ ಇಲ್ಲ. ಮೌಲ್ಯಮಾಪನ ಶುಲ್ಕ ಇಳಿಸಿರುವ ಜೊತೆಗೆ ಇತರ ದಾಖಲೆಗಳನ್ನು ಸಲ್ಲಿಸಲೇಬೇಕೆಂಬ ವಿಷಯದಲ್ಲೂ ವಿನಾಯಿತಿ ನೀಡಬೇಕು' ಎಂದು ಖಾಸಗಿ ಶಾಲೆಗಳ ಒಕ್ಕೂಟದ (ಕ್ಯಾಮ್ಸ್) ಪ್ರಧಾನ ಕಾರ್ಯದರ್ಶಿ ಡಿ. ಶಶಿಕುಮಾರ್ ಹೇಳಿದರು.

ಕಟ್ಟಡ ಸುಸ್ಥಿರತೆ ವಿಚಾರದಲ್ಲಿ ಸರ್ಕಾರ ಕಠಿಣ ನಿಲುವು ತಾಳಿದರೆ, ಶೇ 80ರಷ್ಟು ಖಾಸಗಿ ಶಾಲಾ ಕಾಲೇಜುಗಳು ಮುಚ್ಚುವ ಮಾರ್ಗವಲ್ಲದೆ, ಅನ್ಯದಾರಿ ಇಲ್ಲ.
ಲೋಕೇಶ್ ತಾಳಿಕಟ್ಟೆ, ರುಪ್ಸ ಅಧ್ಯಕ್ಷ

ವರದಿ ಪರಿಣಾಮ

25ಕ್ಕೆ 'ವಿಧಾನಸೌಧ ಚಲೋ' ಪ್ರತಿಭಟನೆ

ಬೆಂಗಳೂರು: 'ಪರಿಶಿಷ್ಟ ಸಮುದಾಯಗಳಿಗೆ ಮೀಸಲಿರುವ ಯೋಜನೆಗಳ ಅನುದಾನ ಬಳಕೆಯ ಲೆಕ್ಕಪರಿಶೋಧನೆ ಹಾಗೂ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ನ. 25ರಂದು ವಿಧಾನಸೌಧ ಚಲೋ ನಡೆಸಲಿದೆ' ಎಂದು ಸಮಿತಿ ಸಂಚಾಲಕ ಮಾವಳ್ಳಿ ಶಂಕರ್ ಶುಕ್ರವಾರ ಇಲ್ಲಿ ತಿಳಿಸಿದರು.

'ಪರಿಶಿಷ್ಟರಿಗೆ ಮೀಸಲಿಟ್ಟ ಯೋಜನೆಗಳು ಮಧ್ಯವರ್ತಿಗಳ ಪಾಲಾಗುತ್ತಿವೆ. ದಲಿತರ ಮೇಲಿನ ದೌರ್ಜನ್ಯಗಳಿಗೆ ಕಡಿವಾಣ ಹಾಕುತ್ತಿಲ್ಲ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮತಾಂತರ ನಿಷೇಧ ಕಾಯ್ದೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸುವ ಚಿಂತನೆಯನ್ನು ರಾಜ್ಯ ಸರ್ಕಾರ ಕೈಬಿಡಬೇಕು' ಎಂದು ಆರ್ಚ್ ಬಿಷಪ್ ಮತ್ತು ಕರ್ನಾಟಕ ಪ್ರಾಂತೀಯ ಧರ್ಮಾಧ್ಯಕ್ಷರ ಮಂಡಳಿಯ ಅಧ್ಯಕ್ಷ ಡಾ. ಪೀಟರ್ ಮಚಾದೊ ಒತ್ತಾಯಿಸಿದ್ದಾರೆ.

'ಮತಾಂತರ ನಿಷೇಧ ಕಾಯ್ದೆಯನ್ನು ಕ್ರೈಸ್ತ ಸಮುದಾಯವು ಒಮ್ಮತದಿಂದ ವಿರೋಧಿಸುತ್ತದೆ. ಯಾವುದೇ ಧರ್ಮ ಅನುಸರಿಸಲು ಸಂವಿಧಾನವೇ ಹಕ್ಕು ನೀಡಿದೆ. ಹೀಗಿರುವಾಗ ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆಯ ಅಗತ್ಯವಿಲ್ಲ. ಯಾವುದೋ ಒಂದೆರಡು ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಇಡೀ ಕ್ರೈಸ್ತ ಸಮುದಾಯವನ್ನು ದೂರುವುದು ಸರಿ ಅಲ್ಲ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ರಾಜ್ಯದಲ್ಲಿನ ಕ್ರೈಸ್ತ ಸಮುದಾಯದ ಚರ್ಚ್‌ಗಳು ಮತ್ತು ಧಾರ್ಮಿಕ ಸಂಘ-ಸಂಸ್ಥೆಗಳ ಗಣತಿ ಕೈಗೊಳ್ಳುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಆದೇಶಿಸಿದೆ. ಈ ಗಣತಿಯ ಉದ್ದೇಶವಾದರೂ ಏನು? ಗಣತಿಗೆ ಆಕ್ಷೇಪ ಇಲ್ಲ. ಆದರೆ, ನಮ್ಮ ಸಮುದಾಯವನ್ನು ಮಾತ್ರ ಗುರಿಯಾಗಿರಿಸಿಕೊಂಡು ಗಣತಿ ಮಾಡಲು ಆದೇಶಿಸಿರುವುದು ಏಕೆ' ಎಂದು ಅವರು ಪ್ರಶ್ನಿಸಿದ್ದಾರೆ.

'ಚರ್ಚ್‌ಗಳ ಎಲ್ಲ ವಿವರಗಳು ಈಗಾಗಲೇ ಸರ್ಕಾರದ ಬಳಿಯೇ ಇರುವಾಗ ಮತ್ತೊಮ್ಮೆ ಗಣತಿ ನಡೆಸುವ ಅಗತ್ಯವಿಲ್ಲ. ಭಾರತದ ಮೊದಲ ಜನಗಣತಿಯಿಂದ ಇಲ್ಲಿಯವರೆಗೂ ಸಹ ದೇಶದಲ್ಲಿ ಕ್ರೈಸ್ತ ಸಮುದಾಯದ ಜನಸಂಖ್ಯೆಯ ಅಂಕಿ-ಅಂಶಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಬಳಿ ಲಭ್ಯವಿದೆ. ದೇಶದಲ್ಲಿ ದೊಡ್ಡ ಮಟ್ಟಿಗೆ ಮತಾಂತರ ನಡೆಯುತ್ತಿದೆ ಎಂದು ಆರೋಪಿಸುವವರು ಈ ಅಂಕಿ-ಅಂಶಗಳನ್ನು ಒಮ್ಮೆ ಪರಿಶೀಲಿಸಬೇಕು. ಆಗ ಸತ್ಯಾಂಶದ ಅರಿವಾಗುತ್ತದೆ. ಮತಾಂತರವು ನಿಜವೇ ಆಗಿದ್ದರೆ ಕ್ರೈಸ್ತ ಸಮುದಾಯದ ಸಂಖ್ಯೆ ಅಧಿಕವಾಗಿರಬೇಕಾಗಿತ್ತು. ಆದರೆ, ದೇಶದ ಸ್ವಾತಂತ್ರ್ಯದ ನಂತರವೂ ಒಟ್ಟು ಜನಸಂಖ್ಯೆಯಲ್ಲಿ ನಮ್ಮ ಸಮುದಾಯವು ಕೇವಲ ಶೇ 1.8ರಷ್ಟು ಇದೆ' ಎಂದು ಹೇಳಿದ್ದಾರೆ.

ಪತ್ರಕರ್ತರ ಸಹಕಾರ ಸಂಘದ ಸಭೆ ಡಿ.5ಕ್ಕೆ

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ 2020-2021ನೇ ಸಾಲಿನ ಸರ್ವಸದಸ್ಯರ ಸಭೆ ಡಿ.5ರಂದು ಬೆಳಿಗ್ಗೆ 10ಕ್ಕೆ ನಡೆಯಲಿದೆ.

ನಗರದ ಕ್ವೀನ್ಸ್ ರಸ್ತೆಯ ಇನ್‌ಸ್ಟಿಟ್ಯೂಷನ್ ಆಫ್ ಅಗ್ರಿಕಲ್ಚರಲ್ ಟೆಕ್ನಾಲಜಿಸ್ಟ್‌ನ ಸುವರ್ಣ ಕೃಷಿ ಸಭಾಂಗಣದಲ್ಲಿ ಸಂಘದ ಅಧ್ಯಕ್ಷ ಕೆ. ರಾಘವೇಂದ್ರ ಅವರ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಯಲಿದೆ ಎಂದು ಕಾರ್ಯದರ್ಶಿ (ಪ್ರಭಾರ) ಎಸ್. ತೇಜಸ್ವಿನಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇ- ಆಸ್ತಿ ತಂತ್ರಾಂಶ: ಮತ್ತೆ 30 ವಾರ್ಡ್‌ಗಳಿಗೆ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿಯ ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿದ ಸೇವೆಗಳಿಗೆ ಇ- ಆಸ್ತಿ ತಂತ್ರಾಂಶ ಬಳಕೆಯನ್ನು ಬಿಬಿಎಂಪಿಯು ಎಂಟು ಉಪವಿಭಾಗಗಳ 30 ವಾರ್ಡ್‌ಗಳಿಗೆ ಗುರುವಾರದಿಂದ ವಿಸ್ತರಣೆ ಮಾಡಿದೆ.

ಇನ್ನು ಈ 30 ವಾರ್ಡ್‌ಗಳಲ್ಲೂ ಸಾರ್ವಜನಿಕರು ಆಸ್ತಿಗಳಿಗೆ ಸಂಬಂಧಿಸಿದ ಕೈಬರಹದ ಸಹಿ ಇರುವ ದಾಖಲೆ ಪತ್ರಗಳನ್ನು ಪಡೆಯಬಾರದು ಎಂದು ಬಿಬಿಎಂಪಿ ಹೇಳಿದೆ. ಸಕಾಲ ಮೂಲಕ ಸ್ವೀಕರಿಸಿದ ಅರ್ಜಿಗಳಿಗೆ ಇದರಿಂದ ವಿನಾಯಿತಿ ನೀಡಲಾಗಿದೆ.

ಪಾಲಿಕೆಯ ಕಂದಾಯ ವಿಭಾಗವು ಕಂದಾಯ ಇಲಾಖೆಯ ಸೇವೆಗಳನ್ನು ಸರಳೀಕರಣಗೊಳಿಸಿ ತ್ವರಿತವಾಗಿ ವಿಲೇವಾರಿ ಮಾಡುವ ಉದ್ದೇಶದಿಂದ ಇ-ಆಸ್ತಿ ತಂತ್ರಾಂಶ ಬಳಕೆಯನ್ನು ಹಂತ ಹಂತವಾಗಿ ಜಾರಿಗೊಳಿಸುತ್ತಿದೆ. ಶಾಂತಿನಗರ ಉಪವಿಭಾಗದ ಶಾಂತಲಾನಗರ, ನೀಲಸಂದ್ರ, ಶಾಂತಿನಗರ ವಾರ್ಡ್‌ಗಳಲ್ಲಿ ಪ್ರಾಯೋಗಿಕವಾಗಿ ಕಾರ್ಯಕ್ರಮ ಜಾರಿಗೊಳಿಸಲಾಗಿತ್ತು.

ಎರಡನೇ ಹಂತದಲ್ಲಿ ದೊಮ್ಮಲೂರು ಉಪ ವಿಭಾಗದ ಜೋಗುಪಾಳ್ಯ, ದೊಮ್ಮಲೂರು, ಅಗರ, ವನ್ನಾರ್‌ಪೇಟೆ ವಾರ್ಡ್‌ಗಳಲ್ಲಿ, ಸಿ.ವಿ.ರಾಮನ್ ನಗರ ಉಪವಿಭಾಗದ ಬೆನ್ನಿಗಾನಹಳ್ಳಿ, ಸೇರಿದಂತೆ ವಿವಿಧ ವಾರ್ಡ್‌ಗಳಿಗೆ ಅ.8ರಿಂದ ವಿಸ್ತರಿಸಲಾಗಿತ್ತು.

ಇ-ಆಸ್ತಿ ತಂತ್ರಾಂಶ ಬಳಕೆ ಜಾರಿಯಾದ ವಾರ್ಡ್‌ಗಳು

ಉಪವಿಭಾಗ	ವಾರ್ಡ್‌ಗಳು (ಸಂಖ್ಯೆ)
ಜೆ.ಸಿ.ನಗರ	ಗಂಗೇನಹಳ್ಳಿ (34), ಜೆ.ಸಿ.ನಗರ (46), ಮನೋರಾಯನಪಾಳ್ಯ (33), ವಿ-ನಾಗೇನಹಳ್ಳಿ (22)
ಹೆಬ್ಬಾಳ	ಗಂಗಾನಗರ (20), ಹೆಬ್ಬಾಳ (21), ರಾಧಾಕೃಷ್ಣ ದೇವಸ್ಥಾನ (18), ಸಂಜಯನಗರ (19)
ಶಿವಾಜಿನಗರ	ಭಾರತಿನಗರ (91), ಶಿವಾಜಿನಗರ (92), ಹಲಸೂರು (90)
ವಸಂತನಗರ	ಜಯಮಹಲ್ (63), ರಾಮಸ್ವಾಮಿಪಾಳ್ಯ (62), ಸಂಪಂಗಿರಾಮನಗರ (110), ವಸಂತ್ ನಗರ (93)
ಪುಲಿಕೇಶಿನಗರ	ದೇವರಜೀವನಹಳ್ಳಿ (47), ಪುಲಿಕೇಶಿನಗರ (78), ಎಸ್.ಕೆ.ಗಾರ್ಡನ್ (61)
ಕೆ.ಜಿ.ಹಳ್ಳಿ	ಕಾವಲ್ ಬೈರಸಂದ್ರ (32), ಕುಶಾಲನಗರ (31), ಮುನೇಶ್ವರನಗರ (48), ಸಗಾಯಪುರ (60)
ಮಾರುತಿ ಸೇವಾನಗರ	ಬಾಣಸವಾಡಿ (27), ಕಮ್ಮನಹಳ್ಳಿ (28), ಲಿಂಗರಾಜಪುರ (49) ಮಾರುತಿ ಸೇವಾನಗರ (59)
ಎಚ್‌ಬಿಆರ್ ಲೇಔಟ್	ಎಚ್‌ಬಿಆರ್ ಲೇಔಟ್ (24), ಕಾಚರಕನ ಹಳ್ಳಿ (29), ಕಾಡುಗೊಂಡನಹಳ್ಳಿ (30), ನಾಗವಾರ (23)

ಖಜಾನೆ ಆಯುಕ್ತರು, ಖಜಾನೆ ಇಲಾಖೆ,
5ನೇ ಮತ್ತು 6ನೇ ಮಹಡಿ, ಕೆ.ಪಿ.ಸಿ.ಎಲ್.ಗ್ರೀನ್ ಕಟ್ಟಡ,
ಅರಮನೆ ರಸ್ತೆ, ಬೆಂಗಳೂರು-560 001.
ದೂ: 080-22867700, ಫ್ಯಾಕ್ಸ್: 080-22860142
ಸಂಖ್ಯೆ: ಖ.ಆ/ಸಂಗ್ರಹಣೆ/25/2021-22 ದಿನಾಂಕ: 19.11.2021

ಖಜಾನೆ ಇಲಾಖೆಗೆ ಭದ್ರತಾ ಸಿಬ್ಬಂದಿಗಳನ್ನು ಸಂಗ್ರಹಿಸಲು ಆರ್.ಎಫ್.ಪಿ.

ಖಜಾನೆ ಇಲಾಖೆಯು ''ಖಜಾನೆ ಇಲಾಖೆಗೆ ಭದ್ರತಾ ಸಿಬ್ಬಂದಿ''ಗಾಗಿ ಟೆಂಡರ್ ಅನ್ನು ಆಹ್ವಾನಿಸಿದೆ. ಟೆಂಡರ್ ವಿವರಗಳು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ www.eproc.karnataka.gov.in ನಲ್ಲಿ ಲಭ್ಯವಿದ್ದು, ಟೆಂಡರ್‌ಗಳನ್ನು ವಿದ್ಯುನ್ಮಾನವಾಗಿ www.eproc.karnataka.gov.in ಇಲ್ಲಿ ಸಲ್ಲಿಸಬಹುದು.

ವಾಸಾಸಂಇ/ಉನಿ.ಸ/41/ಎಂಸಿಎ/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

GIA®

CAUTION NOTICE

THIS IS TO NOTIFY the public that some unscrupulous persons are posing themselves as agents/employees/ representatives of GIA India Laboratory Private Limited (**"GIA India"**), with the ulterior motive to cheat the public at large, by soliciting the public to invest in financial schemes that are falsely attributed to GIA India. Such unscrupulous persons are unlawfully and fraudulently using the name, information, bank details and other intellectual property of GIA India without permission with the intent to dupe innocent members of the public and damage the reputation of GIA India.

WE CAUTION THE PUBLIC that GIA India has never, and never will, solicit funds from the public for the purpose of any investment and/or financial activity. GIA India is **NOT** an investment company or fund nor does it have any investment schemes or trade profit funds. The members of the public are hereby cautioned not to be enticed by such unscrupulous persons and to exercise maximum caution and restraint to any communication pertaining to any investment and/or financial activity that is purported to be carried out in the name of GIA India.

In the event any member of the public is lured into investing or has invested in any such investment or financial schemes or trade profit funds etc. carried by such unscrupulous persons purportedly in the name of GIA India, neither GIA India nor its directors, employees, officers, agents, etc. will be liable or responsible for any consequences or claims thereof or any loss suffered by the public. For any queries/clarifications, feel free to reach us at 1800-41-999-14 or labindia@gia.edu.

ಸಾಯಿಗೋಲ್ಡ್ ಪ್ಯಾಲೇಸ್‌ನಲ್ಲಿ 'ಆ್ಯಂಟಿಕ್ ಮೇಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀಸಾಯಿ ಗೋಲ್ಡ್ ಪ್ಯಾಲೇಸ್‌ನ ಪ್ರತಿ ಶಾಖೆಯಲ್ಲೂ ಪುರಾತನ ಆಭರಣಗಳ ಪ್ರದರ್ಶನ ಹಾಗೂ ಮಾರಾಟಕ್ಕಾಗಿ 'ಆ್ಯಂಟಿಕ್ ಮೇಳ' ಆಯೋಜಿಸಲಾಗಿದೆ.

ದೇಶದ ವಿವಿಧ ರಾಜ್ಯಗಳ ನಿಪುಣ ಆಭರಣ ತಯಾರಕರು ಸಿದ್ಧಪಡಿಸಿದ, ಭಾರತೀಯ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ದೇವಿಕಾ ಆಭರಣ, ಜೈಪುರ ರಾಜಮನೆತನದ ಪಾರಂಪರಿಕ ಒಡವೆಗಳು, ಅನ್ ಕಟ್ ರುಬ್ಬಿ ಆಭರಣ, ಅನ್ ಕಟ್ ಎಮೆರಾಲ್ಡ್ ಆಭರಣಗಳು ಪ್ರದರ್ಶನಗೊಳ್ಳಲಿವೆ.

ಆ್ಯಂಟಿಕ್ ಮೇಳದ ಪ್ರಯುಕ್ತ ಗ್ರಾಹಕರು ಖರೀದಿಸುವ ಪ್ರತಿ ಗ್ರಾಂ ಆಭರಣಗಳ ಮೇಲೆ 2 ಗ್ರಾಂ ತೂಕದ ಬೆಳ್ಳಿ ನಾಣ್ಯ ಉಚಿತವಾಗಿ ಸಿಗಲಿದೆ. ತ್ಯಾಮಾನು (ವೇಸ್ಟೇಜ್ ಚಾರ್ಜ್) ಮತ್ತು ಸ್ಟೋನ್ ಚಾರ್ಜ್ ಇರುವುದಿಲ್ಲ. ಗ್ರಾಹಕರಿಗೆ ಚಿನ್ನದ ಮೇಲೆ ಸಾಲ ಸೌಲಭ್ಯವೂ ಇದೆ. ಮಾರುಕಟ್ಟೆ ದರಕ್ಕಿಂತ ಕಡಿಮೆ ಬಡ್ಡಿ ದರದಲ್ಲಿ ಸಾಲ ಸಿಗಲಿದೆ ಎಂದು ಪ್ರಕಟಣೆ ತಿಳಿಸಿದೆ.

'ಅಕಾಲಿಕ ನಿಧನ ಹೊಂದಿದ ನಟ ಪುನೀತ್ ರಾಜಕುಮಾರ್ ಅವರ ಸವಿ ನೆನಪಿನಲ್ಲಿ ಸಂಸ್ಥೆ ಸಮರ್ಪಿಸಿದ 'ರಜತ ನಾಣ್ಯ'ವನ್ನು ಪಡೆಯುವ ಅವಕಾಶ ಗ್ರಾಹಕರಿಗೆ ಕಲ್ಪಿಸಿದ್ದೇವೆ. ಸೋಮವಾರದಿಂದ ಶನಿವಾರದವರೆಗೆ ನಡೆಯುವ ಲಕ್ಕಿ ಡ್ರಾನಲ್ಲಿ ಭಾಗವಹಿಸುವ ಅವಕಾಶವಿದ್ದು, ಪ್ರತಿ ಭಾನುವಾರ ವಿಜೇತರನ್ನು ಘೋಷಿಸಲಾಗುವುದು' ಎಂದು ಶ್ರೀಸಾಯಿ ಗೋಲ್ಡ್ ಪ್ಯಾಲೇಸ್‌ನ ಮಾಲೀಕ ಟಿ.ಎ.ಶರವಣ ತಿಳಿಸಿದರು.

'ಪ್ರತಿ ಶಾಖೆಯ 3 ಅದೃಷ್ಟಶಾಲಿ ಗ್ರಾಹಕರಿಗೆ ಪುನೀತ್ ರಾಜಕುಮಾರ್ ಅವರ ಭಾವಚಿತ್ರ ಹೊಂದಿರುವ ನಾಣ್ಯ ಹಾಗೂ 7 ಮಂದಿಗೆ ಸಮಾಧಾನಕರ ಬಹುಮಾನ ನೀಡಲಾಗುವುದು' ಎಂದೂ ಹೇಳಿದರು.

ನಗರದಲ್ಲಿ ಇಂದು

ಉಚಿತ ನೇತ್ರ ತಪಾಸಣೆ ಶಿಬಿರ: ಆಯೋಜನೆ-ಸ್ನೇಹ ಸಮ್ಮಿಲನ ಫೌಂಡೇಷನ್ ಹಾಗೂ ರೋಟರಿ, ಸ್ಥಳ-ಶ್ರೀರಾಮ್ ಪಬ್ಲಿಕ್ ಸ್ಕೂಲ್, ಸರ್ಜಾಪುರ, ಬೆಳಿಗ್ಗೆ 8.30ರಿಂದ

'ಚೌಕಟ್ಟಿಲ್ಲದ ಚಿತ್ರಪುಟಗಳು' ಪುಸ್ತಕ ಬಿಡುಗಡೆ ಹಾಗೂ 'ಅಮೃತ ಕನ್ನಡಿಗ' ಪ್ರಶಸ್ತಿ ಪ್ರದಾನ: ಉದ್ಘಾಟನೆ-ಮಾಧ್ಯಮ ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ಪುಸ್ತಕ ಬಿಡುಗಡೆ-ಲೇಖಕ ಜಯಂತ ಕಾಯ್ಕಿಣಿ, ನಾಟಕ ಪ್ರದರ್ಶನಕ್ಕೆ ಚಾಲನೆ-ನಿರ್ದೇಶಕ ವಿ.ನಾಗೇಂದ್ರ ಪ್ರಸಾದ್, ಕಲಾವಿದರಿಗೆ ಗೌರವಾರ್ಪಣೆ-ಕೆಜಿಎಫ್ ಬಾಬು, ಆಯೋಜನೆ-ರಂಗ ವಿಜಯಾ, ಸ್ಥಳ-ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 10

ಜಯಂತ ಕಾಯ್ಕಿಣಿ

ಸುಧಾ ಫರ್ಟಿಲಿಟಿ ಸೆಂಟರ್ ಉದ್ಘಾಟನೆ: ಶಾಸಕ ಸತೀಶ್ ರೆಡ್ಡಿ, ಸ್ಥಳ-ಸುಧಾ ಫರ್ಟಿಲಿಟಿ ಸೆಂಟರ್, 7ನೇ ಅಡ್ಡರಸ್ತೆ, ಎಚ್‌ಎಸ್‌ಆರ್ ಬಡಾವಣೆ ಮೊದಲ ಹಂತ, ಬೆಳಿಗ್ಗೆ 10.30

ಸಿ.ವೀರಣ್ಣ ಅವರ 'ರುದ್ರ ಭಾರತ' ನಾಟಕ ಪುಸ್ತಕ ಬಿಡುಗಡೆ: ನಾ.ದಾಮೋದರ ಶೆಟ್ಟಿ, ಅನುವಾದ-ಸಿ.ವಿ.ವೇಣುಗೋಪಾಲ್, ಅತಿಥಿ-ಸಂಪಿಗೆ ತೋಂಟದಾರ್ಯ, ಆಯೋಜನೆ-ಕರ್ನಾಟಕ ಸಾಹಿತ್ಯ ಪರಿಷತ್ತು, ಸ್ಥಳ-ಪಾಲಿಕೆ ಸೌಧ, ಎಂ.ಸಿ. ಬಡಾವಣೆ, ವಿಜಯನಗರ, ಬೆಳಿಗ್ಗೆ 10.30

'ಏಕ ಭಾರತ ವಿಜಯೀ ಭಾರತ' ಕಾರ್ಯಕ್ರಮದ ಸಮಾರೋಪ ಹಾಗೂ ಮಣ್ಣೆ ಮೋಹನ್ ಅವರ 'ವಿವೇಕಾನಂದ ಶಿಲಾ ಸ್ಮಾರಕ: ಏಕ ಭಾರತ ವಿಜಯೀ ಭಾರತ' ಪುಸ್ತಕ ಬಿಡುಗಡೆ: ಆಯೋಜನೆ-ವಿವೇಕಾನಂದ ಶಿಲಾ ಸ್ಮಾರಕ ಮತ್ತು ವಿವೇಕಾನಂದ ಕೇಂದ್ರ, ಅತಿಥಿಗಳು-ಮಂಗಳನಾಥಾನಂದಜೀ ಮಹಾರಾಜ್, ಮೇಜರ್ ಎನ್. ರಘುರಾಮ ರೆಡ್ಡಿ, ವಿಜ್ಞಾನಿ ಟಿ.ಜಿ.ಕೆ.ಮೂರ್ತಿ, ಸ್ಥಳ-ವಿವೇಕಾನಂದ ಕೇಂದ್ರ ವಿದ್ಯಾಲಯ, ಕಲ್ಲುಬಾಳು, ಆನೇಕಲ್ ತಾಲ್ಲೂಕು, ಬೆಳಿಗ್ಗೆ 11

'ನಿನ್ನಂಥೋರ್ ಯಾರೂ ಇಲ್ವಲ್ಲೋ ಈ ಲೋಕದ ಮ್ಯಾಲೇ': ನಟ ಪುನೀತ್ ರಾಜ್‌ಕುಮಾರ್ ಅವರಿಗೆ ಸಾಹಿತಿ-ಕಲಾವಿದರ ರಂಗನಮನ, ಭಾಗವಹಿಸುವವರು-ಎ.ಜೆ.ಸದಾಶಿವ, ಬರಗೂರು ರಾಮಚಂದ್ರಪ್ಪ, ಎಚ್.ಎಸ್.ಶಿವಪ್ರಕಾಶ್, ಬಿ.ಜಯಶ್ರೀ, ಪಿ.ಶೇಷಾದ್ರಿ, ಗಿರಿಜಾ ಲೋಕೇಶ್, ಪ್ರಕಾಶ್ ರಾಜ್, ಅರುಂಧತಿ ನಾಗ್, ಪ್ರಕಾಶ್ ಬೆಳವಾಡಿ, ದತ್ತಣ್ಣ, 'ಮುಖ್ಯಮಂತ್ರಿ' ಚಂದ್ರು, ಉಮಾಶ್ರೀ, ಬಿ.ಸುರೇಶ, ಟಿ.ಎಸ್.ನಾಗಾಭರಣ, ಟಿ.ಎನ್.ಸೀತಾರಾಂ, ರಾಘವೇಂದ್ರ ರಾಜಕುಮಾರ್, ಶ್ರೀನಿವಾಸ್ ಜಿ.ಕಪ್ಪಣ್ಣ, ಶಶಿಧರ್ ಭಾರಿಘಾಟ್, ಜಯರಾಮ್ ರಾಯಪುರ, ಸುಧಾ ಬೆಳವಾಡಿ, ಎಂ.ಎಸ್. ಮೂರ್ತಿ, ಸಿ.ಕೆ.ಗುಂಡಪ್ಪ, ಮಾಲೂರು ವಿಜಿ, ಆಯೋಜನೆ-ಸಾಹಿತಿ ಮತ್ತು ಕಲಾವಿದರ ವೇದಿಕೆ, ರಂಗವಿಜಯ, ಸ್ಥಳ-ರವೀಂದ್ರ ಕಲಾಕ್ಷೇತ್ರ, ಸಂಜೆ 4.30


ಬರಗೂರು ರಾಮಚಂದ್ರಪ್ಪ

ಕಲಾಸಂಗಮ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸುಚೇತನಾ ಸಾಧನ ಪ್ರಶಸ್ತಿ ಪ್ರದಾನ: ಅತಿಥಿಗಳು-ನಾಗರಾಜಮೂರ್ತಿ, ಆರ್.ಚಂದ್ರಶೇಖರ್, ಪಾರ್ವತೀಸುತ, ಚೈತ್ರಾ ರಾವ್ ಸಚಿನ್, ಆಯೋಜನೆ-ಏಜೀಸ್ ಕಲಾಶ್ರೀ ಪಬ್ಲಿಕ್ ಚಾರಿಟಬಲ್ ಟ್ರಸ್ಟ್, ಸುಚೇತನಾ ಕಲಾವಿದರು, ಸ್ಥಳ-ನಯನ ಸಭಾಂಗಣ, ಕನ್ನಡ ಭವನ,ಸಂಜೆ 5

ಚಿತ್ರಾವಳಿ

ಹಂಪಿನಗರದಲ್ಲಿ ಪತ್ರಿಕಾ ವಿತರಕರಿಗೆ ಶಾಸಕ ಎಂ.ಕೃಷ್ಣಪ್ಪ ಅವರು ಆಹಾರದ ಕಿಟ್‌ಗಳನ್ನು ಶುಕ್ರವಾರ ವಿತರಿಸಿದರು.

ರೂವಾರಿ ಅಭಿನವ ಇಂಪ್ರಿಂಟ್ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಆದ್ಯ ಗುರುಪ್ರಸಾದ್ ಅವರ 'ಹೌ ಮೈ ಗ್ರ್ಯಾಂಡ್ ಮದರ್ ಸೇವ್ಡ್ ದಿಸ್ ವರ್ಲ್ಡ್' ಕೃತಿಯನ್ನು ಮಕ್ಕಳ ಸಾಹಿತಿ ರಾಮೇಂದ್ರ ಕುಮಾರ್ ಬಿಡುಗಡೆ ಮಾಡಿದರು. ಲೇಖಕಿ ರಜನಿ ನರಹಳ್ಳಿ, ಸಹನಾ, ಕವಯತ್ರಿ ಪಿ.ಚಂದ್ರಿಕಾ ಇದ್ದರು.

ಇನ್ನೂ ಕೆಲವು ದಿನ ಇದೇ ಪರಿಸ್ಥಿತಿ • ಹವಾಮಾನ ಇಲಾಖೆ ಮುನ್ಸೂಚನೆ

ಮೋಡ ಕವಿದ ವಾತಾವರಣ; ಜಿಟಿ ಜಿಟಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೋಡ ಕವಿದ ವಾತಾವರಣ ಮುಂದುವರಿದಿದ್ದು, ಬಹುತೇಕ ಪ್ರದೇಶಗಳಲ್ಲಿ ಶನಿವಾರವೂ ಬಿಡುವು ಕೊಡುತ್ತಲೇ ಜಿಟಿ ಜಿಟಿ ಮಳೆ ಸುರಿಯಿತು.

ಹಲವು ದಿನಗಳಿಂದ ನಗರದಲ್ಲಿ ಉತ್ತಮ ಮಳೆ ಸುರಿಯುತ್ತಿದ್ದು, ಅದರ ಜೊತೆಯಲ್ಲಿ ಹಾನಿಯೂ ಹೆಚ್ಚಾಗುತ್ತಿದೆ. ಕೆಲ ಕಟ್ಟಡಗಳು ಕುಸಿದಿದ್ದು, ಕೆರೆ ಕೋಡಿ ಒಡೆದಿದೆ. ರಸ್ತೆಗಳಲ್ಲಿ ಹೊಳೆಯಂತೆ ನೀರು ಹರಿಯುತ್ತಿದ್ದು, ವಾಹನಗಳ ಸಂಚಾರ ವ್ಯವಸ್ಥೆ ಮೇಲೆ ಪರಿಣಾಮ ಬೀರಿದೆ.

ಗುರುವಾರ ಸುರಿದಿದ್ದ ಧಾರಾಕಾರ ಮಳೆಯಿಂದಾಗಿ ಹಲವೆಡೆ ಹಾನಿ ಸಂಭವಿಸಿತ್ತು. ಆದರೆ, ಶುಕ್ರವಾರ ಮಳೆ ಪ್ರಮಾಣ ಕಡಿಮೆ ಆಗಿತ್ತು. ಶನಿವಾರವೂ ಮಳೆ ಸ್ವಲ್ಪ ಬಿಡುವು ನೀಡಿದ್ದರಿಂದ, ಹಾನಿ ಬಗ್ಗೆ ಯಾವುದೇ ದೂರುಗಳು ಬಿಬಿಎಂಪಿ ಸಹಾಯವಾಣಿ ಕೇಂದ್ರಕ್ಕೆ ಬಂದಿಲ್ಲ.

ಎಚ್‌ಎಎಲ್ 3ನೇ ಹಂತದ 8ನೇ ಮುಖ್ಯರಸ್ತೆಯಲ್ಲಿ ಮರ ಉರುಳಿ ಬಿದ್ದಿತ್ತು

ಎಚ್‌ಎಎಲ್ 3ನೇ ಹಂತದ 8ನೇ ಮುಖ್ಯರಸ್ತೆಯಲ್ಲಿ ಮರವೊಂದು ಉರುಳಿಬಿದ್ದಿತ್ತು. ಇಡೀ ರಸ್ತೆಯಲ್ಲಿ ಮರದ ಕೊಂಬೆಗಳು ಚಾಚಿಕೊಂಡಿದ್ದರಿಂದ, ವಾಹನಗಳ ಸಂಚಾರಕ್ಕೆ ಕೆಲ ಹೊತ್ತು ಅಡ್ಡಿ ಉಂಟಾಗಿತ್ತು.

'ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತ ಉಂಟಾಗಿರುವುದರಿಂದ ರಾಜ್ಯದಲ್ಲೂ ಮಳೆಯಾಗುತ್ತಿದೆ. ಇನ್ನು ಕೆಲ ದಿನ ಮೋಡ ಕವಿದ ವಾತಾವರಣ ಇರಲಿದ್ದು, ಆಗಾಗ ಮಳೆಯೂ ಸುರಿಯಲಿದೆ' ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

'ಮಳೆಯಿಂದ ಕಾಮಗಾರಿ ವಿಳಂಬ'

ಬೆಂಗಳೂರು: ನಗರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಳೆ ಆಗಿರುವುದರಿಂದ ಗೂಡ್‌ಶೆಡ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಳಿಸಲು ಅಡಚಣೆಯಾಗಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಸ್ಪಷ್ಟಪಡಿಸಿದ್ದಾರೆ.

ಗೂಡ್ ಶೆಡ್ ರಸ್ತೆಯಲ್ಲಿ (ಡಾ. ಟಿ.ಸಿ.ಎಂ.ರಾಯನ್ ರಸ್ತೆ) ಬಿಬಿಎಂಪಿ ವತಿಯಿಂದ ವೈಟ್‌ಟಾಪಿಂಗ್ ಕಾಮಗಾರಿ ಕೈಗೊಳ್ಳಲಾಗಿದೆ. ಆದ್ದರಿಂದ ಮೈಸೂರು ರಸ್ತೆಯ ಮಾರುಕಟ್ಟೆ ಮೇಲ್ಸೇತುವೆಯಿಂದ ಗೂಡ್‌ಶೆಡ್ ರಸ್ತೆಗೆ ಆ. 19ರಿಂದ ಸಂಚಾರ ನಿರ್ಬಂಧಿಸಲಾಗಿದೆ. ಕಾಮಗಾರಿ ಪೂರ್ಣಗೊಳಿಸಲು 3 ತಿಂಗಳ ಕಾಲಾವಧಿ ನಿಗದಿ ಮಾಡಲಾಗಿತ್ತು.

ಹೆಚ್ಚುವರಿ ಒಳಚರಂಡಿ ಮತ್ತು ನೀರಿನ ಕೊಳವೆ ಅಳವಡಿಸುವ ಮಾರ್ಗದಲ್ಲಿ ಗಟ್ಟಿ ಬಂಡೆ ಸಿಕ್ಕಿದ್ದು ಅದನ್ನು ಒಡೆಯುವ ಕಾಮಗಾರಿಯೂ ವಿಳಂಬವಾಗಿದೆ. ರಾಜಕಾಲುವೆ ಮತ್ತು ಮೋರಿ ಕೂಡ ಶಿಥಿಲಗೊಂಡಿದ್ದು, ಮರು ನಿರ್ಮಾಣ ಆಗಬೇಕಿದೆ. ಬಿಬಿಎಂಪಿ ರಾಜಕಾಲುವೆ ವಿಭಾಗದಿಂದ ದುರಸ್ತಿ ಪಡಿಸಲಾಗುತ್ತಿದೆ. ಮಳೆಯಿಂದ ಕಾಮಗಾರಿ ವಿಳಂಬವಾಗಿದೆ. ಸಾರ್ವಜನಿಕರು ಸಹಕರಿಸಬೇಕು ಎಂದು ಕೋರಿದ್ದಾರೆ.

'ಮುಗಿಯದ ಕಾಮಗಾರಿ: ತಪ್ಪದ ಕಿರಿಕಿರಿ' ಎಂಬ ಶೀರ್ಷಿಕೆಯಡಿ ಸಂಚಾರ ಸಮಸ್ಯೆ ಕುರಿತು 'ಪ್ರಜಾವಾಣಿ' ಶನಿವಾರ ವಿಶೇಷ ವರದಿ ಪ್ರಕಟಿಸಿತ್ತು.

'ಜನರ ಮಧ್ಯೆ ಬೆಂಕಿ ಹಚ್ಚಬೇಡಿ'

ಬೆಂಗಳೂರು: 'ಅಂಜುಮನ್ ಇಸ್ಲಾಂ ಸಂಘಟನೆಯವರು 'ಆರೆಸ್ಸೆಸ್‌ನವರಿಗೆ ಗುಂಡು ಹೊಡೆಯುತ್ತೇವೆ' ಎಂದು ಹೇಳಿರುವುದು ಖಂಡನೀಯ. ನೆಮ್ಮದಿಯಿಂದ ಬಾಳುತ್ತಿರುವ ಜನರ ಮಧ್ಯೆ ಬೆಂಕಿ ಹಚ್ಚಬಾರದು' ಎಂದು ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ತಿಳಿಸಿದೆ.

ಮುಜಾಮಿಲ್ ಅಹ್ಮದ್ ಬಾಬು ಅವರ ಅಧ್ಯಕ್ಷತೆಯಲ್ಲಿ ಬಿಜೆಪಿ ಅಲ್ಪ ಸಂಖ್ಯಾತ ಮೋರ್ಚಾ ಪದಾಧಿಕಾರಿಗಳು ಸಭೆ ನಡೆಸಿ, 'ಇತ್ತೀಚೆಗೆ ಪಾಲಕ್ಕಾಡ್‌ನಲ್ಲಿ ಆರೆಸ್ಸೆಸ್ ಕಾರ್ಯಕರ್ತರೊಬ್ಬರನ್ನು ಹತ್ಯೆ ಮಾಡಲಾಗಿದೆ. ಆರೆಸ್ಸೆಸ್‌ನವರ ಅಂಗಡಿಗಳಿಗೆ ಕೆಲ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸುವ ಮೂಲಕ ಶಾಂತಿ ಕದಡುವ ಕೆಲಸ ಮಾಡುತ್ತಿದ್ದಾರೆ. ಜನರಲ್ಲಿ ಪರಸ್ಪರ ಗದ್ದಲ ಸೃಷ್ಟಿ ಮಾಡುವುದು ಅಕ್ಷಮ್ಯ' ಎಂದು ಅಭಿಮತ ವ್ಯಕ್ತಪಡಿಸಿದರು.

ಅಪಾರ್ಟ್‌ಮೆಂಟ್‌ಗಳಿಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಮಳೆ ಆರ್ಭಟ ಶನಿವಾರವೂ ಮುಂದುವರೆದಿದೆ. ದೇವನಹಳ್ಳಿಯ ಅಕ್ಕುಪೇಟೆ, ಕೋಡಿಮಂಚೇನಹಳ್ಳಿ ಜನವಸತಿ ಪ್ರದೇಶ ಮತ್ತು ಹೀರಾನಂದಾನಿ ವಿಲ್ಲಾಗೆ ನೀರು ನುಗ್ಗಿದೆ. ಬೊಮ್ಮವಾರದ ಬಳಿ ಅಂಡರ್‌ಪಾಸ್ ಜಲಾವೃತಗೊಂಡಿದ್ದು, 10 ಅಡಿಯಷ್ಟು ನೀರು ನಿಂತಿದೆ.

ದೇವನಹಳ್ಳಿ ಸುತ್ತಮುತ್ತ ರಾಜಕಾಲುವೆಗಳನ್ನು ಒತ್ತುವರಿ ಮಾಡಿಕೊಂಡು ಕಟ್ಟಡ, ವಸತಿ ಸಮುಚ್ಚಯಗಳನ್ನು ನಿರ್ಮಾಣ ಮಾಡಿರುವುದರಿಂದ ಮಳೆ ನೀರು ಹರಿದು ಹೋಗಲು ಜಾಗ ಇಲ್ಲದೆ ನೀರು ಊರೊಳಗೆ ನುಗ್ಗುತ್ತಿದೆ.

ದೇವನಹಳ್ಳಿ ಬಳಿಯ ಪ್ರತಿಷ್ಠಿತ ವಿಲ್ಲಾ ಬಳಿ ಆವರಿಸಿರುವ ನೀರು

ದೊಡ್ಡಬಳ್ಳಾಪುರ ಉಪವಿಭಾಗಾಧಿಕಾರಿ ಅರುಳ್ ಕುಮಾರ್ ಶನಿವಾರ ದೇವನಹಳ್ಳಿಯ ಸುತ್ತಮುತ್ತಲಿನ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಒತ್ತುವರಿಯಾಗಿರುವ ರಾಜಕಾಲುವೆಗಳನ್ನು ಗುರುತಿಸಿ, ಅಳತೆ ಮಾಡಿಸಲಾಗುತ್ತಿದೆ. ಆದಷ್ಟೂ ಶೀಘ್ರ ಒತ್ತುವರಿ ತೆರವು ಕಾರ್ಯ ಆರಂಭಿಸಲಿದ್ದೇವೆ. ಈಗಾಗಲೇ ಆ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿದ್ದೇವೆ ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ರಾಜಕಾಲುವೆಯು ಎಲ್ಲಿ ಒತ್ತುವರಿ ಆಗಿದೆಯೋ ಅಂತಹ ಕಡೆಗಳಲ್ಲಿ ಮಾತ್ರ ಮಳೆ ನೀರು ಹೊರ ಹೋಗಲು ಜಾಗ ಇಲ್ಲದೆ ಸಮಸ್ಯೆಯಾಗಿದೆ. ರಾಜಕಾಲುವೆ ಒತ್ತುವರಿಯಾದಾಗ ಮಾತ್ರವೇ ಇಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಜನರೂ ಇದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ದೇವನಹಳ್ಳಿ ಸುತ್ತಮುತ್ತ ಅಪಾರ್ಟ್‌ಮೆಂಟ್‌ಗಳಿಗೆ ನೀರು ನುಗ್ಗಿರುವುದಕ್ಕೂ ಇದೇ ಕಾರಣ ಎನ್ನಲಾಗಿದೆ. ತಹಶೀಲ್ದಾರರೊಂದಿಗೆ ಪರಿಶೀಲನೆ ನಡೆಸಿ, ಅಲ್ಲಿಯೂ ಒತ್ತುವರಿಯಾಗಿದ್ದರೆ ತೆರವುಗೊಳಿಸುವ ಕೆಲಸ ಮಾಡಲಾಗುತ್ತದೆ ಎಂದು ಅರುಳ್ ಕುಮಾರ್ ತಿಳಿಸಿದ್ದಾರೆ.

26ಕ್ಕೆ ವಧು–ವರರ ಸಮಾವೇಶ

ಬೆಂಗಳೂರು: ಸಂಯುಕ್ತ ಸ್ವಕುಳ ಸಾಳಿ ಸಂಘವು ವಧು–ವರರ ಸಮಾವೇಶವನ್ನು ಇದೇ 26ರಂದು ಮೈಸೂರು ಬ್ಯಾಂಕ್ ವೃತ್ತದ ಬಳಿ ಇರುವ ಶಿಕ್ಷಕರ ಸದನದಲ್ಲಿ ಹಮ್ಮಿಕೊಂಡಿದೆ. 23ರೊಳಗೆ ಅರ್ಜಿ ಸಲ್ಲಿಸಬಹುದು.

ಸಂಪರ್ಕ:9845694230

'ಡೆಂಗಿ, ಚಿಕೂನ್‌ಗುನ್ಯ ತಡೆಗೆ ಕ್ರಮ'

ಬೆಂಗಳೂರು: ಕೆಲ ದಿನಗಳಿಂದ ಬಿಡದೆ ಸುರಿಯುತ್ತಿರುವ ಮಳೆಯಿಂದ ಡೆಂಗಿ ಮತ್ತು ಚಿಕೂನ್‌ಗುನ್ಯ ಹೆಚ್ಚಾಗುವ ಸಂಭವವಿದ್ದು, ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಆರೋಗ್ಯಾಧಿಕಾರಿಗಳಿಗೆ ವಿಶೇಷ ಆಯುಕ್ತ(ಆರೋಗ್ಯ) ಕೆ.ವಿ. ತ್ರಿಲೋಕ್ ಚಂದ್ರ ಸೂಚನೆ ನೀಡಿದರು.

ಬಿಬಿಎಂಪಿ ಆರೋಗ್ಯ ಇಲಾಖೆ ಅಧಿಕಾರಿಗಳ ಸಭೆ ನಡೆಸಿದ ಅವರು, 'ಮಳೆ ಬಂದಾಗ ನೀರು ಸಂಗ್ರಹವಾಗಿ ಸೊಳ್ಳೆಗಳ ಸಂತತಿ ಹೆಚ್ಚಾಗುವುದನ್ನು ತಡೆಯಬೇಕು. ಹೂವಿನ ಕುಂಡ, ಬಿಸಾಡಿದ ಟೈರ್, ನೀರಿನ ತೊಟ್ಟಿ, ನೀರಿನ ಬಾಟಲಿಗಳಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುತ್ತವೆ. ಅಂತಹ ಜಾಗದಲ್ಲಿ ನೀರು ಸಂಗ್ರಹವಾಗದಂತೆ ನೋಡಿಕೊಳ್ಳಬೇಕು' ಎಂದು ತಿಳಿಸಿದರು.

ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗ ನಿಯಂತ್ರಣ ಕಾರ್ಯಕ್ರಮ ನಿರ್ದೇಶನಾಲಯದ ಹಿರಿಯ ಪ್ರಾದೇಶಿಕ ನಿರ್ದೇಶಕ ಡಾ. ರವಿಕುಮಾರ್, 'ನಗರದಲ್ಲಿ ಡೆಂಗಿ ಮತ್ತು ಚಿಕೂನ್‌ಗುನ್ಯ ಪ್ರಕರಣಗಳು ಹೆಚ್ಚಾಗುವ ಸಂಭವವಿದೆ' ಎಂದು ಎಚ್ಚರಿಸಿದರು.

ನಾಯಂಡಹಳ್ಳಿ ಮೇಲ್ಸೇತುವೆಯಿಂದ ಮಳೆ ನೀರು ಕೆಳಕ್ಕೆ ಸೋರಿ ವಾಹನ ಸಂಚಾರಕ್ಕೆ ತೊಂದರೆ ಆಗಿರುವುದನ್ನು ವಸತಿ ಸಚಿವ ವಿ. ಸೋಮಣ್ಣ ಪರಿಶೀಲಿಸಿದರು. ಬಿಬಿಎಂಪಿ ಮುಖ್ಯ ಎಂಜಿನಿಯರ್ (ರಸ್ತೆ ಮೂಲ ಸೌಕರ್ಯ) ಬಿ.ಎಸ್. ಪ್ರಹ್ಲಾದ್, ಕಾರ್ಯಪಾಲಕ ಎಂಜಿನಿಯರ್ ನಂದೀಶ್ ಇದ್ದಾರೆ

'ಸಚಿವರು, ಅಧಿಕಾರಿಗಳ ಮಧ್ಯೆ ಸಮನ್ವಯವೇ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆಯಿಂದಾಗಿ ಇಡೀ ರಾಜ್ಯವೇ ನಡುಗಡ್ಡೆಯಂತಾಗಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ ಎಂದು ಟೀಕಿಸಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, 'ಸಚಿವರು–ಅಧಿಕಾರಿಗಳ ಮಧ್ಯೆ ಸಮನ್ವಯವೇ ಇಲ್ಲ' ಎಂದು ದೂರಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಮಹಾಮಳೆ ತಂದೊಡ್ಡಿರುವ ಪ್ರವಾಹದಂತಹ ಪರಿಸ್ಥಿತಿಯಿಂದ ರೈತರು ಬೀದಿಗೆ ಬಿದ್ದಿದ್ದಾರೆ. ಬೆಳೆದಿರುವ ಫಸಲು ಕೈಗೆ ಸಿಗದೇ ಅನ್ನದಾತರು ಆತಂಕಕ್ಕೆ ಸಿಲುಕಿದ್ದಾರೆ. ಸಚಿವರು, ಶಾಸಕರು ಶಂಖ

ಊದಿಕೊಂಡು ಊರೂರು ತಿರುತ್ತಿದ್ದಾರೆ. ಅಧಿಕಾರಿಗಳು ತಮಗೇಕೆ ಈ ಉಸಾಬರಿ ಎಂದು ಸುಮ್ಮನಾಗಿದ್ದಾರೆ' ಎಂದು ಕಟಕಿಯಾಡಿದರು.

ಸಾಧನೆಯ ಆಧಾರದ ಮೇಲೆ ಶಂಖ ಊದಿದರೆ ಪರಿಷತ್ ಚುನಾವಣೆಯ ಮೇಲೆ ಪರಿಣಾಮ ಆಗುವುದಿಲ್ಲ. ಎಲ್ಲಿ ಬೇಕಾದರೂ ಕುಳಿತುಕೊಂಡು ಗೆಲ್ಲುವ ಕಲೆ ನಿಮಗೆ ಚೆನ್ನಾಗಿ ಗೊತ್ತಿದೆ ಎಂದು ವ್ಯಂಗ್ಯವಾಡಿದರು.

'ಕುಮಾರಸ್ವಾಮಿ ಅವರ ರೀತಿ ತಾವು ದಿನಕ್ಕೆರಡು ಬಾರಿ ಕ್ಯಾಮರಾ ಮುಂದೆ ಬರಲು ಆಗುತ್ತದೆಯೇ' ಎಂಬ ಗೃಹ ಸಚಿವ ಆರಗ ಜ್ಞಾನೇಂದ್ರ ಅವರ ಟೀಕೆಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, 'ನನ್ನ ಪ್ರಕಾರ ಇಂತಹ ಗೃಹ ಸಚಿವರು ಈವರೆಗೆ ಬರಲೇ ಇಲ್ಲ. ಪಾಪ ಅವರು; ಜನರ ಕಷ್ಟ ಕೇಳಲು ನಿದ್ದೆ ಕೂಡ ಮಾಡುತ್ತಿಲ್ಲ ಅನಿಸುತ್ತಿದೆ. ಅವರ ಶಿವಮೊಗ್ಗ ಜಿಲ್ಲೆ ಹೇಗಿದೆ, ಅಡಿಕೆ ಬೆಳೆಗಾರರು ಹೇಗಿದ್ದಾರೆ, ಅವರ ಕಷ್ಟ ಸುಖ ವಿಚಾರ ಮಾಡಿದ್ದೀರಾ ಜ್ಞಾನೇಂದ್ರ ಅವರೇ' ಎಂದು ವ್ಯಂಗ್ಯವಾಗಿ ಪ್ರಶ್ನಿಸಿದರು.

'ಪಕ್ಷದಿಂದ ಅಂತರ ಕಾಯ್ದುಕೊಂಡಿರುವ ಸಂದೇಶ್ ನಾಗರಾಜ್ ಮತ್ತು ಸಿ.ಆರ್. ಮನೋಹರ್ ಮತ್ತೆ ಪಕ್ಷಕ್ಕೆ ವಾಪಸ್ ಬರುವ ವಿಚಾರ ನನ್ನ ಮುಂದೆ ಇಲ್ಲ. ನಮ್ಮ ಮೇಲೆ ನಂಬಿಕೆ ಇಲ್ಲ ಅಂತ ಹೋದವರು ಅವರು' ಎಂದು ಕುಮಾರಸ್ವಾಮಿ ಹೇಳಿದರು.

NO.1 MBBS ABROAD CONSULTANTS IN INDIA (Estd:2000)
Become a Doctor in just 10.6 Lakhs
(Total for 5yrs, Tuition Fee Payable 92.5k per Semester)
Also available world renowned universities at low cost in
• CHINA • KAZAKH • KYRGYZSTAN
• RUSSIA • UKRAINE • PHILIPPINES
• GEORGIA • NEPAL • BANGLADESH
Never trust agents blindly and get cheated, compulsory collect min 200 old students numbers n make thorough enquiry before taking admission with any agent. Talk to our 3000+Old Students.
APEX CONSULTANTS BENGALURU
apexmbbsabroad.com
97043 08080
81232 73932
73386 41768
93913 47248

ಭಾರೀ ರಿಯಾಯಿತಿಗಳು! ಹೆಚ್ಚಿನ ಉಳಿತಾಯ! ನಿಮ್ಮ ಪೀಠೋಪಕರಣಗಳ ಅಗತ್ಯಗಳನ್ನು ನವೀಕರಿಸಲು ದೊಡ್ಡ ಡೀಲ್‌ಗಳು!
ಕೊನೆಯ 2 ದಿನಗಳು
FURNITURE FAIR™
INTERIOR & EXTERIOR EXHIBITION
BIG SALE & SAVINGS
UPTO 70% OFF
ದಿನಾಂಕ & ಸ್ಥಳ
19 20 21 22 ನವೆಂಬರ್ 2021
ತ್ರಿಪುರವಾಸಿನಿ ಅರಮನೆ ಮೈದಾನ,
ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು
• ಲಿವಿಂಗ್ ರೂಮ್ ಸೆಟ್ • ಬೆಡ್‌ರೂಮ್ ಸೆಟ್ಸ್ • ಡೈನಿಂಗ್ ಸೆಟ್ಸ್ • ರಿಕ್ಲೈನರ್ ಸೋಫಾ ಸೆಟ್ಸ್ • ಔಟ್‌ಡೋರ್ ಫರ್ನಿಚರ್ • ಕಾರ್ವ್ಡ್ ವುಡ್ ಸೋಫಾ ಸೆಟ್ಸ್
• ಮ್ಯಾಟ್ರೆಸ್ಸಸ್ • ಚೇರ್ಸ್ • ಬಂಕರ್ ಬೆಡ್ • ಬ್ರಾಸ್ & ಆರ್ಟ್‌ಕ್ರಾಫ್ಟ್ಸ್ • ಮಸಾಜ್ ಚೇರ್ • ಹೋಮ್ ಡೆಕೊರ್ ಪ್ರಾಡಕ್ಟ್ಸ್ ಮತ್ತು ಇನ್ನೂ ಅನೇಕ..



exhibitions_iadsnevents
iadsnevents
Covid-19 protocol followed inside the venue
+91 93425 77908
AN EVENT BY
iads & events
COMPLETE BUSINESS SOLUTIONS

ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಸಂಪರ್ಕ– ಎನ್‌ಸಿಸಿ ಕಂಪನಿಗೆ ಗುತ್ತಿಗೆ • ಮೂರು ತಿಂಗಳಲ್ಲಿ ಕಾಮಗಾರಿ ಆರಂಭ

ಮೆಟ್ರೊ ಕಾಮಗಾರಿಗೆ ಮೂರು ಪ್ಯಾಕೇಜ್

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮೆಟ್ರೊ ರೈಲು ಸಂಪರ್ಕ ಕಲ್ಪಿಸುವ ಬಹು ಬೇಡಿಕೆಯ ಕಾಮಗಾರಿ ಮೂರು ತಿಂಗಳಲ್ಲಿ ಆರಂಭವಾಗಲಿದ್ದು, ಸಿವಿಲ್ ಕಾಮಗಾರಿ ಗುತ್ತಿಗೆಯನ್ನು ಎನ್‌ಸಿಸಿ (ನಾಗಾರ್ಜುನ ಕನ್‌ಸ್ಟ್ರಕ್ಷನ್ ಕಂಪನಿ) ಪಡೆದುಕೊಂಡಿದೆ.

2ಬಿ ಮಾರ್ಗದ ಕಾಮಗಾರಿಯನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದ್ದು, ಎಲ್ಲ ಪ್ಯಾಕೇಜ್‌ಗಳನ್ನೂ ಎನ್‌ಸಿಸಿಗೆ ನೀಡಲಾಗಿದೆ. ಕಾಮಗಾರಿ ಸಂಬಂಧ ಮಾಡಿಕೊಂಡಿರುವ ಒಪ್ಪಂದ ಪತ್ರವನ್ನು ಎನ್‌ಸಿಸಿಗೆ ಹಸ್ತಾಂತರಿಸಲಾಗಿದೆ ಎಂದು ಬೆಂಗಳೂರು ಮೆಟ್ರೊ ರೈಲು ನಿಗಮ ಲಿಮಿಟೆಡ್ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ 'ಪ್ರಜಾವಾಣಿ'ಗೆ ತಿಳಿಸಿದರು.

ಕೆ.ಆರ್.ಪುರದಿಂದ ವಿಮಾನ ನಿಲ್ದಾಣದ ತನಕ 38.44 ಕಿ.ಮೀ. ಉದ್ದದ ಎತ್ತರಿಸಿದ ಮೆಟ್ರೊ ರೈಲು ಮಾರ್ಗದ ಕಾಮಗಾರಿಗೆ ಒಟ್ಟು ₹2,200 ಕೋಟಿ ಮೊತ್ತ ನಿಗದಿ ಮಾಡಲಾಗಿದೆ.

ಕೋವಿಡ್ ಕಾರಣದಿಂದ ಒಂದೂವರೆ ವರ್ಷದಲ್ಲಿ ಹಲವು ಬಾರಿ ಟೆಂಡರ್ ಪ್ರಕ್ರಿಯೆ ಮುಂದೂಡಿಕೆಯಾಗಿತ್ತು. ಹೊರವರ್ತುಲ ರಸ್ತೆ ಮತ್ತು ವಿಮಾನ ನಿಲ್ದಾಣ ಮಾರ್ಗ ಸೇರಿ ₹14,788 ಕೋಟಿ ಮೊತ್ತಕ್ಕೆ ಕೇಂದ್ರ ಸಚಿವ ಸಂಪುಟ 2021ರ ಏಪ್ರಿಲ್‌ನಲ್ಲಿ ಅನುಮೋದನೆ ನೀಡಿತ್ತು. 2021ರ ಜೂನ್‌ನಲ್ಲಿ ತೆರೆಯಲಾಗಿದ್ದ ತಾಂತ್ರಿಕ ಬಿಡ್‌ಗಳಲ್ಲಿ ಐದು ಕಂಪನಿಗಳು ಅರ್ಹತೆ ಪಡೆದಿದ್ದವು.

ಸೆಪ್ಟೆಂಬರ್ 14ರಂದು ಬಿಡ್ ತೆರೆದಾಗ ಕಡಿಮೆ ದರ ನಮೂದಿಸಿರುವ ಬಿಡ್ದುದಾರರಾಗಿ ಎನ್‌ಸಿಸಿ ಹೊರಹೊಮ್ಮಿದೆ.

ಯಲಚೇನಹಳ್ಳಿಯಿಂದ ರೇಷ್ಮೆ ಸಂಸ್ಥೆ ತನಕದ ಎರಡನೇ ಹಂತದ ಮೆಟ್ರೊ ರೈಲು ಮಾರ್ಗದ ಸಿವಿಲ್ ಕಾಮಗಾರಿಯನ್ನು ಎನ್‌ಸಿಸಿ ಕಂಪನಿ ಈ ಹಿಂದೆ ನಿರ್ವಹಿಸಿತ್ತು.

'ವಿಮಾನ ನಿಲ್ದಾಣ ಮಾರ್ಗಕ್ಕೆ ಅಗತ್ಯ ಇರುವ ಭೂಸ್ವಾಧೀನ ಪ್ರಕ್ರಿಯೆಯೂ ಬಹುತೇಕ ಮುಗಿದಿದೆ. ಅಗತ್ಯ ಇರುವ ಒಟ್ಟು 3,13,367 ಚದರ ಮೀಟರ್‌ನಲ್ಲಿ ಈವರೆಗೆ 2,91,470 ಚದರ ಮೀಟರ್ ಭೂಮಿ ಸ್ವಾಧೀನ ಪ್ರಕ್ರಿಯೆ ಮುಗಿದಿದೆ. ಮರ ಕಡಿಯುವ ಮತ್ತು ಸ್ಥಳಾಂತರ ಮಾಡುವ ಕಾರ್ಯ ಬಾಕಿ ಇದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಯೊಬ್ಬರು ತಿಳಿಸಿದರು.

ಮೂರು ಲಕ್ಷಕ್ಕೆ ಏರಿದ ಪ್ರಯಾಣಿಕರ ಸಂಖ್ಯೆ

ಕೋವಿಡ್ ಬಳಿಕ ಇದೇ ಮೊದಲ ಬಾರಿಗೆ ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆ 3 ಲಕ್ಷದ ಗಡಿ ದಾಟಿದೆ. ನ.15ರಂದು 3,15,554 ಜನರು ಪ್ರಯಾಣ ಮಾಡಿದ್ದಾರೆ.

ಕೋವಿಡ್‌ಗೂ ಮುನ್ನ ನಿತ್ಯ ಸರಾಸರಿ 4.5 ಲಕ್ಷ ಜನ ಪ್ರಯಾಣಿಸುತ್ತಿದ್ದರು. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಮೆಟ್ರೊ ರೈಲು ಸಂಚಾರ ಸಂಪೂರ್ಣ ನಿಲ್ಲಿಸಲಾಗಿತ್ತು. ಲಾಕ್‌ಡೌನ್ ತೆರವಾದ ಬಳಿಕ ರಾತ್ರಿ 9ರ ತನಕ ಮಾತ್ರ ರೈಲುಗಳ ಸಂಚಾರ ಇತ್ತು. ಕೆಲ ದಿನಗಳ ಬಳಿಕ 10 ಗಂಟೆ ತನಕ ವಿಸ್ತರಣೆ ಮಾಡಲಾಗಿತ್ತು. ಗುರುವಾರದಿಂದ ರಾತ್ರಿ 11ರ ತನಕ ಮೆಟ್ರೊ ರೈಲು ಸಂಚಾರವನ್ನು ವಿಸ್ತರಿಸಲಾಗಿದೆ. ಪ್ರಯಾಣಿಕರ ಸಂಖ್ಯೆ ಮುಂದಿನ ದಿನಗಳಲ್ಲಿ ಏರಿಕೆಯಾಗುವ ನಿರೀಕ್ಷೆಯನ್ನು ಬಿಎಂಆರ್‌ಸಿಎಲ್ ಹೊಂದಿದೆ.

ಪ್ಯಾಕೇಜ್ ವಿವರ

ಪ್ಯಾಕೇಜ್–1: ಬೆನ್ನಿಗಾನಹಳ್ಳಿ, ಹೊರಮಾವು, ಎಚ್‌ಆರ್‌ಬಿಆರ್ ಲೇಔಟ್, ಕಲ್ಯಾಣನಗರ, ಎಚ್‌ಬಿಆರ್ ಲೇಔಟ್, ನಾಗವಾರ, ವೀರಣ್ಣಪಾಳ್ಯ ಮತ್ತು ಕೆಂಪಾಪುರ ಒಳಗೊಂಡು ಬೈಯಪ್ಪನಹಳ್ಳಿ ಸಂಪರ್ಕಿಸುವ 11 ಕಿಲೋ ಮೀಟರ್ ಉದ್ದದ ಮಾರ್ಗ.

ಪ್ಯಾಕೇಜ್–2: ಹೆಬ್ಬಾಳ, ಕೊಡಿಗೇಹಳ್ಳಿ, ಜಕ್ಕೂರು ಕ್ರಾಸ್, ಯಲಹಂಕ, ಬಾಗಲೂರು ಕ್ರಾಸ್ ತನಕದ 11.67 ಕಿ.ಮೀ ಉದ್ದದ ಮಾರ್ಗ.

ಪ್ಯಾಕೇಜ್–3: ಬೆಟ್ಟಹಲಸೂರು, ದೊಡ್ಡಜಾಲ, ವಿಮಾನ ನಿಲ್ದಾಣ ತನಕದ 15 ಕಿ.ಮೀ ಉದ್ದ ಮಾರ್ಗ.

ಸುದ್ದಿ 2 ನಿಮಿಷ

ಹೂಡಿಕೆ ಆಕರ್ಷಿಸಲು ನೆರವು ಕೋರಿದ ಮುಖ್ಯಮಂತ್ರಿ

ಬೆಂಗಳೂರು: ಕರ್ನಾಟಕಕ್ಕೆ ವಿದೇಶಿ ಹೂಡಿಕೆ ಆಕರ್ಷಿಸಲು ಅಮೆರಿಕದಲ್ಲಿರುವ ಕನ್ನಡಿಗರು ನೆರವಾಗಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮನವಿ ಮಾಡಿದರು.

ಅಮೆರಿಕದ ವಾಷಿಂಗ್ಟನ್‌ನಲ್ಲಿ ಅಮೆರಿಕ ಕನ್ನಡ ಕೂಟಗಳ ಆಗರ (ಅಕ್ಕ) ಶನಿವಾರ ಆಯೋಜಿಸಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ವರ್ಚ್ಯುಯಲ್ ಆಗಿ ಉದ್ಘಾಟಿಸಿದ ಅವರು, 'ಅಮೆರಿಕದಲ್ಲಿರುವ ಉದ್ಯಮಗಳ ಜತೆ ಅಲ್ಲಿನ ಕನ್ನಡಿಗರು ಚರ್ಚಿಸಬೇಕು. ಕರ್ನಾಟಕದಲ್ಲಿರುವ ಹೂಡಿಕೆ ಅವಕಾಶಗಳನ್ನು ಮನದಟ್ಟು ಮಾಡಬೇಕು. ಇಲ್ಲಿನ ಸರ್ಕಾರ ಹೂಡಿಕೆದಾರರನ್ನು ಬೆಂಬಲಿಸಲಿದೆ ಎಂಬುದನ್ನು ತಿಳಿಸಬೇಕು' ಎಂದರು.

ಸಾಮಾನ್ಯ ಕನ್ನಡಿಗನಿಗೂ ಆರ್ಥಿಕ ಶಕ್ತಿ ನೀಡುವುದು ಈಗಿನ ಅಗತ್ಯ. ಅದಕ್ಕೆ ಪೂರಕವಾಗಿ ಕನ್ನಡಿಗರಿಗೆ ಹೆಚ್ಚಿನ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸಲಾಗುತ್ತಿದೆ. ಕೌಶಲ ತರಬೇತಿಗೆ ಸರ್ಕಾರ ಆದ್ಯತೆ ನೀಡಿದೆ ಎಂದು ಹೇಳಿದರು.

ಉಡುಪಿ ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಿದರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನೀಲ್ ಕುಮಾರ್, ಅಕ್ಕ ಅಧ್ಯಕ್ಷ ತುಮಕೂರು ದಯಾನಂದ್, ಉಪಾಧ್ಯಕ್ಷ ಡಾ. ಅಮರನಾಥ್ ತಾವರೆಕೆರೆ ಉಪಸ್ಥಿತರಿದ್ದರು.

ಮಾಹಿತಿ ನೀಡದ ಡಿಐಜಿಗೆ ₹10 ಸಾವಿರ ದಂಡ

ಬೆಂಗಳೂರು: 'ಮಾಹಿತಿ ಹಕ್ಕು' ಕಾಯ್ದೆಯಡಿ ಸಲ್ಲಿಸಿದ್ದ ಅರ್ಜಿಗೆ ನಿಗದಿತ ಅವಧಿಯೊಳಗೆ ಸೂಕ್ತ ಮಾಹಿತಿ ನೀಡದೇ ವಿಳಂಬ ಮಾಡಿದ್ದಕ್ಕಾಗಿ ಡಿಐಜಿ ಡಾ. ರಾಮ್‌ನಿವಾಸ್ ಸೆಫೆಟ್ ಅವರಿಗೆ ರಾಜ್ಯ ಮಾಹಿತಿ ಆಯೋಗ, ₹10 ಸಾವಿರ ದಂಡ ವಿಧಿಸಿದೆ.

ವಕೀಲೆ ಸುಧಾ ಕಾಟವಾ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ್ದ ರಾಜ್ಯ ಮಾಹಿತಿ ಆಯುಕ್ತ ಡಾ. ಕೆ. ಲಿಂಗರಾಜ್ ಅವರು ನ. 9ರಂದು ಆದೇಶ ಹೊರಡಿಸಿದ್ದಾರೆ.

'ಡಿಐಜಿ ಅವರ ದಂಡದ ಮೊತ್ತವನ್ನು 2021ರ ಡಿಸೆಂಬರ್ ಹಾಗೂ 2022ರ ಜನವರಿ ತಿಂಗಳ ಸಂಬಳದಲ್ಲಿ ತಲಾ ₹5,000 ಕಡಿತಗೊಳಿಸಬೇಕು. ಅದೇ ಹಣವನ್ನು ಆರ್‌ಟಿಐ ಕಾಯ್ದೆ ಖಾತೆಗೆ ಜಮೆ ಮಾಡಿ, ರಶೀದಿಯನ್ನು ಮಾಹಿತಿ ಆಯೋಗದ ಕಾರ್ಯದರ್ಶಿಗೆ ಸಲ್ಲಿಸಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪೊಲೀಸ್ ಇಲಾಖೆಗೆ ಸಂಬಂಧಪಟ್ಟ ಮಾಹಿತಿ ಕೋರಿ ಸುಧಾ ಕಾಟವಾ, ಸಾರ್ವಜನಿಕ ಸಂಪರ್ಕ ಅಧಿಕಾರಿಯೂ ಆಗಿದ್ದ ಡಿಐಜಿ ರಾಮ್‌ನಿವಾಸ್ ಸೆಪೆಟ್ ಅವರಿಗೆ ಅರ್ಜಿ ಸಲ್ಲಿಸಿದ್ದರು. ಆದರೆ, ನಿಗದಿತ ಸಮಯದೊಳಗೆ ಮಾಹಿತಿ ನೀಡಿರಲಿಲ್ಲ. ಅದನ್ನು ಪ್ರಶ್ನಿಸಿ ಪ್ರಥಮ ಮೇಲ್ಮನವಿ ಪ್ರಾಧಿಕಾರಕ್ಕೆ ದೂರು ಸಲ್ಲಿಸಿದ್ದರು. ಅಷ್ಟಾದರೂ ಮಾಹಿತಿ ಸಿಕ್ಕಿರಲಿಲ್ಲ. ಬಳಿಕವೇ ಸುಧಾ ಅವರು ರಾಜ್ಯ ಮಾಹಿತಿ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

ಕಾಮಗಾರಿ ಪೂರ್ಣಗೊಂಡ ಬಳಿಕ ರಸ್ತೆ ಮರುನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂದ್ರಹಳ್ಳಿ ಮುಖ್ಯ ರಸ್ತೆಯಲ್ಲಿ ಕಾವೇರಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡ ಬಳಿಕ ರಸ್ತೆಯನ್ನು ಮರು ನಿರ್ಮಿಸಿ, ಡಾಂಬರೀಕರಣ ಮಾಡಲಾಗುತ್ತದೆ ಎಂದು ಜಲಮಂಡಳಿ ತಿಳಿಸಿದೆ.

ಇಲ್ಲಿನ ರಸ್ತೆಗಳ ಸ್ಥಿತಿಗತಿಯ ಬಗ್ಗೆ ಶುಕ್ರವಾರ (ನ.19) 'ರಸ್ತೆ ಕೆಸರುಮಯ: ಸಂಚಾರ ಅಯೋಮಯ' ಎಂಬ ಶೀರ್ಷಿಕೆಯಡಿ 'ಪ್ರಜಾವಾಣಿ' ವರದಿ ಪ್ರಕಟಿಸಿತ್ತು. ಇದಕ್ಕೆ ಸ್ಪಂದಿಸಿರುವ ಜಲಮಂಡಳಿ ಕಾರ್ಯ ನಿರ್ವಾಹಕ ಅಭಿಯಂತರರು (ಕಾವೇರಿ–4), 'ಮಳೆ ನಿಂತ ಕೂಡಲೇ ರಸ್ತೆ ಮರು ನಿರ್ಮಾಣ ಕಾಮಗಾರಿಯನ್ನು ಕೈಗೊಂಡು, ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು' ಎಂದು ಭರವಸೆ ನೀಡಿದ್ದಾರೆ.

'ನಗರಕ್ಕೆ ಹೊಸದಾಗಿ ಸೇರ್ಪಡೆಯಾಗಿರುವ 110 ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲು ಕಾವೇರಿ 5ನೇ ಹಂತದ ಯೋಜನೆ ಪ್ರಗತಿಯಲ್ಲಿದೆ. ನಗರದ ಪಶ್ಚಿಮ ಭಾಗದಲ್ಲಿ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಕೈಗೊಳ್ಳಲಾಗಿದೆ. ಈ ಕಾಮಗಾರಿಯ ಭಾಗವಾಗಿ ಅಂದ್ರಹಳ್ಳಿ ಮುಖ್ಯರಸ್ತೆಯಿಂದ ತುಮಕೂರು ಮುಖ್ಯರಸ್ತೆಯವರೆಗೆ ತಿಗಳರಪಾಳ್ಯ, ಕರಿ ಓಬನಹಳ್ಳಿ ರಸ್ತೆಯ ಮೂಲಕ ಪೈಪ್‌ಲೈನ್ ಅಳವಡಿಕೆ ಮಾಡಲಾಗುತ್ತಿದೆ. ನಗರದಲ್ಲಿ ಸುರಿಯುತ್ತಿರುವ ಅಕಾಲಿಕ ಮಳೆಯು ಕಾಮಗಾರಿ ನಡೆದ ರಸ್ತೆಯ ಮರುನಿರ್ಮಾಣಕ್ಕೆ ಅಡಚಣೆ ಉಂಟುಮಾಡಿದೆ' ಎಂದು ಅವರು ತಿಳಿಸಿದ್ದಾರೆ.

ಪ್ರಚೋದನೆ ಬೇಡ: ಸ್ವಭಾವ ಅರಿತು ಸಂಯಮದ ವರ್ತನೆ ಅಗತ್ಯ –ಕ್ಯೂಪಾ

ಬೀದಿ ನಾಯಿ: ಬೇಡ ಭೀತಿ– ಇರಲಿ ಪ್ರೀತಿ

ಪ್ರಜಾವಾಣಿ ವಾರ್ತೆ

ಪ್ರಜಾವಾಣಿ CUPA ಸಹಯೋಗ

ಬೆಂಗಳೂರು: ನಡೆದುಕೊಂಡು ಹೋಗುವಾಗ, ದ್ವಿಚಕ್ರ ವಾಹನಗಳಲ್ಲಿ ಸಾಗುವಾಗ ಬೀದಿನಾಯಿಗಳು ಧುತ್ತೆಂದು ಮೇಲೆರಗುವ ಪ್ರಸಂಗಗಳು ಸರ್ವೇಸಾಮಾನ್ಯ. ಅನಿರೀಕ್ಷಿತವಾಗಿ ಎದುರಾಗುವ ಇಂತಹ ಇಕ್ಕಟ್ಟಿನ ಸಂದರ್ಭವನ್ನು ನಿಭಾಯಿಸುವುದು ಸವಾಲಿನ ಕೆಲಸ. ಆದರೆ, ಬೀದಿನಾಯಿಗಳೂ ಏಕೆ ಹೀಗೆ ಮಾಡುತ್ತವೆ ಎಂಬುದನ್ನು ತಿಳಿದುಕೊಂಡರೆ ಇದನ್ನು ಅಳುಕಿಲ್ಲದೆಯೇ ನಿಭಾಯಿಸಬಹುದು ಎನ್ನುತ್ತಾರೆ ಶ್ವಾನಪ್ರಿಯರು.

'ನಾಯಿಗಳು ಮನುಷ್ಯರ ಮೇಲೆ ಎರಗುವುದು ಆತ್ಮರಕ್ಷಣೆಗಾಗಿ. ಬುದ್ಧಿ ಇರುವ ಮನುಷ್ಯನೂ ತನ್ನ ಆತ್ಮರಕ್ಷಣೆಗಾಗಿ ಪ್ರತಿ ದಾಳಿ ನಡೆಸಿದರೆ ಅವುಗಳು ಇನ್ನಷ್ಟು ಕ್ರೂರವಾಗಿ ವರ್ತಿಸುತ್ತವೆ. ಹಾಗಾಗಿ ನಾಯಿಗಳು ಬೊಗಳುತ್ತಾ ಎರಗುವಾಗ ಸಂಯಮದಿಂದ ವರ್ತಿಸಬೇಕು. ಒಂದೆರಡು ನಿಮಿಷ ಅಳುಕಿಲ್ಲದೇ ಪರಿಸ್ಥಿತಿ ನಿಭಾಯಿಸಿದರೆ ನಾಯಿಗಳು ಸುಮ್ಮನಾಗುತ್ತವೆ' ಎಂದು ಚಾಮರಾಜಪೇಟೆಯಲ್ಲಿರುವ ಕ್ಯೂಪಾದ ಬೀದಿನಾಯಿಗಳ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸಾ ಕೇಂದ್ರದ ಎನ್. ಲೋಕೇಶ್.

ಬೀದಿನಾಯಿಗಳ ಮೇಲಿನ ಭಯದಿಂದಾಗಿಯೇ ಅವುಗಳ ಮೇಲೆ ದ್ವೇಷ ಕಾರುವವರಿಗೆ ಕಿವಿಮಾತು ಹೇಳಿದ ಲೋಕೇಶ್, 'ಪ್ರೀತಿಯಿಂದ ಬೀದಿನಾಯಿಗಳ ಮನಸ್ಸನ್ನು ಗೆಲ್ಲಬೇಕೇ ಹೊರತು, ಅವುಗಳ ಮೇಲೆ ಸಿಟ್ಟು ತೋರಿಸುವುದಲ್ಲ. ನಾವು ಎಷ್ಟು ಪ್ರೀತಿ ತೋರಿಸುತ್ತೇವೆಯೋ ಅದರ ಹಲವಾರು ಪಟ್ಟು ಪ್ರೀತಿಯನ್ನು ಅವು ಮರಳಿಸುತ್ತವೆ. ನೀವು ಸ್ವಲ್ಪ ಪ್ರೀತಿ ತೋರಿಸುತ್ತೀರೆಂದು ತಿಳಿದರೂ ಸಾಕು ಅವು ಬೊಗಳುತ್ತಾ ಮೇಲೆರಗುವ ಬದಲು ಬಾಲ ಅಲ್ಲಾಡಿಸುತ್ತಾ ನಿಮಗೆ ಹತ್ತಿರವಾಗುತ್ತವೆ' ಎಂದು ವಿವರಿಸಿದರು.

'ಬೀದಿನಾಯಿಗಳ ವರ್ತನೆಗಳಿಗೂ ಕಾರಣಗಳಿವೆ. ಚಲಿಸುವ ದ್ವಿಚಕ್ರ ವಾಹನ ಅಥವಾ ಇತರ ವಾಹನಗಳನ್ನು ನಾಯಿಗಳು ಬೆನ್ನಟ್ಟುತ್ತವೆ ಎಂದಾದರೆ, ವಾಹನಗಳಿಂದ ಅವುಗಳಿಗೆ ಅಥವಾ ಅವುಗಳ ಗುಂಪಿನ ಯಾವುದೋ ಒಂದು ನಾಯಿಗೆ ಹಾನಿ ಆಗಿದೆ ಎಂದರ್ಥ. ದ್ವಿಚಕ್ರ ವಾಹನದಲ್ಲಿ ಸಾಗುವಾಗ ನಾಯಿ ಬೆನ್ನಟ್ಟಿದರೆ ಸವಾರರು ವಾಹನದ ವೇಗವನ್ನು ಕಡಿಮೆ ಮಾಡಬೇಕು. ಸಾಧ್ಯವಾದರೆ ಒಂದೆರಡು ನಿಮಿಷ ವಾಹನವನ್ನು ನಿಲ್ಲಿಸಿದರೆ ಇನ್ನೂ ಒಳ್ಳೆಯದು. ಇಂತಹ ಸಂದರ್ಭದಲ್ಲಿ ವಾಹನವನ್ನು ವೇಗವಾಗಿ ಓಡಿಸಿದರೆ, ಬೇಟೆಯೇ ಹುಟ್ಟುಗುಣವಾಗಿರುವ ನಾಯಿಗಳು ಮತ್ತಷ್ಟು ಉತ್ತೇಜನಗೊಂಡು ಅಟ್ಟಿಸಿಕೊಂಡು ಬರುವ ಸಾಧ್ಯತೆ ಹೆಚ್ಚು' ಎಂದು ಅವರು ಎಚ್ಚರಿಸಿದರು.

ಪ್ರಜಾವಾಣಿ– ಕ್ಯೂಪಾ ಅಭಿಯಾನಕ್ಕೆ ಕೈಜೋಡಿಸಿ

ಬೀದಿಪ್ರಾಣಿಗಳನ್ನು ದ್ವೇಷಿಸುವವರ ದೃಷ್ಟಿಕೋನ ಬದಲಾಯಿಸಲು ಹಾಗೂ ಅವುಗಳ ಬಗ್ಗೆ ಕಾಳಜಿ ವಹಿಸುವ ಜನರು ಮತ್ತು ಸಂಸ್ಥೆಗಳ ಜೊತೆ ಕೈಜೋಡಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು 'ಪ್ರಜಾವಾಣಿ'ಯು ಕ್ಯೂಪಾ ಸಂಸ್ಥೆ ಜೊತೆ ಸೇರಿ ಅಭಿಯಾನ ಆರಂಭಿಸಿದೆ.

ಮೂಕ ಪ್ರಾಣಿಗಳ ಬದುಕಿನಲ್ಲೂ ಭರವಸೆ ಮೂಡಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಈ ಅಭಿಯಾನದಲ್ಲಿ ತಾವೂ ಕೈಜೋಡಿಸಬಹುದು. ಸ್ವಯಂಸೇವಕರಾಗುವ ಮೂಲಕ ಬೀದಿ ಪ್ರಾಣಿಗಳ ರಕ್ಷಿಸಲು, ಆರೈಕೆ ಮಾಡಲು ಹಾಗೂ ಅವುಗಳ ಮೇಲಾಗುವ ದೌರ್ಜನ್ಯ ತಪ್ಪಿಸಲು ನೆರವಾಗಬಹುದು. ಬೀದಿಪಾಲಾದ ಪ್ರಾಣಿಗಳನ್ನು ದತ್ತು ಪಡೆದು ಸಾಕಬಹುದು. ಬೀದಿ ಪ್ರಾಣಿಗಳ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರಲು ನೆರವಾಗುವ ಈ ಅಭಿಯಾನದಲ್ಲಿ ಪಾಲ್ಗೊಳ್ಳುವಿರಾದರೆ, ಇಲ್ಲಿರುವ ಕೊಂಡಿಯನ್ನು (bit.ly/PVCUPA) ಕ್ಲಿಕ್ಕಿಸಿ ನೋಂದಾಯಿಸಿಕೊಳ್ಳಬಹುದು.

'ಮರಿ ಹಾಕಿರುವ ನಾಯಿಯತ್ತ ಸುಳಿಯದಿರಿ'

'ಕೆಲವೊಮ್ಮೆ ನಾಯಿಗಳು ಪರಿಚಿತರತ್ತಲೂ ಬೊಗಳುವುದುಂಟು. ಮರಿ ಹಾಕಿದ ಸಂದರ್ಭದಲ್ಲಿ ಮರಿಗಳನ್ನು ಕಾಪಾಡಲು ಹೆಣ್ಣು ನಾಯಿ ಉಗ್ರ ವರ್ತನೆ ತೋರುತ್ತದೆ. ಮರಿಗಳಿಗೆ ಹಾಲುಣಿಸುವ ನಾಯಿಗಳಿಂದ ಅಂತರ ಕಾಪಾಡುವುದು ಒಳ್ಳೆಯದು. ಪರಿಚಯವಿರುವವರೂ ಮರಿಗಳ ಹತ್ತಿರ ಬರುವುದನ್ನು ಇವು ಸಹಿಸುವುದಿಲ್ಲ' ಎನ್ನುತ್ತಾರೆ ಲೋಕೇಶ್.

'ಹೆಣ್ಣು ನಾಯಿ ಬೆದೆಗೆ ಬಂದಾಗ ಆ ಪರಿಸರದ ಗಂಡುನಾಯಿಗಳಲ್ಲಿ ಉಗ್ರ ಸ್ವಭಾವ ಹೆಚ್ಚುತ್ತದೆ. ಲೈಂಗಿಕ ಅಸಂತೃಪ್ತಿಯಿಂದಾಗಿ ಅವು ಕೆಲವೊಮ್ಮೆ ಬೊಗಳುತ್ತಾ ಬೇರೆಯವರ ಮೇಲೆ ದಾಳಿ ನಡೆಸುವುದುಂಟು' ಎಂದರು.

'ಕಲ್ಲು ಹೊಡೆಯದಿರಿ– ಗಕ್ಕನೆ ನಿಲ್ಲಿರಿ'

'ನಾಯಿಗಳು ಬೊಗಳುತ್ತಾ ಹತ್ತಿರ ಬಂದಾಗ ಅವುಗಳತ್ತ ಕಲ್ಲು ಹೊಡೆಯುವುದು ಅಥವಾ ಕೋಲು ಮತ್ತಿತರ ಆಯುಧದಿಂದ ಅವುಗಳಿಗೆ ಹಲ್ಲೆ ಮಾಡುವುದು ಸರಿಯಲ್ಲ. ಇದರಿಂದ ಅವುಗಳು ಮತ್ತಷ್ಟು ಘಾಸಿಗೊಳಗಾಗುತ್ತವೆ. ಅವು ಮನುಷ್ಯರೆಲ್ಲರನ್ನೂ ದ್ವೇಷಿಸುವ ಅಪಾಯವಿದೆ. ಇಂತಹ ಸಂದರ್ಭದಲ್ಲಿ ಗಕ್ಕನೆ ನಿಂತುಬಿಡಬೇಕು. ಆಗ ಅವುಗಳು ವಿಚಲಿತಗೊಂಡು ನಿಲ್ಲುತ್ತವೆ. ಅಪಾಯವನ್ನು ಉಂಟು ಮಾಡುವ ಸಾಧ್ಯತೆ ಕಡಿಮೆಯಾಗುತ್ತದೆ' ಎಂದು ಕ್ಯೂಪಾದ ಅಜಯ್ ವಿವರಿಸಿದರು.

'ಬೀದಿ ನಾಯಿಗಳಿಗೆ ಆಹಾರ ನೀಡಿ, ಅವುಗಳನ್ನು ಮಾತನಾಡಿಸುತ್ತಾ ಮುದ್ದು ಮಾಡಿದರೆ ಅವುಗಳಿಗೂ ಜನರ ಮೇಲೆ ನಂಬಿಕೆ ಹುಟ್ಟುತ್ತದೆ. ಬೀದಿನಾಯಿಗಳ ಮನಸ್ಸನ್ನು ಗೆಲ್ಲಲು ಇದು ಉತ್ತಮ ಮಾರ್ಗ' ಎಂದರು.

ಕೆರೆಗೆ ಉರುಳಿದ ಕಾರು: 3 ಸಾವು

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು ದಕ್ಷಿಣ ತಾಲ್ಲೂಕಿನ ನೆಲಗುಳಿ ಗೇಟ್ ಬಳಿ ಶುಕ್ರವಾರ ತಡರಾತ್ರಿ ಕೆರೆಗೆ ಕಾರು ಉರುಳಿ ಮೂವರು ಸಾವನ್ನಪ್ಪಿದ್ದಾರೆ. ಕಲ್ಲಪ್ಪ (23) ಕಿರಣ್ (22) ಹಾಗೂ ಪುಂಡಲೀಕ (29) ಮೃತರು.

ಮಂಜುನಾಥ್, ಅಂಬರೀಷ್ ಎಂಬುವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಈ ಎಲ್ಲರೂ ಬೆಂಗಳೂರಿನ ಸೋಮನಹಳ್ಳಿಯಲ್ಲಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಒಂದೇ ಕಾರಿನಲ್ಲಿ ಡಾಬಾವೊಂದಕ್ಕೆ ಊಟಕ್ಕೆ ತೆರಳಿದ್ದು, ಮರಳುವಾಗ ಕಾರು ಕೆರೆಯ ತಡೆಗೋಡೆಗೆ ಡಿಕ್ಕಿಯಾಗಿ ಕೆರೆಗೆ ಉರುಳಿತು. ಇಬ್ಬರು ಈಜಿ ದಡ ಸೇರಿದರೆ, ಉಳಿದ ಮೂವರು ನೀರಿನಲ್ಲಿ ಮುಳುಗಿ ಮೃತಪಟ್ಟರು ಎಂದು ಪೊಲೀಸರು ತಿಳಿಸಿದರು.

ಅಗ್ನಿಶಾಮಕ ಸೇವೆಯ ಸಿಬ್ಬಂದಿ ಸ್ಥಳೀಯರ ಸಹಕಾರದೊಂದಿಗೆ ಶನಿವಾರ ಕಲ್ಲಪ್ಪ ಹಾಗೂ ಪುಂಡಲೀಕ ಅವರ ಶವವನ್ನು ಕೆರೆಯಿಂದ ಹೊರತೆಗೆದರು. ಮತ್ತೊಂದು ಶವಕ್ಕಾಗಿ ಹುಡುಕಾಟ ನಡೆದಿತ್ತು.

ಕೃಷಿ ಕಾಯ್ದೆ ವಾಪಸ್: ರೈತರ ಚಾರಿತ್ರಿಕ ವಿಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಕಾಯ್ದೆಗಳನ್ನು ಹಿಂಪಡೆಯುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿರುವುದು ರೈತರ ಹೋರಾಟಕ್ಕೆ ಸಂದ ಚಾರಿತ್ರಿಕ ವಿಜಯ. ಬಹು ಜನಾಭಿಪ್ರಾಯಕ್ಕೆ ಸಿಕ್ಕ ಮನ್ನಣೆ' ಎಂದು ಚಿಂತಕರು ಮತ್ತು ವಿವಿಧ ಸಂಘಟನೆಗಳ ಮುಖಂಡರು ತಿಳಿಸಿದ್ದಾರೆ.

'ಈ ವಿಜಯವನ್ನು ಸಂಭ್ರಮದಿಂದ ಆಚರಿಸುವಾಗ, ಇದಕ್ಕಾಗಿ ಜೀವ ತೆತ್ತ ಸಾವಿರಾರು ಹುತಾತ್ಮ ನೇಗಿಲ ಯೋಗಿಗಳನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗುತ್ತದೆ' ಎಂದು ಹೇಳಿದ್ದಾರೆ.

'ಐದು ರಾಜ್ಯಗಳ ಚುನಾವಣೆಗಳು ಸಮೀಪಿಸಿರುವಾಗ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವ ಘೋಷಣೆಯನ್ನು ಪ್ರಧಾನಿ ಮಾಡಿದ್ದಾರೆ. ಹೀಗಾಗಿ, ಪ್ರಧಾನಿ ಅವರಿಗೆ ತಮ್ಮ ತಪ್ಪಿನ ಅರಿವು ಆಗಿದ್ದರಿಂದ ಸರಿಪಡಿಸಲು ಈ ಕ್ರಮಕ್ಕೆ ಮುಂದಾಗಿದ್ದಾರೆ ಎಂದು ಹೇಳಲಾಗುವುದಿಲ್ಲ. ರೈತರನ್ನು ಉದ್ದೇಶಿಸಿ ಅವರು ಕ್ಷಮೆಯಾಚಿಸಿರುವುದು ಸಹ ಔಪಚಾರಿಕವಾದುದು' ಎಂದು ತಿಳಿಸಿದ್ದಾರೆ.

'ಈ ದೇಶದಲ್ಲಿನ ಪ್ರಜಾಪ್ರಭುತ್ವದ ಬೇರುಗಳನ್ನು ಅಭದ್ರಗೊಳಿಸಲು ಯಾರಿಗೂ ಸಾಧ್ಯವಿಲ್ಲ. ಸರ್ವಾಧಿಕಾರವನ್ನು ಜನ ಸಹಿಸುವುದಿಲ್ಲ. ಅಂದು ಇಂದಿರಾ ಗಾಂಧಿ, ಇಂದು ಮೋದಿ ಅವರು ಇದಕ್ಕೆ ಜ್ವಲಂತ ನಿದರ್ಶನವಾಗಿ ಚರಿತ್ರೆಯಲ್ಲಿ ದಾಖಲಾಗುತ್ತಾರೆ. ಇದರಿಂದ ನಮ್ಮ ಎಲ್ಲ ರಾಜಕೀಯ ನಾಯಕರೂ ಪಾಠ ಕಲಿಯಬೇಕಾಗಿದೆ' ಎಂದು ಸಲಹೆ ನೀಡಿದ್ದಾರೆ.

'ಕೇಂದ್ರ ಸರ್ಕಾರವು ವಿದ್ಯುತ್ (ತಿದ್ದುಪಡಿ) ಕಾಯ್ದೆಯನ್ನು ವಾಪಸ್ ಪಡೆಯಬೇಕು. ರೈತರ ಬೆಳೆಗೆ ಕನಿಷ್ಠ ಬೆಂಬಲ ಬೆಲೆ ಖಾತ್ರಿಪಡಿಸುವ ಕಾನೂನನ್ನು ತಕ್ಷಣವೇ ಜಾರಿಗೊಳಿಸಬೇಕು ಹಾಗೂ ಕೃಷಿ ಕೂಲಿಕಾರರು ಮತ್ತು ರೈತರ ಸಾಲ ಮನ್ನಾ ಮಾಡಲು ಋಣ ಮುಕ್ತ ಕಾಯ್ದೆಯನ್ನು ತರಬೇಕು' ಎಂದು ಒತ್ತಾಯಿಸಿದ್ದಾರೆ.

'ಕೇಂದ್ರ ಸರಕಾರದ ಘೋಷಣೆಯಂತೆ ರಾಜ್ಯ ಸರಕಾರವೂ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ, ಎಪಿಎಂಸಿ ತಿದ್ದುಪಡಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳಬೇಕು' ಎಂದು ಪ್ರೊ. ಕೆ. ಮರುಳಸಿದ್ದಪ್ಪ, ವಿಜಯಾ, ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಪ್ರೊ.ಆರ್. ಕೆ. ಹುಡ್ಗಿ, ಡಾ. ರಾಜೇಂದ್ರ ಚೆನ್ನಿ, ಡಾ. ರಹಮತ್ ತರೀಕೆರೆ, ಪ್ರೊ.ಬಿ.ಕೆ. ಚಂದ್ರಶೇಖರ್, ಡಾ.ಚಂದ್ರ ಪೂಜಾರಿ, ಡಾ.ಹಿ.ಶಿ.ರಾಮಚಂದ್ರೇ ಗೌಡ, ಪ್ರೊ. ಕಾಳೇಗೌಡ ನಾಗವಾರ, ಡಾ.ಸಿದ್ದಲಿಂಗ ಪಟ್ಟಣಶೆಟ್ಟಿ, ಅಮರೇಶ್ ನುಗಡೋಣಿ, ವಿಮಲಾ.ಕೆ.ಎಸ್, ಕೆ.ನೀಲಾ, ಡಾ.ವಸುಂಧರಾ ಭೂಪತಿ, ಡಾ.ಪುರುಷೋತ್ತಮ ಬಿಳಿಮಲೆ, ಕೆ.ಪಿ.ಸುರೇಶ್ ಮತ್ತಿತರರು ಹೇಳಿದ್ದಾರೆ.

'ಕಾಯ್ದೆ ರದ್ದಾಗುವ ತನಕ ಹೋರಾಟ'

'ಮೂರು ಕೃಷಿ ಕಾಯ್ದೆಗಳನ್ನು ರದ್ದುಪಡಿಸಿರುವ ಬಗ್ಗೆ ಸಂಸತ್‌ನಲ್ಲಿ ನಿರ್ಧಾರ ಕೈಗೊಳ್ಳುವ ತನಕ ಹೋರಾಟ ನಿರಂತರ' ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ತಿಳಿಸಿದೆ.

'ಕಾಯ್ದೆ ರದ್ದುಪಡಿಸುವಂತೆ ದೆಹಲಿಯಲ್ಲಿ ನಡೆಯುತ್ತಿರುವ ಹೋರಾಟಕ್ಕೆ ಕರ್ನಾಟಕದಿಂದಲೂ ರೈತ, ದಲಿತ, ಕಾರ್ಮಿಕ, ಮಹಿಳಾ ಸಂಘಟನೆಗಳು ಹೋರಾಟ ನಡೆಸಿದ್ದವು. ಹೋರಾಟ ವಿಫಲಗೊಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಬಾರಿ ಪ್ರಯತ್ನ ಪಟ್ಟು ವಿಫಲವಾದವು. 5 ರಾಜ್ಯಗಳ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ಕಾಯ್ದೆಗಳನ್ನು ವಾಪಸ್ ಪಡೆಯುವುದಾಗಿ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದಾರೆ' ಎಂದು ಸಮಿತಿಯ ರಾಜ್ಯ ಸಂಚಾಲಕ ಲಕ್ಷ್ಮೀನಾರಾಯಣ ನಾಗವಾರ ಹೇಳಿದ್ದಾರೆ.

'ಬಿಜೆಪಿ ಸರ್ಕಾರದಲ್ಲಿ ಹೇಳುವುದು ಒಂದು, ಮಾಡುವುದು ಇನ್ನೊಂದು ಎಂಬುದು ಎಲ್ಲರಿಗೂ ತಿಳಿದಿದೆ. ಹೀಗಾಗಿ, ಕಾಯ್ದೆ ರದ್ದಾಗುವ ತನಕ ಹೋರಾಟ ಮುಂದುವರಿಸಲಾಗುವುದು' ಎಂದು ಸ್ಪಷ್ಟಪಡಿಸಿದ್ದಾರೆ.

ಏಳು ಮನೆಗಳಲ್ಲಿ ಕಳವು: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಏಳು ಮನೆಗಳಲ್ಲಿ ಕಳವು ಮಾಡಿದ್ದ ಆರೋಪದಡಿ ಅಣ್ಣ– ತಮ್ಮನನ್ನು ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. 'ಮಂಡ್ಯದ ಬಿಲಾಲ್, ಆತನ ತಮ್ಮ ನಹೀಂ ಬಂಧಿತರು. ಅವರಿಂದ 450 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ ಆರೋಪಿಗಳು, ಆಗಾಗ ನಗರಕ್ಕೆ ಬಂದು ಮನೆಗಳನ್ನು ಗುರುತಿಸುತ್ತಿದ್ದರು. ಯಾರೂ ಇಲ್ಲದ ವೇಳೆಯಲ್ಲಿ ಮನೆಗಳಲ್ಲಿ ಕಳ್ಳತನ ಮಾಡಿ ಪರಾರಿಯಾಗುತ್ತಿದ್ದರು. ಮೈಸೂರು ಹಾಗೂ ಇತರೆಡೆಯೂ ಆರೋಪಿಗಳು ಕೃತ್ಯ ಎಸಗಿದ್ದರು' ಎಂದರು.

ಪಿಸ್ತೂಲ್ ತೋರಿಸಿ ಸುಲಿಗೆ: ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯ ಮನೆಯೊಂದಕ್ಕೆ ನುಗ್ಗಿ ಪಿಸ್ತೂಲ್ ತೋರಿಸಿ ಚಿನ್ನಾಭರಣ ಸುಲಿಗೆ ಮಾಡಿದ್ದ ಆರೋಪಿ ಸೈಮನ್ ಸೇರಿ ಐವರನ್ನು ಪೊಲೀಸರು ಬಂಧಿಸಿದ್ದಾರೆ.

'ಟಿಆರ್‌ಬಿ ಲೇಔಟ್‌ನ 1ನೇ ಅಡ್ಡರಸ್ತೆಯಲ್ಲಿರುವ ಮನೆಗೆ ಮೇ 26ರಂದು ನುಗ್ಗಿದ್ದ ಆರೋಪಿಗಳು, ಕೃತ್ಯ ಎಸಗಿ ಪರಾರಿಯಾಗಿದ್ದರು. ಆರೋಪಿಗಳಿಂದ ₹ 25 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

ಕೆಲಸಕ್ಕಿದ್ದ ಮನೆಯಲ್ಲಿ ಕಳವು: ಸೆರೆ

ಬೆಂಗಳೂರು: ಕೆಲಸಕ್ಕಿದ್ದ ಮನೆಯಲ್ಲಿ ಕಳವು ಮಾಡಿದ್ದ ಆರೋಪದಡಿ ಸಬೀನಾ ಎಂಬಾಕೆಯನ್ನು ಯಲಹಂಕ ಪೊಲೀಸರು ಬಂಧಿಸಿದ್ದಾರೆ.

'ಆರೋಪಿಯು ಜಕ್ಕೂರ್ ಪ್ಲಾಂಟೇಷನ್ ರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್ಸ್ ಸಮುಚ್ಚಯದ ಫ್ಲ್ಯಾಟ್ ಒಂದರಲ್ಲಿ ಕೆಲಸ ಮಾಡುತ್ತಿದ್ದು, ಅಲ್ಲಿಯೇ ಚಿನ್ನಾಭರಣ ಕಳುವಾಗಿತ್ತು. ಮಾಲೀಕರು ನೀಡಿದ್ದ ದೂರು ಆಧರಿಸಿ ಸಬೀನಾಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಐದು ತಿಂಗಳ ಹಿಂದಷ್ಟೇ ಕೆಲಸಕ್ಕೆ ಸೇರಿದ್ದ ಸಬೀನಾ, ಹಂತ ಹಂತವಾಗಿ ಚಿನ್ನಾಭರಣ ಕಳವು ಮಾಡಿದ್ದಳು. ಆಕೆಯಿಂದ 307 ಗ್ರಾಂ ತೂಕದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದೂ ತಿಳಿಸಿದರು.

ಅಪರಾಧ ಸುದ್ದಿ

ಇಂದಿರಾಗಾಂಧಿಯವರ ಜನ್ಮದಿನೋತ್ಸವ ಹಾಗೂ ಕಾಂಗ್ರೆಸ್ ಸದಸ್ಯತ್ವ ನೋಂದಣಿ ಕಾರ್ಯಕ್ರಮಕ್ಕೆ ಸಂಸದ ಡಿ.ಕೆ.ಸುರೇಶ್ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಎಚ್‌ಕುಸುಮ, ಹನುಮಂತರಾಯಪ್ಪ, ರಾಂಪುರ ನಾಗೇಶ್, ಎ.ಅಮರನಾಥ್, ನವೀನ್, ಗೋಪಾಲ್, ಕೆಪಿಸಿಸಿ ಕಾರ್ಮಿಕ ವಿಭಾಗದ ಪ್ರಧಾನ ಕಾರ್ಯದರ್ಶಿ ಸೈಪುಲ್ಲಾ ಹಾಗೂ ಇತರರು ಇದ್ದರು –ಪ್ರಜಾವಾಣಿ ಚಿತ್ರ

'ಭವಿಷ್ಯದ ಸೋಲು ಅರಿತು ಕೃಷಿ ಕಾಯ್ದೆಗಳು ವಾಪಸ್'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ಪಂಚರಾಜ್ಯ ಚುನಾವಣೆಯಲ್ಲಿ ಮುಖಭಂಗವಾಗುವುದನ್ನು ಅರಿತು ಬಿಜೆಪಿ ಸರ್ಕಾರ ರೈತ ವಿರೋಧಿ ಕೃಷಿ ಕಾಯ್ದೆಯನ್ನು ಹಿಂಪಡೆದಿದೆ' ಎಂದು ಸಂಸದ ಡಿ.ಕೆ. ಸುರೇಶ್ ತಿಳಿಸಿದರು.

ರಾಜರಾಜೇಶ್ವರಿ ನಗರದಲ್ಲಿ ಕಾಂಗ್ರೆಸ್ ಸಮಿತಿಯು ಹಮ್ಮಿಕೊಂಡಿದ್ದ ಇಂದಿರಾ ಗಾಂಧಿಯವರ ಜನ್ಮದಿನೋತ್ಸವ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದರು.

'ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ಖಂಡಿಸಿ ನೂರಾರು ರೈತರು ಹುತಾತ್ಮರಾದ ನಂತರ ಪ್ರಧಾನಿ ಮೋದಿ ಅವರಿಗೆ ತಮ್ಮ ತಪ್ಪಿನ ಅರಿವಾಗಿದೆ. ಕೋವಿಡ್ ಸಂಕಷ್ಟದ ಸಮಯದಲ್ಲಿ ಏರಿಕೆ ಮಾಡಿರುವ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಅಗತ್ಯ ವಸ್ತುಗಳ ಬೆಲೆಗಳನ್ನು ಇಳಿಸಬೇಕು. ಇಲ್ಲವಾದಲ್ಲಿ ಜನರ ಶಾಪ ನಿಮ್ಮನ್ನು ಬಿಡುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ಮುಖಂಡರಾದ ಎಚ್. ಕುಸುಮ, 'ಕಾಂಗ್ರೆಸ್ ಪಕ್ಷ ಈ ದೇಶದ ಆಸ್ತಿ. ಬಡವರು, ರೈತರು, ಮಹಿಳೆಯರ ಪರವಾಗಿ ದುಡಿದ ಇಂದಿರಾಗಾಂಧಿ ಅವರ ಆದರ್ಶ ಎಂದಿಗೂ ಶಾಶ್ವತ' ಎಂದರು.

5.5 ಕೆ.ಜಿ ಚಿನ್ನ ಸುಲಿಗೆ: ದೂರಿನಲ್ಲೇ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: '5.5 ಕೆ.ಜಿ ತೂಕದ ಚಿನ್ನದ ಗಟ್ಟಿಗಳನ್ನು ಇಬ್ಬರು ದುಷ್ಕರ್ಮಿಗಳು ಸುಲಿಗೆ ಮಾಡಿದ್ದಾರೆ' ಎಂದು ಆರೋಪಿಸಿ ಚಿನ್ನಾಭರಣ ವ್ಯಾಪಾರಿ ಸಿದ್ದೇಶ್ವರ್ ಹರಿಬಾ ಸಿಂಧೆ ಎಂಬುವರು ಹಲಸೂರು ಗೇಟ್ ಠಾಣೆಗೆ ದೂರು ನೀಡಿದ್ದು, ಕೃತ್ಯದ ಬಗ್ಗೆ ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ.

'ಶುಕ್ರವಾರ ರಾತ್ರಿ ಸುಲಿಗೆ ನಡೆದಿರುವುದಾಗಿ ಸಿದ್ದೇಶ್ವರ್ ದೂರಿನಲ್ಲಿ ತಿಳಿಸಿದ್ದಾರೆ. ಆದರೆ, ಸ್ಥಳ ಪರಿಶೀಲಿಸಿದಾಗ ಘಟನೆ ಸಂಬಂಧ ಯಾವುದೇ ಪುರಾವೆ ಸಿಕ್ಕಿಲ್ಲ. ದೂರಿನಲ್ಲಿ ಅನುಮಾನಗಳಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ನಗರ್ತಪೇಟೆಯಲ್ಲಿ ಮಳಿಗೆ ಇಟ್ಟುಕೊಂಡಿರುವ ಸಿದ್ದೇಶ್ವರ್, ಕ್ವೀನ್ಸ್ ರಸ್ತೆಯಲ್ಲಿರುವ ಅಟ್ಟಿಕಾ ಗೋಲ್ಡ್ ಮಳಿಗೆಯಲ್ಲಿ ಚಿನ್ನದ ಗಟ್ಟಿಗಳನ್ನು ಶುಕ್ರವಾರ ಖರೀದಿಸಿದ್ದಾಗಿ ಹೇಳುತ್ತಿದ್ದಾರೆ. ಆದರೆ, ಚಿನ್ನದ ಗಟ್ಟಿಗಳನ್ನು ಖರೀದಿಸಿದ್ದಕ್ಕೆ ರಶೀದಿಯೂ ಇಲ್ಲ. ಹೆಚ್ಚಿನ ಮಾಹಿತಿ ಕೇಳಿದರೆ, ದೂರುದಾರ ಸೂಕ್ತ ಉತ್ತರವನ್ನೂ ನೀಡುತ್ತಿಲ್ಲ. ಇದೇ ರೀತಿಯಲ್ಲೇ ನಗರದ ಮೂರು ಠಾಣೆಗಳಲ್ಲಿ ಈ ಹಿಂದೆಯೂ ಸಿದ್ದೇಶ್ವರ್ ದೂರು ನೀಡಿದ್ದ ಮಾಹಿತಿ ಇದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಚಿನ್ನಾಭರಣದ ಬ್ಯಾಗ್ ಕದ್ದ ಆರೋಪಿ ಬಂಧನ

ಬೆಂಗಳೂರು: ಕಾರಿನಲ್ಲಿಟ್ಟಿದ್ದ ಚಿನ್ನಾಭರಣಗಳಿದ್ದ ಬ್ಯಾಗ್ ಕಳವು ಮಾಡಿದ್ದ ಆರೋಪದಡಿ ಗಂಗೊಂಡಹಳ್ಳಿ ನಿವಾಸಿ, ಗುಜರಿ ವ್ಯಾಪಾರಿ ನಯಾಜ್ ಪಾಷಾ ಎಂಬಾತನನ್ನು ಚಂದ್ರಾ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಆತನಿಂದ ₹ 4.65 ಲಕ್ಷ ಮೌಲ್ಯದ 103 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ದೂರುದಾರ, ನ.18ರಂದು ಬನಶಂಕರಿ ದೇವಸ್ಥಾನಕ್ಕೆ ಹೋಗಿದ್ದರು. ಪೂಜೆ ಮುಗಿಸಿದ ನಂತರ, ಬನಶಂಕರಿಯ ಆಭರಣ ಮಳಿಗೆಯೊಂದರಲ್ಲಿ ಚಿನ್ನಾಭರಣ ಖರೀದಿಸಿದ್ದರು. ಬ್ಯಾಗನ್ನು ಕಾರಿನಲ್ಲೇ ಮರೆತು ಮನೆಯೊಳಗೆ ಹೋಗಿದ್ದರು. ಕಾರಿನ ಬಾಗಿಲು ಲಾಕ್ ಮಾಡಿರಲಿಲ್ಲ. ಕೆಲ ಸಮಯದ ಹೊರಗೆ ಬಂದು ನೋಡಿದ್ದು, ಬ್ಯಾಗ್ ಇರಲಿಲ್ಲ. ಈ ಬಗ್ಗೆ ಠಾಣೆಗೆ ದೂರು ನೀಡಿದ್ದರು' ಎಂದೂ ತಿಳಿಸಿದರು.

ಬ್ಯಾಗ್ ಮೇಲಿನ ಹೆಸರು ನೋಡಿ ಕಳವು: 'ದೂರುದಾರರ ಮನೆಯ ರಸ್ತೆಯಲ್ಲಿ ಹೊರಟಿದ್ದ ಆರೋಪಿ ನಯಾಜ್ ಪಾಷಾ, ಕಾರಿನಲ್ಲಿದ್ದ ಬ್ಯಾಗ್ ಗಮನಿಸಿದ್ದ. ಅದರ ಮೇಲೆ ಚಿನ್ನಾಭರಣ ಮಳಿಗೆ ಹೆಸರಿತ್ತು. ಆಭರಣ ಇರುವುದಾಗಿ ಗೊತ್ತಾಗಿ ಬ್ಯಾಗ್ ಕದ್ದುಕೊಂಡು ಪರಾರಿಯಾಗಿದ್ದ' ಎಂದೂ ಪೊಲೀಸರು ಹೇಳಿದರು.

'ಕದ್ದ ಆಭರಣಗಳನ್ನು ಮಾರಾಟ ಮಾಡಲು ಆರೋಪಿ ಪ್ರಯತ್ನಿಸುತ್ತಿದ್ದ. ಘಟನಾ ಸ್ಥಳ ಪರಿಶೀಲನೆಯಿಂದ ಸಿಕ್ಕ ಸುಳಿವು ಆಧರಿಸಿ ತನಿಖೆ ಕೈಗೊಂಡಾಗ ಆರೋಪಿ ಸಿಕ್ಕಿಬಿದ್ದ. ಈತ ಇದೇ ಮೊದಲು ಇಂಥ ಕೃತ್ಯ ಎಸಗಿರುವುದು ಗೊತ್ತಾಗಿದೆ' ಎಂದೂ ತಿಳಿಸಿದರು.

₹ 3.50 ಲಕ್ಷ ಮೌಲ್ಯದ ಮೊಬೈಲ್ ಫೋನ್ ಜಪ್ತಿ

ಬೆಂಗಳೂರು: ನಗರದ ಹಲವೆಡೆ ಮೊಬೈಲ್ ಫೋನ್‌ಗಳನ್ನು ಕಳ್ಳತನ ಮಾಡಿದ್ದ ಮೂವರು ಆರೋಪಿಗಳನ್ನು ಬಂಧಿಸಲಾಗಿದ್ದು,ಅವರಿಂದ ₹3.50 ಲಕ್ಷ ಮೌಲ್ಯದ 21 ಮೊಬೈಲ್ ಫೋನ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ರಾಜರಾಜೇಶ್ವರಿನಗರ ಠಾಣೆ ಪೊಲೀಸರು ತಿಳಿಸಿದರು.

'ಕಿರಣ್, ಚೇತನ್ ಹಾಗೂ ದರ್ಶನ್ ಬಂಧಿತರು. ಇವರು ರಾಜರಾಜೇಶ್ವರಿನಗರದ ನಿರ್ಮಾಣ ಹಂತದ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದರು. ಕಟ್ಟಡದ ಮಾಲೀಕರು, ತಮ್ಮ ₹11,000 ಮೌಲ್ಯದ ಮೊಬೈಲ್ ಫೋನ್ ಅನ್ನು ಗೋಡೆ ಮೇಲಿಟ್ಟು ಕೆಲಸ ಪರಿಶೀಲಿಸುತ್ತಿದ್ದರು. ಕೆಲ ಹೊತ್ತಿನ ಬಳಿಕ ಮೊಬೈಲ್ ಕಾಣಿಸಿರಲಿಲ್ಲ. ಮೊಬೈಲ್ ಕಳುವಾಗಿದೆ ಎಂದು ಠಾಣೆಗೆ ದೂರು ನೀಡಿದ್ದರು' ಎಂದರು.

'ಸ್ಥಳ ಪರಿಶೀಲನೆ ವೇಳೆ ಆರೋಪಿಗಳ ಸುಳಿವು ಸಿಕ್ಕಿತ್ತು. ಮೂವರನ್ನೂ ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡರು. ನಗರದ ವಿವಿಧ ಠಾಣೆಗಳ ವ್ಯಾಪ್ತಿಯಲ್ಲೂ ಮೊಬೈಲ್ ಕದ್ದಿದ್ದ ಸಂಗತಿಯನ್ನು ಬಾಯ್ಬಿಟ್ಟರು. ಕದ್ದ ಮೊಬೈಲ್‌ಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದ ಆರೋಪಿಗಳು, ಬಂದ ಹಣವನ್ನು ಹಂಚಿಕೊಳ್ಳುತ್ತಿದ್ದರು. ದುಶ್ಚಟಗಳಿಗೆ ಖರ್ಚು ಮಾಡುತ್ತಿದ್ದರು' ಎಂದೂ ಪೊಲೀಸರು ತಿಳಿಸಿದರು.

ಬಿಡಿಎ ಕಚೇರಿ ಮೇಲೆ ದಾಳಿಮಾಡಿದ್ದ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳು ಶನಿವಾರ ಕಡತಗಳ ಪರಿಶೀಲನೆಯಲ್ಲಿ ತೊಡಗಿರುವುದು –ಪ್ರಜಾವಾಣಿ ಚಿತ್ರ

'ಭ್ರಷ್ಟರ ವಿರುದ್ಧ ಕ್ರಮ ಖಚಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ನಡೆಸುತ್ತಿರುವ ತನಿಖೆಯಲ್ಲಿ ತಪ್ಪಿತಸ್ಥರೆಂದು ಗುರುತಿಸುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಅಧಿಕಾರಿಗಳ ವಿರುದ್ಧ ಕ್ರಮ ಖಚಿತ ಎಂದು ಪ್ರಾಧಿಕಾರದ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ತಿಳಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಬಿಡಿಎ ಅಧಿಕಾರಿಗಳು ಭ್ರಷ್ಟಾಚಾರ ನಡೆಸುತ್ತಿರುವ ಕುರಿತು ಸಾರ್ವಜನಿಕರು ಎಸಿಬಿಗೆ ದೂರು ನೀಡಿದ್ದರು. ಅದನ್ನು ಆಧರಿಸಿ ತನಿಖೆ ನಡೆಯುತ್ತಿದೆ. ಪ್ರಾಧಿಕಾರವನ್ನು ಭ್ರಷ್ಟಾಚಾರದಿಂದ ಮುಕ್ತಗೊಳಿಸುವುದು ನನ್ನ ಗುರಿ ಕೂಡ. ಆದ್ದರಿಂದ ಎಸಿಬಿ ದಾಳಿಯನ್ನು ಸ್ವಾಗತಿಸುತ್ತೇನೆ' ಎಂದರು.

'ನಾನು ಅಧ್ಯಕ್ಷನಾಗಿ ಬಂದ ಬಳಿಕ ಪ್ರಾಧಿಕಾರದಲ್ಲಿ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕುವ ಪ್ರಯತ್ನ ಮಾಡಿದ್ದೆ. ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದವರ ವಿರುದ್ಧ ಕ್ರಮ ಜರುಗಿಸಲಾಗಿತ್ತು. ನಾನು ಕೂಡ ಕೆಲವು ಅಧಿಕಾರಿಗಳ ವಿರುದ್ಧ ಎಸಿಬಿಗೆ ದೂರು ನೀಡಿದ್ದೆ. ಅದಕ್ಕೆ ಪೂರಕವಾಗಿ ದಾಖಲೆಗಳನ್ನು ಒದಗಿಸುವುದಾಗಿ ತನಿಖಾ ತಂಡಕ್ಕೆ ತಿಳಿಸಿದ್ದೇನೆ' ಎಂದು ಹೇಳಿದರು.

'ನನ್ನ ಅವಧಿಯಲ್ಲಿ ಯಾವುದೇ ಭ್ರಷ್ಟಾಚಾರ ನಡೆದಿಲ್ಲ. ಹಿಂದೆ ಭ್ರಷ್ಟಾಚಾರ ನಡೆದಿತ್ತು. ಅಕ್ರಮಗಳನ್ನು ನಿಯಂತ್ರಿಸಲು ಪ್ರಾಮಾಣಿಕ ಪ್ರಯತ್ನ ನಡೆಸಲಾಗಿದೆ. ಎಸಿಬಿ ದಾಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ವರದಿ ನೀಡಲಾಗುವುದು' ಎಂದು ಹೇಳಿದರು.

ದಾಸರಹಳ್ಳಿ ಕ್ಷೇತ್ರದ ವಾರ್ಡ್‌ಗಳಲ್ಲಿ ಎಲ್‌ಇಡಿ ಬೀದಿದೀಪ ಅಳವಡಿಸುವ ಕಾರ್ಯಕ್ಕೆ ಶಾಸಕ ಆರ್‌.ಮಂಜುನಾಥ್ ಶನಿವಾರ ಚಾಲನೆ ನೀಡಿದರು. ಜೆಡಿಎಸ್ ಮುಖಂಡರಾದ ತಮ್ಮಣ್ಣ, ಜಗದೀಶ್, ಗೋವಿಂದಪ್ಪ, ಮಲ್ಲೇಶ್ ಗೌಡ, ರಂಗನಾಥ್ ನಾಯಕ, ಗಂಗಣ್ಣ, ಲಕ್ಕಪ್ಪ, ಹುಸೇನ್, ಬಲರಾಮ್, ರಾಜು, ಪಾಪಣ್ಣ, ಕೃಷ್ಣಮೂರ್ತಿ ಹಾಗೂ ಬೆಸ್ಕಾಂ ಸಿಬ್ಬಂದಿ ಇದ್ದಾರೆ

ನೆರೆ ದೇಶದ ಧ್ವಜ ಸುಟ್ಟ ಪ್ರಕರಣ ಸಂಸ್ಥೆ ವಿರುದ್ಧ ಕ್ರಮಕ್ಕೆ ಸೂಚನೆ

ಮಂಗಳೂರು: ಪುತ್ತೂರಿನ ಶಿಕ್ಷಣ ಸಂಸ್ಥೆಯೊಂದರಲ್ಲಿ ನೆರೆಯ ದೇಶದ ಧ್ವಜವನ್ನು ಮಕ್ಕಳ ಕೈಯಿಂದ ಸುಟ್ಟು ಹಾಕಿಸುವ ಮೂಲಕ ದ್ವೇಷ ಹುಟ್ಟು ಹಾಕುವ ಪ್ರಕರಣ ವರದಿಯಾಗಿದ್ದು, ಸಂಸ್ಥೆಯ ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ನಿರ್ದೇಶನ ನೀಡಿದೆ.

ಶನಿವಾರ ನಗರದಲ್ಲಿ ನಡೆದ ಸಭೆಯಲ್ಲಿ, 'ಶಾಲೆ ಆವರಣದಲ್ಲಿ ಇಂಥ ಕೃತ್ಯ ನಡೆಸಿದವರ ಮೇಲೆ ಪ್ರಕರಣ ದಾಖಲಿಸಬೇಕು. ಪೊಲೀಸರು ಸಂಬಂಧಪಟ್ಟ ಶಾಲೆಗೆ ಭೇಟಿ ನೀಡಿ, ಮಕ್ಕಳನ್ನು ಈ ಕೆಲಸಕ್ಕೆ ಬಳಕೆ ಮಾಡಿದವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು' ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಡಿ.ಶಂಕರಪ್ಪ ಸೂಚಿಸಿದರು.

ತಂತ್ರಜ್ಞಾನ ಅಳವಡಿಕೆಯಲ್ಲಿ ಹಿಂದೆ ಬಿದ್ದ ಪರಿಷತ್ತು • ಸಂಪನ್ಮೂಲಕ್ಕೆ ಸರ್ಕಾರದ ಕಡೆಗೆ ಆಸೆಗಣ್ಣು

ಕಾಯಕಲ್ಪದ ನಿರೀಕ್ಷೆಯಲ್ಲಿ ಕಸಾಪ

• ವರುಣ ಹೆಗಡೆ

ಬೆಂಗಳೂರು: ವರ್ಷಕ್ಕೊಮ್ಮೆ ಅಖಿಲ ಭಾರತೀಯ ಸಾಹಿತ್ಯ ಸಮ್ಮೇಳನ. ಒಂದಿಷ್ಟು ಪುಸ್ತಕಗಳ ಪ್ರಕಟಣೆ, ದತ್ತಿ ಪ್ರಶಸ್ತಿಗಳ ವಿತರಣೆ... ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಪ್ರಮುಖ ಕಾರ್ಯಚಟುವಟಿಕೆಗಳು ಇವಾಗಿವೆ. ಕನ್ನಡ ಭಾಷೆ, ಸಾಹಿತ್ಯ, ಕಲೆ, ಜಾನಪದ, ಸಂಸ್ಕೃತಿಯ ಸಂವರ್ಧನೆ ಹಾಗೂ ಸಂರಕ್ಷಣೆಯ ಮಹದಾಶಯದೊಂದಿಗೆ ಕಸಾಪ ಸ್ಥಾಪನೆಯಾಯಿತು. ಆದರೆ, ಕೆಲ ವರ್ಷಗಳಿಂದ ಪರಿಷತ್ತಿನ ಮೂಲ ಆಶಯಗಳು ಮರೆಯಾಗುತ್ತಿವೆಯೇ ಎಂಬ ಚರ್ಚೆಯೂ ಇದೆ. ಇನ್ನೊಂದೆಡೆ ಪುಸ್ತಕಗಳ ಮುದ್ರಣ, ಪುಸ್ತಕದ ಡಿಜಿಟಲೀಕರಣ ಸೇರಿದಂತೆ ವಿವಿಧೆಡೆ ಆಧುನಿಕ ತಂತ್ರಜ್ಞಾನಗಳಿಗೆ ತೆರೆದುಕೊಂಡಿಲ್ಲ. ಪ್ರಕಟಿತ ಪುಸ್ತಕಗಳ ಮಾರಾಟಕ್ಕೆ ಸೂಕ್ತ ವ್ಯವಸ್ಥೆ ರೂಪಿಸದಿರುವುದರಿಂದ ಉಗ್ರಾಣದಲ್ಲಿಯೇ ಪುಸ್ತಕಗಳು ದೂಳು ತಿನ್ನುತ್ತಿವೆ.

ಪರಿಷತ್ತು ಸ್ವಾಯತ್ತ ಸಂಸ್ಥೆಯಾಗಿದ್ದರೂ ನಿಶ್ಚಿತ ಆದಾಯದ ಮೂಲವಿಲ್ಲ. ಹೀಗಾಗಿ, ಸಾಹಿತ್ಯ ಸಮ್ಮೇಳನಗಳಿಗೆ ಸರ್ಕಾರ ನೀಡುವ ಅನುದಾನವನ್ನೇ ಅವಲಂಬಿಸಬೇಕಿದೆ. ಅದೇ ರೀತಿ, ಕಟ್ಟಡಗಳ ನವೀಕರಣ, ಭವನ ಮತ್ತು ಸಭಾಂಗಣಗಳ ನಿರ್ಮಾಣದಂತಹ ಯೋಜನೆಗಳಿಗೆ ಅನ್ಯ ಮೂಲಗಳಿಂದಲೇ ಹಣ ಹೊಂದಿಸಬೇಕಾದ ಪರಿಸ್ಥಿತಿಯಿದೆ. ಹೀಗಾಗಿ, ಪರಿಷತ್ತಿಗೆ ಕಾಯಕಲ್ಪ ನೀಡುವ ಕೆಲಸವಾಗಬೇಕೆಂಬ ಕೂಗು ಸಾಂಸ್ಕೃತಿಕ ವಲಯದಲ್ಲಿದೆ.

ತಂತ್ರಜ್ಞಾನದ ಅಳವಡಿಕೆ ಅಗತ್ಯ: 'ಕೇವಲ ಸದಸ್ಯರ ಸಂಖ್ಯೆ ಹೆಚ್ಚಳ ಮಾಡುವುದರಿಂದ ಪರಿಷತ್ತಿನ ಮೂಲ ಆಶಯ ಸಾಕಾರವಾಗದು. ಅದು ನಿರಂತರವಾಗಿ ಒಂದು ಕಡೆಯಿಂದ ನಡೆಯುತ್ತಿರುತ್ತದೆ. ಅನುದಾನಕ್ಕೆ ಸರ್ಕಾರವನ್ನು ಅವಲಂಬಿಸಬಾರದು ಎಂಬ ಭಾವನೆ ತಪ್ಪು. ಕನ್ನಡಿಗರ ಸರ್ಕಾರವು ಕನ್ನಡದ ಕಾರ್ಯಗಳಿಗೆ ಅನುದಾನ ಒದಗಿಸಬೇಕಾಗುತ್ತದೆ. ಪರಿಷತ್ತಿಗೆ ಹಣಕಾಸಿನ ಕೊರತೆಯಿಲ್ಲ. ಆಧುನಿಕ ತಂತ್ರಜ್ಞಾನಗಳನ್ನೂ ಅಳವಡಿಸಿಕೊಳ್ಳಬೇಕು' ಎಂದು ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ತಿಳಿಸಿದರು.

ಗ್ರಾಮೀಣ ಪ್ರದೇಶ ತಲುಪಲಿ: 'ಪರಿಷತ್ತು ಕೇವಲ ಬೆಂಗಳೂರಿಗೆ ಸೀಮಿತವಾಗದೇ ಗ್ರಾಮೀಣ ಪ್ರದೇಶಗಳನ್ನೂ ತಲುಪಬೇಕು. ಸಾಹಿತ್ಯ ಹಾಗೂ ಸಾಂಸ್ಕೃತಿಕ ವಲಯದಲ್ಲಿ ಪರಿಷತ್ತು ಕ್ರಿಯಾಶೀಲವಾಗಿ ಕೆಲಸ ಮಾಡಲು ಗ್ರಾಮೀಣ ಜನರನ್ನು ತನ್ನ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು. ಸರ್ಕಾರದ ಅನುದಾನ ಪಡೆದು ಕಾರ್ಯನಿರ್ವಹಿಸುವುದರಲ್ಲಿ ತಪ್ಪಿಲ್ಲ. ಅಧ್ಯಕ್ಷರಾದವರು ಈ ವ್ಯವಸ್ಥೆಯಲ್ಲಿ ನುಗ್ಗಿ, ನಾಡು–ನುಡಿಯ ಶ್ರೇಯೋಭಿವೃದ್ಧಿಗೆ ಶ್ರಮಿಸಬೇಕು. ಸದಾ ಕನ್ನಡಿಗರ ದೊಡ್ಡ ಧ್ವನಿಯಾಗಿ ಸಾಗಬೇಕು' ಎಂದು ಮಾಜಿ ಅಧ್ಯಕ್ಷ ಆರ್‌.ಕೆ. ನಲ್ಲೂರು ಪ್ರಸಾದ್ ಅಭಿಮತ ವ್ಯಕ್ತಪಡಿಸಿದರು.

ಕನ್ನಡದ ಕೆಲಸವಾಗಬೇಕು: 'ಕೇವಲ ಕಟ್ಟಡಗಳ ನಿರ್ಮಾಣ ಪರಿಷತ್ತಿನ ಆದ್ಯತೆ ಆಗಬಾರದು. ಸಾಹಿತ್ಯದ ಕಡೆಗೆ ಜನರನ್ನು ಸೆಳೆಯುವ ಕೆಲಸವಾಗಬೇಕು. ಎಲ್ಲ ಶಾಲೆ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಕನ್ನಡ ಅಭ್ಯಸಿಸುವಂತೆ ನೋಡಿಕೊಳ್ಳಬೇಕು. ಕನ್ನಡದ ಫಲಕಗಳು ಎಲ್ಲೆಡೆ ಅಳವಡಿಕೆಯಾಗುವಂತೆ ನೋಡಿಕೊಳ್ಳಬೇಕು. ಯುವಜನರನ್ನು ಸೆಳೆಯಲು ಯೋಜನೆಗಳನ್ನು ರೂಪಿಸಬೇಕು. ಸದಸ್ಯತ್ವ ಹೆಚ್ಚಿದಲ್ಲಿ ಕನ್ನಡ ಕಾರ್ಯಗಳಿಗೂ ಬಲ ಬರಲಿದೆ' ಎಂದು ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು ತಿಳಿಸಿದರು.

'ಕನ್ನಡ ಜಾಗತಿಕ ವೇದಿಕೆ ಏರಬೇಕು'



ಹಂ.ಪ. ನಾಗರಾಜಯ್ಯ

ಕನ್ನಡಿಗರ ಸಾಮೂಹಿಕ ಪ್ರಯತ್ನದಿಂದ ಕನ್ನಡ ಸಾಹಿತ್ಯ ಪರಿಷತ್ತಿಗೆ ಕಾಯಕಲ್ಪ ನೀಡಲು ಸಾಧ್ಯ. ಸದ್ಯದ ಪರಿಸ್ಥಿತಿಯಲ್ಲಿ ಯಾವೆಲ್ಲ ಕಾರ್ಯಗಳನ್ನು ಕೈಗೊಳ್ಳಬೇಕು ಎನ್ನುವುದರ ಬಗ್ಗೆ ಚರ್ಚಿಸಿ, ಆದ್ಯತೆಯ ಮೇರೆಗೆ ಯೋಜನೆಗಳನ್ನು ಹಮ್ಮಿಕೊಳ್ಳಬೇಕು. ಜಗತ್ತು ಬದಲಾವಣೆಯಾಗಿದ್ದು, ತಂತ್ರಜ್ಞಾನ ಕ್ಷೇತ್ರ ಸಾಕಷ್ಟು ಪ್ರಗತಿ ಹೊಂದಿದೆ. ಹೀಗಾಗಿ, ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು' ಎಂದು ಮಾಜಿ ಅಧ್ಯಕ್ಷ ಹಾಗೂ ಸಾಹಿತಿ ಹಂ.ಪ. ನಾಗರಾಜಯ್ಯ ತಿಳಿಸಿದರು.

'ಹಿಂದೆ ಸಾವಿರಗಳಲ್ಲಿದ್ದ ಸದಸ್ಯರ ಸಂಖ್ಯೆ ಈಗ ಬಲೂನಿನ ತರ ಉಬ್ಬಿದೆ. ಈ ಸಂಖ್ಯೆ ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಬೇಕಿದೆ. ಜಾಗತಿಕ ವೇದಿಕೆಗಳಿಗೆ ಕನ್ನಡ ಭಾಷೆಯನ್ನು ಹತ್ತಿಸುವ ಕೆಲಸವಾಗಬೇಕು. ಸರ್ಕಾರ ಅನುದಾನ ನೀಡಿದರೂ ನಾಡು–ನುಡಿಗೆ ಕಂಟಕವಾಗುವ ನಿರ್ಣಯಗಳನ್ನು ಕೈಗೊಂಡರೆ ಪ್ರತಿಭಟಿಸಬೇಕಾಗುತ್ತದೆ. ಅನುದಾನದ ದಾಸ್ಯಕ್ಕೆ ಬೀಳಬಾರದು. ಪರಿಷತ್ತು ಮೂಲ ಆಶಯಕ್ಕೆ ಅನುಗುಣವಾಗಿ ಸಾಗುತ್ತಿಲ್ಲ ಎಂದು ಅನಿಸಿದಾಗ ಕಾರ್ಯಕಾರಿ ಸಮಿತಿ ಸದಸ್ಯರು ಎಚ್ಚರಿಸಬೇಕು' ಎಂದರು.

ಜನ ಸ್ವರಾಜ್ ಸಮಾವೇಶದಲ್ಲಿ ಬಿ.ಎಸ್‌.ಯಡಿಯೂರಪ್ಪ ಹೇಳಿಕೆ

'ರಾಜೀನಾಮೆ ಕೊಟ್ಟಿದ್ದು ಮನೆಯಲ್ಲಿರಲಿಕ್ಕಲ್ಲ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಲು ಹಿಂದೆ, ಮುಂದೆ ನೋಡುವ ಈ ಕಾಲದಲ್ಲಿ ನಾನು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವುದು ಮನೆಯಲ್ಲಿ ಸುಮ್ಮನೇ ಕೂರುವುದಕ್ಕಲ್ಲ, ರಾಜ್ಯದಾದ್ಯಂತ ಪ್ರವಾಸ ಮಾಡಿ ಮುಂದಿನ ಚುನಾವಣೆಯಲ್ಲಿ 140 ಸ್ಥಾನ ಗೆಲ್ಲಿಸಿ, ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಶ್ರಮಿಸುತ್ತೇನೆ' ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ವಿಧಾನ ಪರಿಷತ್ ಚುನಾವಣೆ ಅಂಗವಾಗಿ ನಗರದ ದರ್ಬಾರ್ ಹೈಸ್ಕೂಲ್ ಮೈದಾನದಲ್ಲಿ ಶನಿವಾರ ಆಯೋಜಿಸಲಾಗಿದ್ದ ಜನ ಸ್ವರಾಜ್ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ವಿಧಾನ ಪರಿಷತ್ತಿನ 25 ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಯಲ್ಲಿ 15 ಸ್ಥಾನಗಳಲ್ಲಿ ಬಿಜೆಪಿ ಜಯ ಸಾಧಿಸಲಿದೆ. ಈ ಮೂಲಕ ಮೇಲ್ಮನೆಯಲ್ಲಿ ಪಕ್ಷ ಬಹುಮತ ಸಾಧಿಸಲಿದ್ದು, ಬಿಲ್ ಪಾಸ್ ಮಾಡಿಕೊಳ್ಳಲು ಸರ್ಕಾರಕ್ಕೆ ಸಹಾಯವಾಗಲಿದೆ' ಎಂದರು.

'ಭಾರೀ ಮಳೆಯ ಪರಿಣಾಮ ನಾಡಿನ ರೈತರ ಶೇ 70–80ರಷ್ಟು ಬೆಳೆ ಹಾನಿಯಾಗಿದೆ. ಕೇಂದ್ರ ತಂಡ ಅಧ್ಯಯನಕ್ಕೆ ಬರಬೇಕಿದೆ. ಪರಿಶೀಲನೆ ನಡೆಸಿ ಪರಿಹಾರ ನೀಡಬೇಕಾಗಿದೆ. ಈ ಸಂಬಂಧ ಮುಖ್ಯಮಂತ್ರಿ ಅವರಿಗೆ ಮಾಹಿತಿ ನೀಡುತ್ತೇನೆ' ಎಂದರು.

ವಿಜಯಪುರದಲ್ಲಿ ಶನಿವಾರ ಆಯೋಜಿಸಿದ್ದ ಬಿಜೆಪಿ ಜನ ಸ್ವರಾಜ್ ಸಮಾವೇಶದ ವೇಳೆ ಜಿಟಿಜಿಟಿ ಮಳೆಯಿಂದ ರಕ್ಷಣೆ ಪಡೆಯಲು ಜನರು ಕುರ್ಚಿಗಳ ಮೊರೆ ಹೋದರು —ಪ್ರಜಾವಾಣಿ ಚಿತ್ರ

'ಸಿದ್ದರಾಮಯ್ಯ ಪರ್ಸೆಂಟೇಜ್ ಕಿಂಗ್'

ಪ್ರಜಾವಾಣಿ ವಾರ್ತೆ

ಮೈಸೂರು: 'ಕಾಂಗ್ರೆಸ್‌ನದ್ದೇ ಪರ್ಸೆಂಟೇಜ್ ಸರ್ಕಾರ. ಸಿದ್ದರಾಮಯ್ಯ ಪರ್ಸೆಂಟೇಜ್ ಕಿಂಗ್. ನಮ್ಮ ಸರ್ಕಾರದ ಬಗ್ಗೆ ಅವರೇನು ಟೀಕೆ ಮಾಡುವುದು?' ಎಂದು ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ವಾಗ್ದಾಳಿ ನಡೆಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಎಷ್ಟು ಪರ್ಸೆಂಟ್ ಕಮಿಷನ್ ತೆಗೆದುಕೊಂಡಿದ್ದರು ಎಂಬುದಕ್ಕೆ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಅವರಿಗೆ ಎದುರಾದ ಸೋಲೇ ಅಳತೆ ಗೋಲು' ಎಂದರು.

'ಗುತ್ತಿಗೆದಾರರ ಸಂಘದವರು ಏಕೆ ಹಾಗೂ ಯಾರಿಗೆ ಪತ್ರ ಬರೆದಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ನಮ್ಮ ಸರ್ಕಾರ ಶುದ್ಧವಾಗಿದೆ. ಪರ್ಸೆಂಟೇಜ್ ಆರೋಪ ಸಂಬಂಧ ದಾಖಲೆ ನೀಡಿದರೆ, ನಮಗೆ ನೇರವಾಗಿ ಪತ್ರ ಬರೆದು ಇಂಥ ಇಲಾಖೆಯಲ್ಲಿ ಇಂಥ ಅಧಿಕಾರಿ ಅಥವಾ ಚುನಾಯಿತ ಪ್ರತಿನಿಧಿ ಇಷ್ಟು ಕಮಿಷನ್ ಪಡೆದಿದ್ದಾರೆ ಎಂಬುದರ ಬಗ್ಗೆ ಮಾಹಿತಿ ನೀಡಿದರೆ ತನಿಖೆ ನಡೆಸಲಾಗುವುದು' ಎಂದರು.

'ಚಾಮುಂಡೇಶ್ವರಿಯಲ್ಲಿ ತಮ್ಮ ಸೋಲಿಗೆ ಕಾರಣರಾದ ಕಾರ್ಯಕರ್ತರ ವಿರುದ್ಧ ಸಿದ್ದರಾಮಯ್ಯ ಗರಂ ಆಗಿದ್ದಾರೆ. ಸೋಲಿಸಿ ಟಿಕೆಟ್ ಕೇಳಲು ಬಂದಿದ್ದೀರಾ, ನಾಚಿಕೆ ಆಗುವುದಿಲ್ಲವೇ? ಎಂದು ಗದರಿಸಿದ್ದಾರೆ. ಆದರೆ, ದಲಿತ ನಾಯಕ ಡಾ.ಜಿ.ಪರಮೇಶ್ವರ ಅವರನ್ನು ಸೋಲಿಸಿದಾಗ ಅವರಿಗೆ ನಾಚಿಕೆ ಆಗಲಿಲ್ಲವೇ' ಎಂದು ಪ್ರಶ್ನಿಸಿದರು.

'ಸಿದ್ದರಾಮಯ್ಯನವರು ಲಿಂಗಾಯತರನ್ನು ಒಡೆದರು. ಈಗ ಮುಸ್ಲಿಮರ ಒಡೆಯುತ್ತಿದ್ದಾರೆ. ದಲಿತರನ್ನು ರಾಜಕೀಯ ದಾಳವಾಗಿಸಿಕೊಂಡಿದ್ದಾರೆ. ಹಿಂದುಳಿದ ವರ್ಗಗಳ ಆಯೋಗದ ವರದಿ ಬಿಡುಗಡೆ ಮಾಡದಿದ್ದರೆ ಹೋರಾಟ ಮಾಡುವುದಾಗಿ ಹೇಳುತ್ತಿದ್ದಾರೆ' ಎಂದು ಹರಿಹಾಯ್ದರು.

'ನಾವು ಅಭಿವೃದ್ಧಿಯ ಶಂಖ ಊದುತ್ತಿದ್ದೇವೆ. ಜೆಡಿಎಸ್‌ನಲ್ಲಿ ಶಂಖ ಊದುವುದಕ್ಕೂ ಜನರಿಲ್ಲದಂತಾಗಿದೆ. ವಿಧಾನ ಪರಿಷತ್ ಚುನಾವಣೆಯಲ್ಲಿ ಅವರು ಎಷ್ಟು ಮಂದಿ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತಾರೋ ನೋಡೋಣ' ಎಂದರು.

'ಕ್ಷೇತ್ರ ಪುನರ್ ವಿಂಗಡಣೆ ಬಳಿಕ ಅಂದರೆ ಫೆಬ್ರುವರಿ–ಮಾರ್ಚ್‌ನಲ್ಲಿ ತಾಲ್ಲೂಕು, ಜಿಲ್ಲಾ ಪಂಚಾಯಿತಿ ಚುನಾವಣೆ ನಡೆಸಲಾಗುವುದು' ಎಂದರು.

'ಟಿಪ್ಪು ಜಯಂತಿಯೊಂದೇ ಸಾಧನೆ'

ಮೈಸೂರು: 'ಮೈಸೂರು ಮಹಾರಾಜರಿಗೆ ಮೋಸ ಮಾಡಿದ್ದ ಟಿಪ್ಪು ಜಯಂತಿಯನ್ನು ಸಾರ್ವಜನಿಕರ ಹಣದಲ್ಲಿ ಆಚರಿಸಿದ್ದೇ ಸಿದ್ದರಾಮಯ್ಯ ಅವರ ಸಾಧನೆ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಟೀಕಿಸಿದರು.

ಬಿಜೆಪಿ ಏರ್ಪಡಿಸಿದ್ದ ಜನಸ್ವರಾಜ್ ಸಮಾವೇಶದಲ್ಲಿ ಮಾತನಾಡಿದ ಅವರು, 'ಸಿದ್ದರಾಮಯ್ಯ ಅವರು ಧರ್ಮದ ಆಧಾರದಲ್ಲಿ ಶಾದಿಭಾಗ್ಯ ಯೋಜನೆಯನ್ನು ನೀಡಿದರು. ಮೈಸೂರಿಗೆ ಅವರ ಕೊಡುಗೆ ಏನು' ಎಂದು ಪ್ರಶ್ನಿಸಿದರು.

ಕಸಾಪ ಚುನಾವಣೆ: ಇಂದು ಮತದಾನ

ಒಂದನೇ ಪುಟದಿಂದ

ತಾಲ್ಲೂಕುಗಳು, ಕೆಲವು ಹೋಬಳಿಗಳು ಹಾಗೂ ಬೆಂಗಳೂರು ನಗರ ಜಿಲ್ಲೆಯ 28 ವಿಧಾನಸಭೆ ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ. ಜಿಲ್ಲಾ ಘಟಕದ ಅಧ್ಯಕ್ಷರ ಚುನಾವಣೆ ಫಲಿತಾಂಶ ಮತದಾನದ ದಿನವೇ ಘೋಷಣೆಯಾಗಲಿದೆ. ಇದೇ 24 ರಂದು ಗಡಿನಾಡ ಘಟಕಗಳ ಅಧ್ಯಕ್ಷರ ಚುನಾವಣೆಗೆ ಸಂಬಂಧಪಟ್ಟ ಅಂಚೆ ಮತಪತ್ರಗಳನ್ನು ಎಣಿಕೆ ಮಾಡಿ, ಫಲಿತಾಂಶ ಘೋಷಿಸಲಾಗುತ್ತದೆ. ಅದೇ ದಿನ ಜಿಲ್ಲೆಗಳಿಂದ ಬಂದ ಮತಗಳು ಹಾಗೂ ಅಂಚೆಗಳಿಂದ

ಬಂದ ಮತಗಳನ್ನು ಕ್ರೋಢೀಕರಿಸಿ ರಾಜ್ಯಾಧ್ಯಕ್ಷ ಸ್ಥಾನದ ಫಲಿತಾಂಶ ಪ್ರಕಟಿಸಲಾಗುತ್ತದೆ.

ಪಂಚಾಯಿತಿ ಗಡಿ ವಿಂಗಡಣೆ: ಡಿಸಿಗಳಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸತಾಗಿ ರಚಿಸಲಾಗಿರುವ 'ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ'ದ ಅಧಿಕಾರ ಮತ್ತು ಕಾರ್ಯ ಚಟುವಟಿಕೆ ಕುರಿತಂತೆ ಎಲ್ಲ ಜಿಲ್ಲಾಧಿಕಾರಿಗಳಿಗೆ ರಾಜ್ಯ ಸರ್ಕಾರ ಪತ್ರ ಬರೆದಿದೆ.

ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಂ.ಲಕ್ಷ್ಮಿನಾರಾಯಣ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಈ ಆಯೋಗ, ಸಿವಿಲ್ ನ್ಯಾಯಾಲಯದ ಅಧಿಕಾರ ಹೊಂದಿದ್ದು ಸ್ವಂತ ಕಾರ್ಯವಿಧಾನಗಳನ್ನು ನಿರ್ಧರಿಸಿ ಕಾರ್ಯನಿರ್ವಹಿಸಲಿದೆ.

ಆಯೋಗವು ಈ ಹಿಂದಿನ ಜನಗಣತಿ ಆಧರಿಸಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಕ್ಷೇತ್ರಗಳ ಗಡಿಯನ್ನು ನಿರ್ಧರಿಸುವ ಜೊತೆಗೆ, ಚುನಾಯಿಸಬೇಕಾದ ಒಟ್ಟು ಸದಸ್ಯರ ಸಂಖ್ಯೆಯನ್ನು ನಿಗದಿಪಡಿಸಲು ಸರ್ಕಾರಕ್ಕೆ ಶಿಫಾರಸು ಮಾಡಬೇಕು. ಕ್ಷೇತ್ರಗಳ ಜನಸಂಖ್ಯೆ ನಿರ್ಧರಿಸುವ ಸಂದರ್ಭದಲ್ಲಿ ಸಾಧ್ಯವಾದಷ್ಟು ಸಮಾನ ಆಗಿರುವಂತೆ ಖಚಿತಪಡಿಸಿಕೊಳ್ಳಬೇಕು. ಅಲ್ಲದೆ, ಚುನಾವಣಾ ಕ್ಷೇತ್ರಗಳು ಭೌಗೋಳಿಕವಾಗಿ ಸಮೀಪ ಪ್ರದೇಶಗಳನ್ನು ಒಳಗೊಂಡಿರುವುದನ್ನು ಖಚಿತಪಡಿಸಿಕೊಂಡು ಶಿಫಾರಸು ಮಾಡಬೇಕು. ಜೊತೆಗೆ, ಸರ್ಕಾರ ವಹಿಸುವ ಇತರ ಜವಾಬ್ದಾರಿಗಳನ್ನೂ ನಿರ್ವಹಿಸಬೇಕು ಎಂದು ಪತ್ರದಲ್ಲಿ ವಿವರಿಸಲಾಗಿದೆ.

ಎಲ್ಲ ವಿಧಾನಸಭೆ ಕ್ಷೇತ್ರಕ್ಕೂ ಸಾಲ: ಸೋಮಶೇಖರ್



ಸೋಮಶೇಖರ್

ಮೈಸೂರು: 'ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಮಾತ್ರವೇ ಹೆಚ್ಚಾಗಿ ಸಾಲ ವಿತರಿಸಿ ಉಳಿದ ಕ್ಷೇತ್ರಗಳನ್ನು ನಿರ್ಲಕ್ಷಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಸಹಕಾರ ಖಾತೆ ಸಚಿವ ಎಸ್.ಟಿ.ಸೋಮಶೇಖರ್ ಶನಿವಾರ ಎಚ್ಚರಿಕೆ ನೀಡಿದರು.

ನಗರದಲ್ಲಿ ನಡೆದ ಜನಸ್ವರಾಜ್ ಸಮಾವೇಶದಲ್ಲಿ ಅವರು, 'ಮೈಸೂರು, ಚಾಮರಾಜನಗರ ಜಿಲ್ಲೆಯ ಎಲ್ಲ ವಿಧಾನಸಭೆ ಕ್ಷೇತ್ರಗಳಿಗೂ ಸಮಾನವಾಗಿ ಸಾಲಹಂಚಿಕೆ ಮಾಡಬೇಕು. ಅಸಮಾನವಾಗಿ ಹಂಚಿಕೆ ಮಾಡಿದ್ದ ಕೋಲಾರ ಸಹಕಾರ ಬ್ಯಾಂಕಿಗೆ ಈಗಾಗಲೇ ನೋಟಿಸ್ ನೀಡಲಾಗಿದೆ. ಸಹಕಾರ ಬ್ಯಾಂಕುಗಳ ಅಧ್ಯಕ್ಷರು ಕೇವಲ ಬೆಂಬಲಿಗರಷ್ಟೇ ಸಾಲ ನೀಡುವುದು ಸರಿಯಲ್ಲ' ಎಂದು ತಿಳಿಸಿದರು.

'ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೆ 59,503 ರೈತರಿಗೆ ₹ 603 ಕೋಟಿ ಸಾಲ ವಿತರಿಸಲಾಗಿದೆ. ಕಳೆದ ಸಾಲಿನಲ್ಲಿ ಗುರಿ ಮೀರಿ ವಿತರಿಸಲಾಗಿತ್ತು' ಎಂದು ಹೇಳಿದರು. ಶಾಸಕ ಜಿ.ಟಿ.ದೇವೇಗೌಡ ಅವರ ಪುತ್ರ ಜಿ.ಡಿ.ಹರೀಶ್‌ಗೌಡ ಮೈಸೂರು, ಚಾಮರಾಜನಗರ ಜಿಲ್ಲಾ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿದ್ದಾರೆ.

ಜಾಗತಿಕ ಲಿಂಗಾಯತ ಮಹಾಸಭಾ ಕಚೇರಿ ಪ್ರಾರಂಭೋತ್ಸವದಲ್ಲಿ ತೋಂಟದ ಶ್ರೀ

'ಧರ್ಮದ ಮಾನ್ಯತೆ ಸಿಕ್ಕೇ ಸಿಗುತ್ತದೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಲಿಂಗಾಯತ ಸ್ವತಂತ್ರ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆಯನ್ನು ಕೇಂದ್ರ ಸರ್ಕಾರ ಕೊಡಲೇಬೇಕಾಗುತ್ತದೆ' ಎಂದು ಗದಗ ತೋಂಟದಾರ್ಯ ಸಂಸ್ಥಾನ ಮಠದ ತೋಂಟದ ಸಿದ್ಧರಾಮ ಸ್ವಾಮೀಜಿ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಕೃಷ್ಣದೇವರಾಯ ವೃತ್ತದ ಸಮೀಪದಲ್ಲಿರುವ 'ವಿಶ್ವಗುರು' ಕಾಂಪ್ಲೆಕ್ಸ್‌ಗೆ ಬೆಂಗಳೂರಿನಿಂದ ಸ್ಥಳಾಂತರಗೊಂಡಿರುವ ಜಾಗತಿಕ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಕೇಂದ್ರದ ನೂತನ ಕಚೇರಿಯ ಪ್ರಾರಂಭೋತ್ಸವ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

'ನಮ್ಮ ಬೇಡಿಕೆ ಈಡೇರುವ ನಿಟ್ಟಿನಲ್ಲಿ ರೈತರ ಹೋರಾಟ ಮಾದರಿಯಾಗಬೇಕು' ಎಂದು ತಿಳಿಸಿದರು.

'ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರ ಹಿಂದುತ್ವದ ಕಾರ್ಯಸೂಚಿಗೆ ಧಕ್ಕೆ ಆಗುತ್ತದೆಂದು ಲಿಂಗಾಯತ ಧರ್ಮಕ್ಕೆ ಮಾನ್ಯತೆ ಕೊಡಲು ಮುಂದಾಗುತ್ತಿಲ್ಲ. ವಿವೇಚನಾಶೀಲವಾದ ಸರ್ಕಾರವಾಗಿದ್ದರೆ ಬೇಗ ಮಾನ್ಯತೆ ಕೊಡಬೇಕಿತ್ತು' ಎಂದು ಹೇಳಿದರು.

ಅಧಿವೇಶನ ನಡೆಯಲಿ: ಸಾನ್ನಿಧ್ಯ ವಹಿಸಿದ್ದ ಬಸವಪರ ಲಿಂಗಾಯತ ಮಠಾಧಿಪತಿಗಳ ಒಕ್ಕೂಟದ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು, 'ಪ್ರತಿ ವರ್ಷ ಮಹಾಸಭಾದ ಮಹಾಅಧಿವೇಶನ ನಡೆಯಬೇಕು. ಮೊದಲಿಗೆ ಬಸವಕಲ್ಯಾಣದಲ್ಲಿ ಆಯೋಜಿಸಬೇಕು' ಎಂದು ಹೇಳಿದರು.

ಬೈಲೂರು ನಿಷ್ಕಲ ಮಂಟಪದ ನಿಜಗುಣಪ್ರಭು ಸ್ವಾಮೀಜಿ, 'ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದ ಆಚಾರ- ವಿಚಾರ ಪ್ರಧಾನವಾದ ಗ್ರಂಥ ಬರಬೇಕು. ಆಚರಣೆ ಮಾಡದಿದ್ದರೆ ಧರ್ಮ ಉಳಿಯುವುದಿಲ್ಲ. ಮಹಾಸಭಾದಲ್ಲಿ ಧರ್ಮಪ್ರಸಾರಕರ ಘಟಕ ರಚಿಬೇಕು' ಎಂದು ಸಲಹೆ ನೀಡಿದರು.

ವಿವಿಧ ಮಠಗಳ ಸ್ವಾಮೀಜಿಗಳು ಹಾಗೂ ಸಮಾಜದ ಮುಖಂಡರು ಪಾಲ್ಗೊಂಡಿದ್ದರು.

ಬೆಳಗಾವಿಗೆ ಸ್ಥಳಾಂತರಗೊಂಡಿರುವ ಜಾಗತಿಕ ಲಿಂಗಾಯತ ಮಹಾಸಭಾದ ಕೇಂದ್ರ ಕಚೇರಿಯ ಪ್ರಾರಂಭೋತ್ಸವವನ್ನು ತೋಂಟದ ಸಿದ್ಧರಾಮ ಸ್ವಾಮೀಜಿ ಹಾಗೂ ಭಾಲ್ಕಿ ಹಿರೇಮಠ ಸಂಸ್ಥಾನದ ಬಸಲಿಂಗ ಪಟ್ಟದ್ದೇವರು ಉದ್ಘಾಟಿಸಿದರು. ಡಾ.ಅಲ್ಲಮಪ್ರಭು ಸ್ವಾಮೀಜಿ, ನಿಜಗುಣ ಪ್ರಭು ಸ್ವಾಮೀಜಿ, ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ಅರವಿಂದ ಜತ್ತಿ, ಅರಳಿ ನಾಗರಾಜ, ಬಸವರಾಜ ರೊಟ್ಟಿ ಇದ್ದಾರೆ ಪ್ರಜಾವಾಣಿ ಚಿತ್ರ

ಜಾಗತಿಕ ಲಿಂಗಾಯತ ಮಹಾಸಭಾದ ಸಸಿಯನ್ನು ಬೆಂಗಳೂರಿನಲ್ಲಿ ತಯಾರು ಮಾಡಿ ಬೆಳಗಾವಿಯಲ್ಲಿ ನೆಟ್ಟಿದ್ದೇವೆ. ಹೆಚ್ಚು ಫಲ ಕೊಡಬೇಕು ಎನ್ನುವುದು ನಮ್ಮ ಉದ್ದೇಶ

ತೋಂಟದ ಸಿದ್ಧರಾಮ ಸ್ವಾಮೀಜಿ, ತೋಂಟದಾರ್ಯ ಮಠ, ಗದಗ

ಸ್ವತಂತ್ರ ಧರ್ಮದ ಫಲ ಪಡೆಯಲು ಎಲ್ಲರ ಮನೆಗಳೂ ಹಾಗೂ ಮಠಗಳು ಜಾಗತಿಕ ಲಿಂಗಾಯತ ಮಹಾಸಭಾದ ಕೇಂದ್ರಗಳಾಗಿ ತಳಕ್ಕೆ ನೀರೆರೆಯಬೇಕು

ಅರವಿಂದ ಜತ್ತಿ ಉಪಾಧ್ಯಕ್ಷ, ಜಾಗತಿಕ ಲಿಂಗಾಯತ ಮಹಾಸಭಾ

ಲಿಂಗಾಯತದ ಏಕೀಕರಣ, ಆಧುನೀಕರಣ, ನವೀಕರಣ ಮತ್ತು ಜಾಗತೀಕರಣ ಆಗಬೇಕು. ನಾವು ಒಗ್ಗಟ್ಟಾದರೆ ರಾಜಕೀಯ ಪಕ್ಷದವರು ನಮ್ಮ ಬಳಿಗೆ ಬರುತ್ತಾರೆ

ಎಸ್‌.ಎಂ. ಜಾಮದಾರ, ಪ್ರಧಾನ ಕಾರ್ಯದರ್ಶಿ, ಜಾಗತಿಕ ಲಿಂಗಾಯತ ಮಹಾಸಭಾ

ಮೇಕೆದಾಟು: ಕನಕಪುರದಿಂದ ಪಾದಯಾತ್ರೆ ನಾಳೆ

ಪ್ರಜಾವಾಣಿ ವಾರ್ತೆ

ಮೈಸೂರು: 'ಮೇಕೆದಾಟು ಯೋಜನೆಗೆ ತಮಿಳುನಾಡು ಅಡ್ಡಿ ಪಡಿಸುತ್ತಿರುವುದನ್ನು ಖಂಡಿಸಿ ರೈತ ಸಂಘದ ಹಾಗೂ ಹಸಿರು ಸೇನೆ ನ. 22ರಂದು ಕನಕಪುರದಿಂದ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಂಡಿದೆ' ಎಂದು ಸಂಘ ಜಿಲ್ಲಾ ಘಟಕದ ಅಧ್ಯಕ್ಷ ನಾಗೇಗೌಡ ಹೇಳಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಹಿಂದೆ ಪಾದಯಾತ್ರೆ ಹಮ್ಮಿಕೊಂಡಿದ್ದಾಗ ಕೊರೊನಾ ನೆಪದಲ್ಲಿ ಕನಕಪುರದಲ್ಲಿ ಪೊಲೀಸರು ಬಂಧಿಸಿದ್ದರು. ಈಗ ಜಿಲ್ಲಾಧಿಕಾರಿ ಅನುಮತಿ ದೊರೆತಿದ್ದು, ವಿಧಾನಸೌಧದವರೆಗೆ ಪಾದಯಾತ್ರೆ ನಡೆಯಲಿದೆ' ಎಂದರು.

'ದೆಹಲಿಯಲ್ಲಿ ಮುಷ್ಕರದ ಸಂದರ್ಭದಲ್ಲಿ ಜೀವ ಕಳೆದುಕೊಂಡ 600ಕ್ಕೂ ಹೆಚ್ಚು ರೈತರಿಗೆ ಕೇಂದ್ರ ಸರ್ಕಾರ ಪರಿಹಾರ ನೀಡಬೇಕು' ಎಂದು ಒತ್ತಾಯಿಸಿದರು.

ಮುಖಂಡರಾದ ರೇಣುಕಾಮೂರ್ತಿ ಹುಲ್ಲಹಳ್ಳಿ, ಸಾತಿಗ್ರಾಮ ಫಯಾಜ್, ರಾಮಣ್ಣ ಕಿರಂಗೂರು, ಮೀನಾಕ್ಷಿ, ರೈತ ಮುಖಂಡ ಗುರು ಇದ್ದರು.



ಕೋವಿಡ್: 7 ಕೋಟಿ ಡೋಸ್ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಲಸಿಕೆಯ 2.94 ಲಕ್ಷ ಡೋಸ್‌ಗಳನ್ನು ಶನಿವಾರ ವಿತರಿಸಲಾಗಿದೆ. ಇದರೊಂದಿಗೆ ಈವರೆಗೆ ರಾಜ್ಯದಲ್ಲಿ ನೀಡಲಾದ ಒಟ್ಟು ಡೋಸ್‌ಗಳ ಸಂಖ್ಯೆ 7 ಕೋಟಿಯ ಗಡಿ ದಾಟಿದೆ.

4.36 ಕೋಟಿ ಮಂದಿ ಲಸಿಕೆಯ ಮೊದಲ ಡೋಸ್ ಹಾಗೂ 2.65 ಕೋಟಿ ಮಂದಿ ಎರಡೂ ಡೋಸ್‌ಗಳನ್ನು ಪಡೆದುಕೊಂಡಿದ್ದಾರೆ. ಈ ವರ್ಷದ ಅಂತ್ಯದೊಳಗೆ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಎರಡು ಡೋಸ್ ಲಸಿಕೆ ವಿತರಿಸುವ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ.

2021ರ ಜ.16ರಂದು ರಾಜ್ಯದಲ್ಲಿ ಲಸಿಕಾ ಅಭಿಯಾನ ಪ್ರಾರಂಭವಾಗಿದೆ. ಒಂದು ತಿಂಗಳಿಂದ ದಿನವೊಂದಕ್ಕೆ ಸರಾಸರಿ 4 ಲಕ್ಷ ಡೋಸ್‌ಗಳನ್ನು ನೀಡಲಾಗುತ್ತಿದೆ.

18 ರಿಂದ 44 ವರ್ಷದೊಳಗಿನವರಲ್ಲಿ 2.46 ಕೋಟಿ ಮಂದಿ ಮೊದಲ ಡೋಸ್ ಹಾಗೂ 1.25 ಕೋಟಿ ಮಂದಿ ಎರಡನೇ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. 45 ವರ್ಷ ಮೇಲ್ಪಟ್ಟವರಲ್ಲಿ 1.73 ಕೋಟಿ ಮಂದಿ ಮೊದಲ ಡೋಸ್ ಹಾಕಿಸಿಕೊಂಡಿದ್ದಾರೆ. ಅವರಲ್ಲಿ 1.24 ಕೋಟಿ ಮಂದಿ ಎರಡೂ ಡೋಸ್‌ಗಳನ್ನು ಪಡೆದಿದ್ದಾರೆ.

ಆರೋಗ್ಯ ಕಾರ್ಯಕರ್ತರಲ್ಲಿ 7.64 ಲಕ್ಷ ಹಾಗೂ ಕೋವಿಡ್ ಮುಂಚೂಣಿ ಯೋಧರಲ್ಲಿ 9.42 ಲಕ್ಷ ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಇವರಲ್ಲಿ ಕ್ರಮವಾಗಿ 6.93 ಲಕ್ಷ ಮಂದಿ ಹಾಗೂ 8.40 ಲಕ್ಷ ಮಂದಿ ಎರಡೂ ಡೋಸ್ ಲಸಿಕೆ ಹಾಕಿಸಿಕೊಂಡಿದ್ದಾರೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,54,920 ಒಟ್ಟು ಪ್ರಕರಣಗಳು (12,54,786 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,845	12,32,752	16,322

ದಿನದ ಏರಿಕೆ

ಹೊಸ ಪ್ರಕರಣ	134
ಗುಣಮುಖ	245
ಸಾವು	02

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

'ಮಗು ದತ್ತು ಪಡೆದರೆ 6 ತಿಂಗಳು ರಜೆ'

ಬೆಂಗಳೂರು: ಮಗುವನ್ನು ದತ್ತು ಪಡೆಯುವ ಮಹಿಳಾ ಉದ್ಯೋಗಿಗಳಿಗೆ 6 ತಿಂಗಳು ರಜೆ ನೀಡಲು ಕೆಎಸ್‌ಆರ್‌ಟಿಸಿ ಸುತ್ತೋಲೆ ಹೊರಡಿಸಿದೆ.

ಮಗುವನ್ನು ದತ್ತು ಪಡೆದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಅಥವಾ ಆ ಮಗುವಿಗೆ ಒಂದು ವರ್ಷ ಪೂರ್ಣಗೊಳ್ಳುವ ತನಕ ಇವುಗಳಲ್ಲಿ ಯಾವುದು ಮೊದಲು ಅಲ್ಲಿ ತನಕ 180 ದಿನಗಳ ಈ ರಜೆ ಪಡೆಯಲು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿ ಪ್ರಕಾರ ಅವಕಾಶ ಕಲ್ಪಿಸಲಾಗಿದೆ ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಅವರು ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

'ಬಿಟ್‌ಕಾಯಿನ್; ಹಾಲಿ– ಮಾಜಿ ಮುಖ್ಯಮಂತ್ರಿ ಮಕ್ಕಳಿಗೆ ಲಾಭ'

ಬೆಂಗಳೂರು: 'ಬಿಟ್‌ಕಾಯಿನ್ ಹಗರಣದಲ್ಲಿ ಸರ್ಕಾರದ ನಡೆ ಹಲವು ಅನುಮಾನಗಳನ್ನು ಹುಟ್ಟುಹಾಕಿದ್ದು, ಈ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಸಾರ್ವಜನಿಕರಿಗೆ ಬಹಿರಂಗಪಡಿಸಬೇಕು' ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ (ಕೆಆರ್‌ಎಸ್) ಅಧ್ಯಕ್ಷ ರವಿಕೃಷ್ಣಾರೆಡ್ಡಿ ಆಗ್ರಹಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,'ಸರ್ಕಾರ ಬಿಟ್‌ಕಾಯಿನ್ ಪ್ರಕರಣ ಮುಚ್ಚಿ ಹಾಕಲು ಎಲ್ಲ ರೀತಿಯ ಪ್ರಯತ್ನ ಮಾಡುತ್ತಿದೆ. ಹಗರಣದ ಸೂತ್ರಧಾರ ಆರೋಪಿ ಶ್ರೀಕಿ ಸತ್ಯ ಬಾಯ್ಬಿಟ್ಟರೆ ಪ್ರಭಾವಿ ರಾಜಕಾರಣಿಗಳು ಹಾಗೂ ಅಧಿಕಾರಿಗಳಿಗೆ ಅಪಾಯ. ಶ್ರೀಕಿ ರಕ್ಷಣೆಯ ಸಂಪೂರ್ಣ ಹೊಣೆ ಸರ್ಕಾರದ್ದು' ಎಂದು ಹೇಳಿದರು.

ಪ್ರಧಾನ ಕಾರ್ಯದರ್ಶಿ ಸಿ.ಎನ್. ದೀಪಕ್, 'ಹಗರಣದಲ್ಲಿ ಹಾಲಿ ಹಾಗೂ ಮಾಜಿ ಮುಖ್ಯಮಂತ್ರಿಗಳ ಮಕ್ಕಳು ಲಾಭ ಮಾಡಿಕೊಂಡಿದ್ದಾರೆ ಎಂಬ ಮಾಹಿತಿ ಹರಿದಾಡುತ್ತಿದೆ. ಈ ಬಗ್ಗೆ ತನಿಖೆ ಆಗಬೇಕು. ಈ ಪ್ರಕರಣದ ತನಿಖೆ ನಡೆಸುತ್ತಿರುವ ಸಿಸಿಬಿಯ ಮುಖ್ಯಸ್ಥ ಸಂದೀಪ್ ಪಾಟೀಲ ಅವರ ಮೇಲೆ ಸಾಕ್ಷ್ಯ ನಾಶದ ಆರೋಪಗಳು ಕೇಳಿಬರುತ್ತಿದ್ದು, ಅವರನ್ನು ಕೂಡಲೇ ತನಿಖೆ ನಡೆಸಿ ವರ್ಗಾವಣೆ ಮಾಡಬೇಕು' ಎಂದು ಆಗ್ರಹಿಸಿದರು.

'ಶ್ರೀಕಿ ಜೊತೆಗೆ ಕಾಂಗ್ರೆಸ್ ಮುಖಂಡರ ನಂಟಿರುವ ಬಗ್ಗೆಯೂ ಮಾಹಿತಿ ಹೊರಬಿದ್ದಿದೆ. ಇದರ ಬಗ್ಗೆಯೂ ಸಮಗ್ರ ತನಿಖೆ ಆಗಬೇಕು. ಸರ್ಕಾರ ಮತ್ತು ಪೊಲೀಸ್ ವಲಯದಲ್ಲಿ ಗೋಪ್ಯವಾಗಿ ಅನೇಕ ವಿಚಾರಗಳು ನಡೆಯುತ್ತಿದ್ದು, ರಾಜ್ಯದ ಜನರಿಗೆ ಸ್ಪಷ್ಟವಾದ ಮಾಹಿತಿ ನೀಡಬೇಕು' ಎಂದರು.

310 ಮಂದಿಗೆ ಉಚಿತ ಕನ್ನಡಕ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ವ್ಯಾಪ್ತಿಯ ಈಶ್ವರಿ ಬಡಾವಣೆಯಲ್ಲಿ ನಾರಾಯಣ ನೇತ್ರಾಲಯದ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಕಣ್ಣಿನ ತಪಾಸಣೆ ಶಿಬಿರದಲ್ಲಿ 310 ಮಂದಿಗೆ ಕನ್ನಡಕಗಳನ್ನು ಉಚಿತವಾಗಿ ವಿತರಿಸಲಾಯಿತು.

ಶಿಬಿರದಲ್ಲಿ 850 ಜನರು ತಪಾಸಣೆಗೆ ಒಳಪಟ್ಟರು. ಈ ಪೈಕಿ ನಾಲ್ಕು ಜನರ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಲಾಗಿದ್ದು, ಅದರ ವೆಚ್ಚವನ್ನು ಆರ್.ಕೆ.ರಮೇಶ್ ಭರಿಸಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಸಿ.ಚಂದ್ರು, 'ಕಣ್ಣಿನ ದೋಷವಿದ್ದರೂ ಪರೀಕ್ಷೆ ಮಾಡಿಸಿಕೊಳ್ಳಲು ಸಾಧ್ಯವಾಗದ ಬಡವರಿಗೆ ಉಚಿತವಾಗಿ ನೇತ್ರ ತಪಾಸಣೆ, ಕನ್ನಡಕ ವಿತರಣೆ, ಶಸ್ತ್ರಚಿಕಿತ್ಸೆಗೆ ನೆರವಾಗುವ ಮೂಲಕ ಆರ್.ಕೆ.ರಮೇಶ್ ಇತರರಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ' ಎಂದರು.

ಬೆಂಗಳೂರು ದಕ್ಷಿಣ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಸಿ.ಚಂದ್ರು ಅವರು ಶಿಬಿರದಲ್ಲಿ ಕನ್ನಡಕ ವಿತರಿಸಿದರು. ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್ ರೆಡ್ಡಿ, ಕೋಣನಕುಂಟೆ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ಚಂದ್ರು, ಮಹಿಳಾ ಘಟಕದ ಅಧ್ಯಕ್ಷೆ ವಿನುತಾ, ಬ್ಲಾಕ್ ಕಾಂಗ್ರೆಸ್ ಹಿಂದುಳಿದ ವಿಭಾಗದ ಉಪಾಧ್ಯಕ್ಷ ಶ್ರೀರಾಮ್ ಇದ್ದಾರೆ

ಹಿರಿಯೂರು: ವಾಣಿವಿಲಾಸ ಜಲಾಶಯಕ್ಕೆ ಇಪ್ಪತ್ತು ವರ್ಷಗಳ ನಂತರ ದಾಖಲೆ ಪ್ರಮಾಣದ ನೀರು

ದಾವಣಗೆರೆ: ಮಳೆಗೆ ಮೂವರ ಸಾವು

ಪ್ರಜಾವಾಣಿ ವಾರ್ತೆ

ಚನ್ನಗಿರಿ ತಾಲ್ಲೂಕಿನ ಬುಳುಸಾಗರ ಗ್ರಾಮದಲ್ಲಿ ಶನಿವಾರ ಹರಿದ್ರಾವತಿ ಹಳ್ಳದ ನೀರು ನುಗ್ಗಿರುವುದು –ಪ್ರಜಾವಾಣಿ ಚಿತ್ರ

ದಾವಣಗೆರೆ: ಜಿಲ್ಲೆಯಲ್ಲಿ ಸುರಿದ ಮಳೆಯಿಂದಾಗಿ ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ನೀರು ಪಾಲಾಗಿದ್ದಾರೆ. ಮನೆಯ ಗೋಡೆ ಕುಸಿದು ಮತ್ತೊಬ್ಬರು ಮೃತಪಟ್ಟಿದ್ದಾರೆ.

ದಾವಣಗೆರೆ ತಾಲ್ಲೂಕಿನ ಹುಚ್ಚವ್ವನಹಳ್ಳಿಯಲ್ಲಿ ತಿಪ್ಪೇಸ್ವಾಮಿ (48) ಅವರು ಜಾನುವಾರು ತೊಳೆಯಲು ಹೋಗಿದ್ದಾಗ ಕಾಲು ಜಾರಿ ಕೆರೆಗೆ ಬಿದ್ದಿದ್ದಾರೆ. ಶೋಧಕಾರ್ಯ ನಡೆಸಿದರೂ ಅವರ ದೇಹ ಪತ್ತೆಯಾಗಿಲ್ಲ. ಚನ್ನಗಿರಿ ತಾಲ್ಲೂಕಿನ ನಲ್ಲೂರು ಸೇತುವೆ ಬಳಿ ಹಳ್ಳ ದಾಟಲು ಹೋದ ಕೆಂಚಪ್ಪ (70) ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ.

ಹರಿಹರ ತಾಲ್ಲೂಕಿನ ಮಲೇಬೆನ್ನೂರು ಹೋಬಳಿಯ ಗೋವಿನಹಾಳು ಗ್ರಾಮದಲ್ಲಿ ಮನೆ ಗೋಡೆ ಕುಸಿದು ಬಸವರಾಜಪ್ಪ (62) ಮೃತಪಟ್ಟಿದ್ದಾರೆ.

ಜಿಲ್ಲೆಯಲ್ಲಿ ಮಳೆಯಿಂದಾಗಿ 3,508 ಎಕರೆ ಬೆಳೆ ಹಾನಿಯಾಗಿದ್ದು, ನಾಲ್ಕು ಜಾನುವಾರು ಮೃತಪಟ್ಟಿವೆ. ಚನ್ನಗಿರಿ ತಾಲ್ಲೂಕಿನ ಜೋಳದಹಾಳ್ ಭಾಗದಲ್ಲಿ 12.6 ಸೆಂ.ಮೀ ಮಳೆಯಾಗಿದೆ. ಇಲ್ಲಿನ ಕುಕ್ಕುವಾಡೇಶ್ವರಿದೇವಸ್ಥಾನಕ್ಕೆಹೋಗುವ ರಸ್ತೆ ಸಂಪರ್ಕ ಸ್ಥಗಿತಗೊಂಡಿದೆ. ಮಳೆಯಿಂದಾಗಿ ಜಿಲ್ಲೆಯಲ್ಲಿ ಒಟ್ಟು ₹ 3.29 ಕೋಟಿ ನಷ್ಟ ಸಂಭವಿಸಿದೆ.

ಇಪ್ಪತ್ತು ವರ್ಷದ ನಂತರ ದಾಖಲೆಯ ನೀರಿನ ಹರಿವು: ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿ ನಿರಂತರವಾಗಿ ಸುರಿಯುತ್ತಿರುವ ಮಳೆಗೆ ವಾಣಿವಿಲಾಸ ಜಲಾಶಯದ ನೀರಿನ ಮಟ್ಟ ಶನಿವಾರ 120 ಅಡಿ ದಾಟಿದ್ದು, ಇಪ್ಪತ್ತು ವರ್ಷಗಳ ನಂತರ ದಾಖಲೆ ಪ್ರಮಾಣದ ನೀರು ಸಂಗ್ರಹವಾಗಿದೆ.

2000ರಲ್ಲಿ ಜಲಾಶಯಕ್ಕೆ 122.50 ಅಡಿ ನೀರು ಸಂಗ್ರಹವಾಗಿದ್ದು, ಹೊರತುಪಡಿಸಿದರೆ ಜಲಾಶಯ ಖಾಲಿಯಾಗಿದ್ದೇ ಹೆಚ್ಚು. 30 ಟಿಎಂಸಿ ಅಡಿ ಸಾಮರ್ಥ್ಯದ ಜಲಾಶಯದಲ್ಲಿ ಶನಿವಾರ 22.21 ಟಿಎಂಸಿ ಅಡಿ ನೀರು ಸಂಗ್ರಹವಾಗಿದ್ದು, 7,860 ಕ್ಯುಸೆಕ್ ನೀರು ಹರಿದು ಬರುತ್ತಿದೆ.

ತಾಲ್ಲೂಕಿನ ಗಾಯತ್ರಿ ಜಲಾಶಯ, ವೇದಾವತಿ, ಸುವರ್ಣಮುಖಿ ನದಿಗಳು ತುಂಬಿ ಹರಿಯುತ್ತಿವೆ.

ಮನೆಗಳಿಗೆ ಹಾನಿ: ಹಿರಿಯೂರು ತಾಲ್ಲೂಕಿನಲ್ಲಿ ಶುಕ್ರವಾರ ಸುರಿದ ಮಳೆಗೆ 123 ಮನೆಗಳಿಗೆ ಹಾನಿಯಾಗಿದೆ. ಚಿಕ್ಕಜಾಜೂರು ಸಮೀಪದ ಮುತ್ತುಗದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ 11 ಮನೆಗಳ ಗೋಡೆಗಳು ಕುಸಿದಿವೆ. ಹೊಸದುರ್ಗ ತಾಲ್ಲೂಕಿನ ಬಾಗೂರು ಕೆರೆ ತುಂಬಿದ್ದು, ಕೋಡಿಕಲ್ಲೇಶ್ವರ ದೇವಾಲಯ ಮುಳುಗಡೆಯಾಗಿದೆ.

ಭತ್ತ ಜಲಾವೃತ: ಶಿವಮೊಗ್ಗ ಜಿಲ್ಲೆಯಲ್ಲಿ ಶುಕ್ರವಾರ ಸುರಿದ ಜೋರು ಮಳೆಗೆ ಹಲವೆಡೆ ಭತ್ತ ಜಲಾವೃತವಾಗಿದೆ.

ಜಿಲ್ಲೆಯಲ್ಲಿ 130 ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾಗೂ 37 ಮನೆಗಳು ಹಾನಿಯಾಗಿವೆ. ಭದ್ರಾವತಿ, ಶಿವಮೊಗ್ಗದಲ್ಲಿ ತಲಾ ಎರಡು ಕಚ್ಚಾ ಮನೆಗಳು ಹಾನಿಗೀಡಾಗಿವೆ. 15 ದಿನಗಳಲ್ಲಿ 34 ಮನೆಗಳು ಸಂಪೂರ್ಣ, 3 ಮನೆಗಳು ಭಾಗಶಃ ಹಾನಿಗೀಡಾಗಿವೆ. 5 ಜಾನುವಾರು ಮೃತಪಟ್ಟಿವೆ.

ಭತ್ತದ ಬೆಳೆಗೆ ವ್ಯಾಪಕ ಹಾನಿಯಾಗಿದೆ. ಶೇ 80ರಷ್ಟು ಬೆಳೆ ಕೊಯ್ಲು ಆಗಬೇಕಿದೆ. ಮಳೆ ಕಾರಣಕ್ಕೆ ಕೊಯ್ಲು ಮಾಡಲು ಆಗುತ್ತಿಲ್ಲ. ಕೊಯ್ಲು ಮಾಡಿದ ಬೆಳೆ ರೈತರ ಕೈಗೆ ಸಿಕ್ಕಿಲ್ಲ. ಜೋಳದ ತೆನೆಗೆ ಫಂಗಸ್ ತಗುಲುವ ಭೀತಿ ಎದುರಾಗಿದೆ. ಶಿಕಾರಿಪುರ ತಾಲ್ಲೂಕಿನಲ್ಲಿ ಕಟಾವು ಮಾಡಿದ ಭತ್ತ ನೀರು ಪಾಲಾಗಿದೆ.

ಚಿಕ್ಕಮಗಳೂರಿನಲ್ಲಿ ಇಬ್ಬರ ಸಾವು

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದ್ದು, ಚಿಕ್ಕಮಗಳೂರು ಹಾಗೂ ಉಡುಪಿ ಜಿಲ್ಲೆಯಲ್ಲಿ ಸಾಧಾರಣ ಮಳೆ ಸುರಿದಿದೆ. ಚಿಕ್ಕಮಗಳೂರು ಜಿಲ್ಲೆಯ ಸಿದ್ದರಹಳ್ಳಿ ಗ್ರಾಮದ ಪೊನ್ನುಸ್ವಾಮಿ (50) ಮೃತಪಟ್ಟಿದ್ದಾರೆ. ತರೀಕೆರೆ ತಾಲ್ಲೂಕಿನ ಹುಲಿತಿಮ್ಮಾಪುರ ಗ್ರಾಮದಲ್ಲಿ ದ್ವಿಚಕ್ರ ವಾಹನದಲ್ಲಿ ಶುಕ್ರವಾರ ಹಳ್ಳ ದಾಟುವಾಗ ನೀರು ಪಾಲಾಗಿದ್ದರು. ಅವರ ಮೃತದೇಹ ಶನಿವಾರ ಪತ್ತೆಯಾಗಿದೆ.

ಅಜ್ಜಂಪುರ ತಾಲ್ಲೂಕಿನ ಹೆಗ್ಗಡಿ ಹಳ್ಳಿ ಗ್ರಾಮದಲ್ಲಿ ಶುಕ್ರವಾರ ನೀರಿನಲ್ಲಿ ಕೊಚ್ಚಿ ಹೋಗಿದ್ದ ರೈತ ಆನಂದಪ್ಪ(43) ಅವರ ಶವ ಶನಿವಾರ ಪತ್ತೆಯಾಗಿದೆ.

ಮಂಗಳೂರಿನಲ್ಲಿ ಶುಕ್ರವಾರ ರಾತ್ರಿಯಿಂದಲೇ ಬಿರುಸಿನ ಮಳೆ ಆರಂಭವಾಗಿದ್ದು, ಶನಿವಾರವೂ ಮುಂದುವರಿದಿದೆ. ಮಳೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎರಡು ಮನೆಗಳಿಗೆ ಹಾನಿಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆಯ ಅಬ್ಬರ ತುಸು ಕಡಿಮೆಯಾಗಿದೆ.

ರಾಜ್ಯದಲ್ಲಿ ನ.23ರಿಂದ ಮಳೆ ತಗ್ಗುವ ಸಾಧ್ಯತೆ

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡು ಹಾಗೂ ತಮಿಳುನಾಡಿನ ಒಳನಾಡಿನಲ್ಲಿದ್ದ ವಾಯುಭಾರ ಕುಸಿತ ದುರ್ಬಲಗೊಂಡಿದ್ದು, ಮೇಲ್ಮೈ ಸುಳಿಗಾಳಿ ಸಕ್ರಿಯವಾಗಿದೆ. ಇದರಿಂದ ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ನ.21ರಂದು ಭಾರಿ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಮೇಲ್ಮೈ ಸುಳಿಗಾಳಿಯ ತೀವ್ರತೆ ತಗ್ಗಲಿರುವುದರಿಂದ ಮುಂದಿನ ಎರಡು ದಿನಗಳವರೆಗೆ ಮಾತ್ರ ರಾಜ್ಯದ ಕೆಲವೇ ಜಿಲ್ಲೆಗಳಲ್ಲಿ ಮಳೆ ಮುಂದುವರಿಯಲಿದೆ. ನ.23ರಿಂದ ಉತ್ತರ ಒಳನಾಡಿನಲ್ಲಿ ಮಳೆ ತಗ್ಗುವ ಸಾಧ್ಯತೆ ಇದ್ದು, ದಕ್ಷಿಣ ಒಳನಾಡು ಮತ್ತು ಕರಾವಳಿ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಬಹುದು.

ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗ ಜಿಲ್ಲೆಗಳಲ್ಲಿ ಭಾನುವಾರ ಧಾರಾಕಾರ ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಮಳೆ-ಎಲ್ಲಿ, ಎಷ್ಟು?: ಹಾವೇರಿ ಜಿಲ್ಲೆಯ ಕೆಲವರಕೊಪ್ಪ ಭಾಗದಲ್ಲಿ ಶನಿವಾರ 19 ಸೆಂ.ಮೀ ಗರಿಷ್ಠ ಮಳೆಯಾಗಿದೆ.

ಮಂಗಳೂರು, ಕಡೂರು, 16, ಹಾನಗಲ್ 13, ಹಿರೇಕೆರೂರು 9, ಶಿಡ್ಲಘಟ್ಟ 8, ಮದ್ದೂರು, ಬಂಗಾರಪೇಟೆ 7, ಹಾವೇರಿ, ಮಧುಗಿರಿ 6, ಕೋಲಾರ 5, ಸುಳ್ಯ, ಚಿತ್ರದುರ್ಗ, ದಾವಣಗೆರೆ, ಕಂಪ್ಲಿ 4, ಕಾರವಾರ, ಭಟ್ಕಳ, ಚಿಂತಾಮಣಿ, ಗುಡಿಬಂಡೆ, ಹಿರಿಯೂರು, ಮಾಲೂರು, ಸಾಗರ, ಶಿರಾ 3, ಮೂಡುಬಿದರೆ, ಮಾನ್ವಿ, ಗಂಗಾವತಿ, ಗದಗ, ಕೊಪ್ಪಳ, ನರಗುಂದ, ಗೌರಿಬಿದನೂರು, ತೊಂಡೆಬಾವಿ, ಪಾವಗಡ, ತಿಪಟೂರು, ಹೊಸಕೋಟೆ, ದೊಡ್ಡಬಳ್ಳಾಪುರ 2, ಪುತ್ತೂರು, ಕಾರ್ಕಳ, ಬಾಗಲಕೋಟೆ, ಹುಕ್ಕೇರಿ, ಚಿಕ್ಕೋಡಿ, ನೆಲಮಂಗಲ, ಶಿವಮೊಗ್ಗ, ಶ್ರೀರಂಗಪಟ್ಟಣ, ಮಂಡ್ಯ, ಚನ್ನಪಟ್ಟಣ, ಮಡಿಕೇರಿ, ಹಾಸನ, ಭದ್ರಾವತಿಯಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ.

ಮುಂದುವರಿದ ಬೆಳೆ- ಮನೆ ಹಾನಿ

ಹುಬ್ಬಳ್ಳಿ: ಹುಬ್ಬಳ್ಳಿ– ಧಾರವಾಡ, ಬೆಳಗಾವಿ, ಹಾವೇರಿ, ಬಳ್ಳಾರಿ, ವಿಜಯನಗರ, ಉತ್ತರ ಕನ್ನಡ, ವಿವಿಧೆಡೆ ಶನಿವಾರವೂ ಮಳೆ ಮುಂದುವರಿದಿದೆ. ಇದರೊಟ್ಟಿಗೆ ಬೆಳೆ ಹಾನಿ, ಮನೆ ಹಾನಿಯೂ ಮುಂದುವರಿದಿದೆ.

ಮಳೆಯಿಂದಾಗಿ ಭತ್ತ ಹಾಗೂ ಶುಂಠಿ ಹಾನಿಯಾಗಿದ್ದರಿಂದ ಬೇಸರಪಟ್ಟುಕೊಂಡ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನ ನರೂರು ಗ್ರಾಮದ ರೈತ ಗಂಗಾಧರ ಫಕೀರಪ್ಪ ಶೇಷಣ್ಣನವರ (58) ಕೀಟನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದೇ 17ರಂದು ಅವರು ಕೀಟನಾಶಕ ಸೇವಿಸಿದ್ದರು. ಚಿಕಿತ್ಸೆ ಫಲಕಾರಿಯಾಗದೇ ಶನಿವಾರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಹಾವೇರಿ ಜಿಲ್ಲೆಯ ಹಾನಗಲ್ ತಾಲ್ಲೂಕಿನ ತಿಳವಳ್ಳಿ ಸಮೀಪ ಹರಿಯುವ ವರದಾ ಮತ್ತು ನಾಗರ ಹಳ್ಳಗಳು ಅಪಾಯದ ಮಟ್ಟ ತಲುಪಿದ್ದು, ಇದರಿಂದ ನದಿ ದಡದ ಕೃಷಿ ಜಮೀನಿನಲ್ಲಿ ನೀರು ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ.

ರಸ್ತೆ ಸಂಪರ್ಕ ಕಡಿತ: ಬ್ಯಾಡಗಿ ತಾಲ್ಲೂಕು ನಂದಿಹಳ್ಳಿಕೆರೆ ಕೋಡಿ ಬಿದ್ದ ಪರಿಣಾಮ ಮಾಸಣಗಿ–ತಿಳವಳ್ಳಿ ರಸ್ತೆ ಸಂಪರ್ಕ ಕಡಿತವಾಗಿದೆ. ರಟ್ಟೀಹಳ್ಳಿ ತಾಲ್ಲೂಕಿನ ಸತ್ತಗಿಹಳ್ಳಿಯಿಂದ ಎಲಿವಾಳ ರಸ್ತೆ ಸಂಪರ್ಕ ಕಡಿತವಾಗಿದೆ. ನಾಗನೂರು ಕೆರೆ ಕೋಡಿ ಬಿದ್ದ ಪರಿಣಾಮ ಶಿಗ್ಗಾವಿ ತಾಲ್ಲೂಕು ಚಿಕ್ಕನೆಲ್ಲೂರು–ಮೋಟಹಳ್ಳಿ ರಸ್ತೆ ಸಂಪರ್ಕ ಕಡಿತಗೊಂಡಿದೆ. ಚಿಕ್ಕಮತ್ತೂರು ಕೆರೆ ಕೋಡಿ ಬಿದ್ದ ಪರಿಣಾಮ ಹಿರೇಕೆರೂರು ತಾಲ್ಲೂಕಿನ ಹಿರೇಮತ್ತೂರು–ಗಂಗಾಪುರ ಗ್ರಾಮದ ರಸ್ತೆ ಸಂಪರ್ಕ ಕಡಿತಗೊಂಡಿದೆ.

ಸಂತ್ರಸ್ತರ ಸ್ಥಳಾಂತರ: ರಾಣೆಬೆನ್ನೂರಿನಲ್ಲಿ ದೊಡ್ಡ ಕೆರೆ ಕೋಡಿ ಬಿದ್ದ ಪರಿಣಾಮ, ಕೊಟ್ಟೂರೇಶ್ವರ ನಗರ ಮತ್ತು ಅಡವಿ ಆಂಜನೇಯ ಬಡಾವಣೆಯ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿ ಜನಜೀವನ ಅಸ್ತವ್ಯಸ್ತಗೊಂಡಿದೆ. 56 ಕುಟುಂಬಗಳ ನಿವಾಸಿಗಳನ್ನು ಸ್ಥಳಾಂತರ ಮಾಡಲಾಗಿದೆ. ಬ್ಯಾಡಗಿ ಪಟ್ಟಣದ ಗಾಂಧಿನಗರದ 3 ಕುಟುಂಬಗಳನ್ನು ದುರ್ಗಮ್ಮ ದೇಗುಲದ ಸಮುದಾಯ ಭವನಕ್ಕೆ ಸ್ಥಳಾಂತರಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕಿನಾದ್ಯಂತ ಶನಿವಾರವೂ ಮಳೆ ಮುಂದುವರೆದಿದೆ. ನೂರಾರು ಎಕರೆ ಭತ್ತದ ಗದ್ದೆಗಳಿಗೆ ಹಾನಿ ಉಂಟಾಗಿದೆ. ತಾಲ್ಲೂಕಿನ ದೊಡ್ನಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ದಾಖಲೆಯ 13 ಸೆಂ.ಮೀ. ಮಳೆಯಾಗಿದೆ., ಬಿಸಲಕೊಪ್ಪ ಭಾಗದಲ್ಲಿ 12.65 ಸೆಂ.ಮೀ., ಇಸಳೂರು ಭಾಗದಲ್ಲಿ 12.45 ಸೆಂ.ಮೀ. ಮಳೆ ಸುರಿದಿದೆ.

ವಿಜಯನಗರ ಜಿಲ್ಲೆಯಾದ್ಯಂತ 45 ಮನೆಗಳಿಗೆ ಹಾನಿಯಾಗಿದೆ. ಕೂಡ್ಲಿಗಿಯಲ್ಲಿ 39, ಹಗರಿಬೊಮ್ಮನಹಳ್ಳಿಯಲ್ಲಿ 4, ಹೂವಿನಹಡಗಲಿಯಲ್ಲಿ 2 ಮನೆಗಳು ಭಾಗಶಃ ಬಿದ್ದಿವೆ. ಶುಕ್ರವಾರ 65 ಮನೆಗಳಿಗೆ ಹಾನಿಯಾಗಿತ್ತು. ಸಾವಿರ ಎಕರೆಗೂ ಅಧಿಕ ಪ್ರದೇಶದಲ್ಲಿ ಬೆಳೆದಿದ್ದ ಈರುಳ್ಳಿ, ಮೆಣಸಿನಕಾಯಿ, ಭತ್ತ, ಬಾಳೆ ನೆಲಕಚ್ಚಿದೆ. ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ಬಳಿಯ ಹಳೆ ಸೇತುವೆ ನೀರಿನಲ್ಲಿ ಸಂಪೂರ್ಣವಾಗಿ ಮುಳುಗಿದ್ದರೂ ದಾಟಲು ಯತ್ನಿಸಿದ ಸಕ್ಕರೆ ಮೂಟೆ ತುಂಬಿದ ಲಾರಿಯೊಂದು ಆಯತಪ್ಪಿ ನದಿಗೆ ಉರುಳಿದೆ. ಗ್ರಾಮಸ್ಥರು, ಚಾಲಕ ಮತ್ತು ಕ್ಲೀನರ್‌ರನ್ನು ರಕ್ಷಿಸಿದ್ದಾರೆ.

ನದಿಗಳ ಆರ್ಭಟಕ್ಕೆ ನಲುಗಿದ ಜನರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಯಲುಸೀಮೆಯ ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಶನಿವಾರವೂ ಮಳೆಯ ಆರ್ಭಟ ಮುಂದುವರೆದಿದೆ. ದಶಕಗಳ ನಂತರ ಬಹುತೇಕ ಕೆರೆ, ಕುಂಟೆಗಳು ಕೋಡಿ ಬಿದ್ದಿವೆ. ಚಿಕ್ಕಪುಟ್ಟ ನದಿ, ಹಳ್ಳಗಳೂ ಭೋರ್ಗರೆಯುತ್ತಿದ್ದು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಕಿರು ಜಲಾಶಯಗಳು ಭರ್ತಿ ಆಗಿವೆ.

ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ರಾಯರೇಕಲಹಳ್ಳಿಯ ಬಳಿಯ ಉತ್ತರಪಿನಾಕಿನಿ ನದಿಯಲ್ಲಿ ಶುಕ್ರವಾರ ರಾತ್ರಿ ಕುಂಬಿರಾಜು (42) ಎಂಬ ವ್ಯಕ್ತಿ ಕೊಚ್ಚಿ ಹೋಗಿದ್ದಾರೆ. ಉತ್ತರ ಪಿನಾಕಿನ ನದಿ ಪಾತ್ರದಲ್ಲಿ ನೀರಿನ ಹರಿವು ಹೆಚ್ಚಳವಾಗಿದ್ದು, ನದಿ ಅಂಚಿನಲ್ಲಿದ್ದ ಸಾವಿರಾರು ಜನರನ್ನು ಕಾಳಜಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ.

ಮೇಳ್ಯಾ, ಕಲ್ಲೂಡಿ ಕೆರೆಗಳು ಒಡೆದಿದ್ದು, ಜಿಲ್ಲೆಯಲ್ಲಿ 436 ಮನೆಗಳಿಗೆ ಹಾನಿಯಾಗಿದೆ. ಬಾಗೇಪಲ್ಲಿ ತಾಲ್ಲೂಕಿನ ಯರ್ರಪೆಂಟ್ಲ ಗ್ರಾಮದಲ್ಲಿ ಮನೆ ಕುಸಿದು ಆರು ಕುರಿ ಮತ್ತು ನಾಲ್ಕು ಮೇಕೆಗಳು ಮೃತಪಟ್ಟಿವೆ. ಚಿಕ್ಕಬಳ್ಳಾಪುರ ನಗರದ ಬಿಬಿ ರಸ್ತೆಯಲ್ಲಿ ಹಾದು ಹೋಗುವ ರಾಜಕಾಲುವೆಯಲ್ಲಿ ನೀರು ಹರಿಯುತ್ತಿದ್ದು ರಸ್ತೆಯಲ್ಲಿ ಸಂಚಾರ ಬಂದ್ ಮಾಡಲಾಗಿದೆ. ಜಿಲ್ಲೆಯಲ್ಲಿ 31 ಕಡೆಗಳಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದೆ.

ತುಂಬಿ ಹರಿಯುತ್ತಿರುವ ಪಿನಾಕಿನಿ ನದಿಯಿಂದ ಭರ್ತಿಯಾದ ಕಂಡಿ ಅಣೆಕಟ್ಟು – ಪ್ರಜಾವಾಣಿ ಚಿತ್ರ

ದೇವನಹಳ್ಳಿಗೆ ನುಗ್ಗಿದ ನೀರು

ದೇವನಹಳ್ಳಿ ಹಾಗೂ ಸುತ್ತಮುತ್ತಲಿನ ಹಳ್ಳಿಗಳಿಗೆ ಮಳೆ ನೀರು ನುಗ್ಗಿದೆ. ರಾಜಕಾಲುವೆಗಳ ಒತ್ತುವರಿ ಹಾಗೂ ಅಸಮರ್ಪಕ ನಿರ್ವಹಣೆಯಿಂದ ಕೆರೆಗಳಿಗೆ ಹರಿಯಬೇಕಾದ ನೀರು ಜನವಸತಿ ಪ್ರದೇಶಗಳಿಗೆ ನುಗ್ಗಿದೆ.

ಹೀರಾನಂದಾನಿ ವಿಲ್ಲಾಗೆ ನೀರು ನುಗ್ಗಿದ್ದು ಅಪಾರ್ಟ್‌ಮೆಂಟ್ ನಿವಾಸಿಗಳು ಹೊರಬರಲು ಪರದಾಡಿದರು. ಜೆಸಿಬಿ ಮೂಲಕ ಕಾಲುವೆ ತೆಗೆದು ನೀರು ಹೊರ ಬಿಡುವ ಪ್ರಯತ್ನ ನಡೆಸಲಾಯಿತು. ಬೊಮ್ಮವಾರದ ಸಮೀಪದ ಅಂಡರ್ ಪಾಸ್ ಜಲಾವೃತಗೊಂಡಿದೆ. ಅಂಡರ್‌ಪಾಸ್‌ನಲ್ಲಿ 10 ಅಡಿಗೂ ಅಧಿಕ ನೀರು ಸಂಗ್ರಹವಾಗಿದೆ. ಇದರಿಂದ ವಾಹನ ಸವಾರರಿಗೆ ತೊಂದರೆ ಆಗಿದೆ.

ಅಕ್ಕುಪೇಟೆ ಮತ್ತು ಕೋಡಿಮಂಚೇನಹಳ್ಳಿ ಜನವಸತಿ ಪ್ರದೇಶದ ಜನರು ಮಳೆ ನೀರು ನುಗ್ಗಿದ ಕಾರಣ ಸಂಕಷ್ಟಕ್ಕೆ ಸಿಲುಕಿದ್ದಾರೆ.

ನದಿಯಲ್ಲಿ ಪ್ರವಾಹ

ರಾಮನಗರ: ಜಿಲ್ಲೆಯ ಜಲಾಶಯಗಳಿಂದ ಹೆಚ್ಚಿನ ಪ್ರಮಾಣದಲ್ಲಿ ನೀರು ಹೊರಬಿಡಲಾಗುತ್ತಿದ್ದು, ನದಿ ಪಾತ್ರದಲ್ಲಿನ ಜನರಿಗೆ ಸಂಕಷ್ಟ ಎದುರಾಗಿದೆ. ಜಿಲ್ಲೆಯ ಮಂಚನಬೆಲೆ, ಹಾರೋಬೆಲೆ ಜಲಾಶಯಗಳಿಂದ ನದಿಗೆ ನೀರು ಹರಿಸಲಾಗುತ್ತಿದೆ. ಕಣ್ವ ಜಲಾಶಯ ಸಹ ಭರ್ತಿಯಾಗಿದೆ. ಮಂಚನಬೆಲೆ ಜಲಾಶಯದಿಂದ ಅರ್ಕಾವತಿ ನದಿಗೆ ಶುಕ್ರವಾರ ರಾತ್ರಿ 3,500 ಕ್ಯುಸೆಕ್‌ನಷ್ಟು ನೀರನ್ನು ಏಕಾಏಕಿ ಹರಿಬಿಡಲಾಯಿತು. ಇದರಿಂದ ನದಿಯಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿತ್ತು. ರಾಮನಗರ ಪಟ್ಟಣದಲ್ಲಿ ನದಿ ದಂಡೆಯಲ್ಲಿ ವಾಸವಿದ್ದ ಕುಟುಂಬಗಳನ್ನು ಮುನ್ನೆಚ್ಚರಿಕೆ ಕ್ರಮವಾಗಿ ಅಂಬೇಡ್ಕರ್ ಭವನದಲ್ಲಿನ ಪುನರ್‌ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ ಸಮಗ್ರ ಶಿಕ್ಷಣ ಕರ್ನಾಟಕ ಕೊಪ್ಪಳ

ಪ.ಸಂ:ಸಶಿಕ/ಸಿವಿ1/ಕೆ.ಜಿ.ಬಿ.ವಿ/ಇ.ಪ್ರ.ಟೆ/65/2021–22 ದಿನಾಂಕ : 15.11.2021

ಅಲ್ಪಾವಧಿ –ಇ – ಟೆಂಡರ್ ಪ್ರಕಟಣೆ

ಸಮಗ್ರ ಶಿಕ್ಷಣ ಅಭಿಯಾನ ಕಾರ್ಯಕ್ರಮ ಯೋಜನೆಯಡಿ 2021–22 ಹಾಗೂ 2022–23ನೇ ಶೈಕ್ಷಣಿಕ ವರ್ಷಕ್ಕೆ ಜಿಲ್ಲೆಯ 05 ಕಸ್ತೂರಬಾ ಗಾಂಧಿ ಬಾಲಿಕಾ ಸನಿವಾಸ ವಿದ್ಯಾಲಯಗಳಿಗೆ ವಿವಿಧ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆ ಪೂರೈಕೆಮಾಡಲು ಅರ್ಹ ಸರಕಾರೇತರ ಸಂಘ ಸಂಸ್ಥೆ/ಏಜನ್ಸಿಗಳಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕೆ.ಟಿ.ಪಿ.ಪಿ ಅಧಿನಿಯಮ 1999 ಮತ್ತು ನಿಯಮಗಳು 2000 ಅಡಿಯಲ್ಲಿ ಸ್ಪರ್ಧಾತ್ಮಕ ಧರಗಳಿಗೆ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅರ್ಜಿ ಆಹ್ವಾನಿಸಿದೆ. ಸದರಿ ಇ–ಟೆಂಡರ್ ಪೈಲ್‌ನ ಹೆಸರುಗಳು ಈ ಕೆಳಗಿನಂತಿದೆ.

1.SSK/CV1/KGBV/MANPOWER/65/2021-22

ಅರ್ಹ ಹಾಗೂ ಆಸಕ್ತ ಟೆಂಡರ್‌ದಾರರು ದಿನಾಂಕ: 17.11.2021 ರಿಂದ 01.12.2021ರ ಸಂಜೆ 5.30 ಗಂಟೆಯ ಒಳಗಾಗಿ www.eproc.karnataka.gov.in ಇ–ಪ್ರೋಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಅರ್ಜಿ ಸಲ್ಲಿಸುವುದು. ತಾಂತ್ರಿಕ ಬಿಡ್‌ನ್ನು ದಿನಾಂಕ: 03.12.2021 ರಂದು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸಮಗ್ರ ಶಿಕ್ಷಣ ಕರ್ನಾಟಕ ಕೊಪ್ಪಳ ಜಿಲ್ಲಾ ಕಛೇರಿಯನ್ನು ಸಂಪರ್ಕಿಸುವುದು. (ದೂರವಾಣಿ ಸಂಖ್ಯೆ: 9448999346, 9448999402, ಅಥವಾ 08539–222243)

ಸಹಿ/– ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ ಕೊಪ್ಪಳ

ಡಿಐಪಿಆರ್/ಕೊಪ್ಪಳ/382/ಎಂಸಿಎ/2021–22

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029

ಕಛೇರಿ: 080–29753350, karbuildworkerswelfare@gmail.com ceo.kbocwwb@gmail.com

ಸಂಖ್ಯೆ: ಸಿಡಬ್ಲ್ಯೂಡಬ್ಲ್ಯೂಬಿ/ಇ–ಆಕ್ಷನ್/ಎಫ್‌ಡಿ/ಸಿಆರ್–04/2021–22 ದಿನಾಂಕ: 19–11–2021

ಇ–ಆಕ್ಷನ್ ಪ್ರಕಟಣೆ

ವಿಷಯ: ಮಂಡಳಿಯ ಹೆಚ್ಚುವರಿ ಸುಂಕದ ಮೊತ್ತವನ್ನು 1 ವರ್ಷದ ಅವಧಿಗೆ ನಿಶ್ಚಿತ ಠೇವಣಿ/ Non-Callable ನಲ್ಲಿ ಹೂಡಲು ಬಡ್ಡಿ ದರಗಳನ್ನು ಆಹ್ವಾನಿಸುವ ಬಗ್ಗೆ.

ಮಂಡಳಿಯ ಹೆಚ್ಚುವರಿ ಸುಂಕ ಮೊತ್ತ **ರೂ. 500 ಕೋಟಿಗಳನ್ನು (ರೂ. ಐದುನೂರು ಕೋಟಿಗಳು)** 1 ವರ್ಷದ ಅವಧಿಗೆ ನಿಶ್ಚಿತ ಠೇವಣಿ/ Non-Callable ನಲ್ಲಿ ಹೂಡಲು ಇ–ಆಕ್ಷನ್ ಬಿಡ್ಡಿಂಗ್ ವ್ಯವಸ್ಥೆ ಮಾದರಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್, ಕರ್ನಾಟಕ ಸರ್ಕಾರ ಇದರಲ್ಲಿ ಅರ್ಹ ರಾಷ್ಟ್ರೀಕೃತ ಬ್ಯಾಂಕ್‌ಗಳ ಪ್ರಾದೇಶಿಕ / ವಲಯ / ಮುಖ್ಯ ಕಛೇರಿಗಳಿಂದ ಸ್ಪರ್ಧಾತ್ಮಕ ಬಡ್ಡಿದರವನ್ನು ಆಹ್ವಾನಿಸಲಾಗಿದೆ.

ಸದರಿ ಇ–ಆಕ್ಷನ್ ಅನ್ನು ವಿದ್ಯುನ್ಮಾನ ಮೂಲಕವಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(www.eproc.karnataka.gov.in)** ಸಲ್ಲಿಸುವುದು. ದಾಖಲಾತಿಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 30.11.2021 ಸಂಜೆ: 4.00 ಗಂಟೆ ರೊಳಗಾಗಿ** ಹೆಚ್ಚಿನ ವಿವರಗಳಿಗಾಗಿ ಮಂಡಳಿಯ ಉಪ ಕಾರ್ಯದರ್ಶಿಗಳು (ಆಡಳಿತ), **ಫೋನ್: 080–29753350/54/56, ಮೊ: 9448533794** ರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಜಂಟಿ ಕಾರ್ಯದರ್ಶಿ ಕ.ಕ.ಇ.ನಿ.ಕಾ.ಕ.ಮ

DIPR/DDU/AAPL/RO2181/21-22

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಆಂಧ್ರದಲ್ಲಿ ಮಳೆ, ಪ್ರವಾಹ: 25 ಸಾವು

ಅಮರಾವತಿ(ಪಿಟಿಐ): ಆಂಧ್ರಪ್ರದೇಶದಲ್ಲಿ ಶುಕ್ರವಾರದಿಂದ ಸುರಿಯುತ್ತಿರುವ ಭಾರಿ ಮಳೆಯಿಂದ ಕಡಪಾ, ಅನಂತಪುರ ಹಾಗೂ ಚಿತ್ತೂರು ಜಿಲ್ಲೆಗಳಲ್ಲಿ ಈವರೆಗೆ 25 ಜನರು ಮೃತಪಟ್ಟಿದ್ದು, ಇನ್ನೂ 17 ಜನರು ನಾಪತ್ತೆಯಾಗಿದ್ದಾರೆ ಎಂದು ರಾಜ್ಯ ಸರ್ಕಾರ ಹೇಳಿದೆ.

ಕಡಪಾ ಜಿಲ್ಲೆಯ ಚೆಯ್ಯೇರು ನದಿಯಲ್ಲಿ ಶುಕ್ರವಾರ ದಿಢೀರ್ ಉಂಟಾದ ಪ್ರವಾಹದಲ್ಲಿ 30ಕ್ಕೂ ಹೆಚ್ಚು ಮಂದಿ ಕೊಚ್ಚಿ ಹೋಗಿದ್ದರು. ಅನಂತಪುರದ ಕದಿರಿ ಪಟ್ಟಣದಲ್ಲಿ ಮಳೆಯ ಹೊಡೆತಕ್ಕೆ ನಿರ್ಮಾಣ ಹಂತದ ಕಟ್ಟಡವೊಂದು ಪಕ್ಕದ ಕಟ್ಟಡದ ಮೇಲೆ ಕುಸಿದಿದ್ದು, ಇಬ್ಬರು ಮಕ್ಕಳು ಸೇರಿ ಆರು ಜನರು ಮೃತಪಟ್ಟಿದ್ದಾರೆ.

ವೈಮಾನಿಕ ಸಮೀಕ್ಷೆ: ಆಂಧ್ರಪ್ರದೇಶ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರು ಪ್ರವಾಹಪೀಡಿತ ಪ್ರದೇಶಗಳಲ್ಲಿ ಶನಿವಾರ ವೈಮಾನಿಕ ಸಮೀಕ್ಷೆ ನಡೆಸಿದರು. ಮೃತರ ಕುಟುಂಬಗಳಿಗೆ ₹5 ಲಕ್ಷ ಪರಿಹಾರ ಘೋಷಿಸಲಾಗಿದೆ.

ನೆಲ್ಲೂರು ಜಿಲ್ಲೆಯಲ್ಲಿ ದಾಖಲೆಯ ಮಳೆಯಾಗುತ್ತಿದ್ದು, ಪೆನ್ನಾರ್ ನದಿಯು ಹಲವು ಗ್ರಾಮಗಳನ್ನು ಜಲಾವೃತ ಮಾಡಿದೆ. ವಿಪತ್ತು ನಿರ್ವಹಣಾ ತಂಡಗಳನ್ನು ನಿಯೋಜಿಸಲಾಗಿದೆ.

ತಮಿಳುನಾಡಿನಲ್ಲಿ ಶೇ 68ರಷ್ಟು ಅಧಿಕ ಮಳೆ: ತಮಿಳುನಾಡಿನಲ್ಲಿ ಅಬ್ಬರದ ಹಿಂಗಾರು ಮಳೆಯಾಗಿದ್ದು, ವಾಡಿಕೆಗಿಂತ ಶೇ 68ರಷ್ಟು ಹೆಚ್ಚು ಮಳೆ ಸುರಿದಿದೆ. ಕಳೆದ 24 ಗಂಟೆಗಳ ಅವಧಿಯಲ್ಲಿ ಮಳೆ ಸಂಬಂಧಿತ ಅವಘಡಗಳಲ್ಲಿ ಮೂವರು ಮೃತಪಟ್ಟಿದ್ದು, 300ಕ್ಕೂ ಹೆಚ್ಚು ಜಾನುವಾರುಗಳು ಸಾವಿಗೀಡಾಗಿವೆ.

ಸಹಜಸ್ಥಿತಿಗೆ ಶಬರಿಮಲೆ ಯಾತ್ರೆ: ಕೇರಳದ ಪತ್ತಣಂತಿಟ್ಟ ಜಿಲ್ಲೆಯ ಹಲವು ಭಾಗಗಳಲ್ಲಿ ಮಳೆಯ ಅಬ್ಬರ ಕಡಿಮೆಯಾಗಿದ್ದು ಶಬರಿಮಲೆ ಯಾತ್ರೆ ಸಹಜಸ್ಥಿತಿಗೆ ಮರಳಿದೆ. ಭಕ್ತರಿಗೆ ಶಬರಿಮಲೆಗೆ ಪಾದಯಾತ್ರೆ ತೆರಳಲು ಶನಿವಾರ ಮಧ್ಯಾಹ್ನದ ಬಳಿಕ ಅನುಮತಿ ನೀಡಲಾಗಿದೆ. ಸತತ ಮಳೆಯಿಂದ ಪಂಬಾ ನದಿಯಲ್ಲಿ ನೀರಿನ ಹರಿವು ಹೆಚ್ಚಿತ್ತು. ಹೀಗಾಗಿ ಶನಿವಾರದ ಶಬರಿಮಲೆ ಪಾದಯಾತ್ರೆಯನ್ನು ನಿರ್ಬಂಧಿಸಲಾಗಿತ್ತು.

ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯಲ್ಲಿ ಜಲಾವೃತಗೊಂಡ ರಸ್ತೆಯಲ್ಲೇ ಜನರು ಸಾಗಿದರು –ಪಿಟಿಐ ಚಿತ್ರ

ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಅವರು ನವದೆಹಲಿಯಲ್ಲಿ ಶನಿವಾರ ಕೇಂದ್ರ ಸಚಿವ ಹರದೀಪ್ ಸಿಂಗ್ ಪುರಿ ಅವರಿಂದ ಸ್ವಚ್ಛ ಸರ್ವೇಕ್ಷಣಾ ಪ್ರಶಸ್ತಿ ಸ್ವೀಕರಿಸಿದರು. ಪೌರಾಡಳಿತ ಇಲಾಖೆ ನಿರ್ದೇಶಕಿ ಎಂ.ಎಸ್. ಅರ್ಚನಾ, ನಗರಾಭಿವೃದ್ಧಿ ಇಲಾಖೆಯ ಜಂಟಿ ನಿರ್ದೇಶಕ ಶಂಕರ್, ಸಿಬ್ಬಂದಿ ಎಸ್.ವಿ. ಸ್ನೇಹಲತಾ ಹಾಗೂ ಗೀತಾ ಚಿತ್ರದಲ್ಲಿದ್ದಾರೆ

ಸ್ವಚ್ಛತೆಯೆಡೆಗೆ ಕರ್ನಾಟಕ ಕೇಂದ್ರದ ಪ್ರಶಸ್ತಿ

ಒಂದನೇ ಪುಟದಿಂದ

ಸ್ವಚ್ಛ ಸರ್ವೇಕ್ಷಣಾ ವಿಭಾಗದ ಪ್ರಶಸ್ತಿಗಾಗಿ ನಡೆಸಿರುವ ಸಮೀಕ್ಷೆಯಲ್ಲಿ ರಾಜ್ಯದ ಮೈಸೂರು ಮಹಾನಗರ ಪಾಲಿಕೆಗೆ 'ಕಸ ಮುಕ್ತ ನಗರ' ವಿಭಾಗದ '5 ಸ್ಟಾರ್' ಗರಿ ದೊರೆತಿದೆ.

ಇದೇ ವಿಭಾಗದ '3 ಸ್ಟಾರ್' ಪ್ರಶಸ್ತಿಗೆ ತುಮಕೂರು ಮತ್ತು ಹುಬ್ಬಳ್ಳಿ– ಧಾರವಾಡ ಮಹಾನಗರ ಪಾಲಿಕೆಗಳು ಆಯ್ಕೆಯಾಗಿವೆ. ಹುಬ್ಬಳ್ಳಿ–ಧಾರವಾಡವು ಸ್ವಚ್ಛತೆಯೆಡೆಗೆ ತ್ವರಿತವಾಗಿ ಸಾಗುತ್ತಿರುವ 'ಮಧ್ಯಮ' ನಗರ ಪ್ರಶಸ್ತಿಗೂ ಪಾತ್ರವಾಗಿದೆ.

ಹೊಸದುರ್ಗ ಪುರಸಭೆಗೆ 'ದಕ್ಷಿಣ ವಲಯದ ಸ್ವಚ್ಛ ನಗರಿ' ಪ್ರಶಸ್ತಿ, ಪಿರಿಯಾಪಟ್ಟಣ ಮತ್ತು ಕೆ.ಆರ್. ನಗರ ಪುರಸಭೆಗಳು 'ಉತ್ತಮ ನಾಗರಿಕ ಸ್ಪಂದನೆ' ವಿಭಾಗದ ಪ್ರಶಸ್ತಿ ಪಡೆದಿವೆ.

50 ಸಾವಿರದಿಂದ 1 ಲಕ್ಷ ಜನಸಂಖ್ಯೆಯ ವಿಭಾಗದಲ್ಲಿ ಬಾಗಲಕೋಟೆ ಜಿಲ್ಲೆಯ ಮುಧೋಳ (ನಗರಸಭೆ)ವು ಸ್ವಚ್ಛತೆಯೆಡೆಗೆ ತ್ವರಿತವಾಗಿ ಸಾಗುತ್ತಿರುವ ನಗರ ಪ್ರಶಸ್ತಿಗೆ, 25 ಸಾವಿರದಿಂದ 50 ಸಾವಿರ ಜನಸಂಖ್ಯೆಯ ವಿಭಾಗದಲ್ಲಿ ಉತ್ತರ ಕನ್ನಡ ಜಿಲ್ಲೆಯ ಕುಮಟಾ (ಪುರಸಭೆ) 'ಉತ್ತಮ ಸುಸ್ಥಿರ ನಗರ' ಪ್ರಶಸ್ತಿಗೆ ಆಯ್ಕೆಯಾಗಿದೆ.

ಮತ್ತೆ ಮೊದಲ ಸ್ಥಾನದಲ್ಲಿ ಇಂದೋರ್: ಮಧ್ಯಪ್ರದೇಶದ ಇಂದೋರ್ ನಗರವು ಸತತ ಐದನೇ ವರ್ಷ ದೇಶದ ಸ್ವಚ್ಛ ನಗರ ಪ್ರಶಸ್ತಿಗೆ ಭಾಜನವಾಗಿದ್ದು, ಗುಜರಾತ್‌ನ ಸೂರತ್ ಮತ್ತು ಆಂಧ್ರಪ್ರದೇಶದ ವಿಜಯವಾಡ, ಉತ್ತರ ಪ್ರದೇಶದ ಹಾಪುರ್ ಮತ್ತು ಗುಜರಾತ್‌ನ ರಾಜ್‌ಕೋಟ್ ನಗರಗಳು ಕ್ರಮವಾಗಿ ಎರಡರಿಂದ 5ನೇ ಸ್ಥಾನ ಗಳಿಸಿವೆ.

ಉತ್ತರ ಪ್ರದೇಶದ ವಾರಾಣಸಿ ನಗರವು 'ಉತ್ತಮ ಗಂಗಾ ನಗರ' ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿದರೆ, ಬಿಹಾರದ ಮುಂಗೇರ್ ಮತ್ತು ಪಟ್ನಾ ನಗರಗಳು ಈ ವಿಭಾಗದಲ್ಲಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದಿವೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net

Prajavani.net Prajavani Prajavani

ತಾಜಾ ಸುದ್ದಿಗಾಗಿ ಪ್ರಜಾವಾಣಿ ಆ್ಯಪ್ ಬಳಸಿ https://bit.ly/PrajavaniApp

ಇಂದು

Facebook LIVE ಸಂಜೆ 4.30ರಿಂದ

ಸಹಯೋಗ: ಸಾಹಿತಿ ಮತ್ತು ಕಲಾವಿದರ ವೇದಿಕೆ ಹಾಗೂ ರಂಗವಿಜಯ

ನಿನ್ನಂಥೋರ್ ಯಾರೂ ಇಲ್ವಲ್ಲೋ ಈ ಲೋಕದಾ ಮ್ಯಾಲೇ

ಅಗಲಿದ ಪುನೀತ್ ರಾಜ್‌ಕುಮಾರ್‌ಗೆ ಸಾಹಿತಿ- ಕಲಾವಿದರ ರಂಗನಮನ

ಭಾಗವಹಿಸುವವರು: ನ್ಯಾಯಮೂರ್ತಿ ಸದಾಶಿವ, ಬರಗೂರು ರಾಮಚಂದ್ರಪ್ಪ, ಹೆಚ್. ಎಸ್.ಶಿವಪ್ರಕಾಶ್, ಬಿ.ಜಯಶ್ರೀ, ನಾಗತಿಹಳ್ಳಿ ಚಂದ್ರಶೇಖರ್, ಪಿ.ಶೇಷಾದ್ರಿ, ಗಿರಿಜಾ ಲೋಕೇಶ್, ಪ್ರಕಾಶ್ ರಾಜ್, ಅರುಂಧತಿ ನಾಗ್, ಪ್ರಕಾಶ್ ಬೆಳವಾಡಿ, ದತ್ತಣ್ಣ, ಉಮಾಶ್ರೀ, ಬಿ.ಸುರೇಶ್, ಜಯರಾಮ್ ರಾಯಪುರ, ಸುಧಾ ಬೆಳವಾಡಿ, ಟಿ.ಎಸ್.ನಾಗಾಭರಣ, ಎಂ.ಎಸ್. ಮೂರ್ತಿ. ಸಂಚಾಲಕರು: ಶ್ರೀನಿವಾಸ್ ಜಿ ಕಪ್ಪಣ್ಣ, ಸಹಸಂಚಾಲಕರು: ಶಶಿಧರ ಭಾರಿಘಾಟ್, ಸಿ.ಕೆ.ಗುಂಡಪ್ಪ, ಮಾಲೂರು ವಿಜಿ.



ಪಾಡ್‌ಕಾಸ್ಟ್: ಈದಿನದ ವಿಶೇಷ: ಸಂಜೆ 4 ವೈದ್ಯಮಿತ್ರ, ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆ. 7.30 ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ

ಪ್ರಜಾವಾಣಿ ಕನ್ನಡ ಧ್ವನಿ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	15,,509	12,199
ಹಾರಂಗಿ	2,859	2,857.59	450	1,162
ಕಬಿನಿ	2,284	2,283.96	3,200	2,000
ಹೇಮಾವತಿ	2,922	2,910.39	4,254	1,450
ಲಿಂಗನಮಕ್ಕಿ	1,819	1,813.50	5,877	-
ಸೂಪಾ (ಮೀ)	564	555.27	1,127	2,431
ಮಾಣಿ	594.36	586.56	116	-
ತುಂಗಭದ್ರಾ	1,633	1,633	50,000	50,528
ಮಲಪ್ರಭಾ	2,079.50	2,076.80	2,597	1,069
ಘಟಪ್ರಭಾ	2,175	2,166.96	-	2,497
ಭದ್ರಾ	186	185.90	5,648	6,864
ಆಲಮಟ್ಟಿ (ಮೀ)	519.60	518.30	4,060	4,060
ನಾರಾಯಣಪುರ (ಮೀ)	492.25	491.59	5,642	4,026

* ನೆಲಮಟ್ಟದಿಂದ

ಬಿಡಿಎ: ₹ 200 ಕೋಟಿಗೂ ಹೆಚ್ಚು ಅಕ್ರಮ

ಒಂದನೇ ಪುಟದಿಂದ

ಕೆಂಪೇಗೌಡ ಬಡಾವಣೆಯಲ್ಲಿ ಮೂಲ ಅರ್ಜಿದಾರರ ದಾಖಲೆಗಳನ್ನು ತಿದ್ದುಪಡಿ ಮಾಡಿ ಬೇರೊಬ್ಬರಿಗೆ ₹ 30 ಲಕ್ಷ ಮೌಲ್ಯದ ನಿವೇಶನ ಹಂಚಿಕೆ ಮಾಡಲಾಗಿದೆ. ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ವ್ಯಕ್ತಿಯೊಬ್ಬರಿಗೆ ಮಂಜೂರಾದ ₹ 52 ಲಕ್ಷ ಮೌಲ್ಯದ ನಿವೇಶನವನ್ನು ಬೇರೊಬ್ಬರಿಗೆ ಹಂಚಿಕೆ ಮಾಡಿರುವುದು ಕಂಡುಬಂದಿದೆ ಎಂದು ಮಾಹಿತಿ ನೀಡಿದ್ದಾರೆ.

ಅಂಜನಾಪುರ ಬಡಾವಣೆಯಲ್ಲಿ ವ್ಯಕ್ತಿಯೊಬ್ಬರಿಗೆ ನೀಡಿದ್ದ ನಿವೇಶನವನ್ನು ಬೇರೊಬ್ಬರು ಒತ್ತುವರಿ ಮಾಡಿದ್ದರು. ಈ ಕುರಿತು ದೂರು ನೀಡಿದಾಗ ಫಲಾನುಭವಿಗೆ ಮತ್ತೊಂದು ಬಡಾವಣೆಯಲ್ಲಿ ಪರ್ಯಾಯ ನಿವೇಶನ ಹಂಚಿಕೆ ಮಾಡಲಾಗಿದೆ. ಬಳಿಕ ಅದೇ ನಿವೇಶನವನ್ನು ಮತ್ತೊಬ್ಬರಿಗೂ ಹಂಚಿಕೆ ಮಾಡಿ ಅಕ್ರಮ ಎಸಗಿರುವ ದಾಖಲೆ ವಶಕ್ಕೆ ಪಡೆಯಲಾಗಿದೆ.

ಪರಿಹಾರದಲ್ಲಿ ಭಾರಿ ಅಕ್ರಮ: ಕೆಂಪೇಗೌಡ ಬಡಾವಣೆ, ಶಿವರಾಮ ಕಾರಂತ ಬಡಾವಣೆ ಸೇರಿದಂತೆ ವಿವಿಧ ಬಡಾವಣೆಗಳ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡ ಜಮೀನುಗಳ ಮಾಲೀಕರಿಗೆ ಪರಿಹಾರ ನೀಡುವುದರಲ್ಲಿ ಭಾರಿ ಅಕ್ರಮ ಪತ್ತೆಯಾಗಿದೆ. ಸ್ವಾಧೀನಪಡಿಸಿಕೊಂಡ ಜಮೀನುಗಳ ಮಾಲೀಕರು ಎಂದು ಖಾಸಗಿ ವ್ಯಕ್ತಿಗಳಿಗೆ ₹ 100 ಕೋಟಿಗೂ ಹೆಚ್ಚು ಪರಿಹಾರ ವಿತರಿಸಿರುವುದಕ್ಕೆ ಸಂಬಂಧಿಸಿದ ಕಡತಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಮಾಲೀಕರಿಗೆ ಪರಿಹಾರ ವಿತರಿಸುವುದರಲ್ಲೂ ಅಕ್ರಮಗಳು ಕಂಡುಬಂದಿವೆ. ಬಿಡಿಎ ಅಧಿಕಾರಿಗಳು, ಸಿಬ್ಬಂದಿ ಮತ್ತು ಖಾಸಗಿ ಮಧ್ಯವರ್ತಿಗಳು ಶಾಮೀಲಾಗಿ ನಕಲಿ ದಾಖಲೆ ಸೃಷ್ಟಿಸಿ ಪರಿಹಾರದ ಹಣವನ್ನೇ ಲಪಟಾಯಿಸಿರುವ ಪ್ರಕರಣಗಳೂ ಶೋಧದಲ್ಲಿ ಪತ್ತೆಯಾಗಿವೆ ಎಂದು ಎಸಿಬಿ ಮಾಹಿತಿ ನೀಡಿದೆ.

ಎಸಿಬಿ ಎಸ್‌ಪಿಗಳಾದ ಜಿ.ಎಚ್. ಯತೀಶ್ ಚಂದ್ರ, ಅಬ್ದುಲ್ ಅಹದ್, ಉಮಾ ಪ್ರಶಾಂತ್ ಸೇರಿದಂತೆ 20ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು 50 ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ವಿಳಂಬ, ಕಿರುಕುಳದ ಆರೋಪಕ್ಕೆ ಸಾಕ್ಷ್ಯ

'ಒಂದೇ ನಿವೇಶನವನ್ನು ಇಬ್ಬರಿಗೆ ಹಂಚಿಕೆ ಮಾಡಿ, ಫಲಾನುಭವಿಗಳು ನ್ಯಾಯಾಲಯದ ಮೆಟ್ಟಿಲೇರುವಂತೆ ಮಾಡಿರುವ ಹಲವು ಪ್ರಕರಣಗಳು ಪತ್ತೆಯಾಗಿವೆ. ಒಂದು ಬಡಾವಣೆಯಲ್ಲಿ ನಿವೇಶನ ಮಂಜೂರಾದ ಬಳಿಕ ಸಕಾರಣವಿಲ್ಲದೆ ಅದನ್ನು ರದ್ದುಪಡಿಸಿ, ಬೇರೊಂದು ಬಡಾವಣೆಯಲ್ಲಿ ನಿವೇಶನ ಹಂಚಿಕೆ ಮಾಡಿರುವುದೂ ಕಂಡುಬಂದಿದೆ' ಎಂದು ಎಸಿಬಿ ತಿಳಿಸಿದೆ.

ನಿಗದಿತ ಅವಧಿ ಮುಗಿದಿದ್ದರೂ ಫಲಾನುಭವಿಗಳಿಗೆ ಶುದ್ಧ ಕ್ರಯಪತ್ರ ಮಾಡಿಕೊಡದೇ ಸತಾಯಿಸುತ್ತಿರುವುದು ಮತ್ತು ಹಣ ಪಾವತಿಸಿದವರಿಗೆ ಸಕಾಲದಲ್ಲಿ ನಿವೇಶನ ಹಂಚಿಕೆ ಮಾಡದೇ ವಿಳಂಬ ನೀತಿ ಅನುಸರಿಸುತ್ತಿರುವುದೂ ಪತ್ತೆಯಾಗಿದೆ.

'ಪ್ರತಿಭಟನೆ ನಿಲ್ಲದು'

ಒಂದನೇ ಪುಟದಿಂದ

ನವೆಂಬರ್ 29ರಿಂದ ಅಧಿವೇಶನ ಆರಂಭವಾಗಲಿದೆ.

ನ.22ರಂದುಲಖನೌದಲ್ಲಿಆಯೋಜಿಸಿರುವ ರೈತ ಮಹಾಪಂಚಾಯತ್‌ಗೆ ಭಾರಿ ಸಂಖ್ಯೆಯಲ್ಲಿ ರೈತರು ಸೇರುವಂತೆ ಸಂಘಟನೆಯ ಕೋರ್‌ಕಮಿಟಿ ಸದಸ್ಯ ದರ್ಶನ್‌ಪಾಲ್ ಸಿಂಗ್ ಕರೆ ನೀಡಿದ್ದಾರೆ. ಸಂಘಟನೆಯ ಮುಂದಿನ ನಡೆಯ ಬಗ್ಗೆ ಚರ್ಚಿಸಲು ಭಾನುವಾರ ಸಭೆ ಕರೆಯಲಾಗಿದೆ ಎಂದು ತಿಳಿಸಿದ್ದಾರೆ.

ರೈತರು ಬೆಳೆದ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನೀಡಲು ಕಾನೂನಿನ ಖಾತರಿ ಬೇಕು ಎಂದಿರುವ ಪಾಲ್, ವಿದ್ಯುತ್ ತಿದ್ದುಪಡಿ ಮಸೂದೆಯನ್ನೂ ಹಿಂಪಡೆಯುವಂತೆ ಒತ್ತಾಯಿಸಿದ್ದಾರೆ. ದೆಹಲಿಯಲ್ಲಿ ವಾಯು ಗುಣಮಟ್ಟ ನಿಯಂತ್ರಣಕ್ಕೆ ಸಂಬಂಧಿಸಿದ ದಂಡದ ಷರತ್ತಿನ ವ್ಯಾಪ್ತಿಯಿಂದ ರೈತರನ್ನು ಹೊರಗಿಡಬೇಕು ಎಂಬ ಬೇಡಿಕೆ ಹಾಗೆಯೇ ಉಳಿದಿದೆ. ಈ ಎಲ್ಲಾ ವಿಚಾರದಲ್ಲಿ ಹೋರಾಟ ಮುಂದುವರಿಯಲಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಪಂಜಾಬ್, ಹರಿಯಾಣ, ದೆಹಲಿ, ರಾಜಸ್ಥಾನ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ರೈತರ ಮೇಲೆ ದಾಖಲಾಗಿರುವ ಪ್ರಕರಣಗಳನ್ನು ಬೇಷರತ್ತಾಗಿ ವಾಪಸ್ ಪಡೆಯಬೇಕು ಎಂದು ದರ್ಶನ್‌ಪಾಲ್ ಒತ್ತಾಯಿಸಿದ್ದಾರೆ. ಟ್ರ್ಯಾಕ್ಟರ್ ಜಾಥಾ ಹಾಗೂ ಮುಂದಿನ ಹೋರಾಟದ ರೂಪುರೇಷೆ ಬಗ್ಗೆ ಸಿಂಘು ಗಡಿಯಲ್ಲಿ ಭಾನುವಾರ ನಡೆಯಲಿರುವ ಕೋರ್‌ಕಮಿಟಿ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಅಜಯ್ ಮಿಶ್ರಾ ವಿರುದ್ಧ ಕ್ರಮಕ್ಕೆ ಆಗ್ರಹ

ಒಂದನೇ ಪುಟದಿಂದ

ಮೃತಪಟ್ಟ ರೈತರ ಕುಟುಂಬದವರಿಗೆ ತಲಾ ಒಂದು ಕೋಟಿ ರೂಪಾಯಿ ಪರಿಹಾರ ನೀಡಬೇಕು. ಪ್ರತಿಭಟನನಿರತ ರೈತರ ವಿರುದ್ಧ ಹೂಡಿರುವ ಪ್ರಕರಣಗಳನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದ್ದಾರೆ.

'ಈ ಆಂದೋಲನದಲ್ಲಿ ಸುಮಾರು 700 ರೈತರು ಸಾವಿಗೀಡಾಗಿದ್ದಾರೆ. ಮೋದಿ ಅವರು ಕಾಯ್ದೆ ರದ್ದುಗೊಳಿಸುವ ನಿರ್ಧಾರವನ್ನು ಮುಂಚೆಯೇ ಕೈಗೊಂಡಿದ್ದರೆ ಈ ಅಮಾಯಕ ಜೀವಗಳು ಉಳಿಯುತ್ತಿದ್ದವು' ಎಂದು ಪತ್ರದಲ್ಲಿ ಹೇಳಿದ್ದಾರೆ.

ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ ಖಾತ್ರಿಯನ್ನು ಕಾನೂನುಬದ್ಧಗೊಳಿಸಬೇಕು ಎಂಬ ರೈತರ ಬೇಡಿಕೆಯನ್ನು ಒಪ್ಪಿಕೊಳ್ಳುವಂತೆ ಪ್ರಧಾನಿಗೆ ಮನವಿ ಮಾಡಿರುವುದಾಗಿ ಅವರು ಹೇಳಿದ್ದಾರೆ.

ಟೆಂಡರ್: ಗುತ್ತಿಗೆದಾರರಿಂದ ಶೇ 40ರಷ್ಟು ಲಂಚದ ದೂರು

‘ತನಿಖೆ ನಡೆಸಿ ವಿಶ್ವಾಸ ಉಳಿಸಿಕೊಳ್ಳಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗುತ್ತಿಗೆದಾರರೇ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ಭ್ರಷ್ಟಾಚಾರದ ವಿರುದ್ಧ ಪ್ರಧಾನಿಗೆ ದೂರು ನೀಡಿರುವ ವಿಷಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನುಣುಚಿಕೊಳ್ಳಬಾರದು. ಉನ್ನತ ಮಟ್ಟದ ತನಿಖೆಗೆ ಆದೇಶಿಸಿ, ವಿಶ್ವಾಸ ಉಳಿಸಿಕೊಳ್ಳಬೇಕು’ ಎಂದು ಧಾರವಾಡ ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್.ಆರ್. ಹಿರೇಮಠ ಆಗ್ರಹಿಸಿದರು.



ಹಿರೇಮಠ

ಈ ಕುರಿತು ‘ಪ್ರಜಾವಾಣಿ’ ಜತೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಸ್ಥಾನದಲ್ಲಿರುವವರು ಆ ಹುದ್ದೆಯ ಘನತೆ ಅರಿತು ಕೆಲಸ ಮಾಡಬೇಕು. ಚಾಣಾಕ್ಷ ಉತ್ತರ ನೀಡುವುದಕ್ಕೆ ಸೀಮಿತವಾಗಬಾರದು. ಸರ್ಕಾರದ ಭಾಗವಾಗಿರುವ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳ ವಿರುದ್ಧ ಗಂಭೀರವಾದ ಆರೋಪ ಕೇಳಿಬಂದಿದೆ. ಕೆಳಹಂತದವರೆಗೂ ಇಳಿದು ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿದರು.

ಜನಾಂದೋಲನ: ‘ಭ್ರಷ್ಟಾಚಾರವನ್ನು ಬಿಜೆಪಿ ಸರ್ಕಾರ ಕಾನೂನು ಬದ್ಧಗೊಳಿಸಿದೆ. ಇದರ ವಿರುದ್ಧ ನಾವು (ಕಾಂಗ್ರೆಸ್) ತುಮಕೂರಿನಲ್ಲಿ ಭಾನುವಾರ (ನ. 21) ಜನಾಂದೋಲನ ಜಾಗೃತಿ ಹಮ್ಮಿಕೊಂಡಿದ್ದೇವೆ’ ಎಂದು ಕಾಂಗ್ರೆಸ್ ಮುಖಂಡ ಟಿ. ಬಿ. ಜಯಚಂದ್ರ ಹೇಳಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಮತ್ತು ಶಿವಶಂಕರ ರೆಡ್ಡಿ ಜೊತೆ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದರು.

> **ಬೆಂಗಳೂರಿನ ರಸ್ತೆಗಳನ್ನು ನೋಡಿದರೆ ಕಾಮಗಾರಿಯಲ್ಲಿನ ಭ್ರಷ್ಟಾಚಾರಕ್ಕೆ ಸಾಕ್ಷ್ಯಸಿಗುತ್ತದೆ. ಗುತ್ತಿಗೆದಾರರು ಲಂಚ ನೀಡಿ ಸಾಕಿದ ‘ಹಾವು’ಗಳು ಇದೀಗ ಅವರನ್ನೇ ಕಚ್ಚುತ್ತಿವೆ.**
> **ಪೃಥ್ವಿ ರೆಡ್ಡಿ,** ಆಮ್ ಆದ್ಮಿ ಪಕ್ಷದ ರಾಜ್ಯ ಸಂಚಾಲಕ

> **ಗುತ್ತಿಗೆದಾರರು ಹೇಳಿರುವುದಕ್ಕಿಂತಲೂ ಹೆಚ್ಚು ಲಂಚದ ಹಾವಳಿ ಇದೆ. ಸರ್ಕಾರಕ್ಕೆ ನಾಚಿಕೆ ಇದ್ದರೆ ತನಿಖೆ ನಡೆಸಬೇಕು. ಟೆಂಡರ್ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ತರಬೇಕು.**
> **ರವಿಕೃಷ್ಣಾ ರೆಡ್ಡಿ,** ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಅಧ್ಯಕ್ಷ

‘ರಾಷ್ಟ್ರಪತಿಗೆ ಪತ್ರ’

ಮೈಸೂರು: ‘ರಾಜ್ಯ ಸರ್ಕಾರವನ್ನು ವಜಾಗೊಳಿಸುವಂತೆ ರಾಷ್ಟ್ರಪತಿಗೆ ಪತ್ರ ಬರೆಯಲಾಗುವುದು’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದರು.

‘ಪ್ರತಿ ಕಾಮಗಾರಿಗೂ ಶೇ 40 ರಷ್ಟು ಕಮಿಷನ್ ನೀಡಬೇಕು ಎಂದು ರಾಜ್ಯ ಗುತ್ತಿಗೆದಾರರ ಸಂಘದ ಪ್ರತಿನಿಧಿಗಳು ಆರೋಪಿಸಿದ್ದಾರೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಕಮಿಷನ್ ಪಡೆಯುವ ಸರ್ಕಾರವನ್ನು ನಾನು ನೋಡಿಲ್ಲ’ ಎಂದು ಅವರು ಇಲ್ಲಿ ಸುದ್ದಿಗಾರರಿಗೆ ಹೇಳಿದರು.

ತೆರೆ ತುಂಬಾ ಶಿವ ತಾಂಡವ

ಇಲ್ಲಿ ಹಿಂಸಾತ್ಮಕ ದೃಶ್ಯವೂ ಆಕರ್ಷಕವಾಗಿ ಕಾಣಿಸುತ್ತದೆ. ಮೌನವೂ ಮಾತನಾಡುತ್ತದೆ. ಪ್ರತಿ ನೋಟವೂ ಒಂದು ಕಥೆ ಹೇಳುತ್ತದೆ. ದೃಶ್ಯಕ್ಕೆ ತದ್ವಿರುದ್ಧವಾದ ಹಿನ್ನೆಲೆ ಸಂಗೀತ ಪ್ರೇಕ್ಷಕನಿಂದ ಒಪ್ಪಿಗೆ ಪಡೆಯುತ್ತದೆ. ದೇವಿ ಮಹಾತ್ಮೆ ಯಕ್ಷಗಾನದ ಅಂಶವೊಂದನ್ನಿಟ್ಟುಕೊಂಡು ಪುರಾಣದ ನೆರಳಲ್ಲಿ ಪ್ರಸಕ್ತ ಬದುಕಿನ ವಾಸ್ತವವನ್ನು ಅದ್ಭುತವಾಗಿ ಹೆಣೆದು ‘ಗರುಡ ಗಮನ ವೃಷಭ ವಾಹನ’ದ ಕಥೆ ಕಟ್ಟಿದ್ದಾರೆ ನಿರ್ದೇಶಕ ರಾಜ್ ಬಿ.ಶೆಟ್ಟಿ.

ಮಂಗಳೂರಿನ ಮಂಗಳಾದೇವಿ ಪ್ರದೇಶ ಇಡೀ ಕಥೆ ನಡೆಯುವ ಸ್ಥಳ. ಮಂಗಳಾದೇವಿ, ಕದ್ರಿ ದೇವಸ್ಥಾನಗಳೂ ಇಲ್ಲಿ ಅಷ್ಟೇ ಮುಖ್ಯ. ಇದೇ ಪ್ರದೇಶದಲ್ಲಿನ ಮನೆಯೊಂದರ ಬಳಿ ಇರುವ ಪಾಳುಬಾವಿಯಲ್ಲಿ ಗೋಣಿಚೀಲದಲ್ಲಿ ಸಿಗುವ ಕತ್ತು ಸೀಳಿದ ಮಗುವಿನ ಅನಾಥ ಶವ ‘ಶಿವ’ನಾಗಿ ಬದುಕಿ, ಇದೇ ಮನೆಯ ಮುಗ್ಧ ಹುಡುಗ ‘ಹರಿ’ಯ ಜೊತೆಗೂಡಿ ಅಣ್ಣ–ತಮ್ಮರಂತೆ ಬೆಳೆಯುತ್ತಾರೆ. ಯಾರೀ ಶಿವ ಎನ್ನುವುದಕ್ಕೊಂದು ಕಟ್ಟುಕಥೆ. ಕಟ್ಟುಕಥೆಯ ಸುಳಿಯಲ್ಲಿ ಮೌನವಾಗೇ ಬೆಳೆದ ಶಿವ ಯುವಕನಾದ ಮೇಲೆ ಸ್ಫೋಟಿಸುತ್ತಾನೆ. ಹರಿಗೆ ರೌಡಿಶೀಟರ್ ಒಬ್ಬ ಗನ್ ತೋರಿಸಿ ಬೆದರಿಸಿದ್ದಕ್ಕೆ ರೊಚ್ಚಿಗೆದ್ದು ಆತನನ್ನು ಚಚ್ಚುತ್ತಾನೆ ಶಿವ. ಮೂರು ಜನರಿದ್ದ ಗ್ಯಾಂಗ್ ಆರಾಗುತ್ತದೆ. ಬರುತ್ತಾ ಈ ಸಂಖ್ಯೆಯೂ ಇಳಿಯುತ್ತದೆ. ಖ್ಯಾತಿಯೂ ಹೆಚ್ಚುತ್ತದೆ. ಕೊಲೆಯೋ, ಅಪರಾಧವೋ ಮಾಡಿ ಕದ್ರಿಯಲ್ಲಿ ಕಲಶ ಸ್ನಾನ ಮಾಡಿ ಶುದ್ಧವಾಗುವ ‘ಹರಿ’ಗೂ, ತಾನು ಕೊಂದ ವ್ಯಕ್ತಿಯ ಚಪ್ಪಲಿ ಹಾಕಿಕೊಂಡು ತನ್ನ ‘ಸಿಗ್ನೇಚರ್ ಮಾರ್ಕ್’ ಬಿಡುವ ‘ಶಿವ’ನ ನಡುವೆ ಹುಟ್ಟಿಕೊಳ್ಳುವ ತಪ್ಪು ತಿಳಿವಳಿಕೆ ಮುಂದಿನ ಕಥೆಯನ್ನು ಕೊಂಡೊಯ್ಯುತ್ತದೆ. ‘ಬೇಕೆಂದೇ ಕೊಲೆ ಮಾಡಿಲ್ಲ, ನಮ್ಮ ಉಳಿವಿವಾಗಿ ಕೊಲೆ ಮಾಡಿದೆವು’ ಎನ್ನುವ ಡೈಲಾಗ್ ಸಿನಿಮಾದ ಸತ್ವ ಹೇಳುತ್ತದೆ. ಈ ರೌಡಿ ಲೋಕದ ಕಥೆ ಹೇಳುವ ಸಬ್ ಇನ್‌ಸ್ಪೆಕ್ಟರ್ ಪಾತ್ರದಲ್ಲಿ ಗೋಪಾಲಕೃಷ್ಣ ದೇಶಪಾಂಡೆ ಜೀವಿಸಿದ್ದಾರೆ.



ರಾಜ್ ಬಿ. ಶೆಟ್ಟಿ ಹಾಗೂ ರಿಷಬ್ ಶೆಟ್ಟಿ

‘ಒಂದು ಮೊಟ್ಟೆಯ ಕಥೆ’ಯ ಮೂಲಕ ನಿರ್ದೇಶಕರಾಗಿ ಚಂದನವನ ಪ್ರವೇಶಿಸಿದ್ದ ರಾಜ್, ಈ ಚಿತ್ರದ ಮುಖಾಂತರ ತಮ್ಮೊಳಗಿನ ನಿರ್ದೇಶನದ ಸಾಮರ್ಥ್ಯವನ್ನು ಕನ್ನಡ ಸಿನಿಮಾಗೆ ತೋರಿಸಿದ್ದಾರೆ. ರಾಜ್ ಅವರು ಜೀವ ತುಂಬಿದ ‘ಶಿವ’ನಿಗೆ ಮಾತು ಕಮ್ಮಿ, ಆದರೆ ದೇಹದ ಹಾವಭಾವವೇ ದೃಶ್ಯ ಕಟ್ಟಿಕೊಡುತ್ತದೆ. ಮಂಗಳಾದೇವಿ ದೇವಸ್ಥಾನದೆದುರಿನ ‘ಶಿವ’ ತಾಂಡವ ಕಣ್ಣಲ್ಲಿ ಉಳಿಯುತ್ತದೆ.

ಮುಗ್ಧ ‘ಹರಿ’ಯಾಗಿ ಕಾಣಿಸಿಕೊಂಡ ರಿಷಬ್ ಶೆಟ್ಟಿ, ಏಕಾಏಕಿ ಗ್ಯಾಂಗ್ ಲೀಡರ್ ಆದಾಗ ಒಂದಿಷ್ಟು ಪ್ರಶ್ನೆ ಮೂಡುತ್ತದೆ. ಆದರೆ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಂಡ ಹರಿಯನ್ನೂ ಜನ ಮೆಚ್ಚಿದ್ದಾರೆ. ಹರಿ–ಶಿವನ ಬಾಲ್ಯ, ಯೌವನಕ್ಕೆ ಜೀವ ತುಂಬಿದ ಹರ್ಷದೀಪ್, ಚಿಂತನ್ ಹಾಗೂ ಯಶ್ವಿನ್ ನೋಟ, ಮೌನ ಮನಸ್ಸಿನಾಳದಲ್ಲಿ ಉಳಿಯುತ್ತದೆ. ತುಳು ರಂಗಭೂಮಿಯ ದೀಪಕ್ ರೈ ಪಾಣಾಜೆ ತಾವು ಹಾಸ್ಯಕ್ಕಷ್ಟೇ ಸೀಮಿತವಲ್ಲ ಎಂದು ಸಾಬೀತುಪಡಿಸಿದ್ದಾರೆ. ಚಿತ್ರದಲ್ಲಿ ‘ಯಮಹ ಆರ್‌ಎಕ್ಸ್ 100’ ಕೂಡಾ ತನ್ನ ಪಾತ್ರವನ್ನು ನಿಭಾಯಿಸಿದ ರೀತಿ ಕಣ್ಣಿಗೆ ಕಾಣದಿದ್ದರೂ ಕಿವಿಯಲ್ಲಿ ಗುನುಗುನಿಸುತ್ತದೆ. ಸಂಗೀತ ನಿರ್ದೇಶಕ ಮಿಧುನ್ ಮುಕುಂದನ್ ಹಲವು ದೃಶ್ಯಕ್ಕೆ ನಿರ್ದೇಶಕರಾಗಿದ್ದಾರೆ. ಹುಲಿವೇಷ ಕಾಲು ಕುಣಿಸುತ್ತದೆ, ಅದರೊಳಗಿನ ರಾಜಕೀಯವನ್ನೂ ತೆಳ್ಳನೆ ತೋರಿಸುತ್ತದೆ.

‘ಸಾವು’ ಮತ್ತು ‘ಬೇವರ್ಸಿ’ ಎನ್ನುವ ಎರಡು ಪದವನ್ನು ಕೆಟ್ಟ ಭಾಷೆ ಎಂದು ಪರಿಗಣಿಸದೆ ಕರಾವಳಿಯವರ ಭಾವನೆ ಎಂದು ಭಾವಿಸಿದರೆ, ‘ಎ’ ಪ್ರಮಾಣ ಪತ್ರ ನೀಡಿದ್ದೇಕೆ ಎಂಬ ಪ್ರಶ್ನೆ ಮೂಡುತ್ತದೆ. ಕೊನೆಯಲ್ಲಿ ಮೌನವಾಗೇ ಹೇಳಿರುವ ಸಂದೇಶವನ್ನು ನೋಡಲು ಮಂಗಳಾ–ದೇವಿಗೊಮ್ಮೆ ಭೇಟಿ ನೀಡಿ. ಒಟ್ಟಿನಲ್ಲಿ ಗಂಜಿಗೆ ಉಪ್ಪೂ ಇದೆ..ಜೊತೆಗೆ ರುಚಿ ಹೆಚ್ಚಿಸಲು ಉಪ್ಪಿನಕಾಯಿ, ಎಟ್ಟಿ ಚಟ್ನಿಯೂ ಇದೆ.

ಅಭಿಲಾಷ್ ಪಿ.ಎಸ್.

> **ನಾವು ನೋಡಿದ ಸಿನಿಮಾ**
> **ಗರುಡ ಗಮನ ವೃಷಭ ವಾಹನ**
> - ನಿರ್ಮಾಣ: ಪರಂವಃ ಪಿಕ್ಚರ್ಸ್
> - ನಿರ್ದೇಶನ: ರಾಜ್ ಬಿ. ಶೆಟ್ಟಿ
> - ಸಂಗೀತ ನಿರ್ದೇಶನ: ಮಿಥುನ್ ಮುಕುಂದನ್
> - ತಾರಾಗಣ: ರಾಜ್ ಬಿ. ಶೆಟ್ಟಿ, ರಿಷಬ್ ಶೆಟ್ಟಿ, ಗೋಪಾಲಕೃಷ್ಣ ದೇಶಪಾಂಡೆ, ದೀಪಕ್ ರೈ ಪಾಣಾಜೆ

ಖಿನ್ನತೆ, ಮಾನಸಿಕ ಸಮಸ್ಯೆಗಳಿಗೆ ನಿಮ್ಹಾನ್ಸ್ ಸಂಸ್ಥೆಗೆ 6 ಲಕ್ಷ ಮಂದಿ ಕರೆ

ಮನೋವ್ಯಾಧಿ ಉಲ್ಬಣ: ಕೈಗೆಟುಕದ ಚಿಕಿತ್ಸೆ

• ವರುಣ ಹೆಗಡೆ

ಬೆಂಗಳೂರು: ಕೋವಿಡ್ ಕಾಣಿಸಿಕೊಂಡ ಬಳಿಕ ಮನೋರೋಗಗಳಿಂದ ಬಳಲುವವರ ಸಂಖ್ಯೆ ಹೆಚ್ಚಳವಾಗಿದೆ. ವಿವಿಧ ಮಾನಸಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) ಸಹಾಯವಾಣಿಗೆ ಈವರೆಗೆ 6 ಲಕ್ಷ ಮಂದಿ ಕರೆ ಮಾಡಿದ್ದಾರೆ.

ಕಳೆದ ವರ್ಷ ಮಾರ್ಚ್ ತಿಂಗಳಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ಸಂಸ್ಥೆಯು ಸಹಾಯವಾಣಿ ಪ್ರಾರಂಭಿಸಿತ್ತು. ಆರೋಗ್ಯ ಇಲಾಖೆಯ ಮಾನಸಿಕ ಆರೋಗ್ಯ ವಿಭಾಗವು ಈವರೆಗೆ ಕೋವಿಡ್ ಪೀಡಿತರು ಸೇರಿದಂತೆ 23.90 ಲಕ್ಷಕ್ಕೂ ಅಧಿಕ ಮಂದಿಯನ್ನು ಸಂಪರ್ಕಿಸಿ, ಸಲಹೆ–ಸೂಚನೆಗಳನ್ನು ನೀಡಿದೆ. ವೈದ್ಯರು, ಕಾರ್ಮಿಕರಿಗೆ ಕೂಡ ಮಾನಸಿಕ ಸಮಸ್ಯೆಗಳಿಗೆ ಸಂಬಂಧಿಸಿ ಕೌನ್ಸೆಲಿಂಗ್ ನಡೆಸಲಾಗಿದೆ. 25ರಿಂದ 50 ವರ್ಷದೊಳಗಿನವರು ಹೆಚ್ಚಾಗಿ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವುದು ಆಪ್ತ ಸಮಾಲೋಚನಾ ಕರೆಗಳಿಂದ ದೃಢಪಟ್ಟಿದೆ.

ಕೊರೊನಾ ಸೋಂಕಿತರಾದವರಲ್ಲಿ ಆತ್ಮಹತ್ಯೆ ಮಾಡಿಕೊಂಡ ಉದಾಹರಣೆಗಳೂ ಸಾಕಷ್ಟಿವೆ.

ಕೋವಿಡ್ ಕಾಣಿಸಿಕೊಂಡ ನಂತರ ಜೀವನವಿಧಾನ ಹಾಗೂ ಕಾರ್ಯಕ್ಷೇತ್ರದಲ್ಲಿನ ವಾತಾವರಣ ಬದಲಾಗಿದೆ. ಇದಕ್ಕೆ ಹೊಂದಿಕೊಳ್ಳಲಾಗದ ಕೆಲವರು ಮನೋವ್ಯಾಧಿಗೆ ಒಳಪಡುತ್ತಿದ್ದಾರೆ. ಜಿಲ್ಲಾಮಟ್ಟದಲ್ಲಿ ಸರ್ಕಾರಿ ಆಪ್ತ ಸಮಾಲೋಚನಾ ಕೇಂದ್ರಗಳು ಇರದಿರುವುದರಿಂದ ನಿಮ್ಹಾನ್ಸ್‌ಗೆ ಬರುವ ಹೊರರೋಗಿಗಳ ಸಂಖ್ಯೆ ಹೆಚ್ಚಳವಾಗಿದೆ.

ಕೆಲಸದ ಸ್ವರೂಪದಲ್ಲಿ ಬದಲಾವಣೆ, ಆರ್ಥಿಕ ಸಂಕಷ್ಟ, ಮನೆಯಲ್ಲಿ ಹೊಂದಾಣಿಕೆ ಕೊರತೆ ಸೇರಿದಂತೆ ವಿವಿಧ ಕಾರಣಗಳಿಂದ ಮನೋರೋಗಕ್ಕೆ ಒಳಪಡುವವರ ಸಂಖ್ಯೆ ಹೆಚ್ಚಳವಾಗಿದೆ

ಡಾ. ಶಶಿಧರ್ ಎಚ್.ಎನ್.,
ಸ್ಥಾನಿಕ ವೈದ್ಯಾಧಿಕಾರಿ (ಆರ್‌ಎಂಒ), ನಿಮ್ಹಾನ್ಸ್

ಪ್ರತಿನಿತ್ಯ ಸಾವಿರಕ್ಕೂ ಅಧಿಕ ಸಂಖ್ಯೆಯಲ್ಲಿ ಹೊರರೋಗಿಗಳು ವಿವಿಧೆಡೆಯಿಂದ ಬರುತ್ತಿದ್ದಾರೆ.



15 ಜಿಲ್ಲೆಗಳಲ್ಲಿ ಕೇಂದ್ರ: ರಾಜ್ಯದ ಜಿಲ್ಲಾ ಆಸ್ಪತ್ರೆಗಳಲ್ಲಿ ತಲಾ ಒಬ್ಬರು ಮನೋವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ. ಹೀಗಾಗಿ, ರೋಗಿಗಳ ನಿರ್ವಹಣೆ ಕಷ್ಟಸಾಧ್ಯವಾಗಿದೆ. ಮಾನಸಿಕ ರೋಗಿಗಳಿಗೆ ಚಿಕಿತ್ಸೆ ನೀಡಿ, ಪುನರ್ವಸತಿ ಕಲ್ಪಿಸಲು ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ರಾಜ್ಯ ಸರ್ಕಾರವು ಬೆಂಗಳೂರು, ಚಾಮರಾಜನಗರ ಸೇರಿದಂತೆ 15 ಜಿಲ್ಲೆಗಳಲ್ಲಿ ‘ಮಾನಸಧಾರಾ ಕೇಂದ್ರ’ಗಳನ್ನು ಪ್ರಾರಂಭಿಸಿದೆ. ಆದರೆ, ಈ ಕೇಂದ್ರಗಳು ಮೂಲಸೌಕರ್ಯದ ಕೊರತೆಯಿಂದಾಗಿ ನಿರೀಕ್ಷಿತ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿಲ್ಲ.

ಮನೋಚೈತನ್ಯ (ಮಂಗಳವಾರದ ಕ್ಲಿನಿಕ್) ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಆಸ್ಪತ್ರೆ, ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಖಾಸಗಿ ಆಸ್ಪತ್ರೆಗಳ ಮನೋವೈದ್ಯರು ಆಯ್ದ ಮಂಗಳವಾರದಂದು ತಾಲ್ಲೂಕು ಆಸ್ಪತ್ರೆಗಳಿಗೆ ಭೇಟಿ ನೀಡಿ, ಮನೋರೋಗಿಗಳನ್ನು ಗುರುತಿಸಿ ಚಿಕಿತ್ಸೆ ನೀಡುತ್ತಾರೆ. ಕೋವಿಡ್ ಕಾಣಿಸಿಕೊಂಡ ಬಳಿಕ ಕೆಲ ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮ ಸಮರ್ಪಕವಾಗಿ ನಡೆಯುತ್ತಿಲ್ಲ.

ಕಮರಿದ ಬದುಕು

ಸಾಮೂಹಿಕ ಆತ್ಮಹತ್ಯೆ: ಇತ್ತೀಚಿನ ಕೆಲವು ಪ್ರಕರಣ

ಬೆಂಗಳೂರು

ಸೆಪ್ಟೆಂಬರ್ 17, 2021: ಬ್ಯಾಡರಹಳ್ಳಿ ಬಳಿಯ ತಿಗಳರಪಾಳ್ಯದ ಮನೆಯಲ್ಲಿ ಭಾರತಿ (51), ಅವರ ಮಕ್ಕಳಾದ ಸಿಂಚನಾ (34), ಸಿಂಧೂರಾಣಿ (33) ಹಾಗೂ ಮಧುಸಾಗರ್ (25) ಆತ್ಮಹತ್ಯೆ ಮಾಡಿಕೊಂಡಿದ್ದರು. ತಮ್ಮ ಜೊತೆಯಲ್ಲಿದ್ದ ಒಂಬತ್ತು ತಿಂಗಳ ಕೂಸನ್ನೂ ಕೊಂದಿದ್ದರು.

ಅಕ್ಟೋಬರ್, 2021: ಕೋವಿಡ್‌ನಿಂದ ಮೃತಪಟ್ಟ, ಬಿಎಂಟಿಸಿ ಚಾಲಕ ಮತ್ತು ನಿರ್ವಾಹಕ ದಿವಂಗತ ಪ್ರಸನ್ನಕುಮಾರ್ ಅವರ ಪತ್ನಿ ವಸಂತಾ (40), ಹಾಗೂ ಇಬ್ಬರು ಮಕ್ಕಳೊಂದಿಗೆ (ಯಶವಂತ ಮತ್ತು ನಿಶ್ಚಿತಾ) ಆತ್ಮಹತ್ಯೆ ಮಾಡಿಕೊಂಡಿದ್ದರು. ಪತಿಗೆ ಬರಬೇಕಾಗಿದ್ದ ಪರಿಹಾರ ಕೈಗೆ ಬರದೇ ನೊಂದಿದ್ದರು.

ಕೋಲಾರ

ನವೆಂಬರ್ 7, 2021: ಕೋಲಾರದ ಕಾರಂಜಿಕಟ್ಟೆಯಲ್ಲಿ ಒಂದೇ ಕುಟುಂಬದ ಐವರರಿಂದ ಆತ್ಮಹತ್ಯೆ. ಪುಷ್ಪಾ, ಅವರ ತಂದೆ ಮುನಿಯಪ್ಪ, ತಾಯಿ ನಾರಾಯಣಮ್ಮ, ಪತಿ ಬಾಬು ಹಾಗೂ ಮಗಳು ಗಂಗೋತ್ರಿ ಆತ್ಮಹತ್ಯೆ ಮಾಡಿಕೊಂಡರು. ಕುಟುಂಬ ಆರ್ಥಿಕವಾಗಿ ಸದೃಢವಾಗಿತ್ತು. ಆದರೆ ನವಜಾತ ಶಿಶುವಿನ ಅಪಹರಣಕ್ಕೆ ಸಂಬಂಧಿಸಿ ಪೊಲೀಸ್ ವಿಚಾರಣೆ ನಡೆದ ಕಾರಣ ಮರ್ಯಾದೆಗೆ ಅಂಜಿ ಕುಟುಂಬ ಆತ್ಮಹತ್ಯೆ ಮಾಡಿಕೊಂಡಿತು.

ದಾವಣಗೆರೆ

ಸೆಪ್ಟೆಂಬರ್ 19, 2021: ದಾವಣಗೆರೆ ನಗರದ ಶೇಖರಪ್ಪ ನಗರದಲ್ಲಿ, ಲಾರಿ ಚಾಲಕರಾಗಿದ್ದ ಕೃಷ್ಣ ನಾಯ್ಕ (44), ಕಾಯಿಲೆ ಪೀಡಿತ ಪತ್ನಿ ಸುಮಾ (32) ಮತ್ತು ಏಳು ವರ್ಷದ ಪುತ್ರ ಧ್ರುವನಿಗೆ ವಿಷ ನೀಡಿ, ಬಳಿಕ ತಾವು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ಜುಲೈ 3, 2021: ಹರಿಹರ ತಾಲ್ಲೂಕಿನ ಬನ್ನಿಕೋಡು ಗ್ರಾಮದಲ್ಲಿ ಪೊಲೀಸ್ ಕಾನ್‌ಸ್ಟೆಬಲ್ ಮಂಜಪ್ಪ ಅವರ ಪತ್ನಿ ಚಂದ್ರಮ್ಮ (26), ಮೂರು ವರ್ಷದ ಪುತ್ರಿ ಹರ್ಷಿತಾಳಿಗೆ ನೇಣು ಬಿಗಿದು, ಬಳಿಕ ತಾವೂ ನೇಣು ಹಾಕಿಕೊಂಡಿದ್ದರು.

ಮಾರ್ಚ್ 16, 2021: ಚನ್ನಗಿರಿ ತಾಲ್ಲೂಕಿನ ದೊಡ್ಡೇರಿಕಟ್ಟೆ ಗ್ರಾಮದಲ್ಲಿ ಶ್ವೇತಾ (28) ಅನಾರೋಗ್ಯದಿಂದ ಬೇಸತ್ತು ತಮ್ಮ 11 ತಿಂಗಳ ಮಗಳಿಗೆ ನೇಣು ಬಿಗಿದು, ಬಳಿಕ ತಾವೂ ನೇಣು ಹಾಕಿಕೊಂಡಿದ್ದರು.



ಜನವರಿ 21, 2021: ಕುಟುಂಬದಲ್ಲಿ ಮನಸ್ತಾಪದಿಂದ ಚನ್ನಗಿರಿ ತಾಲ್ಲೂಕಿನ ಮರವಂಜಿ ಗ್ರಾಮದ ನಿವೃತ್ತ ಶಿಕ್ಷಕ ರಾಜಪ್ಪ ಅವರ ಪತ್ನಿ ಕಮಲಮ್ಮ (50) ಅವರು ಪುತ್ರಿ ಶ್ರುತಿ (24) ಹಾಗೂ ಪುತ್ರ ಸಂಜಯ್ (20) ಜೊತೆಗೆ ಸೂಳೆಕೆರೆಯ ಭದ್ರಾ ನಾಲೆಗೆ ಜಿಗಿದು ಪ್ರಾಣ ಕಳೆದುಕೊಂಡಿದ್ದರು.

ಅಕ್ಟೋಬರ್ 1, 2020: ಪತಿಯೊಂದಿಗೆ ಮನಸ್ತಾಪದ ಕಾರಣ ದಾವಣಗೆರೆ ಜಯನಗರದ ಶಿಕ್ಷಕಿ ಶ್ರೀದೇವಿ ಅವರು ತಮ್ಮ ಮಕ್ಕಳಾದ ಹಂಸಿಕಾ (12) ಹಾಗೂ ನೂತನ (9) ಅವರನ್ನು ವೇಲಿನಿಂದ ಸೊಂಟಕ್ಕೆ ಬಿಗಿದುಕೊಂಡು ಕಾಲುವೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಶಿವಮೊಗ್ಗ

ಸೆ. 7, 2021: ಕೊರೊನಾ ಸಂಕಷ್ಟದ ವೇಳೆ ಪತಿ ಮಾಡಿದ ಸಾಲ ತೀರಿಸುವಂತೆ ಮನೆ ಬಳಿ ಬಂದು ಹಣ ಕೇಳುವವರ ಸಂಖ್ಯೆ ಹೆಚ್ಚಾದ ಕಾರಣ ಭದ್ರಾವತಿ ಹೊಸಮನೆ ಸುಭಾಷ್ ನಗರದ ಧನಶೇಖರ್ ಪತ್ನಿ ಸಂಗೀತಾ (32), ಮಗಳು ಮಧುಶ್ರೀ (11) ಜೊತೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ಆಗಸ್ಟ್ 2021: ಶಿವಮೊಗ್ಗ ಆಲ್ಕೊಳ ಸಮೀಪದ ಮಂಗಳಮಂದಿರ ರಸ್ತೆಯ ಉದ್ಯಮಿ ರಾಮದಾಸ್ (58) ಮತ್ತು ಅವರ ಪತ್ನಿ ಅನುಪಮಾ (55) ಆತ್ಮಹತ್ಯೆ. ಮಾನಸಿಕ ಖಿನ್ನತೆ ಕಾರಣ ಎಂಬುದು ಸಂಬಂಧಿಕರ ಮಾಹಿತಿ.

ಚಾಮರಾಜನಗರ

2020, ಜೂನ್ 1: ಚಾಮರಾಜನಗರ ತಾಲ್ಲೂಕಿನ ಎಚ್.ಮೂಕಹಳ್ಳಿಯ ರೈತ ಮಹಾದೇವಪ್ಪ (46), ಪತ್ನಿ ಮಂಗಳಮ್ಮ (40), ಮಕ್ಕಳಾದ ಜ್ಯೋತಿ (16), ಶ್ರುತಿ (11) ಜೊತೆ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು. ಮಹಾದೇವಪ್ಪ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ 20 ದಿನಗಳ ಹಿಂದೆಯಷ್ಟೇ ಕೋವಿಡ್‌ನಿಂದ ಚೇತರಿಸಿಕೊಂಡಿದ್ದರು. ಸ್ಥಳೀಯರ ಪ್ರಕಾರ, ಆ ಕುಟುಂಬದವರು ಮಾನಸಿಕವಾಗಿ ನೊಂದಿದ್ದರು.

ಮಂಗಳೂರು

ಆಗಸ್ಟ್ 17, 2021: ನಗರದ ಚಿತ್ರಾಪುರದ ಫ್ಲ್ಯಾಟ್‌ನಲ್ಲಿ ರಮೇಶ್ ಸುವರ್ಣ (45) ಮತ್ತು ಗುಣವತಿ ಸುವರ್ಣ (35) ಆತ್ಮಹತ್ಯೆ. ಕೋವಿಡ್–19 ಬಂದಿದೆ ಎಂದು ಭಯಪಟ್ಟು ಆತ್ಮಹತ್ಯೆ. ಆದರೆ ಇಬ್ಬರ ವರದಿಯೂ ನೆಗೆಟಿವ್ ಆಗಿತ್ತು.

ಅಕ್ಟೋಬರ್ 18, 2021: ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕಿನ ಬಡಗನ್ನೂರು ಗ್ರಾಮದ ಪಾದೆಕರ್ಯದ ಸುಬ್ರಹ್ಮಣ್ಯ ಭಟ್ (84), ಶಾರದಾ ಭಟ್ (78) ದಂಪತಿ ಆತ್ಮಹತ್ಯೆ. ಅನಾರೋಗ್ಯದಿಂದ ದಂಪತಿ ಮನನೊಂದಿದ್ದರು.

ಮಾಹಿತಿ: ವಿನಾಯಕ ಭಟ್, ಸಂತೋಷ ಜಿಗಳಿಕೊಪ್ಪ

ಮಾನಸಿಕ ದುರ್ಬಲರಿಗೆ ಮಾಧ್ಯಮದ ಪ್ರಚೋದನೆ

• ಪ್ರೀತಿ ಶ್ಯಾನಭಾಗ್

ಏಕವ್ಯಕ್ತಿಯ ಆತ್ಮಹತ್ಯೆಗೂ, ಇಡೀ ಕುಟುಂಬ ಅಥವಾ ಹೆಚ್ಚು ಜನರ ಆತ್ಮಹತ್ಯೆಗೂ ವ್ಯತ್ಯಾಸವಿದೆ. ಒಬ್ಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳಲು ಶೇ 80–90ರಷ್ಟು ಮಾನಸಿಕ ತೊಂದರೆ, ಖಿನ್ನತೆ, ನಿಯಂತ್ರಣ ಸಾಧಿಸಲಾಗದ ಸಮಸ್ಯೆ ಕಾರಣಗಳಾಗಿರುತ್ತವೆ. ಬೆಳೆಯುತ್ತಿರುವ ಯುವಕರಲ್ಲಿ ಇಂತಹ ಲಕ್ಷಣಗಳು ಇರುತ್ತವೆ. ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಇಂತಹವರಲ್ಲಿ ಹೆಚ್ಚಾಗಿ ಇರುವುದಿಲ್ಲ. ಹೀಗಾಗಿ ಬಾಹ್ಯ ಪ್ರೇರಣಾ ಶಕ್ತಿಗಳು ಮನೋಬಲವನ್ನು ಕುಗ್ಗಿಸುತ್ತವೆ. ಒಂದೇ ಕುಟುಂಬದ ಅನೇಕರು ಆತ್ಮಹತ್ಯೆ ಮಾಡಿಕೊಳ್ಳಲು ಇರುವ ಕಾರಣವೇ ಬೇರೆ.

ಕುಟುಂಬದಲ್ಲಿ ಜವಾಬ್ದಾರಿ ಹೊತ್ತವರು ಅಥವಾ ನಿರ್ಧಾರ ತೆಗೆದುಕೊಳ್ಳುವವರು ಕೆಲವೊಮ್ಮೆ ಮಾನಸಿಕ ಸಮಸ್ಯೆಯಿಂದ ಬಳಲುತ್ತಿರುತ್ತಾರೆ. ಇದರಿಂದ ಮಹಿಳೆಯರು, ಮಕ್ಕಳು ಕೂಡ ಸಮಸ್ಯೆ ಅನುಭವಿಸಬೇಕಾಗುತ್ತದೆ. ಇದನ್ನು ಮಾನಸಿಕ ವಿಷಯದ ಪರಿಭಾಷೆಯಲ್ಲಿ ‘ಸ್ಕ್ಯೂಯಿಂಗ್’ ಎನ್ನುತ್ತೇವೆ. ನೆಟ್‌ಫ್ಲಿಕ್ಸ್‌ನಲ್ಲಿ ‘ಬುರಾರಿ ಸುಸೈಡ್ ಸ್ಕ್ವಾಡ್’ ಎಂಬ ವೆಬ್ ಸರಣಿ ಬಂದಿತ್ತು. ಅದರಲ್ಲಿ ಕಾಣುವ ಮಾನಸಿಕ ಒತ್ತಡವೇ ಕುಟುಂಬದ ಅನೇಕರು ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಾಗಿರುತ್ತದೆ.



ಹಿಂದೊಮ್ಮೆ ರೈತರ ಸಾಲು ಸಾಲು ಆತ್ಮಹತ್ಯೆ ಪ್ರಕರಣಗಳನ್ನು ಕಂಡಿದ್ದೆವು. ಕೋವಿಡ್ ನಂತರ ಅದು ಅಂತಹುದೇ ಪರಿಸ್ಥಿತಿಯನ್ನು ಅನೇಕ ಕುಟುಂಬಗಳಲ್ಲಿ ಸೃಷ್ಟಿಸಿತು. ‘ಮರಣವೇ ಸುಲಭದ ದಾರಿ’ ಎನ್ನುವ ಮನೆಯೊಡೆಯ ಅಥವಾ ಮನೆಯೊಡತಿಯ ತೀರ್ಮಾನವೇ ಇದರ ಮೂಲ. ಸಾಮಾಜಿಕ ಜಾಲತಾಣಗಳು ಅಥವಾ ಟಿ.ವಿ. ಕಾರ್ಯಕ್ರಮಗಳು ಇಂತಹ ಒತ್ತಡದಲ್ಲಿ ಇರುವವರ ಪಾಲಿಗೆ ಪ್ರೇರೇಪಣೆ ಆಗುವ ಸಾಧ್ಯತೆ ಇದ್ದೇ ಇದೆ. ಅವರದ್ದೇ ಸಮಸ್ಯೆ ಇರುವಾಗ ಸಾಲು ಸಾಲು ಸಮಸ್ಯೆಗಳನ್ನೇ ಬಿಂಬಿಸುವ ಕಾರ್ಯಕ್ರಮಗಳು, ಸುದ್ದಿ ಪ್ರಸಾರವು ವ್ಯತಿರಿಕ್ತ ಪರಿಣಾಮ ಬೀರುತ್ತದೆ.

ಕೋವಿಡ್ ಕಾಲದಲ್ಲಿ ಶೇ 30ರಷ್ಟು ಜನ ಸಾವಿನ ಆತಂಕದಿಂದ ಮೃತಪಟ್ಟರು. ಎಲ್ಲರೂ ಆಗ ಮನೆಯಲ್ಲೇ ಕುಳಿತಿದ್ದರಿಂದ ಸತತವಾಗಿ ಚಿಂತಾಕ್ರಾಂತವಾಗುವ ಸುದ್ದಿ ನೋಡುತ್ತಿದ್ದರು. ಮೊದಲೇ ಆರ್ಥಿಕವಾಗಿಯೋ ಸಾಮಾಜಿಕವಾಗಿಯೋ ಬಳಲುತ್ತಿರುವವರ ಮನಸ್ಸು ಇಂತಹ ಕಾರ್ಯಕ್ರಮಗಳನ್ನು ಸಹಜವಾಗಿ ಸ್ವೀಕರಿಸಲು ಸಾಧ್ಯವಿಲ್ಲ. ಹೀಗಾಗಿ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ. ವಾಹಿನಿಗಳು ಅಥವಾ ಸಾಮಾಜಿಕ ಜಾಲತಾಣಗಳು ಸಮಸ್ಯೆಗಳನ್ನು ತೋರಿಸುವುದರ ಜತೆಗೆ ಪರಿಹಾರವನ್ನೂ ಬಿತ್ತರಿಸಿದರೆ ಮನೋದೌರ್ಬಲ್ಯ ಇರುವವರೂ ಸುಧಾರಣೆ ಕಾಣಲು ಸಾಧ್ಯ. ಅದು ಆಗಬೇಕಿದೆ.

(ಲೇಖಕಿ- ಮನೋವೈದ್ಯೆ, ಶಿವಮೊಗ್ಗ)

‘ಬಲಾಢ್ಯರ ಪರವಿರುವ ಪೊಲೀಸರನ್ನು ಪ್ರಶ್ನಿಸಿ’

ಬಲಾಢ್ಯರ ಪರವಾಗಿ ಪೊಲೀಸರು ನಿಂತಿದ್ದ ನೂರಾರು ಪ್ರಕರಣಗಳು ನಮ್ಮ ಕಣ್ಮುಂದಿವೆ. ಬಲಾಢ್ಯರು ಇರುವವರೆಗೂ ಈ ರೀತಿಯ ಪ್ರಕರಣಗಳು ಕಾಣಸಿಗುತ್ತವೆ. ಇಂಥ ಪೊಲೀಸರ ವರ್ತನೆಯನ್ನು ಸಾರ್ವಜನಿಕರು ಪ್ರಶ್ನಿಸುವಂತಾಗಬೇಕು. ಅವಾಗಲೇ ನೊಂದವರಿಗೆ ನ್ಯಾಯ ಸಿಗುತ್ತದೆ.

ಆರೋಪಿ ಸ್ಥಾನದಲ್ಲಿರುವ ಬಲಾಢ್ಯರ ಪರ ನಿಲ್ಲುವ ಪೊಲೀಸರ ಬಗ್ಗೆ ಹಿರಿಯ ಅಧಿಕಾರಿಗಳಿಗೆ ದೂರು ನೀಡಬೇಕು. ಅವರು ಖಂಡಿತವಾಗಿಯೂ ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳುತ್ತಾರೆ. ಅವರಿಂದಲೂ ನ್ಯಾಯ ಸಿಗದಿದ್ದಾಗ, ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಲು ಅವಕಾಶವಿದೆ. ಇದಕ್ಕಾಗಿ ಉಚಿತ ಕಾನೂನು ನೆರವು ಸಹ ಲಭ್ಯವಿದೆ.

ಕೊಲೆ, ಸುಲಿಗೆ, ಕಳ್ಳತನ... ಇತರೆ ಕ್ರಿಮಿನಲ್ ಪ್ರಕರಣಗಳು ಮಾತ್ರ ಪೊಲೀಸರ ವ್ಯಾಪ್ತಿಗೆ ಬರುತ್ತದೆ. ಉಳಿದಂತೆ, ಸಿವಿಲ್ ವ್ಯಾಜ್ಯಗಳಿಗೆ ಆಯಾ ನ್ಯಾಯಾಲಯಗಳಲ್ಲಿ ಮೊಕದ್ದಮೆ ಹೂಡಬೇಕು. ಈ ಬಗ್ಗೆ ಜನರಿಗೆ ಜ್ಞಾನವಿರಬೇಕು.

ಸಿವಿಲ್ ವ್ಯಾಜ್ಯಗಳಲ್ಲಿ ನ್ಯಾಯಾಲಯಕ್ಕೆ ಹೋಗುವಂತೆ ಹೇಳಿ ದೂರುದಾರರನ್ನು ಪೊಲೀಸರು ಠಾಣೆಯಿಂದ ವಾಪಸು ಕಳುಹಿಸುತ್ತಾರೆ. ಇಷ್ಟಕ್ಕೇ, ಪೊಲೀಸರು ತಮ್ಮ ದೂರು ಸ್ವೀಕರಿಸಿಲ್ಲವೆಂದು ನೊಂದು ಆತ್ಮಹತ್ಯೆ ಮಾಡಿಕೊಳ್ಳುವುದು ಸರಿಯಲ್ಲ. ಸಿವಿಲ್ ವ್ಯಾಜ್ಯಗಳಲ್ಲಿ ತಮ್ಮ ಪರ ಕೆಲಸ ಮಾಡಲಿಲ್ಲವೆಂಬ ಕಾರಣಕ್ಕೆ ಕೆಲವರು ಸುಖಾಸುಮ್ಮನೇ ಪೊಲೀಸರ ವಿರುದ್ಧ ಆರೋಪ ಮಾಡುತ್ತಾರೆ.

ಸದ್ಯದ ಪರಿಸ್ಥಿತಿಯಲ್ಲಿ ಕ್ರಿಮಿನಲ್ ಜೊತೆಯಲ್ಲೇ ಶೇ 50ಕ್ಕಿಂತ ಹೆಚ್ಚು ಸಿವಿಲ್ ವ್ಯಾಜ್ಯಗಳು ಠಾಣೆಗೆ ಬರುತ್ತಿವೆ. ಇಂಥ ಸಂದರ್ಭದಲ್ಲಿ ಪೊಲೀಸರು ಸಂಯಮ ಕಳೆದುಕೊಳ್ಳಬಾರದು. ಜನರಿಗೆ ತಿಳಿವಳಿಕೆ ಮೂಡಿಸುವ ಕೆಲಸ ಮಾಡಬೇಕು. ಆತ್ಮಹತ್ಯೆಗೆ ಪ್ರಚೋದಿಸುವ ರೀತಿಯಲ್ಲಿ ವರ್ತಿಸಬಾರದು.

ಡಿ.ವಿ. ಗುರುಪ್ರಸಾದ್,
ರಾಜ್ಯ ಪೊಲೀಸ್ ಮಹಾನಿರ್ದೇಶಕ(ನಿವೃತ್ತ)

ಸರ್ಕಾರ, ಸಮಾಜದ ಸಂಘಟಿತ ಯತ್ನ ಅಗತ್ಯ

• ಪ್ರೊ. ಸೆಂಥಿಲ್ ಕುಮಾರ್ ರೆಡ್ಡಿ

ಕುಟುಂಬದ ಆತ್ಮಹತ್ಯೆ ಎಂಬ ಪದ ಬಳಕೆಯನ್ನು ಪ್ರತಿಕೆಗಳಲ್ಲಿ ನೋಡುತ್ತೇವೆ. ಆ ಪದ ಸರಿಯಲ್ಲ. ಕುಟುಂಬದಲ್ಲಿ ಒಬ್ಬರಿಗಿಂತ ಹೆಚ್ಚು ಸದಸ್ಯರು ಸತ್ತಾಗ ಕುಟುಂಬದ ‘ಆತ್ಮಹತ್ಯೆ’ ಎಂದು ವ್ಯಾಖ್ಯಾನಿಸಲಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ಸಾವಿನ ಬಗ್ಗೆಯೂ ಕೂಲಂಕಷ ತನಿಖೆ ಮತ್ತು ವೈದ್ಯಕೀಯ ಪರೀಕ್ಷೆಗಳು ಆಗಬೇಕು. ಆ ಬಳಿಕವೇ ನಿರ್ಧಾರಕ್ಕೆ ಬರಬೇಕಾಗುತ್ತದೆ. ಆತ್ಮಹತ್ಯೆ ಸಾರ್ವಜನಿಕ ಆರೋಗ್ಯದ ಸಮಸ್ಯೆ ಆಗಿದ್ದು, ಈ ಸಮಸ್ಯೆಯ ಪರಿಹಾರಕ್ಕೆ ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದಲೇ ಪರಿಹರಿಸಬೇಕು.

ಆತ್ಮಹತ್ಯೆ ಪ್ರಕರಣಗಳನ್ನು ತಡೆಯಲು ಸಮಾಜ, ಸೇವಾಸಂಸ್ಥೆಗಳು ಮತ್ತು ಕೌಟುಂಬಿಕ ನೆಲೆಯ ಸಂಘಟಿತ ಪ್ರಯತ್ನದ ಅಗತ್ಯವಿದೆ. ಆತ್ಮಹತ್ಯೆಗಳ ಬಹುಪಾಲು ಪ್ರಕರಣಗಳಲ್ಲಿ ಭಾವನಾತ್ಮಕ ಅಂಶಗಳೇ ಪ್ರೇರಣೆಯಾಗಿರುತ್ತವೆ. ಆರ್ಥಿಕ ಸಮಸ್ಯೆಯ ಜತೆ ಇತರ ಸಮಸ್ಯೆಗಳೂರ ಸೇರಿಕೊಂಡಾಗ ಸ್ವಯಂಹತ್ಯೆಯ ಕೃತ್ಯಗಳಿಗೆ ಶರಣಾಗುತ್ತಾರೆ. ಆದರೆ, ಸರ್ಕಾರ, ಸಮಾಜ ಮತ್ತು ಕುಟುಂಬ ಸಂಘಟಿತ ಪ್ರಯತ್ನ ಹಾಕಿದಾಗ ಇದನ್ನು ತಡೆಯಲು ಸಾಧ್ಯ.

ಆತ್ಮಹತ್ಯೆ ಪ್ರಕರಣಗಳನ್ನು ತಡೆಯಲು ವೃತ್ತಿಪರವಾಗಿ ತರಬೇತಿ ಪಡೆದ ವ್ಯಕ್ತಿಗಳ ತಂಡಗಳನ್ನು ರಚಿಸಬೇಕು ಮತ್ತು ಸಮುದಾಯದಲ್ಲಿ ಇದಕ್ಕೆ ಪೂರಕವಾಗಿ ನಿರಂತರ ಕಾರ್ಯಕ್ರಮಗಳನ್ನು ರೂಪಿಸಬೇಕು. ಆತ್ಮಹತ್ಯೆ ಮಾಡಿಕೊಳ್ಳಲು ಉದ್ದೇಶಿಸುವ ವ್ಯಕ್ತಿಗಳ ವರ್ತನೆಯಲ್ಲೇ ಅದರ ಸುಳಿವು ಸಿಗುತ್ತದೆ. ಅಂತಹ ವ್ಯಕ್ತಿಗಳನ್ನು ಪತ್ತೆ ಮಾಡಿ ಮನೋವೈಜ್ಞಾನಿಕವಾಗಿ ಶಮನಗೊಳಿಸುವ ಕೇಂದ್ರ ಅಥವಾ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದು ಮುಖ್ಯ. ಅವರಲ್ಲಿ ಆತ್ಮವಿಶ್ವಾಸ ವೃದ್ಧಿಸುವಂತೆ ಮಾಡಿ ನಿರಂತರ ಸಂಪರ್ಕ ಸಾಧಿಸಬೇಕು. ಸರ್ಕಾರವು ಆರೋಗ್ಯದ ಎಲ್ಲ ಹಂತಗಳಲ್ಲೂ ಮನೋಸಾಂತ್ವನ ನೀಡುವ ಕಾಯಂ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು.

ಆತ್ಮಹತ್ಯೆಯ ಮುನ್ಸೂಚನೆಗಳು, ಸಮಸ್ಯೆಯ ಅಂಶಗಳ ಬಗ್ಗೆ ಜನರಲ್ಲಿ ತಿಳಿವಳಿಕೆ ನೀಡುವುದೂ ಸೇರಿದಂತೆ ದೀರ್ಘಾವಧಿಯ ಕಾರ್ಯತಂತ್ರ ರೂಪಿಸುವುದು ಅಗತ್ಯ. ಕುಟುಂಬಗಳ ಆತ್ಮಹತ್ಯೆ ಪ್ರಕರಣಗಳಲ್ಲಿ ಒಬ್ಬ ಸದಸ್ಯ ಉಳಿದವರ ಆತ್ಮಹತ್ಯೆಗೆ ಪ್ರೇರೇಪಿಸುವುದು ಸಾಮಾನ್ಯ. ಎಲ್ಲರಲ್ಲೂ ಆತ್ಮಹತ್ಯೆ ಮಾಡಿಕೊಳ್ಳುವ ಭಾವನೆ ಉದಿಸುವುದಿಲ್ಲ. ಆರ್ಥಿಕ ಸಮಸ್ಯೆಯ ಕಾರಣವೊಂದೇ ಆತ್ಮಹತ್ಯೆಗೆ ಕಾರಣವಾಗುವುದಿಲ್ಲ. ಸಾಕಷ್ಟು ಬೇರೆ ಕಾರಣಗಳೂ ಸೇರಿಕೊಳ್ಳುತ್ತವೆ. ಸಂಕಷ್ಟಕ್ಕೆ ಸಿಲುಕಿದಾಗ ಇತರರ ಜತೆ ಮಾತನಾಡಿ ಆ ಸಮಸ್ಯೆಯಿಂದ ಹೊರಗೆ ಬರಲು ಪ್ರಯತ್ನಿಸಬೇಕು. ಇದಕ್ಕೆ ತಜ್ಞರ ನೆರವು ಪಡೆಯುವುದರಲ್ಲಿ ತಪ್ಪಿಲ್ಲ. ಆರ್ಥಿಕ ಮತ್ತು ಕಾನೂನಿನ ಸಮಸ್ಯೆಗಳು ಇದ್ದರೆ, ಸರ್ಕಾರ ಅಂತಹ ಸಮಸ್ಯೆಗಳಿಗೆ ಪರಿಹಾರ ನೀಡುವ ಕೆಲಸವನ್ನೂ ಮಾಡಬೇಕು.

(ಸೈಕಿಯಾಟ್ರಿ, ಅಕ್ಯೂಟ್ ಕೇರ್ ಸರ್ವಿಸ್ ವಿಭಾಗ ಮುಖ್ಯಸ್ಥ, ನಿಮ್ಹಾನ್ಸ್)

ಸತ್ತವರ ನೆರಳಿನ ಹುಡುಕಾಟ

ಒಂದನೇ ಪುಟದಿಂದ

ಇವು ಕೆಲವು ಉದಾಹರಣೆಗಳು. ಮಕ್ಕಳೊಂದಿಗೆ ತಾಯಿ ಆತ್ಮಹತ್ಯೆ ಮಾಡಿಕೊಳ್ಳುವ ಘಟನೆಗಳಂತೂ ಸರಣಿ ರೂಪದಲ್ಲಿ ನಡೆಯುತ್ತಲೇ ಇವೆ. ಕೋವಿಡ್‌ನಿಂದ ಗಂಡನನ್ನು ಕಳೆದುಕೊಂಡಿದ್ದ ಮಹಿಳೆಯೊಬ್ಬರು ಮಗುವನ್ನು ನದಿಗೆ ಎಸೆದು, ತಾನೂ ನೀರಿಗೆ ಧುಮುಕಿದ್ದರು. ಆರ್ಥಿಕ ಸಂಕಷ್ಟ ಎದುರಿಸಲಾಗದೆ ಆ ಮಹಿಳೆ ಆತ್ಮಹತ್ಯೆಯ ಹಾದಿ ತುಳಿದಿದ್ದರು ಎಂಬುದು ನಂತರ ಗೊತ್ತಾಯಿತು.

ಅಧ್ಯಯನ ವರದಿಗಳ ಪ್ರಕಾರ, 2019ರವರೆಗೂ ಕುಟುಂಬದ ಸದಸ್ಯರು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರಕರಣಗಳು ನೆರೆಯ ರಾಜ್ಯಗಳಲ್ಲಿ ಹೆಚ್ಚಾಗಿದ್ದವು. 2019ರಲ್ಲಿ ತಮಿಳುನಾಡಿನಲ್ಲಿ 16, ಆಂಧ್ರಪ್ರದೇಶದಲ್ಲಿ 14 ಮತ್ತು ಕೇರಳದ 11 ಕುಟುಂಬಗಳು ಸಾಮೂಹಿಕ ಆತ್ಮಹತ್ಯೆಯ ದಾರಿ ಹಿಡಿದಿದ್ದವು. ಆದರೆ, ಎರಡು ವರ್ಷಗಳಿಂದ ಈಚೆಗೆ ರಾಜ್ಯದಲ್ಲಿ ಸರಣಿಯೋಪಾದಿಯಲ್ಲಿ ಇಂತಹ ಪ್ರಕರಣಗಳು ನಡೆಯುತ್ತಿರುವುದು ಆತಂಕ ಸೃಷ್ಟಿಸಿದೆ.

ಆರ್ಥಿಕ ಸಂಕಷ್ಟ, ಬಡತನ, ನಿರುದ್ಯೋಗ, ಕೌಟುಂಬಿಕ ಕಲಹದಂತಹ ಕಾರಣಗಳಿಂದ ಖಿನ್ನತೆಗೆ ಜಾರುವ ವ್ಯಕ್ತಿಗಳು ಆತ್ಮಹತ್ಯೆಯ ಮೂಲಕ ಬದುಕನ್ನೇ ಕೊನೆಗೊಳಿಸಿಕೊಳ್ಳುವ ಘಟನೆಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇವೆ. ಆದರೆ, ಇಡೀ ಕುಟುಂಬವೇ ಈ ರೀತಿಯ ಅಂತ್ಯದ ಹಾದಿಯನ್ನು ಆಯ್ಕೆ ಮಾಡಿಕೊಳ್ಳುತ್ತಿರುವ ಘಟನೆಗಳು ದಿಢೀರನೆ ಹೆಚ್ಚುತ್ತಿರುವುದು ಏಕೆ ಎಂಬ ಪ್ರಶ್ನೆ ಈಗ ರಾಜ್ಯವನ್ನೇ ಕಾಡತೊಡಗಿದೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್‌ಸಿಆರ್‌ಬಿ) ವರದಿ ಪ್ರಕಾರ, 2016ರಿಂದ 2020ರ ಅವಧಿಯಲ್ಲಿ ದೇಶದಲ್ಲಿ 6.87 ಲಕ್ಷ ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕರ್ನಾಟಕದಲ್ಲಿ 2020ರಲ್ಲೇ 12,259 ಆತ್ಮಹತ್ಯೆ ಪ್ರಕರಣಗಳು ದಾಖಲಾಗಿದ್ದು, ಸರಾಸರಿಯಲ್ಲಿ ದೇಶದಲ್ಲೇ ಆರನೇ ಸ್ಥಾನದಲ್ಲಿತ್ತು. ಕೋವಿಡ್ ತಂದೊಡ್ಡಿರುವ ಬಿಕ್ಕಟ್ಟುಗಳ ಕಾರಣದಿಂದ ಈ ವರ್ಷ ಆತ್ಮಹತ್ಯೆ ಪ್ರಕರಣಗಳಲ್ಲಿ ಗಣನೀಯ ಹೆಚ್ಚಳವಾಗಿದೆ.

2019ರ ಜನವರಿಯಿಂದ 2021ರ ಅಕ್ಟೋಬರ್ ಅಂತ್ಯದವರೆಗೆ ರಾಜ್ಯದಲ್ಲಿ 34,375 ಮಂದಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಪೈಕಿ 2019ರಲ್ಲಿ ಇಬ್ಬರು, 2020ರಲ್ಲಿ ಒಬ್ಬ ಮತ್ತು 2021ರಲ್ಲಿ ಆರು ಮಂದಿ ತೃತೀಯ ಲಿಂಗಿಗಳು ಆತ್ಮಹತ್ಯೆಯ ಮೂಲಕ ಪ್ರಾಣ ಕಳೆದುಕೊಂಡಿದ್ದಾರೆ ಎಂಬುದು ರಾಜ್ಯ ಅಪರಾಧ ದಾಖಲೆಗಳ ಬ್ಯೂರೊ ಮಾಹಿತಿಯಲ್ಲಿದೆ.

ಉತ್ತರಕ್ಕಾಗಿ ಹುಡುಕಾಟ: ದೇಶದಲ್ಲಿ 2020ರಲ್ಲಿ ನಡೆದಿದ್ದ ಆತ್ಮಹತ್ಯೆಗಳಲ್ಲಿ ಶೇ 33.6ರಷ್ಟು ಕೌಟುಂಬಿಕ ಸಮಸ್ಯೆಗಳ ಕಾರಣಕ್ಕಾಗಿಯೇ ಘಟಿಸಿದ್ದವು. ಶೇ 18ರಷ್ಟು ಆತ್ಮಹತ್ಯೆ ಪ್ರಕರಣಗಳ ಹಿಂದೆ ಅನಾರೋಗ್ಯದ ಕಾರಣವಿತ್ತು. ಶೇ 3.4ರಷ್ಟು ಜನರು ಆರ್ಥಿಕ ಸಂಕಷ್ಟದಿಂದ ಆತ್ಮಹತ್ಯೆಗೆ ಶರಣಾದರೆ, ಶೇ 2.3ರಷ್ಟು ಮಂದಿ ನಿರುದ್ಯೋಗದ ಕಾರಣದಿಂದ ಬದುಕಿಗೆ ವಿದಾಯ ಹೇಳಿದ್ದರು ಎಂಬುದನ್ನು ಎನ್‌ಸಿಆರ್‌ಬಿ ವಿಶ್ಲೇಷಣಾ ವರದಿಗಳು ಹೇಳುತ್ತವೆ.

ವ್ಯಕ್ತಿಗತ ಆತ್ಮಹತ್ಯೆ ಪ್ರಕರಣಗಳು ಮತ್ತು ಕುಟುಂಬವೇ ಸಾಮೂಹಿಕವಾಗಿ ಆತ್ಮಹತ್ಯೆಯ ಹಾದಿ ಹಿಡಿಯುವುದನ್ನು ಒಂದೇ ಮಾನದಂಡಗಳಲ್ಲಿ ವಿಶ್ಲೇಷಿಸಲಾಗದು. ರಾಜ್ಯದಲ್ಲಿ ಎರಡು ವರ್ಷಗಳ ಅವಧಿಯಲ್ಲಿ ನಡೆದಿರುವ ಹೆಚ್ಚಿನ ಸಂಖ್ಯೆಯ ಸಾಮೂಹಿಕ ಆತ್ಮಹತ್ಯೆ ಪ್ರಕರಣಗಳ ಹಿಂದೆ ಆರ್ಥಿಕ ಸಂಕಷ್ಟವೇ ಪ್ರಧಾನ ಕಾರಣವಾಗಿ ಕೆಲಸ ಮಾಡಿರುವುದು ಮೇಲ್ನೋಟಕ್ಕೆ ಕಾಣಿಸುತ್ತಿದೆ. ಅದರಾಚೆಗೂ ಇದ್ದಿರಬಹುದಾದ ಸಾಮಾಜಿಕ, ಕೌಟುಂಬಿಕ ಮತ್ತು ಇತರ ಆಯಾಮಗಳ ಕುರಿತು ಅಧ್ಯಯನ ಇನ್ನಷ್ಟೇ ನಡೆಯಬೇಕಿದೆ ಎನ್ನುತ್ತಾರೆ ಹಿರಿಯ ಪೊಲೀಸ್ ಅಧಿಕಾರಿಗಳು.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 21-11-1996

• 23ರಂದು ಬೆಂಗಳೂರು ಬಂದ್: ಬಿಜೆಪಿ

ಬೆಂಗಳೂರು, ನ. 20– ವಿಶ್ವಸುಂದರಿ ಸ್ಪರ್ಧೆ ನಡೆಯಲಿರುವ 23ರಂದು ಭಾರತೀಯ ಜನತಾ ಪಕ್ಷ 24 ಗಂಟೆಗಳ ಬೆಂಗಳೂರು ಬಂದ್‌ಗೆ ಕರೆ ನೀಡಿದೆ.

ಶನಿವಾರ ಮುಂಜಾನೆ 6ರಿಂದ ಭಾನುವಾರ ಮುಂಜಾನೆ 6 ಗಂಟೆಗಳವರೆಗೆ ಬಂದ್ ಘೋಷಿಸುವ ಮೂಲಕ ವಿವಾದಾತ್ಮಕ ವಿಶ್ವಸುಂದರಿ ಸ್ಪರ್ಧೆಯ ಸಂದರ್ಭದಲ್ಲಿ ಭಾರಿ ಪ್ರತಿಭಟನೆ ನಡೆಸುವುದಾಗಿ ವಿರೋಧ ಪಕ್ಷದ ನಾಯಕ ಬಿ.ಎಸ್.ಯಡಿಯೂರಪ್ಪ ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 21-11-1971

• ಪಾಕ್ ಪರ ಚೀನಿ ವಕೀಲಿ: ಭಾರತದ ವಿರುದ್ಧ ಟೀಕೆ

ವಿಶ್ವಸಂಸ್ಥೆ, ನ. 20– ಪೂರ್ವ ಬಂಗಾಳದ ನಿರಾಶ್ರಿತರ ಸಮಸ್ಯೆಯಲ್ಲಿ ತನ್ನ ಸಹಾನುಭೂತಿ ಪಾಕಿಸ್ತಾನದ ಪರ ಇದೆಯೆಂದು ಚೀನಾ ಚೆನ್ನಾಗಿ ಸ್ಪಷ್ಟಪಡಿಸಿದೆ. ವಿಶ್ವಸಂಸ್ಥೆಯ ಮೂರನೇ ಸಮಿತಿಯು ಪೂರ್ವ ಬಂಗಾಳ ನಿರಾಶ್ರಿತರ ಸಮಸ್ಯೆ ಕುರಿತು ನಿನ್ನೆ ಚರ್ಚೆ ಪುನರಾರಂಭಿಸಿದಾಗ ಚೀನಾ ತನ್ನ ಸ್ಥಾನದಲ್ಲಿ ಮೊದಲ ಬಾರಿಗೆ ಕುಳಿತು, ಭಾರತದ ಹೆಸರನ್ನು ನಿರ್ದಿಷ್ಟವಾಗಿ ಹೇಳದೆ ಅದು ಪಾಕಿಸ್ತಾನದ ಆಂತರಿಕ ವ್ಯವಹಾರಗಳಲ್ಲಿ ಮಧ್ಯ ಪ್ರವೇಶಿಸಿ ಅದರ ವಿರುದ್ಧ ವಿಧ್ವಂಸಕ ಚಟುವಟಿಕೆಗಳಲ್ಲಿ ತೊಡಗಿದೆಯೆಂದು ಆಪಾದಿಸಿತು.

ದಿನ ಭವಿಷ್ಯ

ಭಾನುವಾರ 21 ನವೆಂಬರ್ 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತಿಕ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಅನೂರಾಧಾ ದ್ವಿತೀಯ ಗಂ. 25-50 (ಹ. 4-47) ಭಾನುವಾರ ನಿತ್ಯ ನಕ್ಷತ್ರ ಮೃಗಶಿರ ಗಂ. 60-00 (ದಿನಪೂರ್ತಿ) ಸಿದ್ಧ ನಾಮ ಯೋಗ ಗಂ. 55-49 ಗರಜ ಕರಣ ಗಂ. 25-50 ವಿಷ ಗಂ. 14-23 ಅಮೃತ ಗಂ 40-59 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00 ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-24 ಸೂರ್ಯಾಸ್ತ: 5-46 ಅದೃಷ್ಟ ಸಂಖ್ಯೆ 6

ಮೇಷ: ಸಂಗಾತಿಯ ಅಭಿಪ್ರಾಯಗಳಿಗೆ ಮನ್ನಣೆ ನೀಡಿ ಬರಲಿರುವ ಮನಸ್ತಾಪವನ್ನು ನಿವಾರಿಸಿಕೊಳ್ಳಿ. ದಾಂಪತ್ಯದಲ್ಲಿ ವಿರಸ ಕಂಡುಬರುವ ಸಾಧ್ಯತೆ. ದೇವತಾರಾಧನೆಯಿಂದ ಮನಸ್ಸಿಗೆ ಶಾಂತಿ ನೆಮ್ಮದಿ ದೊರೆಯಲಿದೆ.

ವೃಷಭ: ಕೆಲದಿನಗಳಿಂದ ನನೆಗುದಿಗೆ ಬಿದ್ದ ಕಾರ್ಯಗಳಿಗೆ ಮತ್ತೊಮ್ಮೆ ವಿಘ್ನ ತಲೆದೋರಬಹುದು. ತಾಳ್ಮೆವಹಿಸಿ ಯಶಸ್ಸನ್ನು ನಿಮ್ಮದಾಗಿಸಿಕೊಳ್ಳಿ. ಮನೆಯವರ ಭಾವನೆಗಳನ್ನು ಗೌರವಿಸಿ. ವಿಘ್ನೇಶ್ವರನ ಆರಾಧನೆ ಸೂಕ್ತ.

ಮಿಥುನ: ಸಂಶೋಧಕರಿಗೆ, ಕ್ರಿಯಾಶೀಲರಿಗೆ ಇಂದು ಅತ್ಯಂತ ಪ್ರಶಸ್ತ. ಹೊಸ ಹೊಸ ಕಾರ್ಯಗಳಲ್ಲಿ ತೊಡಗಿ ಯಶಸ್ಸನ್ನು ಕಾಣುವಿರಿ. ಹೊಸ ಹುರುಪಿನಿಂದ ಮುನ್ನಡೆಯಿರಿ.

ಕರ್ಕಾಟಕ: ನೀವು ಪ್ರತಿಭಾವಂತರಾಗಿದ್ದೂ ಹಿಂಜರಿಕೆಯ ಸ್ವಭಾವವುಳ್ಳವರಾಗಿದ್ದೀರಿ. ಮೇಲಧಿಕಾರಿಗಳು ನಿಮ್ಮ ಪ್ರತಿಭೆ ಗುರುತಿಸಿ ಬಹಿರಂಗವಾಗಿ ಗೌರವಿಸುವರು. ದಿನಪೂರ್ತಿ ಸಂತಸದ ಕ್ಷಣಗಳನ್ನು ಕಾಣುವಿರಿ.

ಸಿಂಹ: ಸಹೋದ್ಯೋಗಿಗಳಿಂದ ಅನಿರೀಕ್ಷಿತ ಹೊಗಳಿಕೆ ದೊರೆಯಲಿದೆ. ಹಿಂದಿನ ಮರ್ಮ ನಿಮ್ಮ ಅರಿವಿಗೆ ಬರಲಿದೆ. ಹುಂಬತನ ಸಲ್ಲ. ವಿವೇಚನೆಯಿಂದ ಮುಂದುವರಿಯಿರಿ.

ಕನ್ಯಾ: ನಿಮ್ಮ ನೆಚ್ಚಿನ ಕಾರ್ಯ ಯೋಜನೆಗಳು ಕೈಗೂಡುವ ಕಾಲ ಒದಗಿಬಂದಿದೆ. ಕಾರ್ಯದಲ್ಲಿ ನಿರೀಕ್ಷಿತ ಯಶಸ್ಸು ಕಾಣಲಿದ್ದೀರಿ. ವಿದ್ಯಾರ್ಥಿಗಳಿಗೆ ಅತ್ಯಂತ ಸಂಭ್ರಮದ ದಿನವಾಗಿದೆ.

ತುಲಾ: ಹತ್ತಿರದ ವ್ಯಕ್ತಿಗಳಿಂದ ಅಭೀಷ್ಟ ಪೂರೈಕೆಗಾಗಿ ಒತ್ತಡ ಹೆಚ್ಚುವ ಸಾಧ್ಯತೆ. ದೂರದ ಪ್ರಯಾಣ, ಮನೆಯಿಂದ ದೂರ ಉಳಿಯುವುದು ಒಳ್ಳೆಯದಲ್ಲ. ನೈತಿಕತೆಗಾಗಿ ಸಂಯಮದಿಂದ ವರ್ತಿಸಿ. ಯಶಸ್ಸು ನಿಮ್ಮದಾಗಲಿದೆ.

ವೃಶ್ಚಿಕ: ಬುದ್ಧಿಮತ್ತೆಯಿಂದ ಕಾರ್ಯತಂತ್ರ ನಿರೂಪಿಸಿದಲ್ಲಿ ಯಶಸ್ಸನ್ನು ಕಾಣುವಿರಿ. ಮನೆಯವರ ಸಹಕಾರ ಪಡೆದು ಜಾಗರೂಕತೆಯಿಂದ ಹೆಜ್ಜೆ ಇಡಿ. ಹಿರಿಯರ ಆರೋಗ್ಯದ ಕಡೆ ಗಮನವಿರಲಿ.

ಧನು: ಗೆಳೆಯರ ನಡುವೆ ನಿಷ್ಠುರ ವೈಮನಸ್ಸು ಸಂಭವಿಸುವ ಸಾಧ್ಯತೆ ಕಂಡುಬರುವುದು. ಎಚ್ಚರಿಕೆ ಅಗತ್ಯ. ಔತಣ ಕೂಟ, ಮೋಜು ಮಸ್ತಿಗಳಿಂದ ದೂರವಿರುವುದು ಉತ್ತಮ. ಗುರುವಿನ ಆರಾಧನೆ ಶ್ರೇಯಸ್ಕರ.

ಮಕರ: ದಿಢೀರ್ ನಿರ್ಧಾರದಿಂದಾಗಿ ಅಪಕೀರ್ತಿ ಸಂಭವಿಸಬಹುದು. ನಿಮ್ಮ ಪ್ರೀತಿಪಾತ್ರರು ನಿಮ್ಮ ನಿರ್ಧಾರಕ್ಕಾಗಿ ತಗಾದೆ ತೆಗೆಯಬಹುದು. ತಾಳ್ಮೆ ವಹಿಸಿ. ಹಿರಿಯರ ಮಾತುಗಳನ್ನು ಗೌರವಿಸಿರಿ.

ಕುಂಭ: ನಿಮ್ಮ ವ್ಯವಹಾರದ ಗುಟ್ಟನ್ನು ಯಾರಿಗೂ ಬಿಟ್ಟುಕೊಡದಿರುವುದು ಒಳಿತು. ಹೊಸ ಯೋಜನೆಗಳನ್ನು ರೂಪಿಸುವುದನ್ನು ಒಂದು ದಿನದ ಮಟ್ಟಿಗೆ ಮುಂದೂಡುವುದು ಒಳ್ಳೆಯದು. ವಿನಾಯಕ ಸ್ತುತಿ ಒಳ್ಳೆಯದು.

ಮೀನ: ನಿಮ್ಮ ಯೋಜನೆಗಳ ಬಗ್ಗೆ ದೃಢ ನಿರ್ಧಾರ ತೆಗೆದುಕೊಳ್ಳುವಲ್ಲಿ ಎಲ್ಲ ರೀತಿಯಿಂದಲೂ ಸಹಾಯ ಸಹಕಾರ ದೊರಕುವುದು. ಗಣಪತಿಯ ಆರಾಧನೆಯೊಂದಿಗೆ ಕಾರ್ಯತತ್ಪರರಾಗಿ. ಯಶಸ್ಸು ನಿಮ್ಮದಾಗಲಿದೆ.

ನಿಮ್ಮ ಜನ್ಮದಿನ 21-ನವೆಂಬರ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಉನ್ನತ ಆಲೋಚನೆ, ಧ್ಯೇಯದೊಂದಿಗೆ ಉನ್ನತ ಸ್ಥಾನಮಾನಗಳು ಲಭಿಸಿ ಕ್ಷಿಪ್ರ ಕೀರ್ತಿಗೆ ಭಾಜನರಾಗುವಿರಿ. ಉದ್ಯೋಗ ವ್ಯವಹಾರಗಳಲ್ಲಿ ಅಭಿವೃದ್ಧಿ ಕಾಣಲಿದ್ದೀರಿ. ವೃತ್ತಿಪರ ಜೀವನದಲ್ಲಿ ಅಭಿವೃದ್ಧಿ. ಜೀವನದಲ್ಲಿ ಉತ್ತಮ ಸಾಧನೆಯ ಕಡೆ ಒಲವು ನಿಮ್ಮದಾಗಲಿದೆ.

ಪದಬಂಧ 4784

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಪರಿವರ್ತನೆಯ ಯುಗ (4)
3.ಗೋವಿನ ಹತ್ತಿರ ನುಡಿಸಿರುವ ಕೊಳಲು (4)
5.ಲಕ ಲಕ ಹೊಳೆಯುತ್ತಿರುವ ಕುಂಕುಮ (3)
7.ಪತ್ರ ಬರೆದಿರುವ ಸ್ನೇಹಿತ (2)
9.ಕಾಡಿನ ರಕ್ಷಕ ಇಲ್ಲಿಹನು (5)
11.ಒಂದು ಸ್ಥಳದ ಬಗ್ಗೆ ಹೇಳುವ ಸಾಂಪ್ರದಾಯಿಕ ಕಥೆ (5)
13.ತರಾತುರಿ ಏಕೆ? ಇದು ನೀರಾವರಿ ಭೂಮಿಯೇ! (2)
16.ನಾಯಕನ ಹತ್ತಿರವಿರುವ ಹಾಡುಗಾರ (3)
18.ಬುದ್ಧಿಭ್ರಮಣೆಯಾಗಿರುವವನ ಎದುರು! (4)
19.ಸರಿ ರಾತ್ರಿಯಲ್ಲಿ ಕಾಣಿಸಿದ ಸಮುದ್ರ! (4)

ಮೇಲಿಂದ ಕೆಳಕ್ಕೆ

1.ಗಿಡಮರಗಳೇನೂ ಬೆಳೆಯದ ಬಂಜರು ನೆಲ (4)
2. ಮನ್ಮಥನ ಪತ್ನಿ (2)
3.ಕಪಿ ಲಾಗಾ ಹಾಕಿದರೆ ಗಿಳಿಕಾಣುವುದಲ್ಲಾ! (2)
4.ವಿಧ್ವಂಸಕವನ್ನು ತಡೆಗಟ್ಟಿದ ಪಂಡಿತ (3)
6.ಗಿಡ್ಡಿಯನ್ನು ಗುದ್ದಿದರೆ ನೂರು ಮಕ್ಕಳು! ಈಒಗಟಿನ ಉತ್ತರ (3)
8. ನ್ಯಾಯ ತೀರ್ಮಾನ ಮಾಡುವವನು (3)
10.ತಡಿಕೆಯಲ್ಲಿದ್ದಾಗ ಉಂಟಾದ ನವೆ (3)
12.ಕರ್ಣನ ಇನ್ನೊಂದು ಹೆಸರು (3)
14.ರೀತಿ ನಿಯಮದಂತೆ ಸಿಕ್ಕಿರುವ ಸೋಡಿ (4)
15.ಪ್ರಸವದ ಸಮಯದಲ್ಲಿ ಆಗಿರುವ ಸುಸ್ತು (3)
16.ಗಾಂಪನ ಬಾಯಲ್ಲಿ ಹೇಳಿಸಿದ ಹಾಡು (2)
17.ಸರೀಕನ ಮನೆಯಲ್ಲಿರುವ ಗಲೀಜು (2)



4783ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸುಖಾಸನ 3.ವನಸ್ಪತಿ 5.ಗಹನ 7.ನಗು 9.ಮಂಠ 11.ಲಾಕ್ಷಣಿಕ 12.ಪರಪಂಚ 13.ನಾರಿ 14.ನೆಪ 16.ಅರಸ 18.ಕರೆಯೋಲೆ 19.ವಿದ್ಯಮಾನ

ಮೇಲಿಂದ ಕೆಳಕ್ಕೆ: 1.ಸುಮ್ಮಾನ 2.ನಗ 3.ವನ 4.ತಿರುಕ 6.ಹವ್ಯಕ 8.ಗುಲಾಮಗಿರಿ 9.ಮಂತ್ರಾಲೋಚನೆ 12.ಪದರ 13.ನಾಸಿಕ 15.ಪವನ 16.ಅಲೆ 17.ಸವಿ

ಸುಡೊಕು 5170

		1		7		6		2
		5	2		9			
2	8			1			9	5
	5		7			8		
	2			8		5		9
8		6		9				
6				5		9		7
		8					5	
5		3		6		1		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5169 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೃಷಿ ಕಾಯ್ದೆ ಹಿಂಪಡೆಯುವ ಕೇಂದ್ರ ಸರ್ಕಾರದ ನಿರ್ಧಾರದ ಬಗ್ಗೆ ತಜ್ಞರ ವಿಶ್ಲೇಷಣೆ

'ತಾನೇ ಎತ್ತಿದ ಕತ್ತಿ ತನಗೇ ಭಾರವಾದಾಗ'

ಬೆಂಗಳೂರು: ಕೃಷಿ ಕಾಯ್ದೆಗಳ ವಿರುದ್ಧದ ರೈತರ ಹೋರಾಟಕ್ಕೆ ಕೊನೆಗೂ ಮಣಿದ ಪ್ರಧಾನಿ ನರೇಂದ್ರ ಮೋದಿ ಅವರು, ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಘೋಷಣೆ ಮಾಡಿದ್ದಾರೆ. ಚುನಾವಣೆಗಳು ಸಮೀಪಿಸುತ್ತಿರುವ ಸಂದರ್ಭದಲ್ಲಿ ಕೈಗೊಂಡ ಈ ನಿರ್ಧಾರ ಹಲವು ಚರ್ಚೆಗಳನ್ನು ಹುಟ್ಟುಹಾಕಿದೆ. 'ವಿವಾದಾತ್ಮಕ ಕೃಷಿ ಕಾಯ್ದೆ ಹಿಂದಕ್ಕೆ: ಕಾರಣಗಳೇನು?' ಎನ್ನುವ ಕುರಿತು 'ಪ್ರಜಾವಾಣಿ' ಶನಿವಾರ ಆಯೋಜಿಸಿದ್ದ ಫೇಸ್ ಬುಕ್ ಲೈವ್ ಸಂವಾದದಲ್ಲಿ ಅತಿಥಿ ಗಳು ಹಂಚಿಕೊಂಡ ಅಭಿಪ್ರಾಯಗಳ ಸಂಕ್ಷಿಪ್ತ ರೂಪ ಇಲ್ಲಿದೆ.

ಪ್ರಜಾವಾಣಿ ಸಂವಾದ

'ಆಶಾದಾಯಕ ಆದರೂ ಎಚ್ಚರಿಕೆ ಬೇಕು'

ಇಡೀ ದೇಶದಲ್ಲಿ ಸ್ವಾತಂತ್ರ್ಯ ಚಳವಳಿ ನೆನಪಿಸುವಂತೆ ರೈತ ಚಳವಳಿ ನಡೆದಿದೆ. ದೇಶದ ಕೃಷಿ ಅಸ್ತಿತ್ವದ ಮೂಲಕ್ಕೇ ಪೆಟ್ಟು ಕೊಡುವ ಹುನ್ನಾರ ನಡೆದಿತ್ತು. ಇದಕ್ಕೆ ಉತ್ತರವನ್ನು ರೈತ ಚಳವಳಿ ಕೊಟ್ಟಿದೆ. ಸಮಸ್ತ ಆಧಾರಿತ ಸಾಂಘಿಕ ಹೋರಾಟಕ್ಕೆ ಜಯ ಸಿಕ್ಕಿದೆ. ದೈತ್ಯ ಶಕ್ತಿಯನ್ನು ಜನಶಕ್ತಿ ಹಿಮ್ಮೆಟ್ಟಿಸಿದೆ. ಪರಿಸ್ಥಿತಿ ಅರಿವು ಕೃಷಿಕರಿಗೆ ಮತ್ತು ನಾಗರಿಕರಿಗೆ ಆಗಿದೆ. ಗಂಭೀರ ಸಮಸ್ಯೆಗಳ ವಿರುದ್ಧ ಜನರ ಪ್ರತಿಕ್ರಿಯೆ ಹೆಗ್ಗುರುತಿನಂತೆ ಎಂಬುದು ಗೊತ್ತಾಗಿದೆ. ಸರ್ಕಾರದ ಈ ರೀತಿಯ ನಿರ್ಧಾರಗಳ ಹಿಂದೆ ಇದೇ ರೀತಿಯ ಪ್ರತಿರೋಧ ಮರುಕಳಿಸಬೇಕು. ಕೇಂದ್ರ ಸರ್ಕಾರದ ಈ ನಿರ್ಧಾರ ಸದ್ಯಕ್ಕೆ ಆಶಾದಾಯಕ ಆದರೂ, ಮುಂದಿನ ದಿನಗಳಲ್ಲಿ ಸರ್ಕಾರ ಮತ್ತೆ ರೈತ ವಿರೋಧಿ ನಿಲುವ ತಾಳದಂತೆ ನೋಡಿಕೊಳ್ಳಬೇಕಾಗಿದೆ. ಆ ಎಚ್ಚರಿಕೆಯೂ ರೈತ ಸಮುದಾಯದಲ್ಲಿ ಇರಬೇಕಾಗುತ್ತದೆ.

ಸುನಂದಾ ಜಯರಾಂ, ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರು

'ದೀರ್ಘಾವಧಿ ಕಾರ್ಯತಂತ್ರಗಳು ಇವೆ'

ಕೃಷಿ ಕಾಯ್ದೆಗಳನ್ನು ಹಿಂಪಡೆಯುವ ಪ್ರಧಾನಿ ನಿರ್ಧಾರದಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ಕಾರ್ಯತಂತ್ರಗಳಿವೆ. ಎರಡನೇ ಅವಧಿಯ ಕೊನೆಯ ಎರಡು ವರ್ಷದ ಕಾರ್ಯ ಯೋಜನೆ ಮುಖ್ಯವಾಗುತ್ತದೆ. ಹತ್ತಿರದಲ್ಲಿರುವ ಪಂಜಾಬ್, ಉತ್ತರ ಪ್ರದೇಶದ ಚುನಾವಣೆಯಲ್ಲಿ ತೊಂದರೆ ಆಗಬಹುದು ಎಂಬ ಕಾರಣದ ಜೊತೆಗೆ 2024ರ ಲೋಕ ಸಭೆಯ ಚುನಾವಣೆಯಲ್ಲೂ ತೊಂದರೆ ಆಗಬಹುದೆಂಬ ಲೆಕ್ಕಾಚಾರ ಇದ್ದಂತಿದೆ. ಒಂದು ಹೆಜ್ಜೆ ಹಿಂದಕ್ಕೆ ಇಟ್ಟರೆ, ಎರಡು ಹೆಜ್ಜೆ ಬೇರೆ ದಿಕ್ಕಿನಲ್ಲಿ ಚಲಿಸುತ್ತಾರೆ ಎಂಬ ಮಾತಿದೆ. ಅದೇ ರೀತಿ ಈ ಬೆಳವಣಿಗೆಯ ಪ್ರಯತ್ನವೂ ಇರಬಹುದು. 8 ವರ್ಷಗಳಲ್ಲಿ ಈ ನಾಯಕತ್ವ ಹಿಂದಿಕ್ಕಲು ಯಾರಿಂದಲೂ ಸಾಧ್ಯವಾಗಿರಲಿಲ್ಲ. ಆದರೆ, ರೈತರ ಹೋರಾಟ ವಿರೋಧ ಪಕ್ಷಕ್ಕೆ ಮಹತ್ವದ ವಿಷಯ ಕೊಟ್ಟಂತಾಗಿತ್ತು. ಕಾಯ್ದೆ ತಿದ್ದುಪಡಿ ಹಿಂಪಡೆದ ಮಾತ್ರಕ್ಕೆ ಮುಂದಿನ ಚುನಾವಣೆಯಲ್ಲಿ ಇದು ವಿಷಯವಾಗಲಾರದು ಎಂಬುದು ತಪ್ಪು.

ಸಂದೀಪ್ ಶಾಸ್ತ್ರಿ, ರಾಜಕೀಯ ವಿಶ್ಲೇಷಕ

'ನಷ್ಟ ಪರಿಹಾರವೂ ಹೊರೆಯಾಗುತ್ತಿತ್ತು'



ಕೃಷಿ ಕಾಯ್ದೆಗಳನ್ನು ಹಿಂಪಡೆಯುವ ನಿರ್ಧಾರದಲ್ಲಿ ರಾಜಕೀಯ ಹೊರತಾಗಿಯೂ ಕಾರಣಗಳಿವೆ. ಹೊಸ ಕಾಯ್ದೆಗಳಿಂದ ಕೃಷಿ ಕ್ಷೇತ್ರದ ಲಾಭವೆಲ್ಲ ಕಾರ್ಪೊರೇಟ್ ಕಂಪನಿಗಳ ಪಾಲಾಗುತ್ತಿದೆ. ಆದರೆ, ಪ್ರಕೃತಿ ವಿಕೋಪ ರೀತಿಯ ಹಾನಿ ಅಥವಾ ನಷ್ಟದ ಸಂದರ್ಭದಲ್ಲಿ ರೈತರಿಗೆ ಪರಿಹಾರ ಕೊಡಬೇಕಾದ ಜವಾಬ್ದಾರಿ ಸರ್ಕಾರದ್ದೆ ಆಗಿರುತ್ತದೆ. ಎಪಿಎಂಸಿಯಿಂದ ಹೊರಗೆ ನಡೆಯುವ ವಹಿವಾಟನ್ನೂ ಅಧಿಕೃತಗೊಳಿಸಿದರೆ ಸರ್ಕಾರಕ್ಕೆ ವರಮಾನದ ಮೂಲವೊಂದು ಕಡಿತವಾಗುತ್ತದೆ. 2024ರ ವೇಳೆಗೆ ಕೃಷಿ ಕ್ಷೇತ್ರದಲ್ಲಿ ಆಗುವ ನಷ್ಟಕ್ಕೆ ಪರಿಹಾರವೇ ದೊಡ್ಡ ಹೊರೆಯಾಗಲಿದೆ. ತಾನೇ ಎತ್ತಿದ ಕತ್ತಿ ತಮಗೇ ಭಾರವಾಗುತ್ತದೆ ಎಂಬುದು ಪ್ರಧಾನಿಗೆ ಅರ್ಥವಾಗಿದೆ. ಬೆಲೆ ಏರಿಕೆ ಬಿಸಿಯೂ ಕೃಷಿ ವಲಯಕ್ಕೆ ತಟ್ಟಿದೆ. ಡೀಸೆಲ್ ಬೆಲೆಯಿಂದ ಉಳುಮೆ ವೆಚ್ಚ ಹೆಚ್ಚಾಗಿದೆ. ಇದರ ನಡುವೆ ನುಂಗಲಾಗದ ಉಗುಳನ್ನು ರೈತರ ಪರವಾದ ಘೋಷಣೆ ಎಂದು ಹೇಳಿಕೊಳ್ಳುವುದು ಹಾಸ್ಯಾಸ್ಪದ.

ಕೆ.ಪಿ. ಸುರೇಶ್, ಪ್ರಗತಿಪರ ರೈತ, ಲೇಖಕ

'ಪ್ರಯೋಜನ ಇಲ್ಲದ ಕಾಯ್ದೆ ಎಂದು ಅರ್ಥವಾಗಿದೆ'

ಕಳೆದ ಒಂದು ವರ್ಷದಿಂದ ಇಡೀ ದೇಶ ಮಾನಸಿಕ ತೊಳಲಾಟದಲ್ಲಿತ್ತು. ಭವಿಷ್ಯದ ಬಗ್ಗೆ ರೈತರಲ್ಲಿ ಆತಂಕ ಇತ್ತು. ಮೂರು ಕೃಷಿ ಕಾಯ್ದೆಗಳನ್ನು ಹಿಂಪಡೆದ ಬಗ್ಗೆ ರಾಜಕೀಯ ಲೆಕ್ಕಾಚಾರದ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ. ರಾಜಕೀಯ ಅಷ್ಟೇ ಅಲ್ಲದೇ ಆರ್ಥಿಕ, ನೀತಿ ನಿರೂಪಣೆ ದೃಷ್ಟಿಯಿಂದಲೂ ನೋಡಬೇಕಾಗುತ್ತದೆ. ಆರ್ಥಿಕ ತಜ್ಞರು ನೀಡುವ ಸಲಹೆ ಮೇರೆಗೆ ನೀತಿ ನಿರೂಪಣೆ ಮಾಡಲಾಗುತ್ತದೆ. ಜಾಗತಿಕ ಮತ್ತು ರಾಷ್ಟ್ರ ಮಟ್ಟದಲ್ಲಿ ನಡೆದ ಬದಲಾವಣೆ ಕಾರಣದಿಂದ ಸ್ಥಿತ್ಯಂತರ ಆಗಿದೆ. ಈ ಹೊಸ ಕಾಯ್ದೆಗಳಿಂದ ಸಕಾರಾತ್ಮಕ ಪ್ರತಿಫಲ ದೊರಕುವುದಿಲ್ಲ ಎಂಬುದನ್ನು ಸರ್ಕಾರದ ಗಮನಕ್ಕೆ ತಜ್ಞರು ತಂದಿರಬಹುದು. ಮುಂದಿನ ದಿನಗಳಲ್ಲಿ ಇದರಿಂದ ಒಳ್ಳೆಯದಾಗುವುದಿಲ್ಲ ಎಂಬ ಸಲಹೆ ನೀಡಿರಬೇಕು. ಕೃಷಿ ಪ್ರಧಾನ ರಾಷ್ಟ್ರದಲ್ಲಿ ರಾಷ್ಟ್ರೀಯ ಕೃಷಿ ನೀತಿಯೇ ಇಲ್ಲದಿರುವುದು ವಿಷಾದದ ಸಂಗತಿ. ಸಮಗ್ರ ನೀತಿ ರೂಪಿಸುವ ಅಗತ್ಯವಿದೆ.

ರಾಜೇಂದ್ರ ಪೋದ್ದಾರ್, ಕರ್ನಾಟಕ ಜಲ ಮತ್ತು ನೆಲ ನಿರ್ವಹಣಾ ಸಂಸ್ಥೆ ನಿರ್ದೇಶಕ

ಸಂವಾದದ ವೀಕ್ಷಣೆಗೆ: www.facebook.com/prajavani.net

26ಕ್ಕೆ ಹೆದ್ದಾರಿ ಬಂದ್ ಚಳವಳಿ

3 ಕಾಯ್ದೆ ರೈತರಿಗೆ ಮಾರಕ • ಹಿಂಪಡೆಯಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ ಸುಧಾರಣೆ (ತಿದ್ದುಪಡಿ) ಕಾಯ್ದೆ, ಎಪಿಎಂಸಿ (ತಿದ್ದುಪಡಿ) ಕಾಯ್ದೆ ಹಾಗೂ ಗೋಹತ್ಯೆ ನಿಷೇಧ ಕಾಯ್ದೆಯನ್ನು ರಾಜ್ಯ ಸರ್ಕಾರವೂ ಹಿಂಪಡೆಯಬೇಕು ಎಂದು ಆಗ್ರಹಿಸಿ 'ಸಂಯುಕ್ತ ಹೋರಾಟ ಕರ್ನಾಟಕ'ವು ರಾಜ್ಯದ ವಿವಿಧ ಕಡೆಗಳಲ್ಲಿ ಇದೇ 26ರಂದು ಹೆದ್ದಾರಿ ಬಂದ್ ಚಳವಳಿ ಹಮ್ಮಿಕೊಂಡಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಯ ಸಂಯೋಜಕ ಜಿ.ಸಿ.ಬಯ್ಯಾರೆಡ್ಡಿ, '3 ಕರಾಳ ಕೃಷಿ ಕಾಯ್ದೆಗಳನ್ನು ಮೋದಿ ಸರ್ಕಾರ ಹಿಂಪಡೆದಿರುವುದು ರೈತರ ಚಳವಳಿಗೆ ಸಿಕ್ಕಿರುವ ಗೆಲುವು. ಅದರಂತೆ ರಾಜ್ಯದ ಕೆಲವು ಕಾಯ್ದೆಗಳು ಹಾಗೂ ತಿದ್ದುಪಡಿ ಕಾಯದೆಗಳು ಕೃಷಿಕರಿಗೆ ಮಾರಕವಾಗಿದ್ದು, ಅವುಗಳನ್ನೂ ರಾಜ್ಯ ಸರ್ಕಾರ ರದ್ದುಪಡಿಸಬೇಕು' ಎಂದರು.

'ರೈತರಿಗೆ ಬೆಳೆ ನಷ್ಟ ಪರಿಹಾರ ನೀಡುವುದು ಹಾಗೂ ಹಾಲಿನ ದರ ಪರಿಷ್ಕರಣೆ ಕುರಿತಾಗಿ ಚರ್ಚಿಸಲು ಮುಖ್ಯಮಂತ್ರಿ ಬೊಮ್ಮಾಯಿ ಅವರು ಕೂಡಲೇ ರೈತ ಸಂಘಟನೆಗಳ ಸಭೆ ಕರೆಯಬೇಕು' ಎಂದು ಒತ್ತಾಯಿಸಿದರು.

'ಬೆಂಗಳೂರು–ಹೈದರಾಬಾದ್ ಹೆದ್ದಾರಿ ಮಾರ್ಗದಲ್ಲಿ ಚಿಕ್ಕಬಳ್ಳಾಪುರದ ಚದಲಪುರ , ಬೆಂಗಳೂರು–ಮೈಸೂರು ಹೆದ್ದಾರಿಯ ಶ್ರೀರಂಗಪಟ್ಟಣ, ಬೆಂಗಳೂರು–ಪುಣೆ ಹೆದ್ದಾರಿಯ ತುಮಕೂರು ಟೋಲ್‌ಗೇಟ್, ಸುರಪುರ–ಶಹಾಪುರ ನಡುವಿನ ದೇವದುರ್ಗ ಕ್ರಾಸ್, ಹೊಸಪೇಟೆ ಜಂಕ್ಷನ್, ಸೇರಿದಂತೆ ವಿವಿಧ ಹೆದ್ದಾರಿಗಳಲ್ಲಿ ರೈತರು, ಕಾರ್ಮಿಕರು ಜಾನುವಾರು, ಟ್ರ್ಯಾಕ್ಟರ್‌ಗಳೊಂದಿಗೆ ಹೆದ್ದಾರಿ ಬಂದ್ ಮಾಡಲಿದ್ದಾರೆ' ಎಂದು ವಿವರಿಸಿದರು.

ಎನ್‌ಇಪಿ ಸಂಕಿರಣಕ್ಕೆ ಸಭಾಂಗಣ ನೀಡದ ವಿ.ವಿ!

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯ ವಿರುದ್ಧವಾಗಿ ಚರ್ಚೆ ಮಾಡುತ್ತಾರೆ ಎಂಬ ಕಾರಣಕ್ಕೆ ಮೈಸೂರು ವಿಶ್ವವಿದ್ಯಾನಿಲಯವು ತನ್ನ ಸಭಾಂಗಣದಲ್ಲಿ ಕಾರ್ಯಕ್ರಮ ಆಯೋಜನೆಗೆ ಅವಕಾಶ ನೀಡಲಿಲ್ಲ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಆರೋಪಿಸಿದರು.

ಇಲ್ಲಿನ ಎಂಜಿನಿಯರ್‌ಗಳ ಸಂಸ್ಥೆಯಲ್ಲಿ ಮಾನವ ಬಂಧುತ್ವ ವೇದಿಕೆಯು ಶನಿವಾರ ಏರ್ಪಡಿಸಿದ್ದ 'ಹೊಸ ಶಿಕ್ಷಣ ನೀತಿ ಮತ್ತು ಪಠ್ಯ ತಿರುಚುವಿಕೆಯ ರಾಜಕಾರಣ' ಕುರಿತು ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿ, 'ಕಾರ್ಯಕ್ರಮಕ್ಕೆ ವಿ.ವಿಯ ವಿಜ್ಞಾನ ಭವನವನ್ನು ಕಾಯ್ದಿರಿಸಲಾಗಿತ್ತು. ಆದರೆ ಅವಕಾಶ ನೀಡಲಿಲ್ಲ' ಎಂದು ಹೇಳಿದರು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, 'ಆರೋಪ ಸುಳ್ಳು' ಎಂದು ಹೇಳಿದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ https://homages.deccanherald.com ಅಥವಾ QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಸಹಾಯಕ ಪ್ರಾಧ್ಯಾಪಕರ ಹುದ್ದೆ: ಅರ್ಜಿ ಸಲ್ಲಿಕೆಗೆ 30 ಕೊನೆ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ನೇರ ನೇಮಕಾತಿಗೆ ಆನ್‌ಲೈನ್ ಅರ್ಜಿ ಸಲ್ಲಿಸುವ ಕೊನೆಯ ದಿನವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇದೇ ತಿಂಗಳ 30ರವರೆಗೆ ವಿಸ್ತರಿಸಿದೆ. ಶುಲ್ಕ ಪಾವತಿಸಲು ಡಿ. 6 ಕೊನೆಯ ದಿನ.

ಈ ಮೊದಲು ನ. 6ರ ಕೊನೆ ದಿನ ಎಂದು ನಿಗದಿಪಡಿಸಲಾಗಿತ್ತು. ಕೆ- ಸೆಟ್ (ಕರ್ನಾಟಕ ರಾಜ್ಯಮಟ್ಟದ ಅರ್ಹತಾ ಪರೀಕ್ಷೆ) ಫಲಿತಾಂಶ ನ. 2ರಂದು ಪ್ರಕಟವಾದ ಕಾರಣ ಕೊನೆ ದಿನವನ್ನು ನ. 20ರವರೆಗೆ ವಿಸ್ತರಿಸಲಾಗಿತ್ತು.

'ಇದೀಗ ಕಂಪ್ಯೂಟರ್ ವಿಜ್ಞಾನ, ರಾಜ್ಯಶಾಸ್ತ್ರ, ರಸಾಯನ ವಿಜ್ಞಾನ, ಎಲೆಕ್ಟ್ರಾನಿಕ್ಸ್, ಸಸ್ಯ ವಿಜ್ಞಾನ, ಪ್ರಾಣಿವಿಜ್ಞಾನ, ಅರ್ಥ ಶಾಸ್ತ್ರ ಮತ್ತು ಭೌತವಿಜ್ಞಾನ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ತತ್ಸಮಾನ ವಿಷಯಗಳ ವಿದ್ಯಾರ್ಹತೆಯನ್ನು ನೀಡಿ ರಾಜ್ಯ ಸರ್ಕಾರ ನ. 18ರಂದು ಅಧಿಸೂಚನೆ ಹೊರಡಿಸಿದೆ. ಹೀಗಾಗಿ, ಕೊನೆಯ ದಿನವನ್ನು ಮತ್ತೆ ವಿಸ್ತರಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ರಮ್ಯಾ ತಿಳಿಸಿದ್ದಾರೆ.

ಬಡತನಕ್ಕೆ ಕೊರಗಿಲ್ಲ, ಪದ್ಮ ಪ್ರಶಸ್ತಿಗೆ ಹಿಗ್ಗಿಲ್ಲ: ಹಾಜಬ್ಬ

'ಮನೆಯಂಗಳದಲ್ಲಿ ಮಾತುಕತೆ'ಯಲ್ಲಿ ಅಕ್ಷರ ಸಂತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನೊಬ್ಬ ಸಾಮಾನ್ಯ ಬಡ ಮನುಷ್ಯ. ಪ್ರತಿ ದಿನ ₹100 ಗಳಿಸುತ್ತಿದ್ದ ನನಗೆ ಪಂಚತಾರಾ ಹೋಟೆಲ್‌ನಲ್ಲಿ ಗೌರವಾತಿಥ್ಯ ನೀಡಿದರು. ಅಲ್ಲಿ ಒಂದು ದಿನಕ್ಕೆ ₹20,130 ಖರ್ಚು ಮಾಡಿದರು. ಸರ್ಕಾರ ಮತ್ತು ಸಮಾಜ ಪ್ರಶಸ್ತಿ, ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ನಮ್ಮೂರಲ್ಲಿ ಪಿಯು ಕಾಲೇಜು ಆಗಬೇಕು ಎನ್ನುವುದೇ ಸದ್ಯದ ನನ್ನ ಬಯಕೆ...'

– ಇದು ಅಕ್ಷರ ಸಂತ, ಪದ್ಮಶ್ರೀ ಪುರಸ್ಕೃತ ಹರೇಕಳ ಹಾಜಬ್ಬ ಅವರ ನುಡಿಗಳು. ಕನ್ನಡ ಮತ್ತು ಸಂಸ್ಕೃತ ಇಲಾಖೆ ಶನಿವಾರ ನಗರದಲ್ಲಿ ಆಯೋಜಿಸಿದ್ದ 'ಮನೆಯಂಗಳದಲ್ಲಿ ಮಾತುಕತೆ'ಯ 217ನೇ ಕಾರ್ಯಕ್ರಮದಲ್ಲಿ ತಮ್ಮ ಬಡತನ, ಶಾಲೆ ನಿರ್ಮಿಸಲು ಒದಗಿ ಬಂದ ಸಂದರ್ಭ, ಕಟ್ಟಡಕ್ಕೆ ಹಣ ಸಂಗ್ರಹ, ಶಾಸಕರು ಮತ್ತು ಅಧಿಕಾರಿಗಳು ನೀಡಿದ ನೆರವು ಮತ್ತು ಮಾರ್ಗದರ್ಶನವನ್ನು ವಿನಯದಿಂದ ನೆನಪಿಸಿಕೊಂಡರು.

'ಸಮಾಜ ನನ್ನನ್ನು ಗುರುತಿಸಿದ್ದಕ್ಕೆ ಹೆಮ್ಮೆಯಾಗುತ್ತದೆ. ಒಬ್ಬ ಸಾಮಾನ್ಯ ಮನುಷ್ಯನಿಗೆ ದೇಶದ ಅತ್ಯುನ್ನತ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಜೀವಮಾನದಲ್ಲೇ ಇಂತಹ ಕನಸು ಸಹ ಕಂಡಿರಲಿಲ್ಲ. ಪದ್ಮಶ್ರೀ ಪ್ರಶಸ್ತಿ ಪಡೆಯುವಾಗ ನನ್ನ ಕಣ್ಣಾಲಿಗಳು ತುಂಬಿ ಬಂದವು' ಎಂದು ಭಾವುಕರಾಗಿ ನುಡಿದರು.

'ಸಣ್ಣ ಜೋಪಡಿಯಲ್ಲಿ ನನ್ನ ಬದುಕು ಆರಂಭವಾಗಿತ್ತು. 1974ರ ಜುಲೈ 26ರಂದು ನೆರೆ ಬಂದು ಎಲ್ಲವೂ ಕೊಚ್ಚಿ ಹೋಗಿತ್ತು. ಆಗ ಬೇರೆ ಮನೆ ಮಾಡಿಕೊಳ್ಳಲು ಸರ್ಕಾರ ನೆರವು ನೀಡಿತ್ತು. ಬದುಕಿಗಾಗಿ ಬಸ್ ನಿಲ್ದಾಣದಲ್ಲಿ ಕಿತ್ತಳೆ ಮಾರಾಟ ಮಾಡುತ್ತಿದ್ದಾಗ ಇಂಗ್ಲಿಷ್‌ನಲ್ಲಿ ಕೇಳಿದ ಪ್ರಶ್ನೆ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸಿತು. ನಾನಂತೂ ಕಲಿತಿಲ್ಲ. ನಮ್ಮೂರಿನ ಮಕ್ಕಳಿಗಾದರೂ ಶಾಲೆ ನಿರ್ಮಿಸಬೇಕು ಎನ್ನುವ ಛಲ ಮೂಡಿತು. ಹರೇಕಳದಲ್ಲಿ ಶಾಲೆ ನಿರ್ಮಿಸುವ ಕನಸು ಹಂತ ಹಂತವಾಗಿ ಈಡೇರಿದೆ' ಎಂದು ವಿವರಿಸಿದರು.

'ನನ್ನ ಪತ್ನಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ನನಗೆ ಮೂವರು ಮಕ್ಕಳು. ಬಡತನ ಇದೆ ಎಂದು ಕೊರಗುತ್ತ ಕೂರಲಿಲ್ಲ. ಕಷ್ಟದ ಜೀವನ ದಿಂದಲೇ ಈ ಹಂತಕ್ಕೆ ಬಂದಿದ್ದೇನೆ. ಬಡತನದ ಸಮಸ್ಯೆಯನ್ನು ದೇವರೇ ಪರಿಹರಿಸಿದ್ದಾನೆ. ಈಗ ಹಣಕಾಸಿನ ಪರಿಸ್ಥಿತಿಯೂ ಸುಧಾರಿಸಿದೆ. ಇಂದು ಈ ಬಡವನ ಮನೆಗೆ ಶ್ರೀಮಂತರು ಪ್ರೀತಿಯಿಂದ ಬಂದು ಗೌರವಿಸುತ್ತಾರೆ. ಇದೇ ನಾನು ಸಮಾಜಕ್ಕೆ ನೀಡಿರುವ ಕೊಡುಗೆ ಎಂದು ಭಾವಿಸಿಕೊಳ್ಳುತ್ತೇನೆ' ಎಂದು ನುಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಎಸ್. ರಂಗಪ್ಪ ಇದ್ದರು.

ಪಿಯು ಕಾಲೇಜು ಕೊಡಿ: ಸಿ.ಎಂಗೆ ಮನವಿ

'ಹರೇಕಳದ ನ್ಯೂಪಡ್ಪು ಶಾಲೆಯಲ್ಲಿ ಈಗ ನೂರಾರು ಮಕ್ಕಳು ಕಲಿಯುತ್ತಿದ್ದಾರೆ. ಇವರೆಲ್ಲರೂ ಉತ್ತಮ ವ್ಯಾಸಂಗ ಮಾಡಿ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು ಎನ್ನುವುದು ನನ್ನ ಆಸೆ. ಪಿಯು ಕಾಲೇಜು ಮಂಜೂರು ಮಾಡಿ ಅದಕ್ಕೆ ಅಗತ್ಯ ಇರುವ ಎಲ್ಲ ಸೌಲಭ್ಯಗಳನ್ನು ಕಲ್ಪಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ' ಎಂದು ಹಾಜಬ್ಬ ಹೇಳಿದರು.

ಕೋವಿಡ್-19 29.93 ಲಕ್ಷಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಶನಿವಾರ 213 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.93 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 80 ಸಾವಿರ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.26 ರಷ್ಟು ವರದಿಯಾಗಿದೆ.

ಬೆಂಗಳೂರಿನಲ್ಲಿ 134 ಮಂದಿ ಸೋಂಕಿತರಾಗಿದ್ದಾರೆ.

2021ನೇ ಸಾಲಿನ ಪ್ರಶಸ್ತಿ ಘೋಷಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಅನಂತರಾಮು ಸೇರಿ ಐವರಿಗೆ 'ಗೌರವ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಪ್ರೊ.ಟಿ.ಆರ್. ಅನಂತರಾಮು

ಡಾ. ಗೀತಾ ಶೆಣೈ

ಡಾ.ಟಿ.ಜಿ. ಪ್ರಭಾಶಂಕರ ಪ್ರೇಮಿ

ಈಶ್ವರಚಂದ್ರ

ಡಾ.ರಾಜಾರಾಮ್ ಹೆಗಡೆ

ಡಾ.ಕೆ.ಎಂ. ಶ್ರೀನಿವಾಸಗೌಡ

ಜಿ.ಕೆ. ಶ್ರೀಕಂಠಮೂರ್ತಿ

ಶ್ರುತಿ ಬಿ.ಎಸ್

ಡಾ. ನಾಗಾ ಎಚ್ ಹುಬ್ಳಿ

ಟಿ.ಎಸ್. ನಾಗರಾಜ ಶೆಟ್ಟಿ

ಡಾ. ನಾಗರತ್ನಾ ಹೆಗಡೆ

ಬೆಂಗಳೂರು:ಕುವೆಂಪು ಭಾಷಾ ಭಾರತಿ-ಪ್ರಾಧಿಕಾರ ನೀಡುವ 2021ನೇ ಸಾಲಿನ 'ಗೌರವ ಪ್ರಶಸ್ತಿ'ಗೆ ವಿಜ್ಞಾನ ಲೇಖಕ ಪ್ರೊ.ಟಿ.ಆರ್. ಅನಂತರಾಮು, ಲೇಖಕಿ ಡಾ. ಗೀತಾ ಶೆಣೈ ಸೇರಿದಂತೆ ಐವರು ಆಯ್ಕೆಯಾಗಿದ್ದಾರೆ.

ಪ್ರಾಧಿಕಾರದ ಅಧ್ಯಕ್ಷ ಅಜಕ್ಕಳ ಗಿರೀಶ ಭಟ್ ನೇತೃತ್ವದಲ್ಲಿ ನಡೆದ ಸರ್ವ-ಸದಸ್ಯರ ಸಭೆಯಲ್ಲಿ ಈ ಆಯ್ಕೆ ನಡೆದಿದೆ. ವಿದ್ವಾಂಸ ಡಾ.ಟಿ.ಜಿ. ಪ್ರಭಾಶಂಕರ ಪ್ರೇಮಿ, ಅನುವಾದಕ ಈಶ್ವರಚಂದ್ರ ಹಾಗೂ ಲೇಖಕ ಡಾ. ರಾಜಾರಾಮ್ ಹೆಗಡೆ ಅವರೂ 'ಗೌರವ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

'ಗೌರವ ಪ್ರಶಸ್ತಿ'ಯು ತಲಾ ₹ 50 ಸಾವಿರ ನಗದು ಹಾಗೂ ಫಲಕವನ್ನು ಒಳಗೊಂಡಿದೆ. 2020ನೇ ಸಾಲಿನಲ್ಲಿ ಪ್ರಥಮಾವೃತ್ತಿಯಲ್ಲಿ ಅನುವಾದಗೊಂಡಿರುವ ಐದು ಅನುವಾದಿತ ಪುಸ್ತಕಗಳಿಗೆ 'ಪುಸ್ತಕ ಬಹುಮಾನ' ಪ್ರಕಟಿಸಲಾಗಿದೆ. ಈ ಬಹುಮಾನವು ತಲಾ ₹ 25 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

ಪುಸ್ತಕ ಬಹುಮಾನ: 'ದ ಬ್ರೈಡ್ ಇನ್ ದ ರೈನಿ ಮಂಟೆನ್ಸ್ (ಮಳೆಗಳಲ್ಲಿ ಮದುಮಗಳು ಕಾದಂಬರಿಯ ಅನುವಾದ) – ಡಾ. ಕೆ. ಎಂ. ಶ್ರೀನಿವಾಸಗೌಡ ಮತ್ತು ಜಿ.ಕೆ. ಶ್ರೀಕಂಠಮೂರ್ತಿ (ಕನ್ನಡದಿಂದ ಇಂಗ್ಲಿಷಿಗೆ), 'ನನ್ನ ಬದುಕಿನ ಕಥೆ'-ಶ್ರುತಿ ಬಿ.ಎಸ್. (ಇಂಗ್ಲಿಷ್‌ನಿಂದ ಕನ್ನಡಕ್ಕೆ), 'ಭೂತನಾಥ'–ಡಾ. ನಾಗಾ ಎಚ್.ಹುಬ್ಳಿ (ಇಂಗ್ಲಿಷ್ ಹೊರತಾಗಿ ಬೇರೆ ಭಾರತೀಯ ಭಾಷೆಗಳಿಂದ ಕನ್ನಡಕ್ಕೆ), 'ವಿಶ್ವನಾಥ ಸತ್ಯನಾರಾಯಣ'-ಟಿ.ಎಸ್. ನಾಗಾರಾಜ ಶೆಟ್ಟಿ (ಇಂಗ್ಲಿಷ್ ಹೊರತಾಗಿ ಬೇರೆ ಭಾರತೀಯ ಭಾಷೆಗಳಿಂದ ಕನ್ನಡಕ್ಕೆ), 'ರುಚಿರಾ:ಬಾಲಕಥಾ'–ಡಾ. ನಾಗರತ್ನಾ ಹೆಗಡೆ (ಕನ್ನಡದಿಂದ ಬೇರೆ ಭಾರತೀಯ ಭಾಷೆಗಳಿಗೆ) ಅವರು 'ಪುಸ್ತಕ ಬಹುಮಾನಕ್ಕೆ' ಆಯ್ಕೆಯಾಗಿದ್ದಾರೆ ಎಂದು ಪ್ರಾಧಿಕಾರದ ರಿಜಿಸ್ಟ್ರಾರ್ ಈಶ್ವರ ಕು. ಮಿರ್ಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಟಿ ಹೇಮಮಾಲಿನಿ, ಸಿನಿಮಾ ಲೇಖಕ ಪ್ರಸೂನ್ ಜೋಷಿಗೆ ಪ್ರಶಸ್ತಿ

ಸಿನಿಮೋತ್ಸವ ಉದ್ಘಾಟನೆ: ಸತ್ಯಜಿತ್ ರೇ ಸ್ಮರಣೆ

• ಪ್ರೇಮಕುಮಾರ್ ಹರಿಯಬ್ಬೆ

iffi 2021 52ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಗೋವಾ

ಪಣಜಿ: ಬಹುಭಾಷಾ ನಟಿ ಹೇಮಮಾಲಿನಿ, ಸಿನಿಮಾ ಲೇಖಕ ಪ್ರಸೂನ್ ಜೋಷಿ ಅವರಿಗೆ 'ದ ಫಿಲ್ಮ್ ಪರ್ಸನಾಲಿಟಿ ಆಫ್ ದ ಇಯರ್' ಪ್ರಶಸ್ತಿ ವಿತರಣೆ. ಸತ್ಯಜಿತ್ ರೇ ಜನ್ಮ ಶತಮಾನೋತ್ಸವ ವರ್ಷದ ನೆನಪಿನಲ್ಲಿ ಜೀವಮಾನ ಸಾಧನೆಗಾಗಿ ನೀಡುವ ಪ್ರಶಸ್ತಿಯನ್ನು ಹಾಲಿವುಡ್‌ನ ಹಿರಿಯ ನಿರ್ದೇಶಕ ಮಾರ್ಟಿನ್ ಸೆರ್ಕೋಸಿ ಮತ್ತು ಹಂಗೇರಿಯ ನಿರ್ದೇಶಕ ಇಸ್ಟೆವನ್ ಝಾಬೊ ಅವರಿಗೆ ನೀಡಿದ್ದೇವೆ ಎಂದು ಪ್ರಕಟಿಸಿದ ಕ್ಷಣಗಳು ಇಂದು ಆರಂಭವಾದ 52ನೇ ಭಾರತದ ಅಂತರರಾಷ್ಟ್ರೀಯ ಚಿತ್ರೋತ್ಸವದ ಉದ್ಘಾಟನಾ ಸಮಾರಂಭದ ಪ್ರಮುಖ ಸಂಗತಿಗಳು.

ಸೆರ್ಕೋಸಿ ಮತ್ತು ಇಸ್ಟೆವನ್ ಝಾಬೊ ಸಮಾರಂಭಕ್ಕೆ ಬರಲಿಲ್ಲ. ಇಬ್ಬರೂ ಸಮಾರಂಭಕ್ಕಾಗಿ ಮಾಡಿ ಕಳುಹಿಸಿದ್ದ ವಿಡಿಯೊ ತುಣುಕುಗಳನ್ನು ತೋರಿಸಲಾಯಿತು. ಇಬ್ಬರೂ ಸತ್ಯಜಿತ್ ರೇ ಹೆಸರಿನಲ್ಲಿ ನೀಡುವ ಪ್ರಶಸ್ತಿಗೆ ತಮ್ಮನ್ನು ಆಯ್ಕೆ ಮಾಡಿದ್ದಕ್ಕೆ ಸಂತಸಪಟ್ಟರು.

ಸತ್ಯಜಿತ್ ರೇ ಸಿನಿಮಾ ಜಗತ್ತಿನ ಸಾರ್ವಕಾಲಿಕ ಪ್ರತಿಭಾವಂತ ನಿರ್ದೇಶಕರು. ತಾವೂ ಸೇರಿದಂತೆ ಜಗತ್ತಿನ ಅನೇಕರಿಗೆ ಅವರ ಪಥೇರ್ ಪಾಂಚಾಲಿ ಮತ್ತು ಇತರ ಸಿನಿಮಾಗಳು ಸ್ಫೂರ್ತಿಯಾಗಿದ್ದವು ಎಂದು ಹೇಳಿ ರೇ ಅವರನ್ನು ಸ್ಮರಿಸಿಕೊಂಡರು.

ಗೋವಾ ವಿಶ್ವವಿದ್ಯಾಲಯದ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ಸಂಜೆ ನಡೆದ ಸಮಾರಂಭದಲ್ಲಿ ಗೋವಾ ರಾಜ್ಯಪಾಲ ಪಿ.ಎಸ್. ಶ್ರೀಧರನ್ ಪಿಳ್ಳೈ ದೀಪ ಬೆಳಗಿಸಿ ಚಿತ್ರೋತ್ಸವಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಕೇಂದ್ರ ಪ್ರಸಾರ ಖಾತೆ ಸಚಿವ ಅನುರಾಗ್ ಸಿಂಗ್ ಠಾಕೂರ್, ರಾಜ್ಯ ಸಚಿವ ಎಲ್. ಮುರುಗನ್, ಕೇಂದ್ರ ಇನ್ನೊಬ್ಬ ಸಚಿವ ಶ್ರೀಪಾದ ನಾಯಕ್, ಮುಖ್ಯಮಂತ್ರಿ ಪ್ರಮೋದ್ ಸಾವಂತ್, ನಟಿ ಖುಷ್ಬೂ, ನಿರ್ದೇಶಕಿ ಮಂಜು ಬೋರಾ, ಮಧುರ್ ಭಂಡಾರ್ಕರ್, ಎ. ಕೆ. ಬೀರ್, ರವಿ ಕೊಟ್ಟಾರ್‌ಕರ್ ಮತ್ತಿತರರು ವೇದಿಕೆಯಲ್ಲಿದ್ದರು.

ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮಾತನಾಡಿ, ದೇಶದ ಸ್ವಾತಂತ್ರ್ಯದ ಅಮೃತ ಮಹೋತ್ಸವ ಮತ್ತು ಗೋವಾ ವಿಮೋಚನೆಯ ಅರವತ್ತನೇ ವರ್ಷದ ಆಚರಣೆ ನೆನಪಿನಲ್ಲಿ ಗೋವಾದಲ್ಲಿ ಫಿಲಂ ಸಿಟಿ ನಿರ್ಮಾಣ ಮಾಡುವ ಉದ್ದೇಶವಿದೆ ಎಂದರು.

ಸಮಾರಂಭದಲ್ಲಿ ಸಲ್ಮಾನ್ ಖಾನ್, ರಣಬೀರ್ ಕಪೂರ್, ರಾಶಿ ಖನ್ನಾ ಸೇರಿದಂತೆ ಸಿನಿಮಾರಂಗದ ಅನೇಕ ಗಣ್ಯರು ಹಾಜರಿದ್ದರು. ಉದ್ಘಾಟನೆಯ ನಂತರ ಸ್ಪ್ಯಾನಿಶ್ ಚಿತ್ರ 'ದ ಕಿಂಗ್ ಆಫ್ ಆಲ್ ದ ವರ್ಲ್ಡ್' ಪ್ರದರ್ಶನವಾಯಿತು.

ಶುಕ್ರವಾರ ರಾತ್ರಿ, ಶನಿವಾರ ಮಧ್ಯಾಹ್ನ ಮತ್ತು ಸಂಜೆ ಸುರಿದ ಜಿಟಿಜಿಟಿ ಮಳೆ ಚಿತ್ರೋತ್ಸವದ ಸಡಗರ ಮತ್ತು ಸಂಭ್ರಮಕ್ಕೆ ಅಡ್ಡಿ ಮಾಡಿತು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ ಯುವತಿಯರು ಬೇಕಾಗಿದ್ದಾರೆ. Any education. ವಸತಿಯೂಟದೊಂದಿಗೆ Salary+OT. 17,800-48,000/-. 7204655164, 7204117164

ಬೆಂಗಳೂರಿನ ಮಹಿಳಾ ಹಾಸ್ಟೆಲ್ ನಲ್ಲಿ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ, ಹುದ್ದೆಗಳು: ಅಡುಗೆ ಸಹಾಯಕಿ, ವಾರ್ಡನ್. ಊಟ,ವಸತಿ ಉಚಿತ. ಸಂಪರ್ಕಿಸಿ: 6363516044.

Security & Detectives

GUNMEN, BOUNCERS, Security Guards, Supervisors required at Jigani Bangalore Contact 9611616760

Marketing & Sales

WANTED SALES Executives and Sales Officers for immediate appointment for Vaasuki Sales Corporation (Masala) candidate with experience in Consumer Products (FMCG) 2 to 5 years for Bangalore/ Mysore/ Shimoga/ Chickkamagalur and Hubli Districts. Salary best in the Industry. Contact: 7349729896 / 9686181659. Email: vaasukisales@gmail.com

WANTED SALES Executives with Good Industrial Knowledge. Bike Must Jain Bearings. 09986781877, 09741966767.

Wanted

ಬೆಂಗಳೂರಿನ ದೇವಸ್ಥಾನದಲ್ಲಿ ಕೆಲಸ ಮಾಡಲು ವೇದ ಮಂತ್ರಗಳನ್ನು ಅರಿತಿರುವ ಬ್ರಾಹ್ಮಣ ಸಹಾಯಕ ಅರ್ಚಕರು ಬೇಕಾಗಿದ್ದಾರೆ. ಸಂಪರ್ಕಿಸಿ : 7019132200, 080- 25300714

ಸುವರ್ಣಾವಕಾಶ : ರಾಜ್ಯಾದ್ಯಂತ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್‌ಗಳು ಬೇಕಾಗಿದ್ದಾರೆ. ಜೊತೆಗೆ ತರಬೇತಿ ಕೊಡಲಾಗುತ್ತದೆ. ಸಂ : 7795287591.

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Mysore

SALE OF plot in Mysore near Lalit Mahal Palace measuring 6527 sqft. Price 9000/- per sqft. For more details, only genuine buyers Call: 8904007677. Brokers excuse.

ಭವಿಷ್ಯ

Astrology

★॥ಶ್ರೀಶಿರಿಡಿಸಾಯಿಬಾಬಾ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ,ಕಂಕಣಭಾಗ್ಯ, ಸಾಲದಬಾದೆ ಇನ್ನೂಯಾವುದೇ ಕಠಿಣ ಗುಪ್ತ ಸಮಸ್ಯೆಗಳಿಗೆ 11ಗಂಟೆಗಳಲ್ಲಿ ಪರಿಹಾರ. ಪಂಡಿತ್.ವಿಕ್ರಮ್‌ಭಟ್ 9972654095

★॥ಕೆಲಸ ಆದ ನಂತರ ಕಾಣಿಕೆ॥* ವಶೀಕರಣ ಆಗಬೇಕಾದವರಿಗೆ ಹಚ್ಚುವುದಾಗಲಿ, ತಿನ್ನಿಸುವುದಾಗಲಿ, ಬಟ್ಟೆ, ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, 7ಗಂಟೆಗಳಲ್ಲಿ ಪರಿಹಾರ. 9482529984

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಉಚಿತ ಜ್ಯೋತಿಷ್ಯವಾಣಿ. ರಾಘವೇಂದ್ರ ಕುಲಕರ್ಣಿ. ಜನವಶ, ಧನವಶ,ಶತ್ರುಬಾಧೆ, ವಶೀಕರಣ, ಇನ್ನಿತರ ಸಮಸ್ಯೆಗಳಿಗೆ ಫೋನಿನ ಮೂಲಕ ಶೀಘ್ರದಲ್ಲಿ ಪರಿಹಾರ. 9535759222.

ADMISSION CORNER

ಸ್ಪರ್ಧಾಮಿತ್ರ ACADEMY
PSI/ FDA / SDA
Paper-1 & Paper-2
IAS / KAS / IBPS / BANK-PO
ADMISSION OPEN
Online & Offline Classes
Near Attigupppe Metro Station, Service Road, Vijayanagar, Bengaluru - 40.
9535111188 / 9535111199

ಪ್ರವಾಸ

Travel

18.12.2021, 12 ದಿನಗಳ ದೆಹಲಿ, ಶಿಮ್ಲಾ, ಕುಲು, ಮನಾಲಿ, ವೈಷ್ಣೋದೇವಿ, 18.12.2021, 11.01.2022, 12 ದಿನಗಳ ಸಂಪೂರ್ಣ ರಾಜಸ್ಥಾನ್ 21.12.2021, 7 ದಿನಗಳ ದೆಹಲಿ, ಆಗ್ರಾ,ಜೈಪುರ, ಹರಿದ್ವಾರ್, ರಿಷಿಕೇಶ್. 11.01.2022, 11 ದಿನಗಳ ಸಂಪೂರ್ಣ ಮಧ್ಯಪ್ರದೇಶ. 18.01.2022, 14 ದಿನಗಳ ಸಂಪೂರ್ಣ ಗುಜರಾತ್ ಮತ್ತು ರನ್‌ಆಫ್‌ಕಚ್, 18.01.2022, 21 ದಿನಗಳ ಸೆವೆನ್ ಸಿಸ್ಟರ್ಸ್ ಟೂರ್ 6.01.2022, 5 ದಿನಗಳ ಮಂತ್ರಾಲಯ, ಶ್ರೀಶೈಲಂ, ಆಹೋಬಿಲಂ, ಯಾಗಂಟಿ 20.1.2022, 8 ದಿನಗಳ ಶಿರಡಿ, ನಾಸಿಕ್, ಭೀಮಾಶಂಕರ, ಪಂಡರಾಪುರ, ಕೊಲ್ಹಾಪುರ, ಅಜಂತಾ, ಎಲ್ಲೋರ, ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್ ಬೆಂಗಳೂರು-40. 9342848791, 9880847001

12-11-2021 ಈಶ ಫೌಂಡೇಶನ್,ಏರ್ಕಾರ್ಡ. 25.11.2021 ಶಿರಡಿ, ಕೊಲ್ಹಾಪುರ್. 22-12-2021 ಗುಜರಾತ್. 6-1-2022 ಅಂಡಮಾನ್. 18-1-2022 ಕಾಶಿ,ಅಯೋಧ್ಯ. ನಂದಿನಿ ಟೂರಿಸ್ಟ್. 9916574089

24-12-21 ಶಿರಡಿ, ಮಹಾರಾಷ್ಟ್ರ ಜ್ಯೋತಿರ್ಲಿಂಗಗಳು, ಕೇರಳ, ತಮಿಳುನಾಡು ಪ್ರವಾಸಗಳು, ಜನವರಿಯಿಂದ ಜೂನ್‌ವರೆಗೆ ಆಗ್ರಾ, ದೆಹಲಿ, ಅಮೃತಸರ್, ವೈಷ್ಣೋದೇವಿ, ಹರಿದ್ವಾರ, ಕಾಶಿ, ಗಯಾ, ನೇಪಾಳ, ಮಧ್ಯಪ್ರದೇಶ, ಗುಜರಾತ್, ರಾಜಸ್ತಾನ, ಚಾರ್ ಧಾಮ್, ಅಮರನಾಥ, ಪ್ರವಾಸಗಳಿಗೆ ಸಂಪರ್ಕಿಸಿ : ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಸಾರ್ವಜನಿಕ ಪ್ರಕಟಣೆ

KBNBFC
ಕ್ರೇಜಿಬೀ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
ಸಿಐಎನ್: U65100KA2016PTC086990
ನೋಂದಾಯಿತ ಕಚೇರಿ: 3ನೇ ಮಹಡಿ, 128/9, ಮಾರುತಿ ಸಫೈರ್, ಹಳೆಯ ಹೆಚ್‌ಎಎಲ್ ಏರ್‌ಪೋರ್ಟ್ ರಸ್ತೆ, ಮುರುಗೇಶಪಾಳ್ಯ, ಬೆಂಗಳೂರು–560017
ಕಚೇರಿ ಶಾಖೆ ಸ್ಥಗಿತಗೊಳಿಸುವ ಕುರಿತ
ಸಾರ್ವಜನಿಕ ಪ್ರಕಟಣೆ
ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ನಂ.201, 1ನೇ ಮಹಡಿ (ಲೆವೆಲ್3), ರಾಯಲ್ ಸ್ಟೋನ್, ಟೆಕ್ ಪಾರ್ಕ್, 2ನೇ ಮುಖ್ಯರಸ್ತೆ ಪೈ ಲೇಔಟ್, ಬೆನ್ನಿಗಾಣಹಳ್ಳಿ, ಬೆಂಗಳೂರು 560016 ವಿಳಾಸದಲ್ಲಿ ಸ್ಥಿತಗೊಂಡಿರುವ ಕಂಪನಿಯ ಶಾಖಾ ಕಚೇರಿಯನ್ನು 1ನೇ ಮಾರ್ಚ್, 2022 ರಿಂದ ಜಾರಿಗೊಂಡಂತೆ ಸ್ಥಗಿತಗೊಳಿಸಲಾಗುತ್ತಿದೆ.
ಭವಿಷ್ಯದಲ್ಲಿನ ಎಲ್ಲಾ ಪತ್ರವ್ಯವಹಾರಗಳನ್ನು ಕಡ್ಡಾಯವಾಗಿ, 3ನೇ ಮಹಡಿ, 128/9, ಮಾರುತಿ ಸಫೈರ್, ಹಳೆಯ ಹೆಚ್‌ಎಎಲ್ ಏರ್‌ಪೋರ್ಟ್ ರಸ್ತೆ, ಮುರುಗೇಶಪಾಳ್ಯ, ಬೆಂಗಳೂರು–560017 ವಿಳಾಸದಲ್ಲಿ ಸ್ಥಿತಗೊಂಡಿರುವ ಕಂಪನಿಯ ನೋಂದಾಯಿತ ಕಚೇರಿಯೊಂದಿಗೆ ಮಾಡತಕ್ಕದ್ದು. ಉದ್ದೇಶ/ಕಾರಣ: ದೀರ್ಘಕಾಲದಿಂದ ಸದರಿ ಶಾಖಾ ಕಚೇರಿಯು ನಿಷ್ಕ್ರಿಯವಾಗಿ ಉಳಿದಿತ್ತು.
#ಸದರಿ ಕಂಪನಿಯು ಒಂದು ಸಿಸ್ಟೆಮ್ಯಾಟಿಕಲಿ ಇಂಪಾರ್ಟೆಂಟ್ ನಾನ್–ಡೆಪಾಸಿಟ್ ಟೇಕಿಂಗ್ ಎನ್‌ಬಿಎಫ್‌ಸಿ ಕಂಪನಿಯಾಗಿದ್ದರಿಂದ, ಡೆಪಾಸಿಟ್‌ದಾರರಿಗೆ ಸೇವಾ ವ್ಯವಸ್ಥೆಗಳನ್ನು ಮಾಡಲಾಗುತ್ತಿಲ್ಲ.
ಕ್ರೇಜಿಬೀ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಪರವಾಗಿ
ಸಹಿ/–
ಪಲ್ಲವಿ ಲಿಂಗರಾಜು, ಕಂಪನಿ ಕಾರ್ಯದರ್ಶಿ, ಎಂ.ನಂ. ಎ56733
ದಿನಾಂಕ: 21.11.21
ಸ್ಥಳ: ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪದ್ಮಶ್ರೀ ಹೊತ್ತ ಕಿತ್ತಳೆ ಬುಟ್ಟಿ 11

ವ್ಯಾಯಾಮ ಹಲವು ಆಯಾಮ

ಪ್ರಜಾವಾಣಿ ಚಿತ್ರ: ಇರ್ಷಾದ್ ಮಹಮ್ಮದ್

ವಿಶಾಖ ಎನ್.

ಎತ್ತರದ ಕಟ್ಟಾಳುವಿನಂತಿದ್ದ ಹಿರಿಯ ನಟ ಲೋಕನಾಥ್ ಹಿಂದೊಮ್ಮೆ ಕೆ.ವಿ. ಅಯ್ಯರ್ ವ್ಯಾಯಾಮ ಶಾಲೆಯ ಅನುಭವಗಳನ್ನು ಹೇಳಿಕೊಂಡಿದ್ದರು. ಅಲ್ಲಿ ಯುವಕರು ಬರೀ ಸಾಮು ಮಾಡುತ್ತಿರಲಿಲ್ಲ. ಭಟ್ಟಿ ಎಳೆಯುತ್ತಿರಲಿಲ್ಲ. ಮನಸ್ಸಿಗೂ ಸಾರ ಇಳಿಸಿಕೊಳ್ಳುತ್ತಿದ್ದರು. ಸಾಹಿತ್ಯ, ರಂಗಭೂಮಿ ಕುರಿತ ಮಾತುಕತೆಗೂ ಅದು ಚಾವಡಿ. ಈಗ ದೇಹವ ದೇಗುಲ ಎಂದುಕೊಂಡವರ ಬಾಯಲ್ಲಿ 'ಫಿಟ್‌ನೆಸ್ ಪರ್ಯಾಯ'ಗಳದ್ದೇ ಮಾತು. ಪುನೀತ್ ರಾಜ್‌ಕುಮಾರ್ ಅಷ್ಟೆಲ್ಲ ಶ್ರದ್ಧೆಯಿಂದ ದೇಹ ದಂಡಿಸಿ, ಮನಸ್ಸನ್ನು ಶುದ್ಧವಾಗಿಟ್ಟುಕೊಂಡೂ ದಿಢೀರನೆ ಅಗಲಿದರಲ್ಲ. ಫಿಟ್‌ನೆಸ್ ಪರ್ಯಾಯದ ಮಾತು ಕುದಿಬಿಂದುವಿನ ಮಟ್ಟಕ್ಕೆ ಏರಲು ಬೇರೇನು ಕಾರಣ ಬೇಕು?

ಕೋವಿಡ್ ಬಂದಮೇಲೆ ತಿಂಗಳುಗಟ್ಟಲೆ ದಣಿದ ದೇಹವ ಮುದುಡಿಸಿಕೊಂಡೇ ಇದ್ದವರ ನಡುವೆ ನಟ, ಮಾಡೆಲ್ ಮಿಲಿಂದ್ ಸೋಮನ್ ಒಂದು ಪ್ರಾತ್ಯಕ್ಷಿಕೆ ಕೊಟ್ಟರು. ಅದು ಅವರದ್ದೇ ಕ್ಷಮತೆಯ ಪರೀಕ್ಷೆಯಾಗಿತ್ತು. ಇದೇ ವರ್ಷ ಏಪ್ರಿಲ್ ಮೊದಲ ವಾರದವರೆಗೆ ಕೋವಿಡ್‌ನಿಂದಾಗಿ ವ್ಯಾಯಾಮಕ್ಕೆ ಅವರು ಅಲ್ಪವಿರಾಮ ಹಾಕಿದ್ದರು. ಅದೊಂದು ದಿನ ಬೆಳಿಗ್ಗೆ ಎದ್ದವರೇ 5 ಕಿ.ಮೀ. ಓಡಿದರು. ತಮ್ಮ ಪತ್ನಿಯಿಂದಲೇ ಓಟದ ವಿಡಿಯೊ ಚಿತ್ರೀಕರಣ ಮಾಡಿಸಿದರು. 40 ನಿಮಿಷಗಳಲ್ಲಿ ಅವರು ಓಟ ಪೂರೈಸಿದ್ದರು. ತಮ್ಮ ಓಟದ ವಿಡಿಯೊವನ್ನು ತಾವೇ ನೋಡಿ, 'ನಾಟ್ ಬ್ಯಾಡ್' ಎಂದು ಉದ್ಗರಿಸಿದ್ದೇ ಅಲ್ಲದೆ ಅದನ್ನು ಸಾಮಾಜಿಕ ಜಾಲತಾಣಗಳಲ್ಲೂ ಹಾಕಿಕೊಂಡರು. ಐವತ್ತೈದರ ಹರೆಯದಲ್ಲಿ ಅವರ ಈ ಫಿಟ್‌ನೆಸ್ ಟೆಸ್ಟ್ ಎಂಥವರಿಗೂ ಮಾದರಿ.

> ಜಿಮ್‌ಗೆ ಹೋಗಿ ಭಾರ ಎತ್ತಿಯೇ ಫಿಟ್‌ನೆಸ್ ಕಾಪಾಡಿಕೊಳ್ಳಬೇಕು ಎಂದೇನೂ ಇಲ್ಲ. ಅದಕ್ಕೆ ದಾರಿ ನೂರಾರುಂಟು. ಏನು ಕಸರತ್ತು ಮಾಡಿದರೂ ಊಟಾಹಾರ ಸರಿಯಾಗಿರಬೇಕು, ಪರಿಣತರನ್ನು ಕೇಳಿಯೇ ಮುನ್ನಡೆಯಬೇಕು ಎನ್ನುವುದಕ್ಕೆ ಅಡಿಗೆರೆ ಎಳೆಯಬೇಕು. ಹ್ಞಾಂ, ದೇಹ ಕಟೆಯಲು ಹೊರಟವರು ಇದನ್ನೊಮ್ಮೆ ಓದಿಬಿಡಿ...

ಕೋವಿಡ್ ಸೋಂಕಿಗೊಳಗಾದವರ ಶ್ವಾಸಕೋಶದ ಚಟುವಟಿಕೆ ಮೊದಲಿನಂತೆ ಇರುವುದಿಲ್ಲ, ರಕ್ತ ಹೆಪ್ಪುಗಟ್ಟುವಿಕೆಯ ಮೇಲೂ ವ್ಯತಿರಿಕ್ತ ಪರಿಣಾಮಗಳಾಗುತ್ತವೆ ಎಂಬ ಅಭಿಪ್ರಾಯಗಳಿವೆ. ಅವುಗಳ ಬಗೆಗೆ ನಿಯಮಿತ ಪರೀಕ್ಷೆಗೆ ಒಳಪಡುತ್ತಲೇ, ತಮ್ಮ ದೈನಂದಿನ ಫಿಟ್‌ನೆಸ್ ಚಟುವಟಿಕೆಗಳಿಗೆ ಹೊರಳಿಕೊಳ್ಳಬೇಕು ಎನ್ನುವುದು ಮಿಲಿಂದ್ ಸಂಕಲ್ಪ.

ಜಿಮ್‌ನಲ್ಲಿ ಭಾರ ಎತ್ತುವುದರಿಂದಷ್ಟೇ ದೇಹ ಕಟೆಯಬೇಕು ಎನ್ನುವ ಯುವಮನದ ಉತ್ಸಾಹ ಈಗ ಕಾಣುತ್ತಿದೆ. ಆದರೆ, ಅದಕ್ಕೆ ಪರ್ಯಾಯವಾದ ಬರ್ಪೀಸ್, ಫ್ಲ್ಯಾಂಕ್ಸ್, ಪುಷ್-ಅಪ್ಸ್, ಮೌಂಟೇನ್ ಕ್ಲೈಂಬರ್ಸ್, ಸ್ಕ್ವಾಟ್ಸ್ ಇವೆಲ್ಲವನ್ನೂ ಜಿಮ್‌ಗೆ ಹೋದವರಿಗೂ ಹೇಳಿಕೊಡಲಾಗುತ್ತಿದೆ. ಇವು ಭಾರ ಎತ್ತುವುದನ್ನು ಬಿಟ್ಟು ಮಾಡಬಹುದಾದ ವ್ಯಾಯಾಮಗಳು. ತನ್ನ ದೇಹತೂಕವನ್ನು ಅವಯವಗಳು ನಿಭಾಯಿಸುವಂತೆ ಮಾಡಬಹುದಾದ ಇಂತಹ ಕಸರತ್ತುಗಳಿಗೆ ಫಿಟ್‌ನೆಸ್ ಗುರುಗಳು ಹೆಚ್ಚು ಒತ್ತುನೀಡುತ್ತಾರೆ.

ಝುಂಬಾ, ಪವರ್‌ಯೋಗ, ಏರೋಬಿಕ್ಸ್, ಸ್ಕಿಪ್ಪಿಂಗ್, ಈಜು, ಬ್ಯಾಡ್ಮಿಂಟನ್ ತರಹದ ಹೊರಾಂಗಣ ಆಟಗಳು, ಬಿರುನಡಿಗೆ ಅಥವಾ ಬ್ರಿಸ್ಕ್ ವಾಕ್, ಸೊಂಟ ಹಾಗೂ ಪೃಷ್ಠದ ಭಾಗಗಳನ್ನು ಗಿರಗಿರನೆ ತಿರುಗಿಸುವ ಹುಲಾ ಹೂಪ್, ಕಿಕ್ ಬಾಕ್ಸಿಂಗ್, ರೋಲರ್ ಸ್ಕೇಟಿಂಗ್ ಇವೆಲ್ಲವೂ ಫಿಟ್‌ನೆಸ್ ಕಾಪಾಡಿಕೊಳ್ಳಲು ಇರುವ ಪರ್ಯಾಯಗಳು. ಇವುಗಳಲ್ಲಿ ಬಹುತೇಕವು ನಗರ ನಾಗರಿಕತೆಯ ಭಾಗಗಳೇ ಆಗಿವೆ.

ಪ್ರತಿ ದೇಹವೂ ಭಿನ್ನ ಎಂದೇ ವೈದ್ಯಲೋಕ ವಿಶ್ಲೇಷಿಸುತ್ತದೆ. ಹೀಗಾಗಿ ವ್ಯಾಯಾಮ ಮಾಡುವ ಮೊದಲು ತನ್ನತನವನ್ನು ಭೌತಿಕವಾಗಿ, ಆರೋಗ್ಯದ ದೃಷ್ಟಿಯಿಂದ ಅರಿಯುವುದು ಒಳಿತು. ಹೃದ್ರೋಗ ಇರಲಿ ಬಿಡಲಿ, ವ್ಯಾಯಾಮಕ್ಕೆ ಏರೋಬಿಕ್ಸ್ ತರಹದ ಚಟುವಟಿಕೆಯೇ ಅತ್ಯುತ್ತಮ ಎಂದು ಹೃದಯ, ರಕ್ತನಾಳ ಮತ್ತು ಎದೆರೋಗಗಳ ತಜ್ಞರಾದ, ದಾವಣಗೆರೆಯ ಡಾ. ಎಚ್.ಎಲ್.ಸುಬ್ಬರಾವ್ ಕಿವಿಮಾತು ಹೇಳುತ್ತಾರೆ.

ಜಿಮ್‌ನಲ್ಲಿ ಭಾರ ಎತ್ತುವ ಮೂಲಕ ದೇಹ ಕಟೆಯುವುದನ್ನು ಅವರು 'ಐಸೋಮೆಟ್ರಿಕ್ ವ್ಯಾಯಾಮ' ಎಂದು ವಿಶ್ಲೇಷಿಸುತ್ತಾರೆ. ಒಂದೇ ಸ್ಥಿತಿಯಲ್ಲಿ ನಿಂತು ಮಾಡುವ ಈ ವ್ಯಾಯಾಮದಿಂದ ಸ್ನಾಯುಗಳೇನೋ ಗಟ್ಟಿಯಾಗುತ್ತವೆ. ಆದರೆ, ಕೀಲುಗಳು ಹಾಗೂ ಅವುಗಳ ಸುತ್ತಲಿನ ಸ್ನಾಯುಗಳ ಸ್ಥಿತಿಸ್ಥಾಪಕತ್ವ ಹಾಳಾಗುತ್ತದೆ. ಶಟಲ್ ಆಡಿದರೆ ನಮ್ಮ ಇಡೀ ದೇಹ ಚಟುವಟಿಕೆಗೆ ಒಳಪಡುತ್ತದೆ. ಕೈಗಳು, ಕಾಲುಗಳು, ಜ್ಞಾನೇಂದ್ರಿಯಗಳೆಲ್ಲ ಆ ಆಟದಲ್ಲಿ ತೊಡಗುತ್ತವೆ. ಹೀಗಾದಾಗ ಸ್ನಾಯುಗಳ ಚಲನೆ, ಕೀಲುಗಳ ವರ್ತನೆ ಅತಿ ಆರೋಗ್ಯವಾಗಿ ಇರುತ್ತದೆ. ಹೃದಯದ ತಾಳಿಕೊಳ್ಳುವಿಕೆಗೆ ಅಥವಾ ಪ್ರತಿರೋಧ ಸಾಮರ್ಥ್ಯಕ್ಕೆ ಇಂತಹ ಚಟುವಟಿಕೆಯೇ ಸರಿ ಎನ್ನುವುದು ಸುಬ್ಬರಾವ್ ಮಾತು.

ಡಾ.ಎಚ್.ಎಲ್. ಸುಬ್ಬರಾವ್

ರಕ್ತದೊತ್ತಡ ಹೆಚ್ಚಾಗಿರುವ, ಮಧುಮೇಹದ ಸಮಸ್ಯೆ ಇರುವ ಯುವಕರಾಗಲೀ, ವಯಸ್ಸಾದವರಾಗಲೀ ಭಾರ ಎತ್ತುವ ವ್ಯಾಯಾಮಗಳನ್ನು ಮಾಡಲೇಕೂಡದು ಎನ್ನುವುದು ಅವರ ಖಚಿತ ಸಲಹೆ. ಅವರು ಹೇಳುವಂತೆ, ಸಾಮಾನ್ಯವಾಗಿ ಜಿಮ್‌ನಲ್ಲಿ ವ್ಯಾಯಾಮ ಮಾಡುವವರ ದೇಹ 'ವಿ' ಆಕಾರದಲ್ಲಿ ಇರುತ್ತದೆ, ಭುಜ-ತೋಳುಗಳು, ವಕ್ಷಸ್ಥಳ, ಟ್ರೈಸಿಪ್ಸ್ ಎಲ್ಲವೂ ಕಟೆದಂತೆ. ಸ್ನಾಯುಗಳೆಲ್ಲ ಗಟ್ಟಿಯಾಗಿ ನೋಡಲು ಮೋಹಕವೆನ್ನಿಸುವ ಆಕಾರ ದೊರೆಯುತ್ತದೆ. ಆದರೆ, ಕಾಲಿನ ಸ್ನಾಯುಗಳನ್ನು ಇದೇ ರೀತಿ ಬರೀ ಗಟ್ಟಿ ಮಾಡಿದರೆ ಸಾಲದು. ಭಾರವನ್ನು ಕಾಲಿನ ಪಾದಗಳಿಂದ ತುಳಿದು, ನೂಕುವುದೂ ಕಸರತ್ತಿನ ವರಸೆ. ಇದರಿಂದ ಸ್ನಾಯು ಗಟ್ಟಿಯಾಗಿ ಶೇಪ್ ಬರಬಹುದೇ ವಿನಾ ಒಳಗಿನ ರಕ್ತ ಪರಿಚಲನೆ ಉತ್ತಮ ರೀತಿಯಲ್ಲಿ ಇರುವುದಿಲ್ಲ. ಅದಕ್ಕೆ ಟ್ರೆಡ್‌ಮಿಲ್, ಬ್ರಿಸ್ಕ್ ವಾಕ್, ಜಾಗಿಂಗ್ ಅತ್ಯಗತ್ಯ.

ಶೀಲಾ ಕೃಷ್ಣಸ್ವಾಮಿ

'ದೇಹದ ಕೆಳಗಿನ ಭಾಗದ ರಕ್ತ ಪರಿಚಲನೆಯನ್ನು ಡಯಸ್ಟಾಲಿಕ್ ಎನ್ನುತ್ತೇವೆ, ಮೇಲಿನದ್ದು ಸಿಸ್ಟಾಲಿಕ್. ಕೆಲವರು ಹೆಸರಿಗಷ್ಟೇ ಟ್ರೆಡ್‌ಮಿಲ್ ಮಾಡುತ್ತಾರೆ. ಯಾರು ಭಾರ ಎತ್ತದೆ ಪರ್ಯಾಯ ವ್ಯಾಯಾಮಗಳನ್ನಷ್ಟೇ ಮಾಡುತ್ತಾರೋ ಅಂಥವರಲ್ಲಿ ಹೃದಯದ ಆರೋಗ್ಯ ಉತ್ತಮವಾಗಿರುತ್ತದೆ. ಪರ್ಯಾಯ ವ್ಯಾಯಾಮಗಳಷ್ಟೇ ಅಲ್ಲದೆ ಉಸಿರಾಟವನ್ನು ಉತ್ತಮಗೊಳಿಸುವ ಪ್ರಾಣಾಯಾಮ, ಸ್ನಾಯುಗಳ ಬಾಗುವಿಕೆಗೆ ಪೂರಕವಾದ ಯೋಗ ಕೂಡ ಬೇಕು' ಎನ್ನುತ್ತಾರೆ ಡಾ. ಸುಬ್ಬರಾವ್.

ವ್ಯಾಯಾಮದ ವಿಷಯ ಇದಾಯಿತು. ಇನ್ನು ಊಟ-ತಿಂಡಿಯ ತಥ್ಯ. ಎಲ್ಲರಿಗೂ ಇರುವುದಿಲ್ಲ ಒಂದೇ ರೀತಿಯ ಪಥ್ಯ ಎಂದೇ ಎಚ್ಚರಿಕೆಯ ದನಿಯ ಸಮೇತ ಮಾತಿಗೆ ತೆರೆದುಕೊಂಡರು ಡಯಟಿಷಿಯನ್ ಶೀಲಾ ಕೃಷ್ಣಸ್ವಾಮಿ. ಮನುಷ್ಯನ ದೇಹದ ಎತ್ತರ-ಗಾತ್ರ-ತೂಕ, ಲಿಪಿಡ್ ಪ್ರೊಫೈಲ್ ಕೊಡುವ ರೀಡಿಂಗ್‌ಗಳು ಎಲ್ಲವನ್ನೂ ಪರಿಶೀಲಿಸಿಯೇ ಆಹಾರ ಕ್ರಮವನ್ನು ನಿರ್ಧರಿಸುವುದು ಸೂಕ್ತ ಎನ್ನುತ್ತಾರೆ ಅವರು. ವ್ಯಾಯಾಮಶಾಲೆಗಳಿಗೆ ಹೋಗುವವರು ಅಲ್ಲಿ ಕಲಿಸುವ ತರಬೇತುದಾರರನ್ನೇ ಎಲ್ಲದಕ್ಕೂ ನೆಚ್ಚಿಕೊಳ್ಳುತ್ತಾರೆ. ಇಲ್ಲವಾದರೆ ಆಪ್ತೇಷ್ಟರ ಸಲಹೆ ಪಡೆದು ಆಹಾರಕ್ರಮ ನಿರ್ಧರಿಸಿಕೊಳ್ಳುತ್ತಾರೆ. ಕೆಲವರು ಇಂಟರ್‌ನೆಟ್ ನೋಡಿ ಸ್ವಯಂ ತೀರ್ಮಾನಕ್ಕೆ ಬರುವುದೂ ಉಂಟು. ಇವೆಲ್ಲವೂ ಸರಿಯಲ್ಲ ಎನ್ನುತ್ತಾರೆ ಶೀಲಾ.

'ಒಬ್ಬೊಬ್ಬರನ್ನು ನಾವು 45 ನಿಮಿಷದಿಂದ 60 ನಿಮಿಷ ಕೌನ್ಸೆಲಿಂಗ್ ಮಾಡುತ್ತೇವೆ. ಅವರ ಜೀವನಕ್ರಮ, ಆಹಾರಕ್ರಮ ಹೇಗಿದೆ ಎಂದು ವಿವರವಾಗಿ ತಿಳಿದುಕೊಳ್ಳಬೇಕು. ಹೀಗಾಗಿ ಇದು ಅನಿವಾರ್ಯ. ವಾರಕ್ಕೆ ಎಷ್ಟು ಬಾರಿ, ಯಾವ ಸೊಪ್ಪು ತಿನ್ನುತ್ತಾರೆ, ಐಸ್‌ಕ್ರೀಂ ತಿನ್ನುವ ಅಭ್ಯಾಸವಿದ್ದರೆ ಎಷ್ಟು ಸಲ? ಪಾನಿಪೂರಿಯನ್ನೋ ಮತ್ಯಾವುದೋ ಜಂಕ್ ಫುಡ್ ಅನ್ನೋ ಎಷ್ಟು ಬಾರಿ ಸೇವಿಸುತ್ತಾರೆ ಎಂದೆಲ್ಲ ಕೂಲಂಕಷವಾಗಿ ಕೇಳುತ್ತೇವೆ. ನಿದ್ದೆ ಮಾಡುವ ಅವಧಿ, ನಿತ್ಯದ ಚಟುವಟಿಕೆಯ ಟೈಮ್‌ಲೈನ್ ಇತ್ಯಾದಿ ಮಾಹಿತಿ ಪಡೆದ ಮೇಲೆ ಯಾವ ಆಹಾರಕ್ರಮ ಹೇಳಬೇಕೆಂದು ತಿಳಿಸುತ್ತೇವೆ' ಎಂದು ತಮ್ಮ ಕಾರ್ಯವಿಧಾನವನ್ನು ಬಿಚ್ಚಿಡುತ್ತಾರೆ ಈ ಡಯಟಿಷಿಯನ್.

ಮಿಲಿಂದ್ ಸೋಮನ್ ತರಹದ 'ಫಿಟ್‌ನೆಸ್ ಫ್ರೀಕ್'ಗಳು ಈಗ ವ್ಯಕ್ತವಾದ ಎಲ್ಲವನ್ನೂ ಅನುಸರಿಸುತ್ತಾರೆ. ತಮ್ಮ ದೇಹವನ್ನು ಸಿಂಗಲ್ ಬಾರ್‌ನಲ್ಲಿ ಲೀಲಾಜಾಲವಾಗಿ ಮೇಲಕ್ಕೆತ್ತುತ್ತಾ ಕೆಳಗಿಳಿಸುವುದನ್ನು ನೋಡಿದರೆ ಧಮನಿ ಧಮನಿಯಲ್ಲೂ ಉತ್ಸಾಹ ತುಂಬುತ್ತದೆ. ಪುನೀತ್ ಕೂಡ ಹಾಗೆಯೇ ಇದ್ದರು.

ಏನಾದರೂ ಮಾಡಿ... ಸರಿಯಾಗಿ ಮಾಡಿ

ಚೇತನ್ ಡಿಸೋಜಾ

ಕ್ರಾಸ್‌ಫಿಟ್, ಕ್ಯಾಲ್‌ಸ್ನೇಕ್, ಜಿಮ್ನಾಸ್ಟಿಕ್ ಫಾರ್ಮ್ಸ್ ಇಂತಹ ಪರ್ಯಾಯಗಳೆಲ್ಲ ಭಾರ ಎತ್ತುವ ವ್ಯಾಯಾಮಕ್ಕೆ ಇವೆ ಎಂದು ಹೇಳಿದವರು ಚೇತನ್ ಡಿಸೋಜಾ. ಪುನೀತ್ ಅಭಿನಯದ ಕೊನೆಯ ಚಿತ್ರ 'ಜೇಮ್ಸ್'ನ ಸ್ಟಂಟ್‌ಗಳನ್ನು ರೂಪಿಸಲು ಕೆಲಸ ಮಾಡಿರುವ ಇವರು, ಪುನೀತ್ ಅವರ ಸಹಭಾಗಿತ್ವದಲ್ಲಿ ಹೆಬ್ಬಾಳದಲ್ಲಿ ಒಂದು ಜಿಮ್ ಪ್ರಾರಂಭಿಸಲೂ ಸಿದ್ಧತೆ ನಡೆಸಿದ್ದರು. ಅವರು ಫಿಟ್‌ನೆಸ್ ಕುರಿತು ಹೀಗೆನ್ನುತ್ತಾರೆ:

'ಮನುಷ್ಯನ ದೇಹವನ್ನು ಯಾವ ವ್ಯಾಯಾಮಕ್ಕೆ ಬೇಕಾದರೂ ಅಣಿಗೊಳಿಸಬಹುದು. ಪೂರಕವಾಗಿ ನಿದ್ದೆ, ಆಹಾರ ತೆಗೆದುಕೊಳ್ಳುವ ರೀತಿ ಸರಿಯಾಗಿ ಇರಬೇಕು. ದೇಹವನ್ನು ದಂಡಿಸಿದ ಮೇಲೆ ಚೇತರಿಸಿಕೊಳ್ಳಲು ಇಂತಿಷ್ಟು ಕಾಲಾವಕಾಶ ನೀಡಬೇಕು ಎಂದಿರುತ್ತದೆ. ಇದನ್ನು ಉಪೇಕ್ಷಿಸಿದರೆ ವ್ಯಾಯಾಮ ಮಾಡಿಯೂ ಪ್ರಯೋಜನವಿಲ್ಲ. ಒಂದಿಷ್ಟು ದಿನ ಝುಂಬಾ ಮಾಡಿ, ಇನ್ನಷ್ಟು ಸಮಯ ಕಿಕ್ ಬಾಕ್ಸಿಂಗ್ ಮಾಡಿ, ಅದಾದ ಮೇಲೆ ಸ್ವಲ್ಪ ದಿನಗಳ ನಂತರ ಏರೋಬಿಕ್ಸ್ ಮಾಡಿದರೂ ತೊಂದರೆ ಇಲ್ಲ. ಆದರೆ, ಎಲ್ಲದಕ್ಕೂ ತಕ್ಕಂತೆ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು. ಡಯಟಿಷಿಯನ್‌ಗಳ, ನ್ಯೂಟ್ರಿಷಿಯನ್‌ಗಳ ಸಲಹೆಯನ್ನು ಪಡೆದೇ ಆಹಾರಕ್ರಮ ನಿರ್ಧರಿಸಬೇಕು.

'ಪುನೀತ್ ನಿತ್ಯವೂ ಕನಿಷ್ಠ ವಾಕಿಂಗ್ ಅಥವಾ ಜಾಗಿಂಗ್ ಮಾಡದೇ ಇರುತ್ತಿರಲಿಲ್ಲ. ಕಿಕ್ ಬಾಕ್ಸಿಂಗ್ ಕೂಡ ಮಾಡುತ್ತಿದ್ದರು. ಅವರ ಜೀವನಶೈಲಿ ತುಂಬಾ ಚೆನ್ನಾಗಿತ್ತು. ಹೃದಯಸ್ತಂಭನಕ್ಕೂ ವ್ಯಾಯಾಮಕ್ಕೂ ಸಂಬಂಧ ಇರಲೇಬೇಕು ಎಂದೇನೂ ಇಲ್ಲ. ಕೆಲವೊಮ್ಮೆ ವಂಶವಾಹಿಗಳು ದೇಹದ ಆರೋಗ್ಯವನ್ನು ನಿರ್ಧರಿಸುತ್ತಿರುತ್ತವೆ'.

> ಝುಂಬಾ, ಪವರ್‌ಯೋಗ, ಏರೋಬಿಕ್ಸ್, ಸ್ಕಿಪ್ಪಿಂಗ್, ಈಜು, ಬ್ಯಾಡ್ಮಿಂಟನ್, ಬ್ರಿಸ್ಕ್ ವಾಕ್, ಹುಲಾ ಹೂಪ್, ರೋಲರ್ ಸ್ಕೇಟಿಂಗ್ ಫಿಟ್‌ನೆಸ್ ಕಾಪಾಡಿಕೊಳ್ಳಲು ಇರುವ ಪರ್ಯಾಯಗಳು



ಕಲೆ: ವಿಶ್ವನಾಥ ಎ.ಎಸ್.

ಯಾವಾಗ್ಯಾವಾಗ ಏನೇನು ತಿನ್ನಬೇಕು?

ರ್‍ಯಾನ್ ಕುಆ

ನ್ಯೂಟ್ರಿಷನಿಸ್ಟ್‌ಗಳ ಕಾರ್ಯವಿಧಾನವೂ ಆಸಕ್ತಿಕರ. ದೀರ್ಘ ಕಾಲದ ನಂತರ ವ್ಯಾಯಾಮ ಮಾಡುವವರು ಮೊದಲು ರಕ್ತ ಪರೀಕ್ಷೆ ಮಾಡಿಸಿಕೊಳ್ಳಬೇಕು. ಒಂದುವೇಳೆ ರಕ್ತದೊತ್ತಡ ಅಥವಾ ಮಧುಮೇಹ ಇದ್ದರೆ ಮೂರು ತಿಂಗಳು ಬಿರುನಡಿಗೆಯಲ್ಲಿ ತೊಡಗಬೇಕು. ಆಮೇಲೆ ಮತ್ತೊಮ್ಮೆ ರಕ್ತಪರೀಕ್ಷೆ ಮಾಡಿಸಿದ ಮೇಲೆ ಸರಿಯೆನ್ನಿಸಿದರೆ ವ್ಯಾಯಾಮದ ಸಲಹೆಯನ್ನು ನ್ಯೂಟ್ರಿಷನಿಸ್ಟ್‌ಗಳು ನೀಡುತ್ತಾರೆ.

ಖಾಲಿ ಹೊಟ್ಟೆಯಲ್ಲಿ ವ್ಯಾಯಾಮ ಮಾಡಬೇಕು ಎಂದೇ ಎಷ್ಟೋ ಜನ ಭಾವಿಸಿದ್ದಾರೆ. ಆದರೆ, ಎಲ್ಲರ ವಿಷಯದಲ್ಲೂ ಇದು ಸರಿಯಲ್ಲ. ಹೆವಿ ವರ್ಕ್‌ಔಟ್ ಮಾಡುವವರು ವ್ಯಾಯಾಮ ಪ್ರಾರಂಭಿಸುವ ಒಂದು ತಾಸು ಮೊದಲು ಗ್ರೀನ್ ಟೀ ಕುಡಿಯಬೇಕು. ಹಣ್ಣಿನ ರಸ ಅಥವಾ ಲಘುವಾದ ಬ್ಲ್ಯಾಕ್ ಕಾಫಿ ಸೇವಿಸಿದರೂ ಆದೀತು, ಕೆಫೀನ್ ಅಂಶವು ವ್ಯಾಯಾಮದ ದಣಿವನ್ನು ಸಹಿಸಿಕೊಳ್ಳುವಂತೆ ಮಾಡುತ್ತದೆ. ವ್ಯಾಯಾಮ ಮಾಡಿದ ಮೇಲೆ 15 ಗ್ರಾಂನಷ್ಟು ಪ್ರೋಟೀನ್‌ಯುಕ್ತ ಆಹಾರ ತೆಗೆದುಕೊಳ್ಳಬೇಕು. ಒಂದು ಅಥವಾ ಎರಡು ಮೊಟ್ಟೆಯ ಬಿಳಿಭಾಗ, ಪನೀರ್‌ನ ಕೆಲವು ತುಂಡುಗಳು ಇದನ್ನು ಪೂರೈಸಬಲ್ಲವು. ಮಹಿಳೆಯರಿಗೆ ಪುರುಷರಿಗಿಂತ ಹೆಚ್ಚು ವ್ಯಾಯಾಮ ಮಾಡುವ ಕ್ಷಮತೆ ಇರುತ್ತದೆ. ಹೀಗಾಗಿ ಅವರು ಇನ್ನಷ್ಟು ಪ್ರೋಟೀನ್‌ನ್ನು ತೆಗೆದುಕೊಳ್ಳಬಹುದು ಎಂದು ನ್ಯೂಟ್ರಿಷನಿಸ್ಟ್ ರ್‍ಯಾನ್ ಕುಆ ಸಲಹೆ ನೀಡುತ್ತಾರೆ.

ಪ್ರೋಟೀನ್ ಮತ್ತಿತರ ಸಬ್‌ಸ್ಟಿಟ್ಯೂಟ್‌ಗಳನ್ನು ಸೇವಿಸುವವರಿಗೆ ತಾವು ಮಾಡುವ ವ್ಯಾಯಾಮದ ಪ್ರಮಾಣದ ಅರಿವು ಚೆನ್ನಾಗಿ ಮನದಟ್ಟಾಗಿರಬೇಕು. ಎಷ್ಟು ಕ್ಯಾಲರಿಗಳನ್ನು ಕಸರತ್ತಿನಿಂದ ಕಳೆದುಕೊಳ್ಳುತ್ತಾರೆ ಎಂದು ಅರಿವಿದ್ದವರಷ್ಟೇ ಇದನ್ನು ಮಾಡಬೇಕು. ತಮ್ಮಷ್ಟಕ್ಕೆ ತಾವೇ ಯಾವ್ಯಾವುದೋ ಸಬ್‌ಸ್ಟಿಟ್ಯೂಟ್‌ಗಳನ್ನು ಸೇವಿಸಿದರೆ ಅಪಾಯ ಇದ್ದೇ ಇದೆ ಎನ್ನುವುದು ಅವರು ನೀಡುವ ಎಚ್ಚರ. ಅನ್ನ, ಚಪಾತಿ ಜತೆಗೆ ಕಾಳು-ಪಲ್ಲೆಗಳ ಸೇವನೆ ಯಥೇಚ್ಛವಾಗಿರಬೇಕು ಎಂದೂ ಅವರು ಮಾತು ಸೇರಿಸುತ್ತಾರೆ.

ಸದೃಢ ಶರೀರಕ್ಕೆ ಯೋಗದ ದಾರಿ

ಶಿವಕುಮಾರ್ ಬಿ.



ಮನುಷ್ಯನಿಗೆ ಆದಿಜ ವ್ಯಾಧಿ ಮತ್ತು ಅನಾದಿಜ ವ್ಯಾಧಿ ಎಂಬ ಎರಡು ಪ್ರಕಾರದ ಕಾಯಿಲೆಗಳು ಬರುತ್ತವೆ. ಆದಿಜ ವ್ಯಾಧಿಯು ಮನಸ್ಸಿನ ಒತ್ತಡದಿಂದ ಬರುವಂಥದ್ದು. ಅನಾದಿಜ ವ್ಯಾಧಿ ಎಂದರೆ ಬಾಹ್ಯ ವೈರಸ್‌ಗಳಿಂದ ಬರುವುದು. ಆದ್ದರಿಂದ ಮನಸ್ಸನ್ನು ಸಮಾಧಾನದ ಸ್ಥಿತಿಗೆ ತಂದಲ್ಲಿ ಆದಿಜ ವ್ಯಾಧಿಯಿಂದ ಬರುವ ಅದೆಷ್ಟೋ ಸಮಸ್ಯೆಗಳನ್ನು ನಿವಾರಿಸಬಹುದು. ಇದು ಯೋಗ ಮಾರ್ಗದಿಂದ ಸಾಧ್ಯ.

ಮನೋಮಯ ಕೋಶದಲ್ಲಾಗುವ ಏರುಪೇರುಗಳು ನಮ್ಮ ಅನ್ನಮಯ ಕೋಶದ (ದೇಹದ) ಮೇಲೆ ಪರಿಣಾಮ ಉಂಟುಮಾಡುತ್ತವೆ. ಆದ್ದರಿಂದ ಮನೋಮಯ ಕೋಶವನ್ನು ಸ್ವಸ್ಥವಾಗಿ ಇಟ್ಟುಕೊಳ್ಳುವತ್ತ ಯೋಗವು ಗಮನ ಕೇಂದ್ರೀಕರಿಸುತ್ತದೆ.

ಯೋಗ ಅಂದರೆ ಒಂದಿಷ್ಟು ವ್ಯಾಯಾಮ ಎಂದಲ್ಲ. ಅದು ಒಂದು ಜೀವನಕ್ರಮ. ಯೋಗ ಆಸನ ಅನ್ನುವುದು ಸ್ಥಿರವಾದ ಸುಖವಾದ ಆಸನವಾಗಿಯೇ ಇರಬೇಕು. ಅದು ದೇಹ ದಂಡನೆ ಅಲ್ಲ. ಅದಕ್ಕಾಗಿಯೇ ಪ್ರತಿ ಆಸನದ ಬಳಿಕ ಕೆಲಕ್ಷಣ ವಿಶ್ರಾಂತಿ ನೀಡಲಾಗುತ್ತದೆ. ಹಾಗೆಂದು ಯೋಗಾಸನಗಳನ್ನೂ ನೇರವಾಗಿ ಮಾಡಬಾರದು. ಮೂಲ, ಸಾಮಾನ್ಯ ವ್ಯಾಯಾಮಗಳ ಬಳಿಕ (ದೇಹ ಸಡಿಲವಾದ ಮೇಲೆ) ಮಾತ್ರ ಒಂದೊಂದೇ ಆಸನಗಳನ್ನು ಮಾಡಬೇಕು. ಈ ಆಸನಗಳು ಸ್ಥಿರ, ಸುಖ ಆಸನವಾಗಿರಬೇಕು. ಇಲ್ಲಿ ಯಾವುದೇ ದ್ವಂದ್ವಗಳಿರುವುದಿಲ್ಲ. ಆಸನ ಸಿದ್ಧಿ ಆಗಲು ಅಭ್ಯಾಸ ಬೇಕು. ಆಸನಗಳಿಂದ ಅನಗತ್ಯ ಕೊಬ್ಬು ಮಾತ್ರ ಕರಗಿ ಹೋಗುತ್ತದೆ. ದೇಹದ ತೇಜೋವರ್ಧನೆಗೆ ಪೂರಕವಾಗುತ್ತದೆ.

ಯೋಗದಲ್ಲಿ ಕೇಂದ್ರೀಕರಿಸುವ ಪ್ರಧಾನ ವಿಷಯಗಳೆಂದರೆ ಸ್ನಾಯುಗಳು ಆರಾಮವಾಗಿರಬೇಕು. ಮನಸ್ಸು ಶಾಂತವಾಗಿರಬೇಕು. ದೇಹಕ್ಕೆ ಪ್ರಾಣಶಕ್ತಿ ಸಮರ್ಪಕವಾಗಿ ಹರಿಯಬೇಕು. ಆದರೆ, ಇದ್ಯಾವುದೇ ಪರಿಣಾಮ ಆಗಬೇಕಾದರೆ ಯೋಗವನ್ನು ಗುರುಮುಖೇನವೇ ಕಲಿಯಬೇಕು.

ಉದಾಹರಣೆಗೆ ತ್ರಿಕೋನಾಸನ, ಶಲಬಾಸನ ಸ್ನಾಯುವ್ಯವಸ್ಥೆಯನ್ನು ಬಲಪಡಿಸುತ್ತದೆ. ಭುಜಂಗಾಸನದಲ್ಲಿ ಬೆನ್ನುಹುರಿ ಸಕ್ರಿಯಗೊಳ್ಳುತ್ತದೆ. ಪ್ರಾಣಾಯಾಮದಿಂದ ಒಟ್ಟಾರೆ ದೇಹ ಸದೃಢವಾಗುತ್ತದೆ. ಹಾಗೆಂದು ಅತಿಯಾಗಿ ದೇಹದಂಡನೆ ಮಾಡಬಾರದು. ಎಲ್ಲ ಆಸನಗಳು ಮುಗಿದ ಬಳಿಕ ಕೊನೆಯಲ್ಲಿ 15 ನಿಮಿಷಗಳ ಕಾಲ ಶವಾಸನ ಮಾಡಬೇಕು. 15 ನಿಮಿಷಗಳ ಶವಾಸನ ನಾಲ್ಕು ಗಂಟೆಗಳ ನಿದ್ದೆಗೆ ಸಮ. ದೇಹ ಇಡೀ ದಿನ ಚೈತನ್ಯದಿಂದ ಇರುತ್ತದೆ.

ವಿಷಾದವೆಂದರೆ ಇಂದು ನಮ್ಮ ಯಾವ ಆಹಾರವೂ ಶುದ್ಧವಲ್ಲ. ಎಲ್ಲವೂ ರಾಸಾಯನಿಕಯುಕ್ತವಾಗಿವೆ. ಆದ್ದರಿಂದ ಆಹಾರ ಸೇವನೆಯಲ್ಲಿ ಇತಿಮಿತಿ ಇರಲಿ. ಜಿಮ್‌ಗೆ ಹೋಗುವವರು ಸ್ಟಿರಾಯ್ಡ್‌ಗಳಿಂದ ದೂರವಿರಿ. ಸಾಮಾನ್ಯ ವ್ಯಕ್ತಿಯೊಬ್ಬ ಪ್ರತಿದಿನ ಸೂರ್ಯ ನಮಸ್ಕಾರ, ಅರ್ಧಚಕ್ರಾಸನ, ತ್ರಿಕೋನಾಸನ, ಪಾದಹಸ್ತಾಸನ, ಶಲಭಾಸನ, ಭುಜಂಗಾಸನ, ಪಶ್ಚಿಮೋತ್ಥಾನಾಸನ, ಬದ್ಧಕೋನಾಸನ ಮಾಡಬಹುದು.

ಮುಖ್ಯವಾಗಿ ಮನಸ್ಸನ್ನು ಸ್ವಚ್ಛವಾಗಿಟ್ಟುಕೊಳ್ಳಿ. ಅತಿಯಾಸೆ, ನೆಮ್ಮದಿ ಕೆಡಿಸುವ ಸಂಗತಿಗಳು ಬೇಡ. ಎಲ್ಲವೂ ಅವಶ್ಯಕತೆಗೆ ಅನುಗುಣವಾಗಿರಬೇಕು ಅಷ್ಟೆ.

ಲೇಖಕ: ಬೆಂಗಳೂರಿನಲ್ಲಿ ಯೋಗ ಶಿಕ್ಷಕ

ದೇಹಕ್ಕೂ ಬೇಕು ರೆಗ್ಯುಲರ್ ಚೆಕ್‌ಅಪ್

ವರುಣ್ ಶೆಟ್ಟಿ

ಆರೋಗ್ಯ ಎನ್ನುವುದು ಒಂದು ಪಯಣ. ಆರೋಗ್ಯವನ್ನು ಇದೇ ರೀತಿ ಪರಿಗಣಿಸಬೇಕು. ಈ ಪಯಣಕ್ಕೆ ಸಜ್ಜಾದಾಗ ಎಲ್ಲವೂ ಸರಿಯಾಗಿದೆಯೇ ಎನ್ನುವುದನ್ನು ಮೊದಲು ತಿಳಿದುಕೊಳ್ಳಬೇಕು. ಮೊಬೈಲ್, ಕಾರ್ ಮೊದಲಾದ ಸಾಧನಗಳನ್ನು ಬ್ರೇಕ್‌ಡೌನ್ ಆಗುವ ಮುನ್ನವೇ ಸರ್ವೀಸ್ ಮಾಡಿಸುತ್ತೇವೆ. ಏಕೆಂದರೆ ಈ ಪದ್ಧತಿಯನ್ನು ನಾವು ಮೊದಲಿನಿಂದಲೂ ಅನುಸರಿಸಿಕೊಂಡು ಬಂದಿದ್ದೇವೆ. ಆದರೆ ಆರೋಗ್ಯದ ಬಗ್ಗೆ ನಾವು ಇನ್ನೂ ಗಂಭೀರವಾಗಿಲ್ಲ.

ಜಿಮ್‌ಗೆ ಹೋದ ಮಾತ್ರಕ್ಕೆ ಆರೋಗ್ಯವಂತರಾಗಿರುತ್ತೇವೆ ಎನ್ನುವ ಭ್ರಮೆ ಬೇಡ. ಕಟ್ಟುಮಸ್ತಾದ ದೇಹ, ಸಿಕ್ಸ್ ಪ್ಯಾಕ್ ಇದ್ದರೆ ಆರೋಗ್ಯವಂತ ಎನ್ನುವ ತಪ್ಪು ತಿಳಿವಳಿಕೆ ಇನ್ನೂ ಇದೆ. ವಾಸ್ತವದಲ್ಲಿ ಸುಂದರವಾಗಿ ಕಾಣಿಸಿಕೊಳ್ಳಲು ನಾವು ನಮ್ಮ ಆರೋಗ್ಯವನ್ನು ಬಲಿ ಕೊಡುತ್ತಿದ್ದೇವೆ. ಸೌಂದರ್ಯಕ್ಕಾಗಿ ಆರೋಗ್ಯವನ್ನು ಬಲಿ ಕೊಟ್ಟರೆ ವರ್ಕ್‌ಔಟ್ ಮಾಡುವ ಪ್ರಯೋಜನವೇನು? ಸೌಂದರ್ಯ ಎನ್ನುವುದು ಉತ್ತಮ ಆರೋಗ್ಯದ ಭಾಗ.

ಆರೋಗ್ಯವಾಗಿರಲು ಅನುಸರಿಸಬೇಕಾದ ಜೀವನಕ್ರಮಕ್ಕೆ ಆರಂಭ ಏನು ಎನ್ನುವ ಪ್ರಶ್ನೆ ಈ ಸಂದರ್ಭದಲ್ಲಿ ಮೂಡುತ್ತದೆ. ಆಸ್ಪತ್ರೆಗೆ ಹೋದರೆ ಒಂದಿಷ್ಟು ಪರೀಕ್ಷೆಗಳ ಬಳಿಕ, ನಿಮಗೆ ಕಾಯಿಲೆ ಇದೆಯೇ ಇಲ್ಲವೇ ಎನ್ನುವುದನ್ನು ಹೇಳುತ್ತಾರೆ. ಆದರೆ ಇದು ಆರೋಗ್ಯವಾಗಿದ್ದೀರಿ ಎನ್ನುವುದಕ್ಕೆ ಉತ್ತರವಲ್ಲ. ಕಾಲೇಜಿನಲ್ಲಿ 35 ಅಂಕ ತೆಗೆದುಕೊಂಡರೆ ಜಸ್ಟ್ ಪಾಸ್ ಆದಂತೆ ಇದು. ಆರೋಗ್ಯಕ್ಕೆ ಜಸ್ಟ್ ಪಾಸ್ ಆದರೆ ಸಾಲುವುದಿಲ್ಲ. ಹೃದಯ ಹಾಗೂ ರಕ್ತನಾಳಗಳಲ್ಲಿ ಏನಾದರೂ ಸಮಸ್ಯೆ ಇದೆಯೇ ಎನ್ನುವುದನ್ನು ತಿಳಿದುಕೊಳ್ಳುವುದು ಬಹುಮುಖ್ಯ.

ದೇಹವೂ ಗಾಡಿಯಂತೆ. ಕಾರಿಗೆ ಸೀಮೆಎಣ್ಣೆ ಮಿಶ್ರಿತ ಪೆಟ್ರೋಲ್ ಹಾಕಿದರೆ, ಓಡುತ್ತದೆ. ಆದರೆ ಎಷ್ಟು ಸಮಯದವರೆಗೆ ಇದು ಓಡುತ್ತದೆ ಎನ್ನುವುದು ಪ್ರಶ್ನೆ. ನಿಮ್ಮ ದೇಹದ ಮೈಲೇಜ್ ಹೆಚ್ಚಾಗಬೇಕಾದರೆ ಅದಕ್ಕೆ ಪೂರಕವಾಗಿರುವುದನ್ನೇ ಸೇವಿಸಬೇಕು. ಆದರೆ ನಾವು ಅಂತಿಮ ಫಲಿತಾಂಶದ ಬಗ್ಗೆ ಯೋಚಿಸುತ್ತೇವೆಯೇ ಹೊರತು ನಡುವಿನ ಪ್ರಕ್ರಿಯೆಯನ್ನು ಮರೆಯುತ್ತೇವೆ.

ಆರೋಗ್ಯದ ಮೇಲೆ ಹಣ ವ್ಯಯಿಸುವುದು ಅನಿವಾರ್ಯ. ಕಾಯಿಲೆ ಉಲ್ಬಣವಾದಾಗ ಹೆಚ್ಚು ಹಣ ವ್ಯಯಿಸಿ ಜೀವ ಉಳಿಸಿಕೊಳ್ಳುತ್ತೀರಾ ಅಥವಾ ಕಾಲಕಾಲಕ್ಕೆ ಆರೋಗ್ಯದ ಮೇಲೊಂದಿಷ್ಟು ಬಂಡವಾಳ ಹೂಡಿ, ಜೀವನಕ್ರಮ ಬದಲಾಯಿಸಿಕೊಳ್ಳುತ್ತೀರಾ ಎನ್ನುವುದು ಮುಖ್ಯ. ಯುವಜನತೆ ಇಂದು ಸಿಂಗಲ್ ಡಿಜಿಟ್ ಬಾಡಿ ಫ್ಯಾಟ್‌ಗಾಗಿ ಆರೋಗ್ಯವನ್ನೇ ಬಲಿಕೊಡುತ್ತಿದ್ದು, ಅವರ 30–40ನೇ ವಯಸ್ಸಿನಲ್ಲಿ ಇದರ ಪರಿಣಾಮ ಅನುಭವಿಸುತ್ತಿದ್ದಾರೆ. ನನಗಿನ್ನೂ 20–30 ವರ್ಷ, ಏನೂ ಆಗುವುದಿಲ್ಲ ಎನ್ನುವ ಮನಃಸ್ಥಿತಿಯಿಂದ ಮೊದಲು ಹೊರಬರಬೇಕು.

ಆರೋಗ್ಯದ ದೃಷ್ಟಿಯಿಂದ ನೋಡುವುದಾದರೆ ಮನುಷ್ಯನ ದೇಹ ಎಲ್ಲ ರೀತಿಯ ಚಟುವಟಿಕೆಗಳಿಗೆ ಹೊಂದಿಕೊಳ್ಳುತ್ತದೆ. ಕ್ರೀಡೆ, ನಡಿಗೆ, ಓಡುವುದು, ಸೈಕ್ಲಿಂಗ್, ಈಜು, ಲಿಫ್ಟಿಂಗ್ ಹೀಗೆ ಎಲ್ಲವನ್ನೂ ಮಿತಿಮೀರದ ಹಾಗೆ ಮಾಡಿ. ಅತಿಯಾದರೆ ಅಮೃತವೂ ವಿಷ. ದೇಹಕ್ಕೆ ಹೆಚ್ಚಿನ ಒತ್ತಡವಾಗದ ರೀತಿ ಚಟುವಟಿಕೆಗಳು ಇರಲಿ. ನೀವು ಹಾಕುವ ಒತ್ತಡವನ್ನು ದೇಹಕ್ಕೆ ಅಥವಾ ಮನಸ್ಸಿಗೆ ತಡೆದುಕೊಳ್ಳಲು ಆಗದೇ ಇದ್ದಾಗ ಸಮಸ್ಯೆಗಳು ಆರಂಭವಾಗುತ್ತವೆ. ಪ್ರತಿಯೊಬ್ಬರ ದೇಹವೂ ಭಿನ್ನ. ಇದನ್ನು ಮೊದಲು ಅರಿತುಕೊಳ್ಳಿ. ನಿಮ್ಮ ಆರೋಗ್ಯಕ್ಕೆ ಉತ್ತರ ನಿಮ್ಮ ದೇಹದಲ್ಲೇ ಇದೆ. ಇದನ್ನು ಹುಡುಕದೇ ಇದ್ದರೆ ಜಿಪಿಎಸ್ ಇಲ್ಲದೇ ಗಾಡಿ ಓಡಿಸಿದಂತೆ. ಗುರಿ ತಲುಪುತ್ತೀರೋ ಇಲ್ಲವೋ ತಿಳಿಯುವುದಿಲ್ಲ.

ಲೇಖಕ: ಬೆಂಗಳೂರಿನ ಇನ್‌ವಿಕ್ಟಸ್ ಪರ್ಫಾರ್ಮೆನ್ಸ್ ಲ್ಯಾಬ್ ನಿರ್ದೇಶಕ

ಕೌಶಲ ಕೊರತೆಯ ಪಿಡುಗು!

ಇತರೆ ಮಕ್ಕಳೊಂದಿಗೆ ಬೆರೆತಾಗಷ್ಟೇ ಒಂದು ಮಗುವಿನ ಬೆಳವಣಿಗೆ ಸಾಧ್ಯ. ಪಾಲಕರೊಂದಿಗೇ ಇದ್ದರೆ ಅದರ ಕೌಶಲ ಅಭಿವೃದ್ಧಿಯಾಗಲ್ಲ. ಮಕ್ಕಳಿಗೆ ಪರಸ್ಪರ ಸಂವಾದ ಅತಿ ಅಗತ್ಯ. ತಮಗಿಂತ ಚಿಕ್ಕವರೊಂದಿಗೆ ಅಥವಾ ದೊಡ್ಡ ಮಕ್ಕಳ ಜೊತೆ ಬೆರೆತಾಗಲಷ್ಟೇ ಅವರ ಸಾಮಾಜಿಕ ಕೌಶಲ ಬೆಳವಣಿಗೆ ಆಗಲಿದೆ. ಕಳೆದ ಎರಡು ವರ್ಷದಲ್ಲಿ ಮಕ್ಕಳಿಗೆ ಪರಿಶೋಧಿಸುವ ವಾತಾವರಣವನ್ನೇ ನಾವು ಕಲ್ಪಿಸಿಲ್ಲ. ಮನೆಯೊಳಗೇ ಇದ್ದು, ಆನ್‌ಲೈನ್ ತರಗತಿಯಲ್ಲೇ ತಲ್ಲೀನರಾಗುವ 3–6 ವರ್ಷದ ಮಕ್ಕಳಲ್ಲಿ ಬೆರೆಯುವ ಗುಣ ಹೊರಟುಹೋಗಿದೆ. ಈ ಪಿಡುಗಿನ ನೈಜವಾದ ಪರಿಣಾಮ ಮುಂದೆ ಕಾಣಿಸಲಿದೆ.

ಕಳೆದುಹೋದ ಈ ಎರಡು ವರ್ಷ ನಮ್ಮಂಥ ವಯಸ್ಕರಿಗೆ ಯಾವ ಲೆಕ್ಕವೂ ಅಲ್ಲ. ಆದರೆ ಮೂರ್ನಾಲ್ಕು ವರ್ಷದ ಮಗುವಿಗೆ ಇದು ಅದರ ಜೀವನದ ಶೇ 50ರಷ್ಟು ಬೆಳವಣಿಗೆಯ ಭಾಗ. ಹೀಗಾಗಿ ಇವರು ಎಷ್ಟು ಕಳೆದುಕೊಂಡರು ಎನ್ನುವುದನ್ನೊಮ್ಮೆ ಯೋಚಿಸಿ. 13 ವರ್ಷದವರೆಗೆ ಮಕ್ಕಳ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಮಕ್ಕಳಿಗೆ ಹೊರಾಂಗಣ ಆಟದ ಸಮಯವನ್ನು ಪಾಲಕರು ನಿಗದಿ ಮಾಡಬೇಕು. ಮುಂಜಾಗ್ರತಾ ಕ್ರಮ ಕೈಗೊಂಡು ಸುತ್ತಮುತ್ತಲಿನ ಮಕ್ಕಳ ಸಣ್ಣ ತಂಡ ರಚಿಸಿ. ಜೀವನದಲ್ಲಿನ ಏಳುಬೀಳುಗಳನ್ನು, ಸಂಕಷ್ಟಗಳನ್ನು ಎದುರಿಸುವುದನ್ನು ಮಕ್ಕಳು ಕಲಿಯುವುದೇ ಕ್ರೀಡೆಯಲ್ಲಿ. ಮಕ್ಕಳು ಎನರ್ಜಿ ಬಬಲ್‌ನಂತೆ. ಅವರನ್ನು ಹಾರಲು ಬಿಡಿ. ಇದನ್ನು ಮಾಡದೇ ಇದ್ದರೆ ಮಕ್ಕಳಲ್ಲಿ ವ್ಯಕ್ತಿತ್ವ ದೋಷಗಳನ್ನು ಮುಂದೆ ಕಾಣಬೇಕಾಗುತ್ತದೆ.

ಅಂಗ ಸಾಧನೆಗೆ ಈಜು ಸುರಕ್ಷಿತ

ನಿರೂಪ್ ಜಿ.ಆರ್.

ಈಜು ಇತ್ತೀಚಿನ ದಿನಗಳಲ್ಲಿ ಒಂದು ವ್ಯಾಯಾಮವಾಗಿ ಗುರುತಿಸಿಕೊಳ್ಳುತ್ತಿದೆ. ನಗರಗಳಲ್ಲಿ ಮಕ್ಕಳಿಗೆ ಈಜನ್ನು ದೈನಂದಿನ ಚಟುವಟಿಕೆಯ ಭಾಗವಾಗಿ ಕಲಿಸಲಾಗುತ್ತಿದೆ. ಈಜು ದೇಹದ ಸಾಮರ್ಥ್ಯವನ್ನು ಹೆಚ್ಚಿಸುವ ವ್ಯಾಯಾಮವಾಗಿ ಅಷ್ಟೇ ಅಲ್ಲದೆ ಮಾನಸಿಕ ಒತ್ತಡವನ್ನೂ ಕಡಿಮೆ ಮಾಡುವ ಸಾಧನವಾಗಿದೆ.

ಜಿಮ್ ಅಥವಾ ಇನ್ನಿತರ ವ್ಯಾಯಾಮಗಳು ಎಲ್ಲ ವಯಸ್ಸಿನವರಿಗೂ ಮಾಡಲು ಕಷ್ಟಸಾಧ್ಯ. ಕಠಿಣ ವ್ಯಾಯಾಮಗಳನ್ನು ಮಾಡುವುದರಿಂದ ದೈಹಿಕ ಒತ್ತಡದಿಂದಾಗಿ ಬೆನ್ನುನೋವು, ಮಂಡಿನೋವು ಕಾಣಿಸಿಕೊಳ್ಳುತ್ತವೆ. ಆದರೆ ಈಜಿನಲ್ಲಿ ಈ ಸಮಸ್ಯೆಗಳು ಇಲ್ಲ. ನೀರಿನಲ್ಲಿ ಮನುಷ್ಯನ ದೇಹದ ತೂಕ ಕಡಿಮೆಯಾಗುತ್ತದೆ. ಹೀಗಾಗಿ ಯಾವುದೇ ಗಾಯ ಅಥವಾ ಅಡ್ಡ ಪರಿಣಾಮ ದೇಹಕ್ಕೆ ಆಗುವುದಿಲ್ಲ.

ಈಜು ಎನ್ನುವುದು ಇಡೀ ಶರೀರಕ್ಕೆ ಸಿಗುವ ವ್ಯಾಯಾಮ. ತಲೆಯಿಂದ ಕಾಲ್ಬೆರಳಿನವರೆಗೂ ವ್ಯಾಯಾಮ ಸಿಗುತ್ತದೆ. ಇದರಿಂದ ಇಡೀ ದೇಹದ ಸಾಮರ್ಥ್ಯ ಹೆಚ್ಚಾಗುತ್ತದೆ. ಈಜಿನಲ್ಲಿ ಹೃದಯದ ಬಡಿತ ಹೆಚ್ಚಾಗುತ್ತದೆ. ಆದರೆ, ದೇಹಕ್ಕಾಗುವ ಒತ್ತಡ ಕಮ್ಮಿ. ಇತರೆ ಕ್ರೀಡೆಗಳಲ್ಲಿ ದೇಹಕ್ಕೆ ಒತ್ತಡ ಹೆಚ್ಚು. ಹೀಗಾದರಷ್ಟೇ ಹೃದಯದ ತೊಂದರೆಗಳು ಕಾಣಿಸಿಕೊಳ್ಳುವ ಸಂಭವಗಳು ಜಾಸ್ತಿ.

ಉಸಿರಾಟ ಏರುಪೇರಾದರೆ ವ್ಯಕ್ತಿಯೊಬ್ಬನ ದೈಹಿಕ ಹಾಗೂ ಮಾನಸಿಕ ಒತ್ತಡ ಹೆಚ್ಚುತ್ತದೆ. ಹೃದಯ, ರಕ್ತನಾಳ ಮತ್ತು ಶ್ವಾಸಕೋಶವನ್ನು ಈಜು ಆರೋಗ್ಯವಾಗಿರಿಸುತ್ತದೆ. ಇತರೆ ಕ್ರೀಡೆಗಳಲ್ಲಿ ಉಸಿರಾಟಕ್ಕೆ ಅಷ್ಟೊಂದು ಆದ್ಯತೆ ಇಲ್ಲ. ಈಜಿನಲ್ಲಿ ಉಸಿರಾಟವೇ ಮುಖ್ಯ. ಇದರಿಂದ ಎಲ್ಲ ಅಂಗಗಳಿಗೂ ಪೂರಕ ಆಮ್ಲಜನಕ ಸರಬರಾಜಾಗುತ್ತದೆ. ದೇಹದ ಎಲ್ಲ ಭಾಗಕ್ಕೂ ರಕ್ತಸಂಚಾರ ಹೆಚ್ಚುತ್ತದೆ. ದೇಹದ ರೋಗನಿರೋಧಕ ಸಾಮರ್ಥ್ಯ ಹೆಚ್ಚುತ್ತದೆ. ಹೃದಯ ಸಂಬಂಧಿ ಕಾಯಿಲೆಗೆ ಒಳಗಾಗುವ ಅಪಾಯವು ಈ ವ್ಯಾಯಾಮದಿಂದ ಕಡಿಮೆ ಆಗುತ್ತದೆ. ರಕ್ತದೊತ್ತಡ, ಸಂಧಿವಾತ ಇದ್ದವರಿಗೆ, ಶಸ್ತ್ರಚಿಕಿತ್ಸೆ ಆದವರಿಗೆ ವೈದ್ಯರೇ ಈಜಿನ ಸಲಹೆ ನೀಡುತ್ತಾರೆ. ಏಕೆಂದರೆ ದೇಹದ ತೂಕ ನೀರಿನಲ್ಲಿ ಇಳಿಕೆಯಾಗುವುದರಿಂದ ಈಗಾಗಲೇ ಆಗಿರುವ ಗಾಯದ ಮೇಲೆ ಹೆಚ್ಚಿನ ಪರಿಣಾಮ ಇರುವುದಿಲ್ಲ ಎಂದು.

ದೇಹಕ್ಕಾಗುವ ಉಪಯೋಗದ ಜೊತೆಗೆ ಈಜು ಎನ್ನುವುದು ಮಕ್ಕಳ ಚಟುವಟಿಕೆಯನ್ನೂ ಉತ್ತೇಜಿಸುತ್ತದೆ. ಮೂಡ್ ಬೂಸ್ಟರ್ ರೀತಿ ಈಜಿನ ಮೋಜು ಮಕ್ಕಳಲ್ಲಿ ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಕಲಿಕೆಯಲ್ಲೂ ಹೆಚ್ಚಿನ ಆಸಕ್ತಿಯನ್ನು ಮಕ್ಕಳು ಬೆಳೆಸಿಕೊಂಡಿದ್ದನ್ನು ಗಮನಿಸಿದ್ದೇನೆ. 30 ನಿಮಿಷಗಳ ಈಜು ಒತ್ತಡವನ್ನೂ ದೂರಗೊಳಿಸುತ್ತದೆ. ಈಜು ಎನ್ನುವುದು ನಮ್ಮ ದೈನಂದಿನ ಚಟುವಟಿಕೆಗಳ ಭಾಗವಾಗಬೇಕು.

ಲೇಖಕ: ಬೆಂಗಳೂರಿನ ನೆಟ್ಟಕಲ್ಲಪ್ಪ ಅಕ್ವಾಟಿಕ್ ಸೆಂಟರ್‌ನ ಪ್ರೊಗ್ರಾಮ್ ಮ್ಯಾನೇಜರ್

ನಡಿಗೆ, ಸೈಕ್ಲಿಂಗ್‌ನಲ್ಲಿದೆ ಸ್ವಾಸ್ಥ್ಯ

ಡಾ. ನಿಸರ್ಗ

ಹೃದಯ ಸಂಬಂಧಿ ಕಾಯಿಲೆಗಳಿಂದ ಇತ್ತೀಚೆಗೆ ಯುವಕರೂ ಸಾವನ್ನಪ್ಪುತ್ತಿದ್ದಾರೆ. ಸಾವಿನ ಸುದ್ದಿ ಕೇಳಿದ ಕೂಡಲೇ, 'ಅರೆ! ಎಷ್ಟು ಫಿಟ್ ಇದ್ದರು, ಜಿಮ್‌ಗೂ ಹೋಗುತ್ತಿದ್ದರು, ಆರೋಗ್ಯ ಚೆನ್ನಾಗಿ ಕಾಪಾಡಿಕೊಂಡಿದ್ದರು. ಆದ್ರೂ ಸಾವು ಅವರನ್ನು ಇಷ್ಟು ಬೇಗ ತೆಗೆದುಕೊಂಡು ಹೋಯಿತಲ್ಲಾ' ಎಂದೆಲ್ಲಾ ಅನ್ನಿಸುವುದು ಸಹಜ. ಕೆಲವೊಂದು ಸಾವು ನಮ್ಮನ್ನು ಹೈರಾಣ ಮಾಡಿಬಿಡುತ್ತವೆ. ಇಷ್ಟೊಂದು ವ್ಯಾಯಾಮ ಮಾಡಿ, ಡಯೆಟ್ ಮಾಡಿಯೂ ಸಾವು ಬರುವುದಾದರೆ, ಇದೆಂಥಾ ಬದುಕಪ್ಪಾ ಅಂತ ಅನ್ನಿಸಲೂ ಸಾಕು. ಸಾವನ್ನು ತಡೆಯುವುದು ನಮ್ಮ ಕೈಯಲ್ಲಿ ಇಲ್ಲದಿದ್ದರೂ ಮುಂದೂಡುವ ಪ್ರಯತ್ನವನ್ನಂತೂ ಬಿಡುವಂತಿಲ್ಲ.

'ನಡಿಗೆಯು ಮನುಷ್ಯನಿಗೆ ನೀಡಬಹುದಾದ ಉತ್ತಮ ಚಿಕಿತ್ಸೆ' ಎಂದು ನಾಲ್ಕನೇ ಶತಮಾನದಲ್ಲಿಯೇ ಹಿಪ್ಪೊಕ್ರಟೀಸ್ ಹೇಳಿದ್ದಾನೆ. ಮನುಷ್ಯನ ದೇಹ ರಚನೆ ಕೂಡ ನಡಿಗೆಗೆ ಅನುಕೂಲಕರವಾಗಿಯೇ ಇದೆ. ಪ್ರತಿದಿನ ಸುಮಾರು 30ರಿಂದ 40 ನಿಮಿಷ ಮನುಷ್ಯ ನಡೆಯಲೇಬೇಕು. ನಡೆಯುವುದು ಎಂದರೆ ಅದು ವೇಗವಾದ (ಬ್ರಿಸ್ಕ್ ವಾಕ್) ನಡಿಗೆ ಆಗಿರಬೇಕು; ಬೆವರು ಸುರಿಯಬೇಕು. ಪಾರ್ಕ್‌ನಲ್ಲಿ ನಿಧಾನವಾಗಿ ಪಕ್ಕದವರೊಂದಿಗೆ ಮಾತನಾಡುತ್ತಾ ಅಥವಾ ಸಂಗೀತ ಕೇಳುತ್ತಾ ನಡೆಯುವುದರಿಂದ ಯಾವುದೇ ಉಪಯೋಗ ಇಲ್ಲ. ನಡಿಗೆ ನಮ್ಮ ಧ್ಯಾನವಾಗಿರಬೇಕು. ಮೈಮನಸ್ಸು ಎಲ್ಲದರ ಕೇಂದ್ರಬಿಂದು ನಡಿಗೆಯೇ ಆಗಿರಬೇಕು.

ನಡಿಗೆಯಿಂದ ಕ್ಯಾನ್ಸರ್‌ನಂಥ ರೋಗಗಳು ನಮ್ಮನ್ನು ಬಾಧಿಸದಂತೆ ತಡೆಯಬಹುದು ಎಂದು ವಿಜ್ಞಾನ ಹೇಳುತ್ತದೆ. ಭಾರತದಲ್ಲಿ ಕಾಯಿಲೆಗಳ ರಾಜ ಎನಿಸಿಕೊಂಡಿರುವ ಮಧುಮೇಹದಂಥ ರೋಗಕ್ಕೆ ನಡಿಗೆ ಉತ್ತಮ ಮದ್ದು. ರೋಮನ್‌ನಲ್ಲಿ ಒಂದು ಗಾದೆ ಇದೆ. 'ಸಮಸ್ಯೆಗೆ ಪರಿಹಾರ ಬೇಕೆಂದರೆ ಒಂದು ಸುತ್ತು ನಡಿ' ಎಂಬುದಾಗಿ!

ಅಥೆರೊಸ್ಕ್ಲೆರೋಸಿಸ್ ಎಂದರೆ ರಕ್ತನಾಳದಲ್ಲಿ ರಕ್ತಸಂಚಾರಕ್ಕೆ ತೊಡಕಾಗುವುದು. ಈ ಕಾಯಿಲೆಯು ಮನುಷ್ಯನ 20ನೇ ವಯಸ್ಸಿನಿಂದ ಪ್ರಾರಂಭವಾಗುತ್ತದೆ. ಮನುಷ್ಯನಿಗೆ ಸಾವು ತಂದುಕೊಡುವುದಕ್ಕೆ ವಯಸ್ಸಾಗುವ ಪ್ರಕ್ರಿಯೆಯಾಗಿ ಈ ರೋಗ ಬರುತ್ತದೆ. ಇದನ್ನು ಮುಂದೂಡಬೇಕು ಎನ್ನುವುದಾದರೆ, ನಡಿಗೆ ಬಹುಮುಖ್ಯವಾದುದು. ಜಿಮ್‌ನಿಂದ ಕೂಡ ಇದು ಸಾಧ್ಯ. ಹಾಗಂತ, ಫಿಟ್‌ನೆಸ್ ಫ್ರೀಕ್ ಎನ್ನುವವರಿಗೂ ಹೃದಯ ಸಂಬಂಧಿ ಕಾಯಿಲೆ ಬರುವುದಿಲ್ಲ ಎನ್ನುವಂತಿಲ್ಲ. ಬಹಳ ಮಂದಿ ಯೋಗ ಗುರುಗಳಿಗೂ ನಾನು ಆಪರೇಷನ್ ಮಾಡಿದ್ದೇನೆ.

ನಡಿಗೆ ಜೊತೆಗೆ ಸೈಕ್ಲಿಂಗ್ ಮತ್ತು ಈಜು ಕೂಡ ಬಹಳ ಉಪಕಾರಿಯಾದುವು. ವಿದೇಶಗಳಲ್ಲಿ ಸೈಕ್ಲಿಂಗ್ ಮಾಡುತ್ತಾರೆ ಎಂದರೆ ಅವರಿಗೆ ಎಲ್ಲಿಲ್ಲದ ಗೌರವ ಸಿಗುತ್ತದೆ. ಅಷ್ಟೇ ಗೌರವ ಸೈಕಲ್‌ಗೂ ಕೂಡ. ರಸ್ತೆಯಲ್ಲಿ ಅವಕ್ಕಾಗಿಯೇ ಬೇರೆ ಪಥ ಇರುತ್ತದೆ; ರೈಲಿನ ಒಳಗೂ ಸೈಕಲ್ ನಿಲ್ಲಿಸಲು ಜಾಗ! ಭಾರತದಲ್ಲಿ ಸೈಕಲ್ ಅನ್ನುವುದು ಬಡತನದ, ಮುಜುಗರದ ಸಂಗತಿಯಾಗಿದೆ.

ನಮ್ಮ ಆಹಾರ ಹೇಗಿರುತ್ತದೆಯೋ ನಮ್ಮ ದೇಹ ಹಾಗಿರುತ್ತದೆ. ಸಕ್ಕರೆ ನಮ್ಮ ವೈರಿ. ಇದು ನಮಗೆ ಕೊಬ್ಬಿಗಿಂತ ದೊಡ್ಡ ವೈರಿ. ಇದರ ಸೇವನೆಯನ್ನು ಖಂಡಿತ ಕಡಿಮೆ ಮಾಡಬೇಕು. ಹೆಚ್ಚು ಹೆಚ್ಚು ಪ್ರೋಟೀನ್, ವಿಟಮಿನ್, ಮಿನರಲ್ಸ್-ಮೈಕ್ರೊ ನ್ಯೂಟ್ರಿಯಂಟ್ಸ್ ಇರುವ ಆಹಾರ ಪದಾರ್ಥ ಸೇವಿಸಬೇಕು.

ಬ್ಯಾಡ್ಮಿಂಟನ್ ಆಟಗಾರ್ತಿ ಪಿ. ವಿ. ಸಿಂಧು ಅವರ ನಡಿಗೆ, ವರ್ಕ್‌ಔಟ್ ಎಷ್ಟು ಚಂದ ಇದೆ ಎಂದರೆ, ನಿದ್ದೆ ಮಾಡುವಾಗ ಅವರ ಹೃದಯ ಬಡಿತ 45ರಿಂದ 46ಕ್ಕೆ ಹೋಗುತ್ತದೆ. ಸಾಮಾನ್ಯವಾಗಿ 55ರಿಂದ 60 ಇರುತ್ತದೆ. ಇದರಿಂದ ಹೃದಯಕ್ಕೂ ಕೆಲಸ ಕಡಿಮೆ, ದೇಹಕ್ಕೂ ಒಳ್ಳೆಯದು. ಸಾಮಾನ್ಯವಾಗಿ ಎಲ್ಲರಲ್ಲೂ ಗುಡ್ ಕೊಲೆಸ್ಟ್ರಾಲ್ 40 ಇರುತ್ತದೆ. ಇದು, ಸಿಂಧುಗೆ 130ರಿಂದ 140 ಇದೆ. ಆದ್ದರಿಂದ ಅವರಿಗೆ ಹೃದಯ ಯಾವತ್ತೂ ತೊಂದರೆ ಕೊಡುವುದಿಲ್ಲ.

ತೀವ್ರತರ ವ್ಯಾಯಾಮ ಮಾಡಬಹುದು; ಆದರೆ, ಅದು ವಾರಕ್ಕೆ ಒಮ್ಮೆ ಇದ್ದರೆ ಒಳ್ಳೆಯದು. ದಿನವೂ ಅತಿಯಾದ ವ್ಯಾಯಾಮ ಒಳ್ಳೆಯದಲ್ಲ.

ಹಾಗಾದರೆ, ಇದಕ್ಕೆಲ್ಲಾ ಏನು ಪರಿಹಾರ? 45 ವರ್ಷ ಆದ ಹೆಂಗಸರು, 40 ವರ್ಷ ಮೇಲಾದ ಗಂಡಸರು ಆರು ತಿಂಗಳಿಗೊಮ್ಮೆ ಥ್ರೆಡ್‌ಮಿಲ್ ಟೆಸ್ಟ್ ಮಾಡಿಸಿಕೊಳ್ಳಲೇಬೇಕು. ಮಧುಮೇಹ ಮತ್ತು ಹೃದಯ ಸಂಬಂಧಿ ಕಾಯಿಲೆ ಅಣ್ಣ-ತಮ್ಮ ಇದ್ದಂತೆ. ಮಧುಮೇಹ ಬರದಂತೆ ನೋಡಿಕೊಳ್ಳಬೇಕು, ಬಂದರೆ ನಿರ್ವಹಿಸಬೇಕು. ಆಗ ಹೃದಯ ಸಂಬಂಧಿ ತೊಂದರೆ ಬಾಧಿಸದು.

ಲೇಖಕ: ಹೃದ್ರೋಗತಜ್ಞ, ಕೆಐಎಂಎಸ್ ಆಸ್ಪತ್ರೆ, ಹೈದರಾಬಾದ್

ಹೋಲಿಕೆ ಬೇಡ–ತಜ್ಞರ ಸಲಹೆ ಅಗತ್ಯ

ಪ್ರೊ.ಶೇಷಣ್ಣ



ಆರೋಗ್ಯಕ್ಕೆ ಸಂಬಂಧಿಸಿದ ದೈಹಿಕ ಸಾಮರ್ಥ್ಯ ಹಾಗೂ ಕ್ರೀಡೆಗೆ ಸಂಬಂಧಿಸಿದ ದೈಹಿಕ ಸಾಮರ್ಥ್ಯ ಪ್ರತ್ಯೇಕವಾದಂಥವು. ಜನಸಾಮಾನ್ಯರು ದೈಹಿಕ ಸಾಮರ್ಥ್ಯ ಕಾಪಾಡಿಕೊಳ್ಳುವುದು ಹೇಗೆ? ಒಬ್ಬ ವ್ಯಕ್ತಿ ದೈನಂದಿನ ಚಟುವಟಿಕೆಗಳನ್ನು ಆಯಾಸವಿಲ್ಲದೆ ನಿರ್ವಹಿಸಿ, ಹೆಚ್ಚುವರಿ ಕಾರ್ಯ ಬಂದರೆ ಅವುಗಳನ್ನೂ ಮಾಡಿ, ಬಿಡುವಿನ ವೇಳೆ ಮನರಂಜನೆ ಚಟುವಟಿಕೆಗಳಲ್ಲಿ ಭಾಗಿಯಾಗುವ ಚೈತನ್ಯ ಪಡೆದುಕೊಂಡಿದ್ದರೆ ಆತ ದೈಹಿಕವಾಗಿ ಸಮರ್ಥನಾಗಿದ್ದಾನೆ ಎಂದು ಅರ್ಥ. ಆತ ವಿದ್ಯಾರ್ಥಿ, ಉದ್ಯೋಗಿ, ಕಾರ್ಮಿಕ ಯಾರೇ ಆಗಿರಬಹುದು.

ದೈಹಿಕ ಸಾಮರ್ಥ್ಯ ವೃದ್ಧಿಸಿಕೊಳ್ಳುವಲ್ಲಿ ಸ್ನಾಯು ಬಲ (ಸ್ಟ್ರೆಂತ್), ಸ್ನಾಯು ಕಷ್ಟ ಸಹಿಷ್ಣುತೆ (ಮಸ್ಕ್ಯುಲರ್ ಎಂಡ್ಯುರೆನ್ಸ್), ಹೃದಯ ಮತ್ತು ರಕ್ತನಾಳಗಳ ಸಾಮರ್ಥ್ಯ (ಕಾರ್ಡಿಯೊವ್ಯಾಸ್ಕ್ಯುಲರ್ ಎಂಡ್ಯುರೆನ್ಸ್), ಮೈಮಣಿತ (ಫ್ಲೆಕ್ಸಿಬಿಲಿಟಿ) ಪ್ರಮುಖವಾಗಿರುವ ಅಂಶಗಳು. ಜೊತೆಗೆ ಸ್ಥೂಲಕಾಯದಿಂದ (ಒಬೆಸಿಟಿ) ದೂರವಿರುವ ಅಂಶ ಕೂಡ ಇದರಲ್ಲಿ ಸೇರಿದೆ. ಯಾವುದೇ ಪರಿಕರಗಳಿಲ್ಲದೆಯೂ ಶರೀರವನ್ನು ಆಧಾರವಾಗಿಟ್ಟುಕೊಂಡು ವ್ಯಾಯಾಮ ಮಾಡಿ ಈ ಅಂಶಗಳನ್ನು ರೂಢಿಸಿಕೊಳ್ಳಬಹುದು.

ಒಂದು ಮಟ್ಟ ತಲುಪಿದ ಮೇಲೆ, ಹೆಚ್ಚಾಗಿ ಸ್ನಾಯು ಬೆಳೆಸಿಕೊಳ್ಳಲು ಪರಿಕರಗಳ ಆಶ್ರಯ ಪಡೆಯಬೇಕಾಗುತ್ತದೆ. ಜಿಮ್‌ಗೆ ಹೋಗಿ ಕಸರತ್ತು ನಡೆಸಬೇಕಾಗುತ್ತದೆ. ಆಹಾರ ಸೇವನೆ, ಜೀವನಶೈಲಿ ಕೂಡ ಪ್ರಭಾವ ಬೀರುತ್ತವೆ. ಎತ್ತರ ಹಾಗೂ ವಯಸ್ಸಿಗೆ ತಕ್ಕಂತೆ ತೂಕ ಹೊಂದಿರಬೇಕು. ಚಟುವಟಿಕೆಗೆ ತಕ್ಕಂತೆ ಆಹಾರ ಪೋಷಣೆ ಇರಬೇಕು. ಕಾರ್ಬೊಹೈಡ್ರೇಟ್ಸ್, ಪ್ರೋಟೀನ್ಸ್, ಫ್ಯಾಟ್, ಮಿನರಲ್ಸ್, ವಿಟಮಿನ್ಸ್ ಅಂಡ್ ಸಾಲ್ಟ್ಸ್ ಹಾಗೂ ನೀರು ನಾವು ತಿನ್ನುವ ಆಹಾರದಲ್ಲಿ ಸರಿಸಮಾನವಾಗಿ, ನಿರ್ದಿಷ್ಟ ಪ್ರಮಾಣದಲ್ಲಿ ಇರಬೇಕು. ತಜ್ಞರ ಅಭಿಪ್ರಾಯ ಪಡೆದು ಸೇವಿಸಿ ವ್ಯಾಯಾಮ ಮಾಡಿದರೆ ದೈನಂದಿನ ಚಟುವಟಿಕೆಗಳಿಗೆ ನೆರವಾಗುತ್ತದೆ.

ಯಾರನ್ನೋ ನೋಡಿ ಬೇಗನೇ ಸ್ನಾಯು ಬೆಳೆಸಿಕೊಳ್ಳಬೇಕೆಂದು ಅತಿರೇಕದ ವರ್ತನೆ ತೋರುವುದು ತಪ್ಪು. ಶ್ರಮದಾಯಕ ವ್ಯಾಯಾಮ ಮಾಡುವ ಮುನ್ನ ತಜ್ಞರ ಸಲಹೆ ಪಡೆಯಬೇಕು, ಪರೀಕ್ಷಿಸಿಕೊಳ್ಳಬೇಕು. ದೇಹದ ಆಂತರಿಕ ಸ್ಥಿತಿ ಅರಿಯುವುದು ಕಷ್ಟ. ಒಮ್ಮೆಲೇ ದೈಹಿಕ ಸಾಮರ್ಥ್ಯ ಬೆಳೆಸಿಕೊಳ್ಳಲು ಪ್ರಯತ್ನಿಸುವ ಬದಲು ವೇಳಾಪಟ್ಟಿ ಹಾಕಿಕೊಂಡು ಕ್ರಮೇಣವಾಗಿ ಕಸರತ್ತು ನಡೆಸಿ ಸ್ನಾಯುಗಳನ್ನು ಗಟ್ಟಿಮುಟ್ಟಾಗಿಸಿಕೊಳ್ಳಬೇಕು.

ಲೇಖಕ: ಕ್ರೀಡಾತಜ್ಞ

ಮುನ್ನೋಟ 21-11-2021 ರಿಂದ 27-11-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ವೈಯಕ್ತಿಕ ತೊಂದರೆಯಿಂದ ಕೆಲಕಾಲ ಬಿಡುಗಡೆಯನ್ನು ಹೊಂದುವಿರಿ. ಪತ್ನಿಯ ಆರೋಗ್ಯದಲ್ಲಿ ಸಾಕಷ್ಟು ಸುಧಾರಣೆ ಕಾಣಬಹುದು. ಉದ್ಯೋಗ ಆಕಾಂಕ್ಷಿಗಳಿಗೆ ಉದ್ಯೋಗದ ಬಗ್ಗೆ ಭರವಸೆ ದೊರೆಯುತ್ತದೆ. ವಿದೇಶಿ ವ್ಯವಹಾರಸ್ಥರ ಪರಿಚಯದಿಂದಾಗಿ ವ್ಯವಹಾರಕ್ಕೆ ಹೊಸ ತಿರುವು ದೊರೆಯುತ್ತದೆ. ಅತಿಯಾದ ಆಯಾಸ ನಿಮ್ಮನ್ನು ಬಾಧಿಸಬಹುದು. ಇದಕ್ಕಾಗಿ ವೈದ್ಯರ ಸಲಹೆಯನ್ನು ಪಡೆಯಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆರ್ಥಿಕ ಸಂಪನ್ಮೂಲ ಚೇತರಿಕೆಯತ್ತ ಸಾಗುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ನೀರಿನಿಂದ ಅಥವಾ ಆಹಾರದಿಂದ ನಿಮ್ಮ ಆರೋಗ್ಯ ವ್ಯತ್ಯಾಸ ಆಗಬಹುದು. ಹಿರಿಯ ಸರ್ಕಾರಿ ಅಧಿಕಾರಿಗಳಿಗೆ ಸ್ಥಾನ ಬದಲಾವಣೆ ಆಗಬಹುದು. ಬೇರೆಯವರ ಒತ್ತಡಕ್ಕಾಗಿ ಗೊತ್ತಿಲ್ಲದ ಜಾಗದಲ್ಲಿ ಹಣ ಹೂಡಿ ಮೋಸ ಹೋಗಬೇಡಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಅನವಶ್ಯಕ ಮಾತುಗಳಿಂದ ಬಂಧುಗಳ ನಡುವೆ ನಿಷ್ಠುರಕ್ಕೆ ಒಳಗಾಗುವ ಸಾಧ್ಯತೆಗಳಿವೆ. ಉದ್ಯೋಗದಲ್ಲಿರುವವರಿಗೆ ಪದೋನ್ನತಿ ಒದಗುವ ಸಾಧ್ಯತೆಗಳಿವೆ. ಆದಾಯಕ್ಕಿಂತ ಹೆಚ್ಚು ಖರ್ಚು ಸಾಧ್ಯತೆಯಿದೆ. ವೆಚ್ಚಕ್ಕೆ ಕಡಿವಾಣ ಹಾಕಿರಿ. ದೈವಾನುಗ್ರಹದಿಂದ ನಿಮ್ಮ ಕೆಲಸ ಕಾರ್ಯಗಳು ನೆರವೇರುತ್ತವೆ. ರಾಜಕೀಯದಲ್ಲಿ ತೊಡಗಿಕೊಳ್ಳುವ ಮಹಿಳೆಯರಿಗೆ ಯಶಸ್ಸು ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಅನವಶ್ಯಕ ಪ್ರಯಾಣದಿಂದ ಧನ ನಷ್ಟ ಆಗಬಹುದು. ಮನರಂಜನಾ ಕಾರ್ಯಕ್ರಮಗಳನ್ನು ನಡೆಸುವವರಿಗೆ ಹೆಚ್ಚು ಕಾರ್ಯಕ್ರಮಗಳು ಒದಗಿ ಹೆಚ್ಚು ಸಂಪಾದನೆಯಾಗುತ್ತದೆ. ಸಂಗೀತಗಾರರಿಗೆ ಸಂಪಾದನೆ ಹೆಚ್ಚುವ ಸಾಧ್ಯತೆಯಿದೆ. ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಸಾಕಷ್ಟು ಶ್ರಮ ಪಡುವಿರಿ. ಸಂಸ್ಥೆಗಳಲ್ಲಿನ ಹಿರಿಯ ಅಧಿಕಾರಿಗಳಿಗೆ ಕಾರ್ಯದೊತ್ತಡ ಹೆಚ್ಚಾಗಬಹುದು.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ವಿದ್ಯಾರ್ಥಿಗಳಿಗೆ ಓದಿನಲ್ಲಿ ವಿಶೇಷ ಪ್ರಗತಿ ಇರುತ್ತದೆ. ಸರ್ಕಾರಿ ಮಟ್ಟದ ಕೆಲಸ ಕಾರ್ಯಗಳು ಸುಗಮವಾಗಿ ನೆರವೇರುತ್ತವೆ. ನಿಮ್ಮ ಮಾತು ಮತ್ತು ನಡವಳಿಕೆಯಿಂದ ಗೌರವ ಪ್ರಾಪ್ತಿಯಾಗುತ್ತದೆ. ಉದ್ಯೋಗದ ನಿಮಿತ್ತ ದೂರದೂರಿಗೆ ಪ್ರಯಾಣ ಮಾಡಬೇಕಾಗಬಹುದು. ನ್ಯಾಯಾಲಯದಲ್ಲಿರುವ ಹಳೆಯ ಕೇಸುಗಳಲ್ಲಿ ನಿಮಗೆ ಪ್ರಗತಿ ಇರುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಪರಸ್ಪರ ಭಿನ್ನಾಭಿಪ್ರಾಯಗಳು ಈಗ ದೂರವಾಗಿ ಸುಖ ದಾಂಪತ್ಯಕ್ಕೆ ನಾಂದಿಯಾಗುತ್ತದೆ. ಕೆಲಸಕಾರ್ಯಗಳಲ್ಲಿ ಅತಿಯಾದ ಆತುರತೆ ಬೇಡ. ಇದರಿಂದ ಕೆಲಸಗಳಲ್ಲಿ ತೊಂದರೆಯಾಗಬಹುದು. ವಿಶ್ವಾಸದಿಂದ ಪಾಲುದಾರರ ಮನಮೆಚ್ಚಿಸಿ ಅವರ ವ್ಯವಹಾರದಲ್ಲಿ ಭಾಗವಹಿಸುವ ಅವಕಾಶಗಳನ್ನು ಪಡೆಯುವಿರಿ. ಬೇರೆಯವರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಮಾಡಿದಲ್ಲಿ ನೀವೇ ಸಿಕ್ಕಿಬೀಳುವ ಸಾಧ್ಯತೆಗಳಿವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ಸಂಗಾತಿಯ ಆಕಸ್ಮಿಕ ನಡವಳಿಕೆಯಿಂದ ನಿಮಗೆ ಮುಜುಗರವಾಗಬಹುದು. ಕುಳಿತು ತಿಳಿಹೇಳುವುದರಿಂದ ಇಂತಹ ಸಂದರ್ಭಗಳನ್ನು ತಪ್ಪಿಸಬಹುದು. ಬಾಯಿ ಚಪಲವನ್ನು ಹೊಂದಿರುವ ಹಿರಿಯರಿಗೆ ಆಹಾರದಿಂದ ಅನಾರೋಗ್ಯ ಬರಬಹುದು. ಸರ್ಕಾರದಿಂದ ಬರಬೇಕಾಗಿದ್ದ ಸಹಾಯಧನ ಸರಾಗವಾಗಿ ಬಂದು ಸೇರುತ್ತದೆ. ಆಸ್ತಿಗೆ ಸಂಬಂಧಿಸಿದ ವ್ಯಾಜ್ಯಗಳು ಹೆಚ್ಚಾಗಬಹುದು.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ವೈಯಕ್ತಿಕ ಜೀವನದಲ್ಲಿ ಸಾಕಷ್ಟು ಅಭಿವೃದ್ಧಿಯನ್ನು ಕಾಣಬಹುದು. ಸಾಮಾಜಿಕ ಚಿಂತನೆಗಳಿಂದ ಸಮಾಜದಲ್ಲಿ ಗೌರವಾದರಗಳನ್ನು ಹೊಂದುವಿರಿ. ಕೃಷಿ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ಸಂಗಾತಿಯ ಕೆಲವು ಸಲಹೆಗಳು ನಿಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕೊಡುತ್ತವೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ವಯೋವೃದ್ಧರಿಗೆ ಅವರ ಮಾತೇ ಮುಳುವಾಗಬಹುದು. ಆದ್ದರಿಂದ ಮಾತನಾಡುವಾಗ ಎಚ್ಚರ ಇರಲಿ. ಇವರಿಗೆ ಶತ್ರುಗಳು ಹೆಚ್ಚಾಗುವ ಸಂದರ್ಭಗಳಿವೆ. ಆರ್ಥಿಕ ಅಡಚಣೆಗಳು ಹಂತಹಂತವಾಗಿ ನಿವಾರಣೆಯಾಗುತ್ತವೆ. ಶಾರೀರಿಕ ಆಯಾಸ ಆದರೂ ಕೆಲಸದಲ್ಲಿ ಪ್ರಗತಿ ಇರುತ್ತದೆ. ಮಿತ್ರರ ಸಹಕಾರದಿಂದ ರಾಜಕೀಯ ವ್ಯವಹಾರಗಳಲ್ಲಿ ಪ್ರಗತಿ ಇರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಹೊಸ ಸ್ನೇಹಿತರಿಂದ ಹೊಸ ಹೊಸ ಯೋಜನೆಗಳಿಗೆ ಪ್ರೋತ್ಸಾಹ ದೊರೆಯುತ್ತದೆ. ಉನ್ನತ ಅಧಿಕಾರಿಗಳ ಅನುಗ್ರಹದಿಂದಾಗಿ ವೃತ್ತಿಯಲ್ಲಿ ಸಾಕಷ್ಟು ಅನುಕೂಲತೆ ಮೂಡುತ್ತದೆ. ಮಕ್ಕಳಿಂದ ಹಿರಿಯರಿಗೆ ಆರ್ಥಿಕ ಸಹಕಾರಗಳು ದೊರೆಯುವ ಸಾಧ್ಯತೆಗಳಿವೆ. ವೈದ್ಯಕೀಯ ವೃತ್ತಿಯಲ್ಲಿರುವವರಿಗೆ ಆದಾಯ ಹೆಚ್ಚುತ್ತದೆ. ನ್ಯಾಯವಾದಿಗಳಿಗೆ ನೆಚ್ಚಿನ ದಾವೆಗಳು ದೊರೆತು ಆದಾಯ ಹೆಚ್ಚುತ್ತದೆ. ಸರ್ಕಾರಿ ಕೆಲಸಗಳಲ್ಲಿ ಮುನ್ನಡೆ ಇರುತ್ತದೆ. ನಿಮ್ಮದೇ ಸ್ಥಿರಾಸ್ತಿಯನ್ನು ಹೊಂದುವ ಸಂದರ್ಭವಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಸರ್ಕಾರಿ ನೌಕರಿಯಲ್ಲಿ ಬಡ್ತಿ ಹಾಗೂ ಹೊಸ ಯೋಜನೆಗಳನ್ನು ರೂಪಿಸುವವರಿಗೆ ಬಹಳಷ್ಟು ಅಭಿವೃದ್ಧಿ ಇರುತ್ತದೆ. ಗೃಹನಿರ್ಮಾಣ ಕಾರ್ಯಗಳನ್ನು ಈಗ ಕೈಗೆತ್ತಿಕೊಳ್ಳಬಹುದು. ಮನಸ್ಸು ಇಟ್ಟು ಕೆಲಸ ಮಾಡಿದಲ್ಲಿ ವಿದೇಶಿ ವ್ಯವಹಾರಗಳಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ಭೂಮಿಯನ್ನು ಖರೀದಿಸಬೇಕೆಂದವರಿಗೆ ಈಗ ಅವಕಾಶಗಳು ಒದಗಿ ಬರುತ್ತವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಆರ್ಥಿಕ ವಿಷಯಗಳಲ್ಲಿ ಸ್ವಲ್ಪ ಎಚ್ಚರಿಕೆ ಅಗತ್ಯ. ಸರ್ಕಾರಿ ನೌಕರರಿಗೆ ಉದ್ಯೋಗದಲ್ಲಿ ಪ್ರಗತಿ ಇರುತ್ತದೆ. ಸೋದರರಿಂದ ಅಗತ್ಯ ಸಹಕಾರಗಳು ದೊರೆಯುತ್ತವೆ. ಆರ್ಥಿಕ ಪ್ರಗತಿಗಾಗಿ ನೀವು ಅಂದುಕೊಂಡಿರುವ ಯೋಜನೆಗಳಲ್ಲಿ ಕೆಲವು ಯೋಜನೆಗಳು ಉತ್ತಮ ಫಲ ಕೊಡುತ್ತವೆ. ಕೃಷಿ ಸಂಬಂಧಿತ ಕೈಗಾರಿಕೆಗಳನ್ನು ನಡೆಸುತ್ತಿರುವವರಿಗೆ ಉತ್ತಮ ಲಾಭ ಇರುತ್ತದೆ.

ಪದಬಂಧ 2714



ಮೇಲಿನಿಂದ ಕೆಳಕ್ಕೆ

1. ಮಾತಿಲ್ಲದೆ ನೀಡುವ ತೀರ್ಪು 3
2. ಬಟ್ಟೆಯ ಕೊಳೆ ತೆಗೆಯುವ ಸುಸಂಸ್ಕೃತ 3
3. ಗೆಲುವಾಗಲಿ ನಮ್ಮ ಕರ್ನಾಟಕ ಮಾತೆಗೆ 3
4. ದಪ್ಪದನಿಯ ಹಣವಂತ 3
7. ಮನಸ್ಸಿನ ಸ್ವೇಚ್ಛಾವಿಹಾರ 3
9. ಕೊಂದು ಮಾಲೆಯಾಗಿ ಧಾರಣೆ 3
10. ಕೋಪದಲ್ಲಿ ಮುಖ ಗಂಟಿಕ್ಕಿ ಮಾತಾಡು 3
11. ಕತ್ತಿಯ ಚಳಕದಲ್ಲಿರುವ ಸಂಬಂಧ 3
12. ಆಡಿಸಿದಳು ಮಗನಾ. . . . .; ಜಗದ್ದೋದ್ಧಾರನಾ ಆಡಿಸಿದಳು..... 3
13. ಕಾವ್ಯದ ಬಳಕೆಯಲ್ಲಿ ದೀರ್ಘ ಕಾಡು 3
14. ಒಳ್ಳೆಯ ಮೈಕಟ್ಟಿನ ಸಾಹಸ ವೀರ 3
16. ದೇವರಿಗೆ ತೆಗೆದಿಡುವ ಮುಡಿಯಂತೆ ಪ್ರತ್ಯೇಕತೆಯ ವ್ಯವಸ್ಥೆ 3
18. ಮೃಚ್ಛಕಟಿಕಾ ಸಂಸ್ಕೃತ ನಾಟಕಕಾರ 3
20. ಸಲ್ಲಾಪದ ಹಿಂದೆ ದ್ರವ ತುಂಬಿದ ಕ್ರಿಯೆ 3
21. ಚತುರ್ಬಲಕ್ಕೆ ಸೇರಿದ ಕುದುರೆ 3
22. 'ಹಿತ'ದಲ್ಲಿ ಕೈಗೆ ಸಿಗುವ ನಿಯಂತ್ರಣ 3
23. ಬೆಳಂದಿಗಳಲ್ಲಿ ಬೆಳಗುವ ಹೆಣ್ಣು 3

ಎಡದಿಂದ ಬಲಕ್ಕೆ

1. ಯಾವ ರೀತಿಯ ಬುನಾದಿಯೇ ಇಲ್ಲದ್ದು 4
3. ಸೀಳಿದರೂ ಸೇರುತ್ತಿದ್ದ ಮಹಾ ರಕ್ಕಸ 4
5. ಜಾನಪದದ ಯಮಧರ್ಮ 4
6. ಪಟ್ಟು ಬಿಡದೆ ಸಾಧಿಸುವ ಮಲ್ಲನ ತೊಡೆಗಿರುವ ಅಲ್ಪಪ್ರಾಣ 4
8. ಬಂಗಾರದ ಕೋಳ 5
10. ಶ್ರೀಮಂತ ವಸುಂಧರೆಯ ಸರಹದ್ದನ್ನು ಬಣ್ಣಿಸುವ ಬಹುಭಾಷಾ ಗ್ರಂಥ 6
13. ಮಜ್ಜಿಗೆಗೂ ಸಾಲದ ಅರ್ಧ ರೊಕ್ಕ 4
15. ಹರೆಯದ ಹುಡುಗನಿಗೆ ಚಿಗುರಿದ ವದನ ಕೇಶ 4
17. ಕೊಡಗೈ ಪರಾಕ್ರಮಿ ಕರ್ಣನ ಅಭಿದಾನ 6
19. ಬಡ್ಡಿ ಗಳಿಸುವ ಮೂಲ ಧನದಂಥ ನುಡಿ 5
22. ಮನಸ್ಸಿಗೆ ದೇಹಕ್ಕೆ ನೆಮ್ಮದಿ ಕಲ್ಪಿಸುವ ಕೈ 4
24. ದ್ರವಕ್ಕೆ ಹೆಸರಾದ ಉತ್ತರ ಕರ್ನಾಟಕದ ವಾಸಸ್ಥಳ 4
25. ಪರಿತ್ಯಾಗಕ್ಕೆ ಪಾತ್ರವಾದ ಎಲ್ಲರ ಸಹವಾಸ 4
26. ಧ್ಯಾನದ ಬಿಸಿಯಲ್ಲಿರುವ ಋಷಿ 4

ಪದಬಂಧ ಉತ್ತರ -2713

ಮೇಲಿಂದ ಕೆಳಕ್ಕೆ

1. ಜರಗು 2.ನಿಖರ 3.ಪದಜಾಲ 4.ಮಹಾಗಣ 5.ಹಮ್ಮೀರಾ 7.ರುಕ್ಮಿಣಿ 9.ಜನಮಾನಸ 11.ವರ್ತಮಾನ 12. ದಗಲುಬಾಜಿ 13.ಸುಲಲಿತಾ 16.ಕ್ಷತ್ರಿಯ 17.ಹಮತಾಪಿ 18.ಶರಣಾಗು 20.ತಡಕು 21.ಮಹಂತ 22.ಶರ್ಕರ

ಎಡದಿಂದ ಬಲಕ್ಕೆ

1.ಜನಹಾನಿ 3.ಪದುಮ 5.ಹನಿ 6.ಗುರುವಾರ 8.ಗಜರಾಜ 10.ಲವಣ 12.ದಣಿವಾರಿಸು 14.ಲಘಿಮಾ 15.ನರರಾಕ್ಷಸ 17.ಹತಾಶ 19.ಜಿತಕಾಮ 21.ಮಹಾಯಶ 23.ಬ್ರೇಕು 24.ಪಿಡುಗು 25.ತಮೋಹರ

ದಶಾವತಾರಿಯ ತಿರುಗಾಟಗಳು

ಸೂರಿಕುಮೇರು ಕೆ. ಗೋವಿಂದ ಭಟ್ಟರ 'ಎಪ್ಪತ್ತು ತಿರುಗಾಟಗಳು' ಕೃತಿ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ಪ್ರಕಾಶನದ ಮೂಲಕ ಇದೇ 25ರಂದು ಲೋಕಾರ್ಪಣೆಗೊಳ್ಳಲಿದೆ. 1951ರಿಂದ 2020ರವರೆಗಿನ ಯಕ್ಷಗಾನ ಚರಿತ್ರೆ, ಆ ಕಾಲದ ಕಲಾವಿದರ ಬದುಕು ಜೊತೆಗೆ ಕರಾವಳಿ ಜಿಲ್ಲೆಯ ಸಾಂಸ್ಕೃತಿಕ ಲೋಕವೇ ಇಲ್ಲಿ ತೆರೆದುಕೊಂಡಿದೆ.

ಕೌರವನ ಪಾತ್ರದಲ್ಲಿ...
ಚಿತ್ರ: ಯಜ್ಞ ಆಚಾರ್ಯ

ತೆಂಕುತಿಟ್ಟು ಯಕ್ಷಗಾನದ 'ದಶಾವತಾರಿ' ಎಂದೇ ಪ್ರಸಿದ್ಧವಾಗಿರುವ ಸೂರಿಕುಮೇರು **ಕೆ. ಗೋವಿಂದ ಭಟ್ಟರು** ತೆಂಕುತಿಟ್ಟು ಯಕ್ಷಗಾನಕ್ಕೆ ಎರಡನೇ ರಾಷ್ಟ್ರಪ್ರಶಸ್ತಿ ತಂದು ಕೊಟ್ಟವರು. ಅವರು ಯಕ್ಷರಂಗದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿ ದಾಖಲೆಯ ಎಪ್ಪತ್ತು ವರ್ಷಗಳ ಕಾಲ ತಿರುಗಾಟದಲ್ಲಿ ಬದುಕನ್ನು ಸವೆಸಿದವರು. ಧರ್ಮಸ್ಥಳ ಒಂದೇ ಮೇಳದಲ್ಲಿ 54 ವರ್ಷಗಳ ಕಾಲ ದುಡಿದವರು. ತಮ್ಮ ಯಕ್ಷತಿರುಗಾಟದ ಅನುಭವ ಕಥನವನ್ನು 'ಎಪ್ಪತ್ತು ತಿರುಗಾಟಗಳು' ಎಂಬ ಕೃತಿಯಲ್ಲಿ ಅವರು ನಿರೂಪಿಸಿದ್ದಾರೆ. ಮಂಜಾದ ಕಣ್ಣು, ನಡುಗುತ್ತಿರುವ ಕೈಬೆರಳುಗಳು, ವಯೋಸಹಜ ಮರೆವು, ಹೆಚ್ಚು ಹೊತ್ತು ಕುಳಿತುಕೊಳ್ಳಲು ಶಕ್ತರಾಗದಿದ್ದರೂ ಎಲ್ಲವನ್ನೂ ಮೀರಿ ಎಂಬತ್ತರ ಇಳಿಹರೆಯದಲ್ಲೂ ಈ ಪುಸ್ತಕವನ್ನು ಅವರು ಬರೆದು ಮುಗಿಸಿದ್ದಾರೆ. ಅವರ ಯಕ್ಷಪ್ರವೇಶದ ಅನುಭವ ಅವರದೇ ಮಾತಿನಲ್ಲಿ...

ಅನ್ನವನ್ನರಸುತ್ತಾ....

ಹಿಂದಿನಿಂದಲೂ ಕೇಳಿಕೊಂಡು ಬಂದ ಮಾತಿದು - 'ಹಡಗು ತುಂಬಿಸಲು ಹೋದವನು ಮರಳಿ ಬಂದಿದ್ದಾನೆ. ಆದರೆ ಹೊಟ್ಟೆ ಹೊರೆಯಲು ಹೋದವನು ಇನ್ನೂ ಬಂದಿಲ್ಲ'. ಹೌದಲ್ಲವೆ? ಮನುಷ್ಯನಿಗೆ ಹೊಟ್ಟೆ ಒಂದು ಇರದೇ ಇರುತ್ತಿದ್ದರೆ ಆತ ಏನೂ ಮಾಡುತ್ತಿರಲಿಲ್ಲವೇನೋ...? ಹೊಟ್ಟೆ-ಬಟ್ಟೆಗಾಗಿ ಮನುಷ್ಯ ನಿರಂತರ ಹುಡುಕಾಟದಲ್ಲಿ, ಹೋರಾಟದಲ್ಲಿ ಇರುತ್ತಾನೆ. ಅದಕ್ಕಾಗಿ ಅಲ್ಲವೇ ಕವಿ ಗೋಪಾಲಕೃಷ್ಣ ಅಡಿಗರು ಅಂದದ್ದು 'ಇಂದು ಬಾಳಿದು ಕೂಳ ಕಾಳಗವು; ಹೊಟ್ಟೆಯೇ ಕೇಂದ್ರವಾಗಿದೆ ನರನ ಜೀವಿತಕ್ಕೆ; ಅನ್ನದನ್ಯಾಯದಾವಾಗ್ನಿಯಲಿ ಕರಗುತಿದೆ ನರತೆ, ಸಂಸ್ಕೃತಿ, ಪ್ರೀತಿ, ದಿವದ ಬಯಕೆ'.

ಮನುಷ್ಯನಿಗೆ ಎಲ್ಲಕ್ಕಿಂತ ಮೊದಲು ಬೇಕಾದದ್ದು ಅನ್ನ. ಹೊಟ್ಟೆ ತುಂಬುವಲ್ಲಿಯವರೆಗೆ ಮನುಷ್ಯ ಪಶು, ಶುದ್ಧ ಪಶುವಾಗಿರುತ್ತಾನೆ. ಹೊಟ್ಟೆ ತುಂಬಿದ ಮೇಲೆ ಅವನಿಗೆ ಎಲ್ಲದರ ಅರಿವಾಗುವುದು. ಅಲ್ಲಿಂದ ಅವನು ಧಾರ್ಮಿಕನಾಗಲು, ನಾಗರಿಕನಾಗಲು, ಧರ್ಮಿಷ್ಠನಾಗಲು, ಒಟ್ಟಿನಲ್ಲಿ 'ಸುಭಗ'ನಾಗಲು ತೊಡಗುತ್ತಾನೆ. ಇಂದು ನನ್ನನ್ನು ಜನ 'ಯಕ್ಷ ಕಲಾವಿದ'ನೆಂದು ಗುರುತಿಸುತ್ತಿದ್ದಾರೆ. ಆದರೆ ಕಲೆಯ ಬಗ್ಗೆ ನನಗೆ ಅರಿವು ಮೂಡಿದ್ದೇ ಬಹಳ ತಡವಾಗಿ.

ಊಟಕ್ಕಿಲ್ಲದೇ ಅಲ್ಲಲ್ಲಿ ಅಲೆದಾಡುತ್ತಿದ್ದೆ. ಯಾರ ಕೈ ಒಳ್ಳೆಯದು, ಬಾಯಿ ಒಳ್ಳೆಯದು ಎಂದು ಕುತೂಹಲದಿಂದ ನೋಡುತ್ತಿದ್ದೆ. ಕೊನೆಗೊಮ್ಮೆ ಏನೂ ತೋಚದೆ ಹೊಟ್ಟೆ ಹೊರೆಯುವುದಕ್ಕಾಗಿ ನಾನು ಹೋಟೇಲ್‌ನಲ್ಲಿ ಪ್ಲೇಟ್ ತೊಳೆಯುವ ಕೆಲಸಕ್ಕೆ ಸೇರಿದ್ದೆ. ಆಗ ಯಾವುದೋ ಒಂದು ಕಾರ್ಯಕ್ರಮದಲ್ಲಿ ಸಿಕ್ಕ ಹೊಸಹಿತ್ಲು ಮಹಾಲಿಂಗ ಭಟ್ಟರು, 'ಯಕ್ಷಗಾನ ಮೇಳದಲ್ಲಿ ನನಗೆ ಒಂದು ತಿರುಗಾಟಕ್ಕೆ 500 ರೂಪಾಯಿ ಕೊಡುತ್ತಾರೆ' ಎಂದು ಹೇಳಿದ್ದನ್ನು ಕೇಳಿ ಯಕ್ಷಗಾನದ ಕಡೆಗೆ ಹೊರಳಿದವನು ನಾನು.

ದೈಗೋಳಿ ಎಂಬಲ್ಲಿ ಹೊಟೇಲ್ ಕೆಲಸದಲ್ಲಿದ್ದರೂ ಯಾವುದೇ ಸಂಬಳ ಇಲ್ಲದೇ ಇದ್ದ ಕಾರಣಕ್ಕಾಗಿ ನನ್ನ ಮನಸ್ಸು ಸಂಬಳ ಸಿಗುವ ಯಕ್ಷಗಾನದ ಕಡೆಗೆ ವಾಲಿತ್ತು. ಹಾಗಾಗಿ ಧರ್ಮಸ್ಥಳ ಮೇಳವನ್ನು ಸೇರಬೇಕೆಂಬ ಬಯಕೆಯಲ್ಲಿ ಹಿಂದೆ - ಮುಂದೆ ತಿಳಿಯದೆ ಒಂದು ದಿನ ಧರ್ಮಸ್ಥಳಕ್ಕೆ ಹೋಗಿದ್ದೆ. ಅಲ್ಲಿ ನನ್ನ ಸಂಪೂರ್ಣ ಪರಿಚಯವನ್ನು ಕೇಳಿಸಿಕೊಂಡ ಕುರಿಯ ವಿಠಲ ಶಾಸ್ತ್ರಿಗಳು 'ಈ ವರ್ಷದ ತಿರುಗಾಟ ಹೆಚ್ಚು ಕಡಿಮೆ ಮುಗಿಯಿತು, ಮಳೆಗಾಲದಲ್ಲಿ ಮಿತ್ತನಡ್ಕದಲ್ಲಿ ನಾಟ್ಯ ಹೇಳಿ ಕೊಡುವ ವ್ಯವಸ್ಥೆ ಇದೆ. ನೀನು ಅಲ್ಲಿಗೆ ಬಾ' ಎಂದು ಹೇಳಿದ್ದರು.

ಮಿತ್ತನಡ್ಕದಲ್ಲಿ ವಿಠಲ ಶಾಸ್ತ್ರಿಗಳು ಆರಂಭಿಸಿದ್ದ ಯಕ್ಷಗಾನ ಶಿಬಿರದಲ್ಲಿ ಪಾಲ್ಗೊಂಡೆ. ಧರ್ಮಸ್ಥಳ ಮೇಳದ ಕೆಲವೊಬ್ಬ ಆಸಕ್ತ ಕಲಾವಿದರೂ ಅಲ್ಲಿಗೆ ನಾಟ್ಯವನ್ನು ಕಲಿಯಲು ಬಂದಿದ್ದರು. ಮಿತ್ತನಡ್ಕದಲ್ಲಿ ನನಗೆ ಯಕ್ಷನಾಟ್ಯದ ಜೊತೆಗೆ ಭರತನಾಟ್ಯ ಶಿಕ್ಷಣವನ್ನು ಪಡೆಯುವ ಅವಕಾಶ ದೊರೆಯಿತು. ತಮಿಳುನಾಡಿನ ಪರಮಶಿವನ್ ಎಂಬವರು ಅಲ್ಲಿಗೆ ಬಂದು ಭರತನಾಟ್ಯವನ್ನು ಕಲಿಸುತ್ತಿದ್ದರು.

ಮೇಳ ಹೊರಡಲು ಒಂದು ತಿಂಗಳ ಮೊದಲೇ ಮಿತ್ತನಡ್ಕದ ಕಲಿಕಾ ಕೇಂದ್ರ ಮುಕ್ತಾಯವಾಯಿತು. ಧರ್ಮಸ್ಥಳ ಮೇಳಕ್ಕೆ ಬರುವವರನ್ನು ಕ್ಷೇತ್ರದ ಲಕ್ಷದೀಪಕ್ಕೆ ಬನ್ನಿರೆಂದು ಹೇಳಿ ಕುರಿಯ ವಿಠಲ ಶಾಸ್ತ್ರಿಗಳು ಕಳುಹಿಸಿದ್ದರು. ಒಂದು ತಿಂಗಳು ಕಾಯಲೇಬೇಕಿತ್ತು. ಇರುವುದೆಲ್ಲಿ? ಊಟಕ್ಕೇನು? ಯೋಚಿಸುತ್ತಾ ಆಢ್ಯರಾದ ಮುಗುಳಿ ರಾಮಭಟ್ಟರಲ್ಲಿಗೆ ಹೋದೆ. ಮಧ್ಯಾಹ್ನದ ಹೊತ್ತಿಗೆ ಹೋದುದರಿಂದ ಊಟವಿತ್ತರು.

ಯಕ್ಷಗಾನ ಕಲಿಕಾ ಶಿಬಿರದಲ್ಲಿ ನನ್ನನ್ನು ಕಂಡವರಾದ್ದರಿಂದ ಉಂಡಾದ ಮೇಲೆ ನೀನೆತ್ತ ಹೋಗುವವನೆಂದು ಕೇಳಿದರು. ಎಲ್ಲಿಗೆ ಹೋಗುವುದೆಂದೇ ನಿರ್ಣಯವಿಲ್ಲದ ನಾನು ಏನೆನ್ನಲಿ? ಮೇಳ ಆರಂಭವಾಗುವವರೆಗೆ ನಿಲ್ಲಲು ಆಸರೆ ದೊರೆತೀತೇನೋ ಎಂದು ಇಲ್ಲಿಗೆ ಬಂದಿದ್ದೇನೆ ಎಂದಾಗ ನನ್ನ ಮುಖ ನೋಡಿದವರು 'ಇಂದಿಲ್ಲೇ ಇರು, ನೋಡೋಣ' ಎಂದರು. ಸಾಯಂಕಾಲದ ಹೊತ್ತಿಗೆ ನಾಲ್ಕಾರು ಮಂದಿಗಳು ರಾಮ ಭಟ್ರರಲ್ಲಿಗೆ ಬಂದಿದ್ದರು. ರಾತ್ರಿಯ ಊಟವಾದ ಮೇಲೆ ನನಗೊಂದು ಚಾಪೆ ಕೊಟ್ಟು ಮಲಗಲು ಹೇಳಿದರು. ನಾನು ಯಾವ ಯೋಚನೆಯೂ ಇಲ್ಲದೆ ಬೆಳಗ್ಗಿನ ತನಕ ನಿದ್ರಿಸಿದೆ.

ಬೆಳಗ್ಗೆ ಎದ್ದಾಗ ಸಾಯಂಕಾಲ ಬಂದವರೆಲ್ಲ ಕಾಫಿ ತಿಂಡಿ ಆಗಿ ಹೊರಡುತ್ತಿದ್ದರು. ಕೊನೆಗೆ ಉಳಿದವರು ಮುಗುಳಿ ಪಟೇಲ ರಾಮಭಟ್ಟರು. ಅವರಿಗೆ ನನ್ನನ್ನು ತೋರಿಸಿದ ಮುಗುಳಿ ರಾಮಭಟ್ಟರು ನನ್ನ ವಿಚಾರ ತಿಳಿಸಿ 'ಇವನು ಯಾರ ಮನೆಯಲ್ಲಾದರೂ ಚಾಕರಿಗೆ ನಿಲ್ಲುತ್ತಾನೆ. ನೀವು ಅತ್ತಿತ್ತ ಹೋಗುವಾಗ ನಿಮ್ಮಲ್ಲಿ ಯಾರೂ ಇಲ್ಲವಲ್ಲ, ಇವನು ನಿಮ್ಮಲ್ಲಿರಲಿ' ಎಂದರು. ಒಪ್ಪಿದ ಪಟೇಲರು ನನ್ನನ್ನು ಕರೆದುಕೊಂಡು ಅವರ ಮನೆಗೆ ಸೇರಿಸಿದರು.

ಪಟೇಲ ರಾಮಭಟ್ಟರು ಮುಗುಳಿಯ ಅವರ ಸ್ಥಳವನ್ನು ಮಾರಿ ಬಾಳೆಕೋಡಿ ಬಳಿ ಸ್ವಲ್ಪ ಸ್ಥಳ ತೆಗೆದುಕೊಂಡು ಅಲ್ಲೊಂದು ಮುಳಿಹುಲ್ಲಿನ ಮನೆ ಮಾಡಿಕೊಂಡಿದ್ದರು. ಒತ್ತಿಗಿದ್ದ ನಾಲ್ಕೈದು ಎಕ್ರೆ ಭೂಮಿಯನ್ನು ದರ್ಕಾಸು ಮಾಡಿಕೊಂಡು ಅದರಲ್ಲಿ ಹೊಸದಾಗಿ ತೋಟ ಮಾಡಿದ್ದರು. ಗಂಡ ಹೆಂಡಿರಿಬ್ಬರೆ. ಮಕ್ಕಳಿರಲಿಲ್ಲ. ತೋಟಕ್ಕೆ ಬರುವ ದನಗಳನ್ನು ಓಡಿಸಲು ಜನ ಬೇಕಿತ್ತು. ನನಗೆ ಆ ಕೆಲಸ. ಬೆಳಗ್ಗಿನಿಂದ ಸಂಜೆಯ ತನಕ ಅವರ ತೋಟಕ್ಕೆ ಜಾನುವಾರು ನುಗ್ಗದಂತೆ ನೋಡಿಕೊಳ್ಳುತ್ತಿದ್ದೆ.

ಆಗಾಗ ತೋಟದಲ್ಲಿಯೇ ಕುಣಿಯುತ್ತ, ಪದ್ಯ ಹೇಳುತ್ತ ಓಡಾಡುತ್ತಿದ್ದ ನನ್ನನ್ನು ನೋಡಿದವರು 'ಮಾಣಿಗೆ ಮರುಳು' ಎನ್ನುತ್ತಿದ್ದರು. ಊಟ ತಿಂಡಿಗೆ ಏನೂ ಕೊರತೆಯಾಗಲಿಲ್ಲ. ನಾನು ಅಲ್ಲಿದ್ದುದು ಇಪ್ಪತ್ತೆಂಟು ದಿನಗಳು. ಈ ಅವಧಿಯಲ್ಲಿ ಮನೆಯ ಯಜಮಾನ ರಾಮಭಟ್ಟರು ಮನೆಯಲ್ಲಿದ್ದುದು ನಾಲ್ಕೈದು ದಿನಗಳು ಮಾತ್ರ. ಎಲ್ಲಿ ಹೋಗುತ್ತಾರೆ, ಏನು ಮಾಡುತ್ತಾರೆಂದು ಅವರ ಹೆಂಡತಿಗೂ ಗೊತ್ತಿರಲಿಲ್ಲವೇನೋ. ಅವರ ಮನೆಯ ಬಳಿಯಿದ್ದ ಭೂತ ಕಟ್ಟುವವನ ಪರಿಚಯವಾಯಿತು. ನನ್ನಷ್ಟಕ್ಕೆ ಬಾಯಿತಾಳ ಹೇಳುತ್ತಾ ತೋಟಕ್ಕೆ ಬರುವ ದನಗಳನ್ನು ಓಡಿಸುತ್ತಿದ್ದ ನನ್ನನ್ನು ಮಾತನಾಡಿಸಿ, ನಾನು ಯಕ್ಷಗಾನ ಕಲಿತವನೆಂದು ತಿಳಿದ ಮೇಲೆ ನಾನು ಅಭ್ಯಾಸ ಮಾಡಿದ ಕುಣಿತವನ್ನು ನೋಡಿ ತಾನೂ ಕುಣಿದು ಇದರಲ್ಲಿ ಹೆಚ್ಚಿನದ್ದನ್ನು ತಾನು ಕುಣಿಯುತ್ತೇನೆಂದು ತೋರಿಸಿದ. ಹೀಗೆ ದಿನಗಳು ಉರುಳುತ್ತಿದ್ದವು.



ಘಮ ಘಮಿಸುವ ಸಂಜೆ ಮಲ್ಲಿಗೆ

ಪಿನಾಕ

ಮಾಸ್ತಿ ಕಥಾ ಪರಂಪರೆಯ ಕೊಂಡಿಯಾಗಿ ಬೆಳಗಿದರೂ ಕಥೆಗಾರ್ತಿ ಶಾಂತಾದೇವಿ ಕಣವಿಯವರು ಅಷ್ಟೊಂದು ಢಾಳಾಗಿ ಪ್ರಕಟಗೊಳ್ಳದೆ ಕವಿ ಚೆನ್ನವೀರ ಕಣವಿಯವರ ದೈತ್ಯ ಕಾವ್ಯಪ್ರತಿಭೆಯ ಪ್ರಭಾವಳಿಯಲ್ಲಿಯೇ ಉಳಿದು ಹೋದರೇ? 'ಸಂಜೆಮಲ್ಲಿಗೆ' ಸಂಸ್ಮರಣ ಸಂಪುಟದಲ್ಲಿ ಶಾಂತಾದೇವಿ ಅವರ ಬರಹಗಳ ಸಂಗ್ರಹದ ಮೇಲೆ ಕಣ್ಣಾಡಿಸಿದರೆ ಇಂತಹದ್ದೊಂದು ಸಂಶಯ ಕಾಡದಿರದು.

ಚೆಂಬೆಳಕಿನ ಕವಿಗೆ ಸದಾ ಬೆಳಕಿನದೇ ಧ್ಯಾನವಾದರೆ, ಕವಿಯ ಅರ್ಧಾಂಗಿಯಾಗಿದ್ದ ಈ ಕಥೆಗಾರ್ತಿಗೆ ಅಂತಹ ಬೆಳಕಿನಲ್ಲಿ ಸದ್ದಿಲ್ಲದೆ ಹೂವಾಗಿ ಅರಳಿ, ಘಮ ಘಮಿಸುವಂತಹ ಮಲ್ಲಿಗೆ ಮೊಗ್ಗಿನ ಅನುಸಂಧಾನ. ಹಾಗಾಗಿಯೇ ಅವರ ಕಥೆಗಳು ಅಬ್ಬರದ ಅಲೆಗಳನ್ನು ಎಬ್ಬಿಸುವ ಗೋಜಿಗೆ ಹೋಗದೆ ಕಿವಿಯಲ್ಲಿ ಮೆಲುದನಿಯಿಂದ ಪಿಸುಗುಡುವಂತಹ ಸ್ವಭಾವವನ್ನು ಹೊಂದಿರುವಂಥವು. ಬುದ್ಧಿ-ಭಾವ ಮೀಟಿ, ಹೃದಯವನ್ನೂ ತಟ್ಟಿ ಬೆಚ್ಚಗೆ ಮಾಡುವಂಥವು. ಅವರೇನೂ ಸ್ತ್ರೀವಾದಿಯಾಗಿ ಬೀದಿಗಿಳಿದು ಹೋರಾಟ ಮಾಡಿದವರಲ್ಲ. ಆದರೆ, ಅವರ ಕಥೆಗಳಲ್ಲಿ ಸ್ತ್ರೀಯರ ನೋವು, ಸಂಕಟ, ಸಂವೇದನೆಗಳು ದಟ್ಟವಾಗಿರುವುದನ್ನು ಕನ್ನಡದ ವಿಮರ್ಶಾಲೋಕ ಸ್ಪಷ್ಟವಾಗಿಯೇ ಗುರ್ತಿಸಿದೆ.

ಧಾರವಾಡದ ಪ್ರಶಾಂತ ವಾತಾವರಣದ 'ಚೆಂಬೆಳಕಿ'ನ ಅಡುಗೆಮನೆಯಲ್ಲಿ ಇದ್ದುಕೊಂಡು ಕವಿ ಪರಿವಾರಕ್ಕೆ ರಸಪಾಕ ಸಿದ್ಧಪಡಿಸಿ ಉಣಬಡಿಸಿದಷ್ಟೇ ಆಸ್ಥೆಯಿಂದ ಕನ್ನಡದ ಪರಿವಾರಕ್ಕೆ ಕಥಾ ರಸಪಾಕವನ್ನೂ ಎರಕ ಹೊಯ್ದು ಕೊಟ್ಟವರು ಅವರು. ಶಾಂತಾದೇವಿಯವರ ಸಾಹಿತ್ಯದಷ್ಟೇ ಅವರ ಮಾನವೀಯ ಸಂಬಂಧಗಳ ಒಲುಮೆಯೂ ದೊಡ್ಡದು. ಧಾರವಾಡ ಸಾಹಿತ್ಯ ವಲಯದಲ್ಲಿ ಕಿರಿಯರಿಗೆ ಅಮ್ಮನಾಗಿ, ಹಿರಿಯರಿಗೆ ಅಕ್ಕನಾಗಿ ಅವರು ಹಂಚಿದ ಪ್ರೀತಿಯನ್ನು ನೆನೆಯದವರೇ ಇಲ್ಲ. ಅಂತಹ ನೆನಪುಗಳೆಲ್ಲ ಈ ಸಂಪುಟದಲ್ಲಿ ಇಡುಕಿರಿದಿವೆ.



ಸಂಜೆ ಮಲ್ಲಿಗೆ
ಶಾಂತಾದೇವಿ ಕಣವಿ ಸಂಸ್ಮರಣ ಸಂಪುಟ
ಲೇ: ವೀಣಾ ಶಾಂತೇಶ್ವರ, ಶಾಂತಾ ಇಮ್ರಾಪುರ
ಪ್ರ: ಸಂವಹನ, ಮೈಸೂರು
ಸಂ: 0821-2476019
ಪು: 462 ₹425

ಮೊದಲ ಓದು

ಸಂಪುಟವನ್ನು ಸ್ಥೂಲವಾಗಿ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಭಾಗದಲ್ಲಿ ಶಾಂತಾದೇವಿಯವರ ಪ್ರಕಟಿತ ಹಾಗೂ ಅಪ್ರಕಟಿತ ಲೇಖನಗಳಿದ್ದರೆ, ಎರಡನೇ ಭಾಗದಲ್ಲಿ ಅವರ ವ್ಯಕ್ತಿತ್ವನ್ನು ಒಡನಾಡಿಗಳು ಕಂಡರಿಸಿದ ಬರಹಗಳಿವೆ. ಕೃತಿಯ ಕೊನೆಯ ಭಾಗದಲ್ಲಿ ಕಣವಿ ಪರಿವಾರದ ದೃಷ್ಟಿಯಲ್ಲಿ ಶಾಂತಾದೇವಿಯವರ ವ್ಯಕ್ತಿತ್ವ ಅನಾವರಣಗೊಂಡಿದೆ. ಮಲ್ಲಿಗೆಯಂತಹ ಮೃದು ಮನಸಿನ ವ್ಯಕ್ತಿತ್ವ ಕೃತಿಯುದ್ದಕ್ಕೂ ಪರಿಮಳ ಬೀರುತ್ತಲೇ ಹೋಗುವುದಾದರೂ ಶಾಂತಾದೇವಿಯವರ ಬರಹಗಳಿರುವ ಮೊದಲ ಭಾಗವೇ ತುಂಬಾ ಆಪ್ತವಾಗಿದೆ.

ಶಾಂತಾದೇವಿಯವರು ಚಿಕ್ಕವರಿದ್ದಾಗ ಅವರ ತಂದೆ ಸಿದ್ಧಬಸಪ್ಪ ಗಿಡ್ನವರ ವಿಜಯಪುರದಲ್ಲಿ ಶಿರಸ್ತೇದಾರರಾಗಿದ್ದರು. ಅವರ ಮನೆಯಲ್ಲಿದ್ದ ಗ್ರಂಥಾಲಯಕ್ಕೆ ಓದಲು ಬರುತ್ತಿದ್ದ ತೆಳ್ಳಗೆ ಎತ್ತರವಾಗಿದ್ದ, ಗೋಧಿ ಬಣ್ಣ, ನೀಳ ಮೂಗು, ತುಂಬು ಗಲ್ಲ ಹೊಂದಿದ್ದ, ಹೊಳೆಯುವ ಕೂದಲಿನ ತುಂಬು ಕ್ರಾಪು ಬಿಟ್ಟುಕೊಂಡಿದ್ದ, ಉದ್ದನೆಯ ಕಾವಿ ಬಣ್ಣದ ನೆಹರು ಶರ್ಟು, ಖಾದಿ ಧೋತರ ಧರಿಸಿದ್ದ ಚೆಲುವ, ನಟ ಅಶೋಕ್ ಕುಮಾರನಂತಹ ಹುಡುಗ, ಬಾಳಸಂಗಾತಿಯಾಗಿ ಸಿಕ್ಕಿದ್ದನ್ನು ತುಸು ನಾಚಿಕೆಯಿಂದಲೇ ಶಾಂತಾದೇವಿ ನೆನೆಯುತ್ತಾರೆ.

ಒಡನಾಟಕ್ಕೆ ಬಂದವರ ಮೇಲೆ ಅವರದು ತಾಯಿ ಮಮತೆ. ಬರಹದಲ್ಲಿ ಅವರು ಕೊಡುವ ವಿವರಗಳು ಒಗ್ಗರಣೆ ಡಬ್ಬಿ ತೆಗೆದು ಸಾಸಿವೆ, ಜಿರಿಗೆ, ಅರಿಷಿಣ, ಉದ್ದಿನ ಬೇಳೆ, ಕರಿಬೇವು... ಹೀಗೆ ಒಂದೊಂದನ್ನೇ ತೆಗೆದು ಹಾಕಿದಷ್ಟು ಬಲು ಸೂಕ್ಷ್ಮವಾದವು. ಅಷ್ಟೇ ಆಳವಾದವು. ಅದರ ಉದಾಹರಣೆ ಬೇಕಾದರೆ ಸಂಪುಟದಲ್ಲಿರುವ ಅವರ ಅಪ್ರಕಟಿತ ಕಥೆ 'ಕಳ್ಳಗಂಟು ಮತ್ತು ಸತ್ಯ'ವನ್ನು ನೋಡಬಹುದು. ಅನುಪಮಾ ನಿರಂಜನ ಅವರನ್ನು ಒಂದೊಮ್ಮೆ 'ಕಥೆ ಹ್ಯಾಂಗ್ ಬರೀತೀರಿ' ಎಂದು ಮುಗ್ಧವಾಗಿ ಕೇಳಿದ್ದ ಶಾಂತಾದೇವಿ, ಮುಂದೆ ತಮ್ಮ ಸುದೀರ್ಘ ಸಾಹಿತ್ಯ ಯಾನದಲ್ಲಿ 'ಕಥೆ ಹುಟ್ಟುವ ಪರಿ'ಯನ್ನೂ ಕಟ್ಟಿಕೊಟ್ಟವರು.

ಆತ್ಮ ಸಂಗಾತಿಯಾಗಿದ್ದ ಶಾಂತಾದೇವಿಯವರು 2020ರಲ್ಲಿ ಅಗಲಿದಾಗ ಕಣವಿಯವರ ಕವಿ ಹೃದಯ ಕಣ್ಣೀರು ಹಾಕಿತ್ತು. 'ನೆಟ್ಟಗೆ ನೋಡುವ ಕಣ್ಣಿನ ದೃಷ್ಟಿ ಎತ್ತಲೋ/ ತಿರುಗಿತ್ತು. ಮುಟ್ಟಿದರೇಕೋ ಕೈ ಬಿಸಿಯಿರಲಿಲ್ಲ/ ಇದು ಕೊನೆಯ ಕ್ಷಣವೆಂದು ನನಗನಿಸಲೇ ಇಲ್ಲ' ಎಂದು ಅದು ಪರಿತಪಿಸಿತ್ತು. ಸಂಜೆಮಲ್ಲಿಗೆಯ ಈ ಮಾಲೆಯಲ್ಲಿ ಇಂತಹ ಘಮ ಘಮಿಸುವ ಮೊಗ್ಗುಗಳೇ ತುಂಬಿಕೊಂಡಿವೆ. ಅಂತಹ ಮೊಗ್ಗುಗಳನ್ನು ಹೆಕ್ಕಿ ಪೋಣಿಸಿದ ಸಂಪಾದಕರ ಶ್ರಮ ಸಾರ್ಥಕವಾಗಿದೆ.

ಕಥಾಸ್ಪರ್ಧೆ 2021
ತೀರ್ಪುಗಾರರ ಮೆಚ್ಚುಗೆ ಪಡೆದ
ಕಥೆ
ಮಂಜುನಾಥ ಹಿಲಿಯಾಣ ಅವರ
ಜಲಬಾಂಬು...!
ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವನಸ್ಪರ್ಧೆ 2021
ತೀರ್ಪುಗಾರರ ಮೆಚ್ಚುಗೆ ಪಡೆದ
ಕವನ
ಅಂಜನಾ ಹೆಗಡೆ ಅವರ
ಹಚ್ಚೆ ಹಾಕುವವನಿಗೆ..!
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಅಸಾಮಾನ್ಯ ಸಾಮಾನ್ಯರ ಲೋಕ

ಎಚ್.ಎಸ್. ಅನುಪಮಾ

ದಲಿತೇತರ ಮನಸುಗಳು ದಲಿತ ಬದುಕಿನ ಕುರಿತು ಯೋಚಿಸುವಾಗ ಅಸ್ಪೃಶ್ಯತೆಯಿಂದ ಅವರೆದುರಿಸುವ ಅವಮಾನ, ಸಂಕಷ್ಟಗಳು ಕಣ್ಣೆದುರು ತುಂಬುತ್ತವೆ. ಆದರೆ ಸಾವಿರಾರು ವರ್ಷಗಳಿಂದ ಸಂಕಷ್ಟ, ಶೋಷಣೆಗಳನ್ನೆದುರಿಸಿಯೂ ತಮ್ಮದೇ ವಿವೇಕ, ಸಂಸ್ಕೃತಿ, ಒಳನೋಟವನ್ನವರು ರೂಪಿಸಿಕೊಂಡಿರುವುದು, ತುಳಿತದ ನಡುವೆಯೇ ನೆಲಕ್ಕಂಟಿದ ಗರಿಕೆಯಂತೆ ತಲೆಯೆತ್ತಿ ಬದುಕಿರುವುದೂ ಗಮನಾರ್ಹ ಸಂಗತಿಗಳಾಗಿವೆ. ಸಾಮಾನ್ಯರೂ ಅಸಾಮಾನ್ಯವಾಗಿರುವ ಆ ಲೋಕವನ್ನು ಪ್ರೊ. ಅರವಿಂದ ಮಾಲಗತ್ತಿಯವರು ತಮ್ಮ ಆತ್ಮಕತೆಯ ಎರಡನೆಯ ಭಾಗ 'ನೀವೂ ದೇವರಾಗಿ'ಯಲ್ಲಿ ಅನಾವರಣಗೊಳಿಸಿದ್ದಾರೆ. ಮೊದಲ ಭಾಗ 'ಗೌರ್ಮೆಂಟ್ ಬ್ರಾಹ್ಮಣ'ವನ್ನು ಓದದಿದ್ದರೂ ಇದನ್ನು ಓದುತ್ತ ಹೋದಂತೆ ಬರೆದವರ ಬದುಕು, ವ್ಯಕ್ತಿತ್ವಗಳು ಬಿಚ್ಚಿಕೊಳ್ಳತೊಡಗುತ್ತವೆ.

ಅವಿಭಕ್ತ ಕುಟುಂಬದಲ್ಲಿ ಬೆಳೆದ ಹಳ್ಳಿಯ ಕಷ್ಟಕುಲದ ಹುಡುಗನೊಬ್ಬ ಹಲವಾರು ಇವೆ, ಇಲ್ಲಗಳ ನಡುವೆ ಗಾಳಿ, ನೀರು, ಬೆಳಕು, ಕತ್ತಲೆಗಳನ್ನು ಅರಗಿಸಿಕೊಳ್ಳುತ್ತಾ ಬಾಳಪಯಣದಲ್ಲಿ ಎದುರುಗೊಂಡವರನ್ನು ದಾಖಲಿಸಿರುವ ಬರಹವಿದು. ವಿಜಯಪುರ ಜಿಲ್ಲೆಯ ಗ್ರಾಮವೊಂದರಲ್ಲಿ ಅನುಕೂಲಸ್ಥ ಕೃಷಿ ಕುಟುಂಬದಲ್ಲಿ, ಚರ್ಮದ ವ್ಯವಹಾರ ಮಾಡುವ ಕುಲದಲ್ಲಿ ಹುಟ್ಟಿದ ಬಾಲಕ ತನ್ನ ಸುತ್ತಮುತ್ತ ಇರುವ 'ತನ್ನ ತಾನರಿದು ತಾನಾರೆಂದು ತಿಳಿದು ತಾನೇ ದೇವರಾದ' ಅಸಾಮಾನ್ಯ ವ್ಯಕ್ತಿತ್ವಗಳನ್ನು ಗಮನಿಸುತ್ತಾನೆ. ಅವರ ವಿವೇಕವನ್ನು ಒಳಗಿಳಿಸಿಕೊಳ್ಳುತ್ತಾನೆ. ತನ್ನ ಸೋಲು-ಗೆಲುವು, ಸ್ವೀಕಾರ-ನಿರಾಕರಣೆಯ ಸಂಕಟಗಳು ಕೇವಲ ತನ್ನದಷ್ಟೇ ಅಲ್ಲ ಎಂಬ ಅರಿವಿನ ಬೆಳಕಿನಲ್ಲಿ ಬಾಳು ಕಟ್ಟಿಕೊಳ್ಳುತ್ತಾನೆ. ಅಸ್ಪೃಶ್ಯತೆಯ ಅವಮಾನಕರ ಗಾಯಗಳನ್ನು ದಾಟಲು ಶಿಕ್ಷಣ, ಹೋರಾಟಗಳಂತೆಯೇ ಈ ಗಟ್ಟಿ ಪಾತ್ರಗಳು ಕೊಡಮಾಡಿದ ವಿವೇಕವೂ ಕಾರಣವಾಗುತ್ತದೆ.



ನೀವೂ ದೇವರಾಗಿ
ಲೇ: ಅರವಿಂದ ಮಾಲಗತ್ತಿ
ಪ್ರ: ಲಡಾಯಿ ಪ್ರಕಾಶನ
ಸಂ: 9480286844
ಪು: 220 ₹200

ವಿಮರ್ಶೆ

ಪುಸ್ತಕದಲ್ಲಿ ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಆಕರವಾಗುವಷ್ಟು ವಿಪುಲವಾಗಿ ದೈನಂದಿನ ಬದುಕಿನ ವಿವರಗಳಿವೆ. ಬ್ರಾಹ್ಮಣ ವಧುವಿನ ನಾಲಿಗೆಗೆ ಬರೆಹಾಕಿ ದಲಿತ ಜಾತಿಯೊಳಗೆ ತಂದುಕೊಂಡು ತಪ್ಪುದಂಡದ ಊಟ ಹಾಕಿಸಿದ ನಂತರ ಚಿಕ್ಕಪ್ಪನ ಮದುವೆ ಊರ್ಜಿತವಾದದ್ದು; ಮೆಹಬೂಬನು ಎಲ್ಲಮ್ಮ ದೀಕ್ಷೆ ಪಡೆದು ಜೋಗಾಡುವ ಬೂಬಮ್ಮ ಜೋಗತಿಯಾದದ್ದು; ಕುಳಬಾನ ಕಟ್ಟಲು ಹೆಂಡಿಗಾಗಿ ಎಮ್ಮೆದನಗಳ ಹಿಂದೆ ಸಗಣಿ ಹಿಡಿಯಲು ತಿರುಗಾಡಿದ್ದು; ಮುಂಬಯಿಗೆ ಮಗನನ್ನೊಯ್ಯಬೇಡ ಎಂದು ಅಜ್ಜಿ ಬಸ್ಸಿನೆದುರು ಮಲಗಿ ಡ್ರೈವರನನ್ನು ತಡೆಯುವುದು; ಮೈನೆರೆದ ಮದುವಣಗಿತ್ತಿಯನ್ನು ಮೆರವಣಿಗೆಯ ಎಮ್ಮೆಯ ಮೇಲೆ ಕೂರಿಸದೇ ಅದರ ಬಾಲ ಹಿಡಿಸಿ ನಡೆಸುವುದು – ಆಗ ನಡೆಯುವ ತರಲೆಗಳು; ಲೋಕದ ಕಣ್ಣಿಗೆ ತಿಳಿಸುವಂತೆ `ಮದುವೆ' ಆಗದೇ ಸಂಗಾತಿ ಧರಣಿಯ ಜೊತೆ ಬದುಕು ಆರಂಭಿಸಿದಾಗ ಆಗುವ ಗೊಂದಲಗಳೇ ಮುಂತಾಗಿ ಹತ್ತಾರು ಪ್ರಸಂಗಗಳು ಹೊತ್ತಗೆಯಲ್ಲಿ ಬಂದುಹೋಗುತ್ತವೆ. ಕೆಲವು ನಕ್ಕುನಕ್ಕು ಕಣ್ಣೀರು ಬರಿಸಿದರೆ, ಉಳಿದವು ಅಚ್ಚರಿಗೆ ಕಣ್ಣರಳುವಂತೆ ಮಾಡುತ್ತವೆ.

ಹಳ್ಳಿಯ ಬಡ ಹೆಣ್ಣುಮಕ್ಕಳ ಪೊರೆಯುವ, ಸಂಭಾಳಿಸುವ ಬಾವಣಿಕೆಯ ಗುಣಗಳು ಅರಿವಿಗೆ ನಿಲುಕುತ್ತವೆ.

ಕೆಲವೊಮ್ಮೆ ವಿಚಾರವಂತರೆಂದುಕೊಂಡು ನಮ್ಮ ಸರಿ-ತಪ್ಪು ಅಳತೆಪಟ್ಟಿಗೆ ತಕ್ಕಂತೆ ಬಂಧುಮಿತ್ರರನ್ನು, ಆಪ್ತೇಷ್ಟರನ್ನು ಅಳೆಯಹೊರಡುತ್ತೇವೆ. ಅದು ನಂಬಿಕೆಯ ಲೋಕಗಳ ನಡುವಿನ ವಿಚಿತ್ರ ಸಾಂಸ್ಕೃತಿಕ ಸಂಘರ್ಷ. ಸೋಲುಗೆಲುವುಗಳಿರದ ಕದನ. ನಮ್ಮ ಒಳಾವರಣಗಳು ರಣರಂಗವಾಗದಿರಲು, ಎಲ್ಲರನ್ನೂ ಅವರಿರುವ ಹಾಗೆಯೇ ಅರಿತು ಒಳಗೊಳ್ಳಲು ಮೈತ್ರಿಯ ಕಣ್ಣು ಬೇಕಾಗುತ್ತದೆ. ಈ ದೃಷ್ಟಿಯಿಂದ ನಾಸ್ತಿಕ ಮಗ-ಆಸ್ತಿಕ ತಾಯಿಯ ನಡುವೆ ಕಸಿವಿಸಿಯುಂಟಾಗುವ ಪ್ರಸಂಗದಲ್ಲಿ 'ನೀವೂ ದೇವರಾಗಿ' ಒಂದು ಹೊಸ ವೈಚಾರಿಕ ಆಯಾಮವನ್ನು ಪ್ರವೇಶಿಸುತ್ತದೆ.

ಮಗನ ನಂಬಿಕೆಗಾಗಿ ತನ್ನ ದೇವರುಗಳನ್ನು ಬಿಟ್ಟುಕೊಡಲಾಗದ ಅವ್ವ ಟ್ರಂಕಿನಲ್ಲಿ ದೇವರ ಪಟಗಳನ್ನು ಬಚ್ಚಿಟ್ಟು ಗುಟ್ಟಾಗಿ ಪೂಜೆ ಮಾಡುತ್ತಾ, ಮಗನ ಮದುವೆಯಾಗಲೆಂದು ಎಡಗೈಯಲ್ಲಿ ಊಟ ಮಾಡುವ ಹರಕೆಯೊಪ್ಪಿಸುತ್ತಾ ಮೌನ ಪ್ರತಿರೋಧ ಒಡ್ಡುತ್ತಾಳೆ. ಆಗ ತಾನು ನಂಬಿದ ವೈಚಾರಿಕತೆ, ಮಗನಾಗಿ ತಾಯಿಯ ಅಪೇಕ್ಷೆ ಪೂರೈಸಬೇಕಾದ ಜವಾಬ್ದಾರಿಗಳ ನಡುವೆ ಹೊಯ್ದಾಡುವ ಲೇಖಕರು, ಪ್ರಸಂಗವನ್ನು ನಿಭಾಯಿಸಿರುವ ಕ್ರಮವು ಚಿಂತನೆಗೆ ಹಚ್ಚುವಂತಿದೆ. ಹೀಗೆ ಬರೆದರೆ ಯಾರೇನೆಂದುಕೊಂಡಾರೋ ಎಂಬ ಲೆಕ್ಕಾಚಾರವಿಲ್ಲದ ನಿರ್ಭೀತ, ಪಾರದರ್ಶಕ ಬರವಣಿಗೆ ಗಮನ ಸೆಳೆಯುತ್ತದೆ.

ದ್ವಿತೀಯಾ ವಿಭಕ್ತಿ `ಅನ್ನು'ವನ್ನು ಹೆಚ್ಚು ಬಳಸದ ಉತ್ತರ ಕರ್ನಾಟಕದ ಭಾಷಾಶೈಲಿ, ಮಡಿಕೆ (ಮಡಕೆ), ಹಲಿಗೆ (ಹಲಗೆ), ತಗೆಯುವುದು (ತೆಗೆಯುವುದು), ಕುದರೆ (ಕುದುರೆ), ಹೊಡಿತ (ಹೊಡೆತ) ಮುಂತಾದ `ಶುದ್ಧ ಕನ್ನಡಿಗ'ರು ಕಾಗುಣಿತ ದೋಷ ಎಂದು ಪರಿಗಣಿಸಿಬಿಡುವಂತಹ ಪದಗಳು; ಗದ್ಯದ ನಡುನಡುವೆಯಿರುವ ಕಾವ್ಯಮಯ ಬಿಜಾಪುರಿ ಕನ್ನಡದ ಸಾಲುಗಳು; ಕುತೂಹಲ ಕೆರಳಿಸುತ್ತ ಕಥೆಯಂತೆ ಓದಿಸಿಕೊಳ್ಳುವ ಶೈಲಿ; ಜವಾರಿ ಕನ್ನಡದ ಪದ, ನುಡಿಗಟ್ಟುಗಳು; ಸಾಲುಗಳ ನಡುವಿನ ಮೌನ, ಖಾಲಿ ಜಾಗಗಳು ಪುಸ್ತಕದಲ್ಲಿ ಎದ್ದು ಕಾಣುತ್ತವೆ.

ತಮ್ಮ ವೈಯಕ್ತಿಕ ವಿವರಗಳನ್ನು ದಾಖಲಿಸುವ ಭರದಲ್ಲಿ ಕೆಲವು ಆತ್ಮಚರಿತ್ರೆಗಳು 'ನಾನು'ವಿನಲ್ಲೇ ವಿಜೃಂಭಿಸಿ ಇತರ ಪಾತ್ರ, ಘಟನೆ, ವಿವರಗಳನ್ನು ಮಸುಕಾಗಿಸುವುದಿದೆ. ನಿರೂಪಿಸುವ ಪ್ರತಿ ಘಟನೆ, ಚಿತ್ರಿಸಿದ ಪ್ರತಿ ಪಾತ್ರವೂ 'ನಾನು'ವಿಗೇರಿಸುವ ಒಂದು ಹೂವಾಗಿ ತುರಾಯಿ ಅಲಂಕರಿಸುವಂಥ ಬರವಣಿಗೆಯನ್ನು ನೋಡಿದ್ದೇವೆ. 'ನೀವೂ ದೇವರಾಗಿ'ಯಲ್ಲಿ ಆತ್ಮವಿಮರ್ಶೆ ಮೇಲುಗೈ ಪಡೆದಿರುವುದರಿಂದ ಸ್ವಪ್ರಶಂಸೆ, ಸ್ವಮರುಕಗಳು ಕಡಿಮೆಯಿರುವುದು ಒಳ್ಳೆಯ ಅಂಶವಾಗಿದೆ. ಹಾಗಾಗಿ ಬರಹವು ಓದುವವರನ್ನು ಸುಸ್ತು ಹೊಡೆಸದೇ ಸುಲಲಿತವಾಗಿ ಮುಂದಕ್ಕೊಯ್ಯುತ್ತದೆ.

ಶೋಷಿತ ಗುರುತಿನ ಆಚೆಗೊಂದು ದಾಟುವಿಕೆ ಅವಶ್ಯವಾಗಿದೆ. ಈ ನಿಟ್ಟಿನಲ್ಲಿ 'ನೀವೂ ದೇವರಾಗಿ' ಬಾಳಪಯಣದ ನಿರೂಪಣೆಗೆ ಒಂದು ಹೊಸ ಸಾಧ್ಯತೆಯನ್ನು ಸೂಚಿಸುವಂತಿದೆ. ಆತ್ಮಕತೆಯ ಬರವಣಿಗೆಯೆನ್ನುವುದು ಗಾಳಿಪಟ ಹಾರಿಸಿದಂತಲ್ಲ, ಬಿಸಿಲಿಗೆ ಕಾದ ನೆಲದ ಮೇಲಿನ ಬರಿಗಾಲ ನಡಿಗೆಯಂತೆ. ಅನುಭವವೇ ಪ್ರಮಾಣ. ಅಂತಹ ಎರಡು ಹೆಜ್ಜೆಗಳನ್ನು ಯಶಸ್ವಿಯಾಗಿ ಮುಂದಿಟ್ಟ ಮಾಲಗತ್ತಿಯವರಿಗೆ ಅಭಿನಂದನೆಗಳು.

ಕನ್ನಡ ಹಾದಿಯ ಗತಿಬಿಂಬ; ರೈತನ ಸ್ಥಿತಿಯ ಪ್ರತಿಬಿಂಬ

ಹರನೆಂಬುದೇ ಸತ್ಯ...
ಲೇ: ಕೃಷ್ಣಮೂರ್ತಿ ಹನೂರು
ಎರಡೂ ಕೃತಿಗಳ ಪ್ರಕಾಶಕರು : ಲೋಹಿಯಾ ಪ್ರಕಾಶನ
ಸಂ: 9900750549
ಪು: 160 ₹100

ಕಡೇ ಮಾತು
ಲೇ: ಸವಿತಾ ನಾಗಭೂಷಣ
ಪು: 40

ಒಳನೋಟ

ಕೃಷ್ಣಮೂರ್ತಿ ಹನೂರರ 'ಹರನೆಂಬುದೇ ಸತ್ಯ' ಕೃತಿಯು ಹಳಗನ್ನಡ ನಡುಗನ್ನಡ ಕುರಿತು ಹನ್ನೊಂದು ಲೇಖನಗಳನ್ನು ಹೊಂದಿದೆ. ಹಳಗನ್ನಡ, ನಡುಗನ್ನಡವೆಂಬ ವಿಭಾಗಕ್ರಮ ಅಧ್ಯಯನ ದೃಷ್ಟಿಯಿಂದ ಮಾಡಿಕೊಂಡಿರುವಂಥದು. ಪಂಪ ಹೇಳುವಂತೆ ಕಾವ್ಯವು 'ನಿಚ್ಚಂ ಪೊಸತರ್ಣವಂಬೊಲ್ ಅತಿ ಗಂಭೀರಂ'. ಜಗತ್ತಿನ ಎಲ್ಲಾ ಉತ್ತಮ ಸಾಹಿತ್ಯಕ್ಕೂ ಇದು ಅನ್ವಯವಾಗುತ್ತದೆ.

ಶ್ರೇಷ್ಠ ಸಾಹಿತ್ಯವು ತನ್ನ ಸಾರ್ವತ್ರಿಕ, ಸಾರ್ವಕಾಲಿಕ ಮತ್ತು ತತ್ಕಾಲೀನತೆಯ ಗುಣಗಳಿಂದ ಎಂದಿಗೂ ಪ್ರಸ್ತುತವಾಗಿರುತ್ತದೆ. ಅದನ್ನು ಕಾಲದಿಂದ ಕಾಲಕ್ಕೆ ಬೇರೆ ಬೇರೆ ರೀತಿಯಲ್ಲಿ ಓದಿಕೊಳ್ಳಬೇಕಾಗುತ್ತದೆ. ನಮ್ಮಲ್ಲಿ ಹಳಗನ್ನಡ ನಡುಗನ್ನಡ ಕಾವ್ಯಗಳ ಅಧ್ಯಯನ ನಿರರ್ಥಕ ಎಂಬ ಭಾವನೆ ಇದೆ. ಜತೆಗೆ ಅದರ ಕಥೆಯನ್ನೋ ಸಾರಾಂಶವನ್ನೋ ವಿವರಿಸುವ ಪದ್ಧತಿಯೂ ಇದೆ. ಆದರೆ, ಹೊಸಗನ್ನಡ ಕಾವ್ಯ ಮತ್ತು ಇತರ ಸಾಹಿತ್ಯ ಪ್ರಕಾರಗಳನ್ನು ಅಧ್ಯಯನ ಮಾಡುವಂತೆಯೇ ಅವುಗಳನ್ನೂ ಅಧ್ಯಯನ ಮಾಡಬೇಕಿದೆ. ಆಗ ಮಾನವನ ಬದುಕಿನ ವಿನ್ಯಾಸಗಳು, ಬೆಳೆದು ಬಂದ ಬಗೆಗಳ ಸ್ವರೂಪ ತಿಳಿಯುತ್ತದೆ.

ಹನೂರರ ಲೇಖನಗಳನ್ನು ಗಮನಿಸಿದರೆ ಇದೊಂದು ಸಾಂಸ್ಕೃತಿಕ ಅಧ್ಯಯನವೆಂಬುದು ಗಮನಕ್ಕೆ ಬರುತ್ತದೆ. ಪಂಪನ ಆದಿಪುರಾಣವನ್ನು ಅಧ್ಯಯನ ಮಾಡುವಾಗ ಅದರ ರಚನಾ ವಿನ್ಯಾಸವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಂಸ್ಕೃತಿಕ ಪರಿಸರವನ್ನು ವಿಶ್ಲೇಷಿಸಲಾಗಿದೆ. ಆದಿಪುರಾಣದ ಶೈಲಿ, ರೂಪ, ವಸ್ತು, ಶಿಲ್ಪ, ತಂತ್ರ ಎಲ್ಲವೂ ಅವುಗಳ ಅವಿನಾಭಾವ ಸಂಬಂಧಗಳೊಂದಿಗೆ ಹೆಣೆಯಲ್ಪಟ್ಟಿರುವುದನ್ನು ಗುರುತಿಸಿ, ಅದರ ಹಿನ್ನೆಲೆಯ ಕಥನವನ್ನೂ ವಿಶ್ಲೇಷಿಸಿ, ಅದರ ಸಾಂಸ್ಕೃತಿಕ ವಿವರಗಳನ್ನು ಚರ್ಚಿಸುವ ಕ್ರಮ ಅನನ್ಯವಾಗಿದೆ.

ಹನೂರರು ಮೂಲತಃ ಸಂಸ್ಕೃತಿ ಅಧ್ಯಯನಕಾರರು. ಕನ್ನಡ ಕಾವ್ಯಗಳನ್ನು ಚಿಂತನೆಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿ ಕನ್ನಡ ಸಂಸ್ಕೃತಿಯ ಚಿಂತನಧಾರೆಯ ಸ್ವರೂಪವನ್ನು ಓದುಗರಿಗೆ ಮನವರಿಕೆ ಮಾಡಕೊಡುವ ವಿದ್ವತ್‌ಪೂರ್ಣ ಕ್ರಮವನ್ನು ಇಲ್ಲಿ ಅನುಸರಿಸಿದ್ದಾರೆ. ಕಾವ್ಯ ಪಠ್ಯದ ಒಡಲಿನಿಂದ ವಿಮರ್ಶೆಯ ಮಾನದಂಡಗಳನ್ನು ರೂಪಿಸಿಕೊಂಡು ಜನಪದ ಪುರಾಣಗಳು, ಧರ್ಮ, ತತ್ವಶಾಸ್ತ್ರ, ಇತಿಹಾಸ, ಸಮಾಜಶಾಸ್ತ್ರ ಮನಃಶಾಸ್ತ್ರಗಳನ್ನು ಅಗತ್ಯಕ್ಕೆ ಅನುಗುಣವಾಗಿ ಅನ್ವಯಿಸಿ, ವಿಶ್ಲೇಷಿಸಿ ಕಾವ್ಯಗಳ ಒಳನೋಟಗಳನ್ನು ಶೋಧಿಸುತ್ತಾರೆ. ಇದರಿಂದಾಗಿ ಇಲ್ಲಿನ ಲೇಖನಗಳಲ್ಲಿ ಸಾಂಸ್ಕೃತಿಕ ಅಧ್ಯಯನದ ಸ್ವರೂಪ ತಾನಾಗಿಯೇ ಬಂದಿದೆ.

ಪಂಪ, ರನ್ನ, ಜನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ, ಚಾಮರಸರನ್ನು ಅಧ್ಯಯನ ಮಾಡುವಾಗ, ದಾಸಸಾಹಿತ್ಯ, ರಾಮಾಯಣದ ಕುರಿತು ಮಾತನಾಡುವಾಗ ರಸಗ್ರಹಣ, ಕಥಾ ಸಾರಾಂಶ, ಪಾತ್ರಗಳ ವಿವರಣೆಗೆ ತೊಡಗದೆ ಆ ಕೃತಿಗಳ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಮಹತ್ವವನ್ನು ವಿಶ್ಲೇಷಿಸುವ ಕ್ರಮವೇ ಇಲ್ಲಿ ಮುಖ್ಯವಾಗಿದೆ. ಈ ಲೇಖನಗಳು ಕನ್ನಡ ಕಾವ್ಯ ಮೀಮಾಂಸೆಯಯನ್ನು ಕಟ್ಟಿಕೊಳ್ಳಲು ನೆರವಾಗುವ ಮಾರ್ಗಗಳಿಗೆ ಸೂತ್ರಗಳನ್ನೊಳಗೊಂಡಿವೆ.

ಲೋಹಿಯಾ ಪ್ರಕಾಶನದ ಚನ್ನಬಸವಣ್ಣನವರು ಮಯೂರ ಮಾಸಪತ್ರಿಕೆಯಲ್ಲಿ ಪ್ರತೀ ತಿಂಗಳು 'ನಿಚ್ಚಂ ಪೊಸತು' ಮಾಲಿಕೆಯಲ್ಲಿ ಪ್ರಕಟವಾಗುತ್ತಿದ್ದ ಈ ಲೇಖನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಇದರೊಂದಿಗೆ ಸವಿತಾ ನಾಗಭೂಷಣ ಅವರು ಬರೆದಿರುವ 'ಕಡೇ ಮಾತು' ಎಂಬ ಕವನ ಸಂಕಲನವನ್ನು ಮುದ್ರಿಸಿ ಉಚಿತವಾಗಿ ಕೊಟ್ಟಿದ್ದಾರೆ.

'ಕಡೇ ಮಾತು' ರೈತಗೀತ ಸಂಕಲನ. ರೈತರ ಕಷ್ಟ, ಆತಂಕ, ಹತಾಶೆ, ಕಣ್ಣೀರು ಹಾಗೂ ನೋವಿನ ಅನುಭವಗಳು ಇಲ್ಲಿ ಲಯಬದ್ಧ ಭಾಷೆಯಲ್ಲಿ ಅಭಿವ್ಯಕ್ತವಾಗಿವೆ. ಅನುಭವದ ತೀವ್ರತೆ ಹೆಚ್ಚಾದಷ್ಟು ಲಯ ಹೆಚ್ಚು ವಿಶಿಷ್ಟವೂ ನಿಶ್ಚಿತವೂ ಆಗುತ್ತದೆ. ಇಲ್ಲಿನ ಕವನಗಳಲ್ಲಿ ರೈತರ ಬದುಕಿನ ಅನುಭವಗಳು ಕವಿಯ ಅನುಭವಗಳಾಗಿ, ಗೀತಗಳಾಗಿ ರೂಪು ಪಡೆದಿವೆ.

ರೈತರ ದೈನಂದಿನ ಕಷ್ಟಗಳು, ಪ್ರಕೃತಿಯೊಂದಿಗೆ ಅವರ ಒಡನಾಟ, ಅದು ಮನುಷ್ಯನ ಬದುಕಿಗೆ ನೆರವಾಗುವ ಪರಿ, ಪ್ರಕೃತಿಗೂ ರೈತನಿಗೂ ಇರುವ ಸಂಬಂಧದ ಸ್ವರೂಪ, ಆಳುವ ವರ್ಗದವರು ಜಾರಿಗೆ ತರುವ ರೈತ ವಿರೋಧಿ ಕಾನೂನುಗಳು, ಬಿತ್ತುವ ಬೀಜದಿಂದ ಮಾರುಕಟ್ಟೆಯವರೆಗಿನ ಪರದಾಡುವ ಪರಿಸ್ಥಿತಿ – ಎಲ್ಲವೂ ಇಲ್ಲಿನ ಕವಿತೆಗಳ ವಸ್ತುಗಳಾಗಿವೆ.

'ಎರಡು ಬೆಳೆಗಳು', 'ಜಾಗತಿಕ ಹೊಸ್ತಿಲಲ್ಲಿ ನಿಂತಿರುವ ರೈತನಿಗೊಂದು ಕಿವಿಮಾತು' ಮುಂತಾದ ಕವಿತೆಗಳು ರೈತರ ಸಂಕಷ್ಟವನ್ನು ಸಶಕ್ತವಾಗಿ ಅನಾವರಣಗೊಳಿಸಿವೆ. 'ಹೇಳು...' ಎಂಬ ಕವಿತೆಯು ಕೆಲವು ತಿಂಗಳ ಹಿಂದೆ ನಡೆದ ರೈತ ಚಳವಳಿಯಲ್ಲಿ ದೆಹಲಿ ಪ್ರವೇಶಿಸದಂತೆ ಕಬ್ಬಿಣದ ಬೇಲಿಯನ್ನು ನಿರ್ಮಿಸಿದ್ದನ್ನು ವಿಷಾದದಿಂದ ಹೇಳುತ್ತದೆ. ಪ್ರಜೆಗಳೇ ಪ್ರಭುಗಳು ಎಂದು ಹೇಳಲಾಗುತ್ತದೆ. ಅನ್ನ ನೀಡುವ ರೈತರಾದ ಪ್ರಜೆಗಳು ತಮ್ಮಿಂದಲೇ ಆಯ್ಕೆ ಮಾಡಿದ ನಾಯಕನನ್ನು ಕಾಣಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿರುವುದರ ಬಗ್ಗೆ ಇಲ್ಲಿ ವ್ಯಕ್ತವಾಗಿರುವ ವಿಷಾದ ಪರಿಣಾಮಕಾರಿಯಾಗಿದೆ.

ಇಲ್ಲಿನ ಅನೇಕ ಕವಿತೆಗಳಲ್ಲಿ ಅಂತಹ ಸಂವಹನ ಸಾಧ್ಯವಾಗದ ಸಿಟ್ಟು, ವಿಷಾದ, ನೋವು ಅಸಹಾಯಕತೆಗಳು ಮಡುಗಟ್ಟಿವೆ. ಈ ಗೀತಗಳನ್ನು ಜನಪದ ಗತ್ತು ಮತ್ತು ಮಟ್ಟುಗಳಿಂದ ಹಾಡಬೇಕು. ನಿಶ್ಶಬ್ದದ ಬದಲು ಗಟ್ಟಿಯಾಗಿ ಓದಿಕೊಳ್ಳಬೇಕು, ಇಲ್ಲವೇ ಹಾಡಬೇಕು. ಆಗ ಅವುಗಳ ಆಶಯ ಪರಿಣಾಮಕಾರಿಯಾಗಿ ಸಂವಹನವಾಗುತ್ತದೆ.

ಅರಣ್ಯದೊಡನಾಡಿ ತುಳಸಿ!

ಮಾಲತಿ ಹೆಗಡೆ

ಕರಿಮಣಿ, ಬೆಲ್ಲದ ಮಣಿಗಳ ಹಾರದಿಂದ ತುಂಬಿದ ಕೊರಳಿನ, ಹಾಲಕ್ಕಿ ಸಂಪ್ರದಾಯದಂತೆ ಉಟ್ಟ ಸೀರೆಗೆ ಹೊಂದಿದಂತೆ ಕಾಣುವ ಸುಕ್ಕುಗಟ್ಟಿದ ಚರ್ಮದ ತೆರೆದ ಬೆನ್ನಿನ, ಬರಿಗಾಲಿನ ಅವರು ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಲು ವೇದಿಕೆಯತ್ತ ನಡೆಯುತ್ತಿದ್ದರೆ ಹಾಲಕ್ಕಿ ಸಂಸ್ಕೃತಿಯೇ ನಿಧಾನವಾಗಿ ಹೆಜ್ಜೆ ಹಾಕಿದಂತೆ ಭಾಸವಾಗುತ್ತಿತ್ತು. ಅವರು ಮುಗ್ಧ ನಗೆಬೀರಿ ಪ್ರಶಸ್ತಿ ಸ್ವೀಕರಿಸುವಾಗ ಸರಳತೆಯೇ ಮಾನವರೂಪು ತಾಳಿದಂತಿತ್ತು.

ಪ್ರಧಾನಿಯವರು ಅಭಿನಂದಿಸಿದಾಗಲೂ 'ನಾನ್ ರಾಶಿ ಗಿಡ ನೆಟ್ಟದೆ' ಎನ್ನುವಂತೆ ಕೈ ಸನ್ನೆ ಮಾಡುತ್ತ ಕನ್ನಡದಲ್ಲಿ ನುಡಿವಾಗ ಭಾವಕ್ಕೆ ಭಾಷೆ ಬೇಕೇ ಎನ್ನಿಸಿತು. ಎಲ್ಲರೂ ಅವರನ್ನು ನೋಡಿ, ಎಲ್ಲವೂ ಅರ್ಥವಾದಂತೆ ಮೆಚ್ಚುಗೆಯಿಂದ ತಲೆದೂಗಿ ಕರತಾಡನ ಮಾಡಿದ್ದರು! 'ವೃಕ್ಷಮಾತೆ' ಎಂದೇ ಖ್ಯಾತರಾದ ಅಂಕೋಲಾ ತಾಲ್ಲೂಕಿನ ಅಗಸೂರಿನ ಹಾಲಕ್ಕಿ ಒಕ್ಕಲಿಗ ಸಮಾಜದ ತುಳಸಿಗೌಡ ಅವರು ಪದ್ಮಶ್ರೀ ಪ್ರಶಸ್ತಿ ಪಡೆದದ್ದು ಅದೆಂತಹ ಹೃದ್ಯ ಕ್ಷಣ!

1944ರಲ್ಲಿ ಹೊನ್ನಳ್ಳಿ ಗ್ರಾಮದಲ್ಲಿ ನಾರಾಯಣ ಹಾಗೂ ನೀಲಿ ದಂಪತಿಗೆ ಜನಿಸಿದ ಕೂಸಿಗೆ ತುಳಸಿ ಎಂಬ ಸಸ್ಯದ ಹೆಸರಿಟ್ಟರು. ಸಾಂಸ್ಕೃತಿಕ ಶ್ರೀಮಂತಿಕೆಯುಳ್ಳ ಹಾಲಕ್ಕಿ ಸಮಾಜದದಲ್ಲಿ ಹುಟ್ಟಿ ಬಡತನವನ್ನೇ ಹಾಸಿ ಹೊದೆದು ಬೆಳೆದ ತುಳಸಿ ಎರಡು ವರ್ಷದ ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡವರು. ಬಡತನದ ಬಾಳು, ಕುಮ್ರಿ ಬೇಸಾಯ ಮಾಡುವ ಕ್ರಮ ಗಮನಿಸುತ್ತಲೇ ಬೆಳೆದ ತುಳಸಿಯವರಿಗೆ ಸಿಕ್ಕಿದ್ದು ಕೂಲಿ ಮಾಡುತ್ತಲೇ ಪಡೆದ ಅನುಭವದ ವಿದ್ಯೆ, ಅಪಾರ ಪರಿಸರಪ್ರೀತಿ.

ಗೋವಿಂದೇಗೌಡ ಎಂಬವರೊಂದಿಗೆ ಬಾಲ್ಯವಿವಾಹವಾದರೂ ಅಲ್ಪಾಯುಷ್ಯದ ಪತಿಯೊಂದಿಗೆ ದಾಂಪತ್ಯ ಜೀವನ ಸಿಕ್ಕಿದ್ದು ಹದಿನೈದು ವರ್ಷವಷ್ಟೆ. ಮಗ ಸುಬ್ಬಯ್ಯನನ್ನು ಬೆಳೆಸುವ ಹೊಣೆಗಾರಿಕೆ ಹೆಗಲೇರಿತು. ವೈಧವ್ಯದ ನೋವು ನುಂಗಿ ಜೀವನ ನಿರ್ವಹಣೆ ಮಾಡುವುದಕ್ಕೋಸ್ಕರ ಕಾಡಿನಿಂದ ಸೌದೆ ಹೊರೆ ತಂದು ಮಾರಾಟ ಮಾಡುವ ಕೆಲಸ ಆರಂಭಿಸಿದರು. ಒಣಕಟ್ಟಿಗೆ ಕೂಡಿಸಿ ಹೊರೆಕಟ್ಟುವಾಗ ಕಾಡಿನಲ್ಲಿ ಉದುರಿ ಮಣ್ಣಾಗುವ ಹಲವು ಜಾತಿಯ ಸಸ್ಯಗಳ ಬೀಜಗಳನ್ನು ಸೆರಗಿನಲ್ಲಿ ಕಟ್ಟಿಕೊಂಡು ಬರುತ್ತಿದ್ದರು. ಅವುಗಳನ್ನು ಬಿತ್ತಿ ಗಿಡ ಬೆಳೆಸಿ ಅರಣ್ಯ ಇಲಾಖೆಗೇ ಕೊಡುತ್ತಿದ್ದರು. ಕ್ರಮೇಣ ಅರಣ್ಯ ಇಲಾಖೆಯ ದಿನಗೂಲಿಯೂ ಆದರು.

'ಒಂದೂಕಾಲು ರೂಪಾಯಿಗೆಂತ ಇಡೀದಿನಾ ದುಡಿತೆ? ಮತ್ತೆಂತಾರೂ ಕೆಲ್ಸಾ ಮಾಡಿರೆ ಮತ್ತೂ ಜಾಸ್ತಿ ರೊಕ್ಕ ಸಿಗೂದಿಲ್ಲನೇ' ಎಂದು ಪರಿಚಿತರು ಕೇಳಿದರೂ ತುಳಸಿಗೆ ಗಿಡ ನೆಡುವುದರಲ್ಲಿ ಸಿಗುವ ಸಮಾಧಾನ ಕೂಲಿಗೆ ಸಿಗುವ ಸಂಬಳಕ್ಕಿಂತ ಹೆಚ್ಚಿನದಾಗಿತ್ತು. ತಾವು ಬೆಳೆಸಿದ ಒಂದಿಷ್ಟು ಸಸಿಗಳನ್ನು ಹೊನ್ನಳ್ಳಿ ಭಾಗದ ಅರಣ್ಯ ಪ್ರದೇಶದಲ್ಲಿ, ಸರಕಾರಿ ರಸ್ತೆಯ ಪಕ್ಕದಲ್ಲಿ ನೆಡಲಾರಂಭಿಸಿದರು.

ನೆಟ್ಟ ಸಸಿಗಳಲ್ಲಿ ಹೆಚ್ಚಿನವು ಬದುಕಿ ಕಡು ಬಿಸಿಲಿನ ಅಂಕೋಲೆಯ ಸುತ್ತಮುತ್ತಲಿನ ಹಲವು ಗ್ರಾಮಗಳಿಗೂ ಒಂದಿಷ್ಟು ತಂಪುಣಿಸಿದವು. 'ಇದೊಂದು ಹೆಂಗಸು ಕಂಡಲ್ಲೆಲ್ಲ ಗಿಡಾ ನೆಡ್ತೆ ಹೇಳ್ತದೆ' ಎಂದು ಟೀಕಿಸುವ ಬಾಯಿಗಳು ತುಳಸಿಯ ಬಗ್ಗೆ ಮೆಚ್ಚುಗೆಯ ಮಾತಾಡಲಾರಂಭಿಸಿದವು! ಇವರ ಪರಿಸರಪ್ರೇಮದ ಪರಿಯನ್ನು ಕಂಡ ಅರಣ್ಯಾಧಿಕಾರಿಯಾಗಿದ್ದ ಯಲ್ಲಪ್ಪ ರೆಡ್ಡಿಯವರು ಮಾಸ್ತಿಕಟ್ಟೆ ಅರಣ್ಯವಲಯದಲ್ಲಿ ಕಾಯಂ ನೌಕರಳನ್ನಾಗಿಸಿ ಸಸ್ಯಪಾಲನೆಯ ಕೆಲಸ ನೀಡಿದರು.

ಗಿಡಗಳನ್ನು ಬೆಳೆಸುತ್ತಲೇ ತಮ್ಮ ಜ್ಞಾನವನ್ನು ವೃದ್ಧಿಸಿಕೊಂಡ ತುಳಸಿಯವರು ನುರಿತ ಸಸ್ಯ ವಿಜ್ಞಾನಿಯಂತೆ ಯಾವ ಕಾಲದಲ್ಲಿ ಯಾವ ಸಸ್ಯಗಳ ಬೀಜವನ್ನು ಹೇಗೆ ಸಂಗ್ರಹಿಸಬೇಕು, ಅದನ್ನು ಬೀಜೋಪಚಾರ ಮಾಡಿ ನೆಡುವ ಕ್ರಮ ಹೇಗೆ ಎನ್ನುವುದನ್ನು ಅರಿತು ಉಳಿದವರಿಗೆ ಹೇಳುವಂತಾದರು. ತುಳಸಿ ಬೆಳೆಸಿದ ಗಿಡಗಳೂ ಬೆಳೆದು ವೃಕ್ಷಗಳಾದಂತೆ ತುಳಸಿಯ ಜ್ಞಾನವೂ, ಪರಿಸರಪ್ರೇಮವೂ ವೃಕ್ಷವಾಯಿತು. ತುಳಸಿಯವರು ಎಷ್ಟು ಗಿಡಗಳನ್ನು ನೆಟ್ಟೆನೆಂಬ ಲೆಕ್ಕವಿಟ್ಟವರಲ್ಲ, ಎಷ್ಟು ನೀರುಣಿಸಿದೆನೆಂಬುದನ್ನೂ ಹೇಳಿದವರಲ್ಲ. ಶ್ರಮವಾಯಿತೆಂದು ಬೇಸರಿಸಿದವರಲ್ಲ. ಹಗಲಿರುಳೆನ್ನದೇ ದುಡಿದ ಅವರ ರೀತಿ, ಜೀವನ ಪ್ರೀತಿ ಅಷ್ಟೆ. 'ಗಿಡಾ ಬೆಳಸಿರೆ ಚೊಲೊ ಗಾಳಿ ನೆಳ್ಳು ಕೊಡತದೆ, ನಮಗೂ ಅನುಕೂಲ ಆಗ್ತದೆ, ಪ್ರಾಣಿ ಪಕ್ಷಿಗೂ ಅನುಕೂಲಾಗ್ತದೆ. ಒಂದೇ ನಮೂನಿ ಅಕೇಶಿಯಾ ಗಿಡಾ ಬೆಳ್ಸಿ ನೆಡುತೋಪು ಮಾಡತ್ರಲಾ, ಅದು ಉಪಯೋಗಕ್ಕಿಲ್ಲ ಮತ್ತೆ. ಭೂಮಿ ಬೆಟ್ಟ (ಬರಡು) ಆಗ್ತದೆ, ಅದ್ರ ಬದ್ಲು ಮಾವು, ಹಲಸು, ನೇರಲೆ, ಮತ್ತಿ, ಅತ್ತಿ, ಆಲ, ನೆಲ್ಲಿ, ನಂದಿ ಹೊನ್ನೆ, ತೇಗ, ಬೀಟೆ ಇಂಥಾ ಗಿಡಾ ತಯಾರ ಮಾಡಿ ನೆಡಬೇಕು' ಎನ್ನುತ್ತಾರೆ.

ಆರು ದಶಕಗಳ ಇವರ ಪರಿಸರ ಸಂರಕ್ಷಣೆಯ ಕಾರ್ಯವನ್ನು ಮೆಚ್ಚಿ ರಾಜ್ಯೋತ್ಸವ ಪ್ರಶಸ್ತಿ, ಪ್ರಿಯದರ್ಶಿನಿ ವೃಕ್ಷಮಿತ್ರ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ ಸೇರಿದಂತೆ ಹಲವು ಪುರಸ್ಕಾರಗಳು ತುಳಸಿ ಗೌಡರಿಗೆ ಸಂದಿವೆ. ಆದರೆ ಇವರ ಜೀವನಮಟ್ಟ ಸುಧಾರಿಸಿಲ್ಲ. ಮೂಲಭೂತ ಸೌಕರ್ಯ ಕೊರತೆ ಇರುವ ಪುಟ್ಟ ಮನೆಯಲ್ಲಿ ಮಗ, ಸೊಸೆ, ನಾಲ್ವರು ಮೊಮ್ಮಕ್ಕಳೊಂದಿಗೆ ತುಳಸಜ್ಜಿ ಬದುಕುತ್ತಿದ್ದಾರೆ.

ಹಾಲಕ್ಕಿ ಸಮಾಜದ ಬಹುತೇಕರಂತೆಯೇ ಇವರೂ ಭೂರಹಿತರು. ಹಲವು ಕೊರತೆಗಳ ನಡುವೆಯೂ ಇವರ ಸಕಾರಾತ್ಮಕ ಮನೋಭಾವ, ಸಮಾಜಮುಖಿ ಕಾರ್ಯ ಚ್ಯುತಿ ಇಲ್ಲದಂತೆ ನಡೆಯುವುದೇ ಸೋಜಿಗ! ಹಾಲಕ್ಕಿ ಸಮಾಜದ ಇನ್ನೊಬ್ಬ ಸಾಧಕಿ ಸುಕ್ರಿ ಬೊಮ್ಮಗೌಡರೊಂದಿಗೆ ಮದ್ಯಪಾನ ವಿರೋಧಿ ಚಳವಳಿ, ಪರಿಸರ ಚಳವಳಿಗಳಲ್ಲಿ ತುಳಸಿಗೌಡರೂ ಪಾಲ್ಗೊಳ್ಳುತ್ತಾರೆ. 'ಪ್ರಸಸ್ತಿ ತಕಳೂಕೆ ಹೋಗೂಕೂ ನನ್ನ ಕೂಡೆ ದುಡ್ಡು ಇರಲಿಲ್ಲಾಗಿತ್ತು ಜನರೆಲ್ಲ ಕೊಟ್ರು' ಎಂದು ಸಾರ್ವಜನಿಕರ ನೆರವನ್ನು ಸ್ಮರಿಸುವ ತುಳಸಿಯವರ ಜೀವನ ಭದ್ರತೆಗೆ ಅರಣ್ಯ ಇಲಾಖೆ ನೀಡುವ ಪಿಂಚಣಿ ಹಣವೊಂದೇ ಆಧಾರ.

ಹೆಚ್ಚುತ್ತಿರುವ ಭೂಮಿಯ ತಾಪಮಾನ ಇಳಿಸಲು ಭೂಮಿಗೆ ಹಸಿರು ಹೊದಿಸುವುದೊಂದೇ ಉಪಾಯ ಎನ್ನುವ ಈ ಕಾಲಘಟ್ಟದಲ್ಲಿ ತಮ್ಮ ನೈಜ ಪರಿಸರ ಪ್ರೇಮದಿಂದ, ನಿಸ್ವಾರ್ಥ ಭಾವದಿಂದ ಲಕ್ಷಾಂತರ ಗಿಡಗಳನ್ನು ಬೆಳೆಸಲು ಶ್ರಮಿಸಿದ ತುಳಸಿ ಅವರು ಸಾಮಾನ್ಯರ ನಡುವಿನ ಅಸಾಮಾನ್ಯ ಮಹಿಳೆ. ಹಲವರ ಮನೆಯ ಮುಂದೆ ಕಂಗೊಳಿಸುವ ತುಳಸಿ ಗಿಡದಂತೆ ಈ ನಾಡಿನ ಜನರ ಮನದಂಗಳದ ತುಳಸಿಯಾಗಿ ಇವರು ಕಂಗೊಳಿಸಲಿ ಎನ್ನುವುದಷ್ಟೇ ಹಾರೈಕೆ.

ನಮ್ಮ ನಾಡಿನ ಎರಡು ಅನನ್ಯ ಚೇತನಗಳಿಗೆ ಈ ಸಲ ಪದ್ಮ ಪ್ರಶಸ್ತಿ ಬಂದಿದೆ. ಆ ಮೂಲಕ ಪ್ರಶಸ್ತಿಯ ಗೌರವವೂ ಹೆಚ್ಚಿದೆ

ತುಳಸಿ ಗೌಡ

ಹರೇಕಳ ಹಾಜಬ್ಬ -ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ

ಪದ್ಮಶ್ರೀ ಹೊತ್ತ ಕಿತ್ತಳೆ ಬುಟ್ಟಿ

ಶ್ರೀಗೌರಿ ಎಸ್. ಜೋಶಿ

ಧಾವಂತದ ಜೀವನದಲ್ಲಿ, ನಿಸ್ವಾರ್ಥ ಮನಸ್ಸುಗಳು ಕಳೆದೇ ಹೋದವೇನೋ ಎಂಬ ಪರಿಸ್ಥಿತಿಯಲ್ಲಿ ಹಾಜಬ್ಬರಂತಹ ವ್ಯಕ್ತಿ ಸಮಾಜದ ಆಶಾಕಿರಣವಾಗಿ ಸಿಕ್ಕಿದ್ದಾರೆ. ಈ ಕಿತ್ತಳೆ ವ್ಯಾಪಾರಿಯ ಸಾಧನೆಯ ಹೆಜ್ಜೆಗಳು ರಾಷ್ಟ್ರಪತಿ ಭವನದಲ್ಲಿ 'ಪದ್ಮಶ್ರೀ' ಪಡೆಯುವವರೆಗೆ ತಲುಪಿವೆ.

ಬುಟ್ಟಿ ತುಂಬಾ ಹಣ್ಣುಗಳನ್ನು ತುಂಬಿಕೊಂಡು ಬಂದು ಮಂಗಳೂರಿನ ಸ್ಟೇಟ್‌ಬ್ಯಾಂಕ್ ಬಸ್ ನಿಲ್ದಾಣದಲ್ಲಿ ಹೊತ್ತು ಮಾರುವ ವ್ಯಾಪಾರಿ ಹಾಜಬ್ಬ. ಕಿತ್ತಳೆ... ಕಿತ್ಲೆ.... ಎನ್ನುವ ಧ್ವನಿ ಬಸ್ ಪ್ರಯಾಣಿಕರಿಗೋ, ದಾರಿಹೋಕರಿಗೋ ಕೇಳಿಸಿ ಖರೀದಿಗೆ ಮನಸ್ಸು ಮಾಡಿದರೋ ಹಾಜಬ್ಬರ ಹಣೆಯಲ್ಲಿ ಸಣ್ಣ ಆಶಾಭಾವದ ಗೆರೆಯೊಂದು ಮೂಡಿ ಮರೆಯಾಗುತ್ತದೆ. ಇಂಥ ಅಲೆಮಾರಿಗೆ ಅಕ್ಷರದ ಕನಸು ಹತ್ತಿತು. ಅದೂ ತನಗಲ್ಲ, ತನ್ನೂರಿನ ಮಕ್ಕಳಿಗಾಗಿ!

ಹಾಜಬ್ಬರ ಆ ನಿರ್ಧಾರ....

ಅದೊಂದು ದಿನ ಮಂಗಳೂರಿನಲ್ಲಿ ಹಣ್ಣು ಮಾರುತ್ತಿದ್ದಾಗ ವಿದೇಶಿ ಜೋಡಿಯೊಂದು ಹಾಜಬ್ಬರೊಡನೆ ಇಂಗ್ಲಿಷ್‌ನಲ್ಲಿ ವ್ಯವಹರಿಸಿತು. ಕನ್ನಡದಲ್ಲಿ ಮಾತನಾಡಲೂ ಹಿಂಜರಿಯುತ್ತಿದ್ದ ಈ ಅಮಾಯಕ ಬ್ಯಾರಿ (ಬ್ಯಾರಿ ಭಾಷೆ ಮಾತನಾಡುವ ಮುಸ್ಲಿಮರು) ಆ ಇಂಗ್ಲಿಷ್‌ನಿಂದ ಕಕ್ಕಾಬಿಕ್ಕಿಯಾದರು. ಶಿಕ್ಷಣವಿಲ್ಲದ್ದರಿಂದ ಈ ಪರಿಸ್ಥಿತಿ ತನಗೆದುರಾಯಿತು. ಇದು ತನ್ನೂರಿನ ಮಕ್ಕಳಿಗೆ ಬರಬಾರದು ಎಂದುಕೊಂಡ ಹಾಜಬ್ಬ, ಅಂದು ತಮ್ಮ ಜೀವನದ ಅತಿದೊಡ್ಡ ನಿರ್ಧಾರ ತೆಗೆದುಕೊಂಡರು. ಅದರ ಫಲವೇ ಇಂದು ತಲೆಯೆತ್ತಿ ನಿಂತಿರುವ ನ್ಯೂಪಡ್ಪು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ.

ಶಾಲೆ ಸ್ಥಾಪನೆಯ ಹುಚ್ಚು ಹತ್ತಿಸಿಕೊಂಡು ಅಲೆದ ಹಾಜಬ್ಬ ಎದುರಿಸಿದ ಅವಮಾನಗಳು ಒಂದೆರಡಲ್ಲ. ಅವರಿವರನ್ನು ಬೇಡುವ ಬದಲು ಕಿತ್ತಳೆ ವ್ಯಾಪಾರದ ಪುಡಿಗಾಸನ್ನೇ ಉಳಿಸಿದರು. 2000ನೇ ಇಸವಿಯಲ್ಲಿ ನ್ಯೂಪಡ್ಪುವಿನ ಮಸೀದಿಯ ಮದರಸದಲ್ಲಿ ಹಾಜಬ್ಬರ ಶಾಲೆಯ ಕನಸು ನನಸಾಗಿತ್ತು. ತಾವು ಕಿತ್ತಳೆ ವ್ಯಾಪಾರದಿಂದ ಕೂಡಿಟ್ಟ ಹಣದಿಂದ ತರಗತಿಗಳು ನಡೆಯುತ್ತಿದ್ದ ಮಸೀದಿಯ ಪಕ್ಕದಲ್ಲಿ ಹಾಜಬ್ಬ ಜಾಗ ಕೊಂಡರು. ಆ ಶಾಲೆಗಾಗಿ ಕಟ್ಟಡ ನಿರ್ಮಿಸಲು ಮುಂದಾದರು. ಹಣ ಸಾಕಾಗದಿದ್ದಾಗ ದಾನಿಗಳ ಸಹಾಯ ಯಾಚಿಸಿದರು. ಬ್ಯಾಂಕ್, ಕಾರ್ಪೊರೇಟ್ ಕಂಪನಿಗಳ ಕದ ತಟ್ಟಿದರು. ಶಾಲೆಗಾಗಿ ಅನುಮತಿ ಪಡೆಯಲು ಪ್ರತಿದಿನ ಸರ್ಕಾರಿ ಕಚೇರಿಯ ಮೆಟ್ಟಿಲು ಹತ್ತಿದರು.

ಹಾಜಬ್ಬರ ದೊಡ್ಡ ಪ್ರಯತ್ನದ ಫಲವಾಗಿ ಆ ಜಾಗದಲ್ಲಿ ಪ್ರಾಥಮಿಕ ಶಾಲೆ, ಬಳಿಕ ಪ್ರೌಢಶಾಲೆಗಳ ಸುಸಜ್ಜಿತ ಕಟ್ಟಡ ನಿರ್ಮಾಣಗೊಂಡಿವೆ. ನ್ಯೂಪಡ್ಪು ಅಕ್ಕಪಕ್ಕದ ಹಳ್ಳಿಗಳ ಮಕ್ಕಳೂ ಈ ಜ್ಞಾನ ದೇಗುಲದೆದುರಿಗೆ ಕೈಮುಗಿದು ನಿಂತಿದ್ದಾರೆ. ಯಾವ್ಯಾವುದೋ ಕಾರಣಗಳಿಂದಾಗಿ ಕಲಿಕೆಯಿಂದ ವಂಚಿತರಾಗಿದ್ದ ಮಕ್ಕಳಿಗೆ ಈ 'ಅಕ್ಷರ ಸಂತ' ಮತ್ತೆ ಜ್ಞಾನದ ಹಾದಿ ತೋರಿದ್ದಾರೆ.

ಈ ಸುದೀರ್ಘ ಪ್ರಯತ್ನದಲ್ಲಿ ಹಾಜಬ್ಬ ತಮ್ಮ ಸ್ವಂತ ಸುಖವನ್ನು ತ್ಯಾಗ ಮಾಡಿದ್ದಾರೆ. ಅವರು ಮಧ್ಯಾಹ್ನದ ಊಟ ಮಾಡಿ ವರ್ಷಗಳೇ ಕಳೆದಿವೆ. ದಾನಿಗಳನ್ನು ಹುಡುಕಿ ಹೊರಟ ಅವರ ದೇಹ ಬಡಕಲಾಗಿದೆ. ಚಪ್ಪಲಿಗಳು ಸವೆದಿವೆ. ಆರೋಗ್ಯ ಸಮಸ್ಯೆಯಿಂದಾಗಿ ಅವರ ಪತ್ನಿ ಹಾಸಿಗೆ ಹಿಡಿದಿದ್ದಾರೆ. ಮದುವೆ ವಯಸ್ಸಿಗೆ ಬಂದ ಹೆಣ್ಣುಮಕ್ಕಳು ಮನೆಯಲ್ಲಿದ್ದಾರೆ. ಆದರೆ ಶಾಲೆಯ ಮುಂದೆ ಹಾಜಬ್ಬರಿಗೆ ಇದ್ಯಾವುದೂ ಮುಖ್ಯವಲ್ಲ. ತನ್ನ ಸುಖ-ದುಃಖಗಳನ್ನು ಮೀರಿ ಹಾಜಬ್ಬ ಶಾಲೆಗಾಗಿ, ಅದರ ಅಭಿವೃದ್ಧಿಗಾಗಿ ಟೊಂಕ ಕಟ್ಟಿ ನಿಂತಿದ್ದಾರೆ.

ಹೇಗಿದೆ 'ಹಾಜಬ್ಬ ಶಾಲೆ'?

ಬೇರಾವುದೇ ಕನ್ನಡ ಮಾಧ್ಯಮ ಶಾಲೆಗಳಿಗಿಂತ ಹಾಜಬ್ಬ ಶಾಲೆ ವಿಭಿನ್ನ. ಒಂದು ಶಾಲೆಗೆ ಬೇಕಾದ ಎಲ್ಲ ಮೂಲ ಸೌಕರ್ಯಗಳ ಜೊತೆಗೆ ಸರ್ಕಾರದ ಬಿಸಿಯೂಟ, ಕ್ಷೀರಭಾಗ್ಯ, ಉಚಿತ ಪಠ್ಯಪುಸ್ತಕ ಸೌಲಭ್ಯಗಳೂ ಮಕ್ಕಳಿಗೆ ದೊರೆಯುತ್ತಿವೆ. ವಿಭಿನ್ನ ಪ್ರಾಯೋಗಿಕ ಕಲಿಕಾ ಮಾದರಿಗಳು ವಿದ್ಯಾರ್ಥಿಗಳು ಶಿಕ್ಷಣವನ್ನು ಪ್ರೀತಿಸುವಂತೆ ಮಾಡಿವೆ. ಮಕ್ಕಳು ಖುಷಿಯಿಂದ ಈ ಶಾಲೆಗೆ ಬರುತ್ತಾರೆ.

ಈಗ ಇಲ್ಲಿ ಪಿಯು ಕಾಲೇಜು ಆರಂಭಿಸಲು ಹಾಜಬ್ಬ ಪ್ರಯತ್ನ ಆರಂಭಿಸಿದ್ದಾರೆ.

ಒಬ್ಬ ವ್ಯಕ್ತಿ ಏಕಾಂಗಿ ಹೋರಾಟಗಾರ, 'ರಿಯಲ್ ಹೀರೊ'ನ ಸಾಧನೆಗಳನ್ನು ಗುರುತಿಸಿ ಸಾಕಷ್ಟು ಪ್ರಶಸ್ತಿ, ಪುರಸ್ಕಾರ, ಬಿರುದುಗಳು ಅವರನ್ನು ಅರಸಿ ಬಂದಿವೆ. ಆದರೆ ಪ್ರಶಸ್ತಿ ರೂಪದಲ್ಲಿ ಬಂದ ಹಣವನ್ನೆಲ್ಲ ಹಾಜಬ್ಬ ಶಾಲೆಗೆ ಅರ್ಪಿಸಿ ಮತ್ತದೇ ಬಡ ಜೀವನವನ್ನು ನಡೆಸುತ್ತಿದ್ದಾರೆ. 'ಪದ್ಮಶ್ರೀ' ಬಂದ ಬಳಿಕವೂ ಹಾಜಬ್ಬರ ನಡೆ ನುಡಿಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. 'ಇದರಲ್ಲಿ ನನ್ನದೇನಿಲ್ಲ. ನಾನೊಬ್ಬ ಬಡವ. ನನ್ನನ್ನು ಗುರುತಿಸಿದ ಶ್ರೇಷ್ಠರು ನೀವು' ಎಂದು ವಿನೀತರಾಗುತ್ತಾರೆ ಈ 'ಅಕ್ಷರ ಯೋಗಿ'. ಕಿತ್ತಳೆ ಬುಟ್ಟಿಯಲ್ಲಿ ಅಕ್ಷರದ ಕನಸೂ ಅರಳಿಸಬಹುದು ಎಂಬುದನ್ನು ಸಾಧಿಸಿದ ಶ್ರೀಸಾಮಾನ್ಯ ಹಾಜಬ್ಬ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ದೊಡ್ಡಾಟ: ಗೊಂದಲ ಗಣಿತ

ಪ್ರೊ. ಗಣಿತರಾಯರಿಗೆ 4 ಜನ ಗಂಡು ಮಕ್ಕಳು. ತಮಾಷೆಗೆ ಅವರಿಗೆ ಸಂಕಲನ, ವ್ಯವಕಲನ, ಗುಣಾಕಾರ, ಭಾಗಾಕಾರ ಎಂದೇ ಹೆಸರಿಟ್ಟಿದ್ದರು. ಒಮ್ಮೆ ಜಾತ್ರೆಗೆ ಹೋಗಬೇಕಾಗಿ ಬಂತು. ಮಕ್ಕಳು ಹಣ ಕೇಳಿದರು. ಮೊದಲೇ ಲೆಕ್ಕಾಚಾರದ ಮನುಷ್ಯ. ಪಾಕೇಟ್‌ನಲ್ಲಿದ್ದ ₹ 45ರಲ್ಲಿ ಸಂಕಲನಿಗೆ ಕೊಟ್ಟ ದುಡ್ಡಿಗೆ ₹ 2 ಕೂಡಿಸಿದಾಗ ಬರುವ ಸಂಖ್ಯೆ, ವ್ಯವಕಲನಿಗೆ ಕೊಟ್ಟ ದುಡ್ಡಿನಲ್ಲಿ ₹ 2 ಕಳೆದಾಗ ಬರುವ ಸಂಖ್ಯೆ, ಗುಣಾಕಾರನಿಗೆ ಕೊಟ್ಟ ದುಡ್ಡಿಗೆ ₹ 2ರಿಂದ ಗುಣಿಸಿದಾಗ ಬರುವ ಸಂಖ್ಯೆ ಹಾಗೂ ಭಾಗಾಕಾರನಿಗೆ ಕೊಟ್ಟ ದುಡ್ಡಿಗೆ ₹ 2ರಿಂದ ಭಾಗಿಸಿದಾಗ ಬರುವ ಸಂಖ್ಯೆಗಳು ಒಂದೇ ಆಗಿದ್ದವು. ಹಾಗಾದರೆ ₹ 45 ಯಾರಿಗೆ ಎಷ್ಟೆಷ್ಟು ಕೊಟ್ಟಿದ್ದ. ಹೇಳಿ ನೋಡೋಣ.

ಸಣ್ಣಾಟ

ಗಣಿತರಾಯರು ಹೋಟೆಲ್ ಒಂದಕ್ಕೆ ಹೋಗಿ, ಮಾಣಿಗೆ 500ರ ಹಿಂದೆ ಒಂದು, 50ರ ಮುಂದೆ ಒಂದು ಕೂಡು ಎಂದರು. ಮಾಣಿ ಅರ್ಥ ಮಾಡಿಕೊಂಡು IDLI ತಂದಿಟ್ಟ. ಏಕೆಂದರೆ ರೋಮನ್ ಸಂಖ್ಯೆಯಲ್ಲಿ
500 = D ಇದರ ಹಿಂದೆ I,
50 = L ಅದರ ಮುಂದೆ I = IDLI

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ತರಗತಿಯವರು = __________
2. ಕುಕ್ಕಿ ಅಟ್ಟಿದ = __________
3. ಹರಗಣ = __________
4. ಆನೆಪಾದ = __________

ದಶ್ಗ ಚಿಕ್ಕು ಕೇಶ್ರಪ್ಪು ಕಥೆಯ

ಶಬ್ದಗಳೊಡನೆ ಸರಸ

ಕಾವ್ಯದಲ್ಲಿ ಸವಾಲ್-ಜವಾಬ್

ಹಿಂದಿನ ಕಾಲದಲ್ಲಿ ಸಾಹಿತ್ಯ ಕ್ರೀಡೆಗಳು, ಸಾಹಿತ್ಯ ಸ್ಪರ್ಧೆಗಳು ನಡೆಯುತ್ತಿದ್ದವು. ಅಂಥ ಪ್ರಸಂಗಗಳಲ್ಲಿ ಕಂತಿ-ನಾಗಚಂದ್ರರ ಸವಾಲ್-ಜವಾಬ್ ತುಂಬಾ ಗಮನ ಸೆಳೆಯುತ್ತದೆ. ಮೊದಲು ನಾಗಚಂದ್ರ - ಕಾವ್ಯದ ಕೊನೆಯ ಒಂದು ಸಾಲು ಹೇಳುತ್ತಾನೆ. ಆ ಸಾಲು ಮೊದಲು ಅಸಾಧ್ಯ ಎನಿಸುವಂತಿದ್ದರೂ ಕಂತಿ ಆ ಕಾವ್ಯವನ್ನು ಪೂರ್ಣಮಾಡಿ ಅರ್ಥಬದ್ಧ ಕಾವ್ಯವನ್ನಾಗಿಸುತ್ತಾಳೆ. ಅಂಥ ಎರಡು ಉದಾಹರಣೆ ಇಲ್ಲಿವೆ. ಓದಿ ಆನಂದಿಸಿ.

ಸವಾಲ್ 1: ನಾಗಚಂದ್ರ: ಗಜಮಂ ಬಟ್ಟೆಯಲಿ ಕಟ್ಟಿ ಪೊತ್ತರು ಪೆಗಲೊಳ್|

ಜವಾಬ್: ಕಂತಿ: ನಿಜ ರಾಜ್ಯದೊಳತ್ತತ್ತಿಯ
ನಿರ್ಮಂ ಕಾಣಲ್ಕೆ ಭೂಪ ಮನಮಂ ಮಾಡಲ್
ಪ್ರಜವದೆ ಲೇಖಕಜನಕಾ|
ಗಜಮಂ ಬಟ್ಟೆಯಲಿ ಕಟ್ಟಿ ಪೊತ್ತರು
ಪೆಗಲೊಳ್|

ಸವಾಲ್ 2: ನಾಗಚಂದ್ರ:
ಸತ್ತವಳೆದ್ದೋಡಿ ಪೋದಳೇನಿದು ವಿಚಿತ್ರಂ

ಜವಾಬ್ - ಕಂತಿ: ಅತ್ತೆಯ ಬೈಗುಳ ಮಾತಿಂ
ದತ್ತಿಗೆಯ ದೌರ್ಜನ್ಯದಿಂ
ಗಂಡನ ಪೆಟ್ಟಿಂ|
ಮತ್ತೆ ಮುದಿ ಮಾವನಿಂ ಬೇ
ಸತ್ತವಳೆದ್ದೋಡಿ ಪೋದಳೇನಿದು ವಿಚಿತ್ರಂ

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಒಂದೇ ಉಚ್ಛಾರ ಆದರೆ ಅಕ್ಷರ ವ್ಯತ್ಯಾಸವಿದ್ದು, ಅರ್ಥ ಬೇರೆ ಬೇರೆಯಾಗಿರುವ ಇಂಗ್ಲಿಷ್ ಪದಗಳನ್ನು ಅವುಗಳ ಅರ್ಥಕ್ಕೆ ಸರಿಯಾಗಿ ಹೊಂದಿಸಿ

1.	TAIL	A.	ಸಮುದ್ರ
2.	TALE	B	ಇಲ್ಲಿ
3.	CELL	C.	ಮಾರಾಟಮಾಡು
4.	SELL	D.	ಕತೆ
5.	HERE	E.	ಬಾಲ
6.	HEAR	F.	ಭೇಟಿಯಾಗು
7.	MEAT	G.	ರಂಧ್ರ
8.	MEET	H.	ಬರೆ
9.	HOLE	I.	ಬೆಲೆ
10.	WHOLE	J.	ಪ್ರೀತಿಯ
11.	DEAR	K.	ನೋಡು
12.	DEER	L.	ಸೈನಿಕ
13.	NIGHT	M.	ಜೀವಕೋಶ
14.	KNIGHT	N.	ಹಕ್ಕು
15.	FAIR	O.	ಪೂರ್ಣ
16.	FARE	P.	ಜಾತ್ರೆ
17.	WRITE	Q	ಜಿಂಕೆ
18.	RIGHT	R.	ರಾತ್ರಿ
19.	SEE	S.	ಮಾಂಸ
20.	SEA	T.	ಕೇಳು

ನೀರಜ್ ಚೋಪ್ರಾ

• ಕಲೆ-ಪರಿಕಲ್ಪನೆ:
ಸುರೇಶ ಆರ್. ಅರ್ಕಸಾಲಿ

ನೀರಜ್ ಚೋಪ್ರಾ ನಮ್ಮ ದೇಶದ ಸೆಲೆಬ್ರಿಟಿ ಅಥ್ಲೀಟ್. 2020ರ ಟೋಕಿಯೊ ಒಲಿಂಪಿಕ್ ಕೂಟದ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ 87.58 ಮೀಟರ್ ದೂರಕ್ಕೆ ಜಾವೆಲಿನ್ ಎಸೆದು ಚಿನ್ನದ ಪದಕ ಗೆದ್ದರು

ಒಲಿಂಪಿಕ್ ಕೂಟದ ಇತಿಹಾಸದಲ್ಲಿ ಭಾರತಕ್ಕೆ ಫೀಲ್ಡ್ ಮತ್ತು ಟ್ರ್ಯಾಕ್‌ನ ಮೊದಲ ಚಿನ್ನದ ಪದಕ ತಂದಿತ್ತ ನೀರಜ್ ಅವರನ್ನು ರಾಷ್ಟ್ರಪತಿ ರಾಮನಾಥ್ ಕೋವಿಂದ್ ಅವರು ಆತ್ಮೀಯವಾಗಿ ಅಭಿನಂದಿಸಿದರು

ಭಾರತೀಯ ಸೈನ್ಯದ ಕಿರಿಯ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ನೀರಜ್, ಬೆಂಗಳೂರಿನಲ್ಲೂ ತರಬೇತಿ ಪಡೆದಿದ್ದರು. ಕ್ರೀಡಾ ಸಾಧನೆಗಾಗಿ ಅವರು ಹಿರಿಯ ಅಧಿಕಾರಿಗಳ ಮೆಚ್ಚುಗೆಗೆ ಪಾತ್ರರಾಗಿದ್ದರು

ದಕ್ಷಿಣ ಏಷ್ಯನ್ ಕ್ರೀಡಾಕೂಟ, ಐಎಎಎಫ್ ಕಿರಿಯರ ವಿಶ್ವ ಕ್ರೀಡಾಕೂಟ, ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್, ಕಾಮನ್‌ವೆಲ್ತ್ ಕ್ರೀಡಾಕೂಟ ಸೇರಿದಂತೆ ಆರು ಅಂತರರಾಷ್ಟ್ರೀಯ ಕೂಟಗಳಲ್ಲಿ ಚಿನ್ನ ಗೆದ್ದ ಸಾಧನೆ ಅವರದು

ಸ್ಪಷ್ಟ ಗುರಿ, ನಿರಂತರ ಸಾಧನೆಯಿಂದಾಗಿ ನೀರಜ್ ತಮ್ಮ ಗುರಿ ತಲುಪಿದರು. ಭಾರತೀಯ ಕ್ರೀಡಾಪಟುಗಳು ಸಹ ಜಾಗತಿಕ ವೇದಿಕೆಯಲ್ಲಿ ಮಿಂಚಬಹುದು ಎನ್ನುವುದನ್ನು ತಮ್ಮ ಕಠಿಣ ಪರಿಶ್ರಮದಿಂದ ತೋರಿಸಿಕೊಟ್ಟರು

ಟೋಕಿಯೊ ಒಲಿಂಪಿಕ್ ಕೂಟದಲ್ಲಿ ನೀರಜ್ ಅವರು ಬಂಗಾರದ ಪದಕಕ್ಕೆ ಕೊರಳೊಡ್ಡುವಾಗ ಭಾರತದ ರಾಷ್ಟ್ರಗೀತೆ ಮೊಳಗಿತ್ತು. ಹಾಗೆ ರಾಷ್ಟ್ರಗೀತೆ ಕೇಳಿಸುವಂತೆ ಮಾಡಿದ ಅವರ ಆ ಸಂಭ್ರಮ ಚಿರಕಾಲ ಉಳಿಯುವಂಥದು

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಹೆಣ 2. ಸಸಿ 3. ಒಟ್ಟು 4. ಬರಿ
5. ಹಾಸು 6. ಕಾಗೆ 7. ಬಾಲೆ 8. ಕಾಡು

1.		ಡಿ	
2.		ಪಾ	
3.		ಳೆ	
4.		ನ್ಯಾ	
5.		ಳ್ಯಾ	
6.		ಗ್ಗ	
7.		ಗ್ಗ	
8.		ರಿ	

ಕಳೆದ ಸಂಚಿಕೆಯ ಸರಿ ಉತ್ತರಗಳು

ಆಟ 2: Aದಲ್ಲಿನ ಎರಡು ಹರಳುಗಳನ್ನು ಎತ್ತಿ c ಗುಂಪಿನಲ್ಲಿ ಒಂದೊಂದರಂತೆ ಎರಡು ಸಲ ಇಡಿ. ನಂತರ D ಗುಂಪಿನ ಏಕೈಕ ಹರಳನ್ನು ಎತ್ತಿ A ಗುಂಪಿನ ಮುಂದೆ ಪ್ರತ್ಯೇಕವಾಗಿ ಇಟ್ಟುಬಿಡಿ

ಆಟ 4:

ಆಟ 7: 1. ಪತನ 2. ಪಯಣ 3. ಪಠಣ 4. ಪಟಕ 5. ಪರಮ 6. ಪಚನ 7. ಪಟಲ 8. ಪವನ 9. ಪದಕ 10. ಪದರ

ಆಟ 8:
657
324
981

ಆಟ 9: ಪುನೀತ್ ರಾಜ್‌ಕುಮಾರ್

ಪುಟ 10: ಮಧ್ಯದಲ್ಲಿರುವ, ಆಯತವನ್ನು ಸ್ಪರ್ಶಿಸುವ ರೇಖೆಯಿಂದ ರಚಿತವಾಗಿರುವ ಸಂಕಲನ ಚಿಹ್ನೆಯೇ ಅತ್ಯಂತ ದೊಡ್ಡದು



ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:
majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು


ನಂದಿತಾ ಎಸ್.ಎಂ.,
ಅರಸೀಕೆರೆ (ಹಾಸನ)

ಸಂಸ್ಕೃತಿ ಎಂ.ಎಸ್.,
ಮೈಸೂರು

ವೇದಾ ಎಸ್.,
ಬೆಂಗಳೂರು

ಮತ್ತೆ ಸ್ಪರ್ಧೆ ಹೈಕಮಾಂಡ್ ನಿರ್ಧಾರ: ಯಡಿಯೂರಪ್ಪ

ಪಕ್ಷದ ವರಿಷ್ಠರು ನನ್ನ ಕಡೆಗಣಿಸಿಲ್ಲ: ನಿವೃತ್ತಿ ಪ್ರಶ್ನೆಯೇ ಇಲ್ಲ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ನಾನು ಮತ್ತೆ ಸ್ಪರ್ಧಿಸುವ ಬಗ್ಗೆ ಹೈಕಮಾಂಡ್ ನಿರ್ಧರಿಸಲಿದೆ' ಎಂದು ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಅವರು, 'ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದ ಮೇಲೆ ಪಕ್ಷದ ವರಿಷ್ಠರು ನನ್ನನ್ನು ಕಡೆಗಣಿಸಿಲ್ಲ. ಬಿಜೆಪಿಯ ಹಿರಿಯರು, ನಾಯಕರು ಆತ್ಮೀಯವಾಗಿಯೇ ಇದ್ದಾರೆ. ರಾಜಕೀಯ ನಿವೃತ್ತಿಯ ಪ್ರಶ್ನೆಯೂ ಇಲ್ಲ' ಎಂದರು.

'ಮುಂದಿನ ಚುನಾವಣೆಯಲ್ಲಿ ಪಕ್ಷಕ್ಕೆ 140 ಸ್ಥಾನಗಳನ್ನು ಗೆಲ್ಲಿಸಿಕೊಡಲು ಜನಸ್ವರಾಜ್ ಯಾತ್ರೆಯ ನಂತರ ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಸುತ್ತಾಡಿ ಸಂಘಟನೆ ಕಟ್ಟುವ ಕೆಲಸ ಆರಂಭಿಸುವೆ' ಎಂದು ಹೇಳಿದರು.

'ಪಕ್ಷ ಚುನಾವಣೆಯಲ್ಲಿ ಗೆಲುವು ಸಾಧಿಸಲು ಪ್ರಧಾನಿ ನರೇಂದ್ರ ಮೋದಿ ಅವರ ಹೆಸರಿನ ಬಲ ಇದ್ದರೆ ಸಾಕು. ಮುಂದಿನ 20 ವರ್ಷಗಳ ಕಾಲ ದೇಶದಲ್ಲಿ ನಡೆಯುವ ಎಲ್ಲ ಚುನಾವಣೆಗಳಲ್ಲಿ ಬಿಜೆಪಿ ಗೆಲುವು ಸಾಧಿಸಲಿದೆ. ಹೀಗಾಗಿ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆದಿರುವುದರ ಹಿಂದೆ ಚುನಾವಣಾ ಉದ್ದೇಶ ಇಲ್ಲ' ಎಂದು ಹೇಳಿದರು.

'ರೈತರ ಹೋರಾಟದ ಸಂದರ್ಭದಲ್ಲಿ ಆದ ಸಾವು ನೋವಿಗೆ ಬೇರೆ ಬೇರೆ ಕಾರಣಗಳು ಇವೆ. ಅದು ನಿಮಗೆ ಹಾಗೂ ನಮಗೆ ಗೊತ್ತಿರುವ ಸಂಗತಿ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬಾಗಲಕೋಟೆಯಲ್ಲಿ ಶನಿವಾರ ನಡೆದ ಬಿಜೆಪಿ ಜನಸ್ವರಾಜ್ ಸಮಾವೇಶದಲ್ಲಿ ವೇದಿಕೆಯಲ್ಲಿದ್ದ ಮುಖಂಡರಿಗೆ ಸಾಮೂಹಿಕವಾಗಿ ಹೂವಿನ ಹಾರ ಹಾಕಿ ಗೌರವಿಸಲಾಯಿತು. ಸಚಿವ ಬಿ.ಶ್ರೀರಾಮುಲು, ಶಾಸಕರಾದ ವೀರಣ್ಣ ಚರಂತಿಮಠ, ಬಿ.ಎಸ್.ಯಡಿಯೂರಪ್ಪ, ಸಚಿವ ಗೋವಿಂದ ಕಾರಜೋಳ, ಸಂಸದ ಪಿ.ಸಿ. ಗದ್ದಿಗೌಡರ, ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರ್ ಹಾಗೂ ಪಕ್ಷದ ಅಭ್ಯರ್ಥಿ ಪಿ.ಎಚ್.ಪೂಜಾರ ಚಿತ್ರದಲ್ಲಿದ್ದಾರೆ

'ಬಿಲ್ ಪಾಸ್ ಮಾಡಿಕೊಳ್ಳಲು ಗೆಲ್ಲೋಣ'

ಬಾಗಲಕೋಟೆ: 'ಎಪಿಎಂಸಿ ಬಿಲ್, ರೈತರ ಬಿಲ್ ನಂತಹ ಕಾಯ್ದೆಗಳನ್ನು ಸುಲಭವಾಗಿ ಪಾಸ್ ಮಾಡಿಕೊಳ್ಳಲು ವಿಧಾನಪರಿಷತ್ ನಲ್ಲಿ ಹೆಚ್ಚಿನ ಸ್ಥಾನ ಪಡೆಯಬೇಕಿದೆ. ಹೀಗಾಗಿ ಬಿಜೆಪಿ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸಿ' ಎಂದು ಕಾರ್ಯಕರ್ತರಿಗೆ ಸಾರಿಗೆ ಸಚಿವ ಬಿ.ಶ್ರೀರಾಮುಲು ಜನಸ್ವರಾಜ್ ಸಮಾವೇಶದಲ್ಲಿ ಬಿಜೆಪಿ ಅಭ್ಯರ್ಥಿ ಪಿ.ಎಚ್.ಪೂಜಾರ ಪರ ಮನವಿ ಮಾಡಿದರು.

> **ಪರಿಶಿಷ್ಟರು ಹಾಗೂ ಅಲ್ಪಸಂಖ್ಯಾತರನ್ನು ಕಾಂಗ್ರೆಸ್‌ನವರು ಒತ್ತೆಯಾಳುಗಳಂತೆ ಭಾವಿಸಿದ್ದಾರೆ. ಅದರ ಫಲವಾಗಿಯೇ ಇಂದು ಕಾಂಗ್ರೆಸ್ ಎಲ್ಲೆಡೆ ನೆಲಕಚ್ಚುತ್ತಿದೆ**
> **ಗೋವಿಂದ ಕಾರಜೋಳ,** ಜಲಸಂಪನ್ಮೂಲ ಸಚಿವ

ರಾಜ್ಯದಲ್ಲಿ ಬಿಜೆಪಿ ಅಲೆ ಸ್ಪಷ್ಟವಾಗಿ ಕಾಣುತ್ತಿದೆ. ಹೀಗಾಗಿ ವಿಧಾನಪರಿಷತ್ ನ 25 ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ 15 ಸ್ಥಾನಗಳನ್ನು ನಿಶ್ಚಿತವಾಗಿಯೂ ಬಿಜೆಪಿ ಗೆಲ್ಲಲಿದೆ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇಲ್ಲಿಂದಲೇ ಪರಿಷತ್ ಪ್ರವೇಶ

ಬಿಜೆಪಿಗೆ ಇದು ಪ್ರತಿಷ್ಠೆಯ ಕ್ಷೇತ್ರ

• ಬಸವರಾಜ ಹವಾಲ್ದಾರ

ಹುಬ್ಬಳ್ಳಿ: ಧಾರವಾಡ, ಹಾವೇರಿ, ಗದಗ ಜಿಲ್ಲೆಯ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಯು ಬಿಜೆಪಿ ಪಾಲಿಗೆ ಪ್ರತಿಷ್ಠೆಯಾಗಿದೆ. ಏಕೆಂದರೆ, ಇದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರತಿನಿಧಿಸಿದ್ದ ಕ್ಷೇತ್ರ.

ಶಿಗ್ಗಾವಿ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗುವ ಮುನ್ನ ಬಸವರಾಜ ಬೊಮ್ಮಾಯಿ ಅವರು ಎರಡು ಬಾರಿ ಈ ಕ್ಷೇತ್ರದಿಂದ (1998 ಹಾಗೂ 2004) ವಿಧಾನ ಪರಿಷತ್‌ಗೆ ಆಯ್ಕೆಯಾಗಿದ್ದರು. ಅವರ ರಾಜಕೀಯ ಜೀವನ ಇದೇ ಕ್ಷೇತ್ರದಿಂದ ಆರಂಭವಾಗಿತ್ತು.

ಹಾಲಿ ವಿಧಾನ ಪರಿಷತ್ ಸದಸ್ಯ ಪ್ರದೀಪ ಶೆಟ್ಟರ್ ಅವರಿಗೆ ಈ ಬಾರಿಯೂ ಬಿಜೆಪಿ ಟಿಕೆಟ್ ನೀಡಿದೆ. ಇವರು ಶಾಸಕ ಜಗದೀಶ ಶೆಟ್ಟರ್ ಅವರ ಸಹೋದರ. ಈ ಎರಡೂ ಕಾರಣದಿಂದ ಇದು ಪ್ರತಿಷ್ಠೆಯ ಕಣವಾಗಿದೆ.

2013 ರಲ್ಲಿ ನಡೆದ ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದ ಪ್ರದೀಪ ಶೆಟ್ಟರ್ ಅವರು, ಕಾಂಗ್ರೆಸ್‌ನ ನಾಗರಾಜ ಛಬ್ಬಿ ವಿರುದ್ಧ ಸೋಲನುಭವಿಸಿದ್ದರು. 2015ರಲ್ಲಿ ನಡೆದ ಚುನಾವಣೆಯಲ್ಲಿ ಅವರಿಗೆ ಮತ್ತೆ ಟಿಕೆಟ್ ನೀಡಲಾಗಿತ್ತು. ದ್ವಿಸದಸ್ಯತ್ವ ಹೊಂದಿದ್ದ ಈ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದರಾದರೂ, ಕಾಂಗ್ರೆಸ್‌ನ ಶ್ರೀನಿವಾಸ ಮಾನೆ ಅವರಿಗಿಂತ ಕಡಿಮೆ ಮತಗಳನ್ನು ಪಡೆದಿದ್ದರು.

ಕಾಂಗ್ರೆಸ್‌ನಲ್ಲಿ ಆಕಾಂಕ್ಷಿಗಳ ಸಂಖ್ಯೆ ಡಜನ್‌ಗೂ ಹೆಚ್ಚಿದೆ. ಇಬ್ಬರಿಗೆ ಸ್ಪರ್ಧಿಸಲು ಅವಕಾಶ ನೀಡಲಾಗುವುದೇ ನೋಡಬೇಕಿದೆ. ಇಬ್ಬರಿಗೆ ನೀಡಿದರೆ, ಸ್ಪರ್ಧೆ ತೀವ್ರವಾಗಲಿದ್ದು, ಬಿಜೆಪಿಗೆ ಸವಾಲು ಎದುರಾಗಲಿದೆ. ಜೆಡಿಎಸ್ ಮುಖಂಡರು ಸಹ ಅಭ್ಯರ್ಥಿ ಕಣಕ್ಕಿಳಿಸುವುದಾಗಿ ಹೇಳಿದ್ದಾರೆ.

ಪ್ರದೀಪ ಶೆಟ್ಟರ್

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ರಾಜಕೀಯ ತವರು ಜಿಲ್ಲೆ ಹಾವೇರಿಯಲ್ಲಿ ಇತ್ತೀಚೆಗೆ ನಡೆದ ಹಾನಗಲ್ ಉಪ ಚುನಾವಣೆಯಲ್ಲಿ ಬಿಜೆಪಿ ಸೋತಿದೆ. ಮುಖ್ಯಮಂತ್ರಿ ಬೊಮ್ಮಾಯಿ ಅವರು ಹುಬ್ಬಳ್ಳಿಯಲ್ಲಿ ಮನೆ ಹೊಂದಿದ್ದಾರೆ. ಅವರು ರಾಜಕೀಯ ಜೀವನ ಆರಂಭಿಸಿದ ಕ್ಷೇತ್ರದಿಂದ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವುದು ಪ್ರತಿಷ್ಠೆಯಾಗಿದೆ.

ಮುಖ್ಯಾಂಶಗಳು

- **ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಎರಡು ಬಾರಿ ಆಯ್ಕೆ**
- **ಪರಿಷತ್ ಚುನಾವಣೆಗೆ ಬಹುತೇಕರು ಹೊಸ ಮತದಾರರು**

ಹೊಸ ಮತದಾರರು: 7,502 ಮತದಾರರಲ್ಲಿ ಶೇ95 ರಷ್ಟು ಮತದಾರರು ಗ್ರಾಮ ಪಂಚಾಯ್ತಿ ಸದಸ್ಯರಾಗಿದ್ದು, ಫಲಿತಾಂಶದ ನಿರ್ಣಾಯಕರಾಗಿದ್ದಾರೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ಇವರು ಆಯ್ಕೆಯಾಗಿದ್ದು, ಮೊದಲ ಬಾರಿಗೆ ವಿಧಾನ ಪರಿಷತ್ ಚುನಾವಣೆಯಲ್ಲಿ ಮತ ಚಲಾಯಿಸುತ್ತಿದ್ದಾರೆ.

ಪಕ್ಷಗಳ ಬೆಂಬಲಿತ ಅಭ್ಯರ್ಥಿಗಳೆಂದು ಗುರುತಿಸಿಕೊಳ್ಳುತ್ತಾರೆಯೇ ಹೊರತು, ಪಕ್ಷದ ಚಿಹ್ನೆಗಳ ಮೇಲೆ ಆಯ್ಕೆಯಾಗುವುದಿಲ್ಲ. ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳು ತಮ್ಮ ಪಕ್ಷ ಬೆಂಬಲಿತರು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಿದ್ದಾರೆ ಎಂದು ಪಂಚಾಯ್ತಿ ಫಲಿತಾಂಶ ಸಂದರ್ಭದಲ್ಲಿ ಪ್ರತಿಪಾದಿಸಿದ್ದರು. ಅವರಲ್ಲಿ ಯಾವ ಪಕ್ಷದ ಪರ ಎಷ್ಟು ಸದಸ್ಯರು ಗೆಲುವು ಸಾಧಿಸಿದ್ದಾರೆ ಎಂಬುದು ಗೊತ್ತಾಗಲಿದೆ.

ಕಣದಿಂದ ಹಿಂದೆ ಸರಿದ ಎಂಎನ್‌ಆರ್

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ದ್ವಿಸದಸ್ಯ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸುವುದಾಗಿ ಹೇಳುವ ಮೂಲಕ ಕುತೂಹಲ ಸೃಷ್ಟಿಸಿದ್ದ ದಕ್ಷಿಣ ಕನ್ನಡ ಕೇಂದ್ರ ಸಹಕಾರ ಬ್ಯಾಂಕ್ (ಎಸ್‌ಸಿಡಿಸಿಸಿ) ಅಧ್ಯಕ್ಷ ಎಂ.ಎನ್. ರಾಜೇಂದ್ರಕುಮಾರ್, ಇದೀಗ ಚುನಾವಣಾ ಕಣದಿಂದ ಹಿಂದೆ ಸರಿಯಲು ನಿರ್ಧರಿಸಿದ್ದಾರೆ.

'ರಾಜಕೀಯ ಪ್ರವೇಶದಿಂದ ಸಹಕಾರಿಗಳಿಂದ ದೂರ ಉಳಿಯುವ ಸಾಧ್ಯತೆ ಇದೆ. ನಾನು ಸಹಕಾರಿ ನಾಯಕನಾಗಿಯೇ ಇರಬೇಕು. ಯಾವುದೇ ಕಾರಣಕ್ಕೂ ರಾಜಕೀಯಕ್ಕೆ ಪ್ರವೇಶಿಸುವುದಿಲ್ಲ. ಸಹಕಾರ ಕ್ಷೇತ್ರದಿಂದಲೇ ಗುರುತಿಸಿಕೊಳ್ಳಬೇಕು. ಸಹಕಾರ ಕ್ಷೇತ್ರಕ್ಕೆ ನನ್ನಿಂದಾಗುವ ಉತ್ತಮ ಕೆಲಸ ಮುಂದುವರಿಸುವ ಉದ್ದೇಶವಿದೆ. ಹಾಗಾಗಿ ಸಹಕಾರಿಗಳ ಆಶಯಕ್ಕೆ ಸ್ಪಂದಿಸಿ ಈ ನಿರ್ಧಾರ ಕೈಗೊಂಡಿರುವುದಾಗಿ' ಅವರು ತಿಳಿಸಿದ್ದಾರೆ.

ರಾಜೇಂದ್ರ ಕುಮಾರ್

ಖರ್ಗೆ ಲೂಟಿ ಅಂಗಡಿ ಬಂದ್ ಆಗಲಿದೆ: ಕಟೀಲ್

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಲೋಕಸಭಾ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮತದಾರರು ಸೋಲಿಸಿ ಬೆಂಗಳೂರಿನಲ್ಲೇ ಉಳಿಯುವಂತೆ ಮಾಡಿದಿರಿ. ಈಚೆಗೆ ನಡೆದ ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಬಿಜೆಪಿಗೆ 24 ಸ್ಥಾನಗಳನ್ನು ನೀಡುವ ಮೂಲಕ ಖರ್ಗೆ ಅವರ ಪುತ್ರ ಪ್ರಿಯಾಂಕ್ ಖರ್ಗೆ ಅವರನ್ನೂ ಊರು ಬಿಡುವಂತೆ ಮಾಡಿದ್ದೀರಿ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ ಜನ ಸ್ವರಾಜ್ ಸಮಾವೇಶದಲ್ಲಿ ಮಾತನಾಡಿದ ಅವರು, '50 ವರ್ಷಗಳಲ್ಲಿ ಖರ್ಗೆ ಗ್ಯಾಂಗ್ ಲೂಟಿಯಲ್ಲಿ ತೊಡಗಿತ್ತು. ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಬಿ.ಜಿ.ಪಾಟೀಲ ಮತ್ತೆ ಗೆಲ್ಲಲಿದ್ದು, ಖರ್ಗೆ ಲೂಟಿ ಗ್ಯಾಂಗ್‌ನ ಅಂಗಡಿ ಸಂಪೂರ್ಣ ಬಂದ್ ಆಗುವ ಸಮಯ ಸನ್ನಿಹಿತವಾಗಿದೆ' ಎಂದರು.

'ಆರಗ ಜ್ಞಾನೇಂದ್ರ ಗೃಹ ಸಚಿವರಾದ ಬಳಿಕ ಕಾನೂನು ಸುವ್ಯವಸ್ಥೆ ಕಾಪಾಡಲು ಎಲ್ಲ ಕ್ರಮಗಳನ್ನು ಕೈಗೊಂಡಿದ್ದಾರೆ. ಇದರಿಂದಾಗಿಯೇ ಬೀದಿಗಳಲ್ಲಿ ಹಿಂದುಗಳ ಹೆಣ ಬೀಳುವುದು ನಿಂತಿದೆ. ಗೋಹತ್ಯೆ ನಿಂತಿದೆ. ಹೀಗಾಗಿ ಕಾಂಗ್ರೆಸ್‌ನವರಿಗೆ ಮಾತನಾಡಲು ಯಾವ ವಿಷಯವೂ ಇಲ್ಲದ್ದರಿಂದ ಹುಚ್ಚರಂತೆ ಏನೇನೋ ಮಾತನಾಡುತ್ತಿದ್ದಾರೆ' ಎಂದು ಟೀಕಿಸಿದರು.

ಅಲ್ಪಸಂಖ್ಯಾತ–ಬಹುಸಂಖ್ಯಾತ ಇಬ್ಬಗೆ ಏಕೆ?

ಹೈದರಾಬಾದ್ (ಪಿಟಿಐ): ದೇಶದ ಪ್ರತಿಯೊಬ್ಬ ನಾಗರಿಕರಿಗೂ ಸಂವಿಧಾನದ ಅಡಿಯಲ್ಲಿ ಸಮಾನ ಹಕ್ಕುಗಳು ಇರುವಾಗ, ಅಲ್ಪಸಂಖ್ಯಾತ–ಬಹುಸಂಖ್ಯಾತ ಎಂಬ ದ್ವಂದ್ವಕ್ಕೆ ತಮ್ಮ ವಿರೋಧವಿದೆ ಎಂದು ಕೇರಳದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಶನಿವಾರ ಹೇಳಿದ್ದಾರೆ.

'ಈ ದೇಶವು ವಿವಿಧ ಧರ್ಮಗಳಿಗೆ ಸೇರಿದ ಎಲ್ಲರನ್ನೂ ಒಳಗೊಂಡಿದೆ. ಹಾಗಿದ್ದ ಮೇಲೂ ನಾನು ಹುಟ್ಟಿದ ನನ್ನ ದೇಶದಲ್ಲಿಯೇ ನಾನು ಅಲ್ಪಸಂಖ್ಯಾತನಾಗಿ ಬದುಕಬೇಕೇ? ಅಲ್ಪಸಂಖ್ಯಾತ ಎಂಬುದರ ಅರ್ಥವಾದರೂ ಏನು? ನಾನು ಕಡಿಮೆಯೇ? ಇದು ಅಪಮಾನಕರವಲ್ಲವೇ' ಎಂದು ಪ್ರಶ್ನಿಸಿದ್ದಾರೆ.

ಅಲ್ಪಾವಧಿಗೆ ಅಮೆರಿಕ ಅಧ್ಯಕ್ಷೆಯಾಗಿದ್ದ ಕಮಲಾ

ವಾಷಿಂಗ್ಟನ್ (ಪಿಟಿಐ/ಎಎಫ್‌ಪಿ): ಅಮೆರಿಕದ ಉಪಾಧ್ಯಕ್ಷೆ ಭಾರತ ಮೂಲದ ಕಮಲಾ ಹ್ಯಾರಿಸ್ ಅವರು ಅತ್ಯಲ್ಪ ಅವಧಿಗೆ ಅಮೆರಿಕದ ಅಧ್ಯಕ್ಷರಾಗಿ ಶುಕ್ರವಾರ ಕಾರ್ಯ ನಿರ್ವಹಿಸಿದರು. ಕಮಲಾ ಅವರ ಅಧ್ಯಕ್ಷೀಯ ಅವಧಿ 1 ಗಂಟೆ 25 ನಿಮಿಷದ್ದಾಗಿತ್ತು. ಅಧ್ಯಕ್ಷೀಯ ಅಧಿಕಾರವನ್ನು ಚಲಾಯಿಸುವ ಮೂಲಕ ಈ ಜವಾಬ್ದಾರಿ ನಿರ್ವಹಿಸಿದ ಅಮೆರಿಕದ ಮೊದಲ ಮಹಿಳೆ ಎಂಬ ಶ್ರೇಯಕ್ಕೆ ಅವರು ಪಾತ್ರರಾಗಿದ್ದಾರೆ.

ಕಮಲಾ

ಅಮೆರಿಕ ಅಧ್ಯಕ್ಷ ಜೊ ಬೈಡನ್ ಅವರು ಶುಕ್ರವಾರದಂದು ವಾರ್ಷಿಕ ಆರೋಗ್ಯ ತಪಾಸಣೆಗೆ ಒಳಗಾಗಿದ್ದರು. ಅವರಿಗೆ ಅರಿವಳಿಕೆ ನೀಡಬೇಕಿದ್ದ ಕಾರಣ, ಕಮಲಾ ಹ್ಯಾರಿಸ್ ಅವರಿಗೆ ತಾತ್ಕಾಲಿಕವಾಗಿ ಅಧ್ಯಕ್ಷೀಯ ಅಧಿಕಾರ ಚಲಾಯಿಸುವ ಜವಾಬ್ದಾರಿ ನೀಡಲಾಗಿತ್ತು.

ಅಧಿಕಾರವನ್ನು ತಾತ್ಕಾಲಿಕವಾಗಿ ಹಸ್ತಾಂತರ ಮಾಡುವ ಪತ್ರಗಳನ್ನು ಸಿದ್ಧಪಡಿಸಲಾಗಿತ್ತು. ಇದರ ಪ್ರಕಾರ, ಕಮಲಾ ಅವರ ಅಧ್ಯಕ್ಷೀಯ ಅವಧಿ ಬೆಳಿಗ್ಗೆ 10:10ಕ್ಕೆ ಆರಂಭವಾಯಿತು. ವೈದ್ಯಕೀಯ ತಪಾಸಣೆ ಬಳಿಕ ಬೈಡನ್ ಅವರು ಕೆಲಸ ನಿರ್ವಹಿಸಲು ಸಮರ್ಥರಾಗಿದ್ದಾರೆ ಎಂದು ವೈದ್ಯರು ದೃಢೀಕರಿಸಿದ್ದರಿಂದ ಅವರು ಕೆಲಸಕ್ಕೆ ಮರಳಿದರು. 11.35ಕ್ಕೆ ಅವರ ಅಧಿಕಾರ ಮುಕ್ತಾಯವಾಯಿತು ಶ್ವೇತಭವನ ತಿಳಿಸಿದೆ.

'ಆರ್ಯನ್‌ಖಾನ್ ಮತ್ತಿತರ ಆರೋಪಿಗಳ ವಿರುದ್ಧ ಸಾಕ್ಷ್ಯಗಳಿಲ್ಲ'

ಮುಂಬೈ (ಪಿಟಿಐ): ಐಷಾರಾಮಿ ಹಡಗಿನಲ್ಲಿನ ಡ್ರಗ್ಸ್ ಪಾರ್ಟಿ ಪ್ರಕರಣದಲ್ಲಿ ಆರೋಪಿಗಳಾಗಿರುವ ಆರ್ಯನ್ ಖಾನ್ ಹಾಗೂ ಇತರ ಇಬ್ಬರು, ಅಪರಾಧ ಎಸಗಿದ್ದಾರೆ ಎಂಬುದನ್ನು ಸಾಬೀತುಪಡಿಸುವಂಥ ಬಲವಾದ ಸಾಕ್ಷ್ಯಗಳು ಮೇಲ್ನೋಟಕ್ಕೆ ಕಂಡುಬರುತ್ತಿಲ್ಲ ಎಂದು ಬಾಂಬೆ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಆರ್ಯನ್ ಖಾನ್, ಅರ್ಬಾಜ್ ಹಾಗೂ ಧಮೇಚಾ ಅವರ ವಾಟ್ಸ್ ಆ್ಯಪ್ ಚಾಟ್‌ಗಳಲ್ಲಿ ಆಕ್ಷೇಪಾರ್ಹ ಎನ್ನಬಹುದಾದ ಅಂಶಗಳಿಲ್ಲ. ಅಪರಾಧ ಎಸಗಲು ಆರೋಪಿಗಳು ಪಿತೂರಿ ನಡೆಸಿದ್ದರು ಎಂಬುದನ್ನು ಸಹ ಈ ಚಾಟ್‌ಗಳು ತೋರಿಸುತ್ತಿಲ್ಲ' ಎಂದು ಆದೇಶದಲ್ಲಿ ಹೇಳಲಾಗಿದೆ.

ಈ ಮೂವರಿಗೆ ಅ.28ರಂದು ಜಾಮೀನು ನೀಡಲಾಗಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹455

ಖಾದ್ಯ ತೈಲ ಮುಂಬೈ	(10 ಕೆಜಿಗೆ)
ಶೇಂಗಾ (ರಿಫೈನ್ಡ್)	₹1360 (1360)
ಸೋಯಾ (ರಿಫೈನ್ಡ್)	₹1245 (1245)
ಸೂರ್ಯಕಾಂತಿ (ರಿಫೈನ್ಡ್)	₹1310 (1305)
ಪಾಮೋಲಿನ್	₹1205 (1205)

ಈರುಳ್ಳಿ ಧಾರಣೆ	(ಕ್ವಿಂಟಲ್‌ಗೆ)
ದೊಡ್ಡ	₹2200-2800
ಮಧ್ಯಮ	₹1600-2200
ಸಣ್ಣ	₹1000-1600

ತೆಂಗು ಧಾರಣೆ (ಸಾವಿರಕ್ಕೆ)	
ಮಂಗಳೂರು	
1ನೇ ದರ್ಜೆ	₹20000-27000
2ನೇ ದರ್ಜೆ	₹10000-18000

'ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಿಗೆ 129 ಕೋಟಿ ಡೋಸ್'

ನವದೆಹಲಿ (ಪಿಟಿಐ): ಇದುವರೆಗೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೋವಿಡ್ ಲಸಿಕೆಯ 129 ಕೋಟಿಗೂ ಹೆಚ್ಚು ಡೋಸ್‌ಗಳನ್ನು ಪೂರೈಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಶನಿವಾರ ಹೇಳಿದೆ.

ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಬಳಿ ಬಾಕಿ ಮತ್ತು ಬಳಕೆಯಾಗದ ಇನ್ನೂ ಸುಮಾರು 21.65 ಕೋಟಿ ಡೋಸ್‌ಗಳು ಲಭ್ಯ ಇವೆ. ಲಸಿಕೆ ಅಭಿಯಾನದ ಭಾಗವಾಗಿ ಲಸಿಕೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ ಎಂದಿದೆ.

'ಅಂಬೇಡ್ಕರ್ ಜಿಂದಾಬಾದ್' ವಿಡಿಯೊ ತಿರುಚಿದ ಪ್ರಕರಣ

ಪತ್ರಕರ್ತ, ಗ್ರಾ.ಪಂ ಸದಸ್ಯ ಸೇರಿ ಮೂವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಶನಿವಾರಸಂತೆ (ಕೊಡಗು ಜಿಲ್ಲೆ): 'ಅಂಬೇಡ್ಕರ್ ಜಿಂದಾಬಾದ್' ಎಂಬ ವಿಡಿಯೊ ತಿರುಚಿ 'ಪಾಕಿಸ್ತಾನ್ ಜಿಂದಾಬಾದ್' ಎಂದು ಮಾಡಿದ್ದ ಪ್ರಕರಣ ಸಂಬಂಧ ಇಲ್ಲಿನ ಗ್ರಾಮ ಪಂಚಾಯಿತಿ ಸದಸ್ಯ ಎಸ್.ಎನ್.ರಘು, ಮಾಜಿ ಸದಸ್ಯ ಹಾಗೂ ಪತ್ರಕರ್ತ ಎಚ್.ಆರ್.ಹರೀಶ್ ಕುಮಾರ್, ಕುಶಾಲನಗರದ ಗಿರೀಶ್ ವಿರುದ್ಧ ಪ್ರಕರಣ ದಾಖಲಾಗಿದೆ

ಪೊಲೀಸರು ಸ್ವಯಂ ಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಗುಪ್ತದಳ ವಿಭಾಗದ ಸಿಬ್ಬಂದಿ ಪ್ರದೀಪ್ ಕುಮಾರ್ ಎಂಬುವವರು ಮೂವರ ವಿರುದ್ಧ ದೂರು ನೀಡಿದ್ದಾರೆ.

'ನ.12ರ ಸಂಜೆ ಸ್ವಸಹಾಯ ಸಂಘದ ನೇತೃತ್ವದಲ್ಲಿ ಮುಸ್ಲಿಂ ಸಮುದಾಯದ ಮಹಿಳೆಯರು, ಪ್ರಕರಣವೊಂದರ ಸಂಬಂಧ ಅಮಾಯಕರನ್ನು ಬಂಧಿಸದಂತೆ ಆಗ್ರಹಿಸಿ, ಪೊಲೀಸ್ ಠಾಣೆ ಎದುರು ಧರಣಿ ನಡೆಸಿದ್ದರು. ಆಗ ಅಂಬೇಡ್ಕರ್ ಜಿಂದಾಬಾದ್ ಎಂಬ ಘೋಷಣೆ ಕೂಗಿ ತೆರಳಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಎಸ್.ಎನ್.ರಘು

ಹರೀಶ್ ಕುಮಾರ್

ಗಿರೀಶ್

'ನ.13ರಂದು ಎಸ್.ಎನ್.ರಘು, ಎಚ್.ಆರ್.ಹರೀಶ್ ಕುಮಾರ್ ಅವರು ಮುಸ್ಲಿಂ ಮಹಿಳೆಯರು ಧರಣಿ ವೇಳೆ ಪಾಕಿಸ್ತಾನ್ ಜಿಂದಾಬಾದ್ ಎಂಬ ಘೋಷಣೆ ಕೂಗಿದ್ದಾರೆ. ಹಿಂದೂ ಸಂಘಟನೆಗಳ ಮೇಲೆ ದಬ್ಬಾಳಿಕೆ ನಡೆಯುತ್ತಲೇ ಬಂದಿದೆ' ಎಂದು ಆರೋಪಿಸಿ ಶನಿವಾರಸಂತೆ ಬಂದ್‌ಗೆ ಕರೆ ನೀಡಿದ್ದರು. ಇಬ್ಬರ ಮಾತಿನಿಂದ ಪ್ರಚೋದನೆಗೆ ಒಳಗಾದ ಗಿರೀಶ್ ತನ್ನ ಮೊಬೈಲ್‌ನಿಂದ ಧರಣಿ ವಿಡಿಯೊವನ್ನು ವಿವಿಧ ವಾಟ್ಸ್‌ಆ್ಯಪ್ ಗ್ರೂಪ್‌ಗಳಿಗೆ ಶೇರ್ ಮಾಡಿ, ಮುಸ್ಲಿಂ ಮಹಿಳೆಯರು ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಕೂಗಿದ್ದಾರೆ. ದೇಶ ವಿರೋಧಿಗಳನ್ನು ಬಂಧಿಸಬೇಕು. ಅವರ ವಿರುದ್ಧ ಕೇಸ್ ದಾಖಲಿಸಬೇಕು ಎಂದು ಬರೆದಿದ್ದರು. ಅದು ಎಲ್ಲೆಡೆ ಹರಿದಾಡಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೋಮು ಸೌಹಾರ್ದ ಕದಡಿ, ಕೊಡಗು ಜಿಲ್ಲೆಯಲ್ಲಿ ಅಶಾಂತಿ ಸೃಷ್ಟಿಸುವ ಬೆಳವಣಿಗೆಗಳು ನಡೆಯುತ್ತಿವೆ. ಪೊಲೀಸರು ಅದಕ್ಕೆ ಅವಕಾಶ ನೀಡಬಾರದು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಮುಸ್ಲಿಂ ಸಮುದಾಯದ ಮುಖಂಡರು ಕೋರಿ, ಎಸ್‌ಪಿಗೆ ಮನವಿ ಸಲ್ಲಿಸಿದ್ದಾರೆ.

₹18 ಸಾವಿರ ಗಡಿ ದಾಟಿದ ಕೊಬ್ಬರಿ

ಪ್ರಜಾವಾಣಿ ವಾರ್ತೆ

ತಿಪಟೂರು: ಆರು ತಿಂಗಳಿನಿಂದ ಏರುಗತಿಯಲ್ಲಿದ್ದ ಕೊಬ್ಬರಿ ಧಾರಣೆ ಶನಿವಾರ ಗರಿಷ್ಠ ಮಟ್ಟ ತಲುಪಿದ್ದು, ಇಲ್ಲಿಯ ಎಪಿಎಂಸಿಯಲ್ಲಿ ಕ್ವಿಂಟಲ್‌ಗೆ ₹18 ಸಾವಿರದ ಗಡಿ ದಾಟಿದೆ.

ಕಳೆದ ಹಲವು ದಿನಗಳಿಂದ ₹17 ಸಾವಿರ ಆಸುಪಾಸಿನಲ್ಲಿದ್ದ ಕೊಬ್ಬರಿ ₹18,106ಕ್ಕೆ ತಲುಪಿದೆ. ಕೆಲವು ದಿನಗಳಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದ ಕೊಬ್ಬರಿಯನ್ನು ಮಾರುಕಟ್ಟೆಗೆ ತರಲು ರೈತರಿಗೆ ಸಾಧ್ಯವಾಗುತ್ತಿಲ್ಲ. ಇದು ಬೆಲೆ ಹೆಚ್ಚಳಕ್ಕೆ ಕಾರಣ ಎಂದು ವರ್ತಕರು ಹೇಳುತ್ತಾರೆ.

'ಪೂರೈಕೆ ಕಡಿಮೆಯಾಗಿರುವುದರಿಂದ ಆವಕ ಕುಸಿದಿದೆ. ಕೊಬ್ಬರಿ ಬೆಲೆ ಹೆಚ್ಚಳವಾಗಲು ಇದು ಪ್ರಮುಖ ಕಾರಣ. ಈ ಏರಿಕೆ ಕೆಲವು ದಿನಗಳಿಗೆ ಮಾತ್ರ ಸೀಮಿತವಾಗಿರಲಿದೆ' ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ರಿಲಯನ್ಸ್, ಆರಾಮ್ಕೊ ಒಪ್ಪಂದ: ಮರುಮೌಲ್ಯಮಾಪನಕ್ಕೆ ನಿರ್ಧಾರ

ನವದೆಹಲಿ: ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಯು ತನ್ನ ತೈಲ ಸಂಸ್ಕರಣೆ ಮತ್ತು ಪೆಟ್ರೋಕೆಮಿಕಲ್ ವಹಿವಾಟಿನ ಶೇ 20ರಷ್ಟು ಷೇರುಗಳನ್ನು ಸೌದಿ ಆರಾಮ್ಕೊ ಕಂಪನಿಗೆ ಮಾರಾಟ ಮಾಡುವ ಪ್ರಸ್ತಾವವನ್ನು ಕೈಬಿಟ್ಟಿದೆ.

ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಸೌದಿ ಆರಾಮ್ಕೊ ಕಂಪನಿಗೆ ₹ 1.11 ಲಕ್ಷ ಕೋಟಿ ಮೊತ್ತಕ್ಕೆ ಶೇ 20ರಷ್ಟು ಷೇರುಗಳನ್ನು ಮಾರಾಟ ಮಾಡುವ ಪ್ರಸ್ತಾವದ ಮರು ಮೌಲ್ಯ ಮಾಪನ ಮಾಡುವುದರಿಂದ ಎರಡೂ ಕಂಪನಿಗಳಿಗೂ ಅನುಕೂಲ ಆಗಲಿದೆ ಎಂದು ರಿಲಯನ್ಸ್ ಹೇಳಿದೆ. ಆದಾಗ್ಯೂ ಭಾರತದ ಖಾಸಗಿ ವಲಯದಲ್ಲಿ ಹೂಡಿಕೆ ಮಾಡುವ ಸೌದಿ ಆರಾಮ್ಕೊದ 'ಆದ್ಯತಾ ಪಾಲುದಾರ' ಕಂಪನಿ ಆಗಿರಲಿದೆ ಎಂದೂ ಅದು ತಿಳಿಸಿದೆ.

ಅಂಬಾನಿ ಅವರು 2019ರ ಆಗಸ್ಟ್‌ನಲ್ಲಿ ನಡೆದಿದ್ದ ಷೇರುದಾರರ ವಾರ್ಷಿಕ ಸಭೆಯಲ್ಲಿ ತೈಲ ಸಂಸ್ಕರಣೆ ಮತ್ತು ಪೆಟ್ರೋಕೆಮಿಕಲ್ ವಹಿವಾಟಿನ ಶೇ 20ರಷ್ಟು ಷೇರುಗಳನ್ನು ಸೌದಿ ಆರಾಮ್ಕೊ ಕಂಪನಿಗೆ ಮಾರಾಟ ಮಾಡುವುದಾಗಿ ಘೋಷಿಸಿದ್ದರು. ಒಪ್ಪಂದವು 2020ರ ಮಾರ್ಚ್ ವೇಳಗೆ ಮುಕ್ತಾಯ ಆಗಲಿದೆ ಎಂದೂ ಹೇಳಿದ್ದರು. ಆದರೆ, ಕೋವಿಡ್ ನಿಯಂತ್ರಿಸಲು ಹೇರಿದ್ದ ನಿರ್ಬಂಧಗಳಿಂದಾಗಿ ನಿಗದಿತ ಅವಧಿಯೊಳಗೆ ಒಪ್ಪಂದ ಏರ್ಪಡಲಿಲ್ಲ ಎಂದು ಕಂಪನಿಯು ತಿಳಿಸಿದೆ.

ಆ ಬಳಿಕ ಈ ವರ್ಷದ ಅಂತ್ಯದ ವೇಳೆಗೆ ಒಪ್ಪಂದ ಪೂರ್ಣಗೊಳ್ಳಲಿದೆ ಎಂದು ಕಂಪನಿಯು ತನ್ನ ವಾರ್ಷಿಕ ಸಭೆಯಲ್ಲಿ ತಿಳಿಸಿತ್ತು. ಆದರೆ ಇದೀಗ ಮರು ಮೌಲ್ಯಮಾಪನ ಮಾಡುವುದಾಗಿ ಹೇಳಿದೆ. ತೈಲ ಸಂಸ್ಕರಣೆ ಮತ್ತು ಪೆಟ್ರೋಕೆಮಿಕಲ್ ವಹಿವಾಟನ್ನು ಕಂಪನಿಯಿಂದ ಪ್ರತ್ಯೇಕಗೊಳಿಸುವ ಬಗ್ಗೆ ರಾಷ್ಟ್ರೀಯ ಕಂಪನಿ ಕಾಯ್ದೆ ನ್ಯಾಯಮಂಡಳಿಗೆ (ಎನ್‌ಸಿಎಲ್‌ಟಿ) ಸಲ್ಲಿಸಿದ್ದ ಪ್ರಸ್ತಾವನೆಯನ್ನು ಸಹ ಕೈಬಿಡಲು ರಿಲಯನ್ಸ್ ನಿರ್ಧರಿಸಿದೆ.

ಈ ಬೆಳವಣಿಗೆಗಳ ಕುರಿತು ಕಂಪನಿಯ ವಕ್ತಾರರಿಗೆ ಕಳುಹಿಸಿದ ಇ-ಮೇಲ್‌ಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ರಾಜಸ್ಥಾನ: ಎಲ್ಲ ಸಚಿವರ ರಾಜೀನಾಮೆ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜಸ್ಥಾನದ ಅಶೋಕ್ ಗೆಹಲೋತ್ ನೇತೃತ್ವದ ಸರ್ಕಾರದ ಎಲ್ಲಾ ಸಚಿವರು ಶನಿವಾರ ಸಂಜೆ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿದ್ದಾರೆ. ಭಾನುವಾರವೇ ಸಂಪುಟ ಪುನರ್‌ರಚನೆ ಆಗುವ ಸಂಭವವಿದೆ ಎನ್ನಲಾಗಿದೆ.

ಸಂಪುಟ ಪುನರ್‌ರಚನೆ ಮಾಡಬೇಕು ಎಂದು ಕಾಂಗ್ರೆಸ್ ನಾಯಕ ಸಚಿನ್ ಪೈಲಟ್ ಆಗ್ರಹಿಸಿದ್ದರು. ಸಚಿನ್ ಬಣದ ಸದಸ್ಯರಿಗೂ ಸಚಿವ ಸ್ಥಾನಗಳು ಸಿಗಲಿವೆ ಎಂಬ ನಿರೀಕ್ಷೆಗಳು ಇವೆ.

ಜೈಪುರದಲ್ಲಿರುವ ಗೆಹಲೋತ್ ಅವರ ನಿವಾಸದಲ್ಲಿ 45 ನಿಮಿಷಗಳ ಸಭೆ ನಡೆದ ಬಳಿಕ ಸಚಿವರು ರಾಜೀನಾಮೆ ನೀಡಿದರು. ಸದ್ಯ ಗೆಹಲೋತ್ ಸಂಪುಟದಲ್ಲಿ 21 ಸಚಿವರಿದ್ದಾರೆ. ಮುಖ್ಯಮಂತ್ರಿಯೂ ಸೇರಿದಂತೆ 30 ಸಚಿವರನ್ನು ಹೊಂದುವ ಅವಕಾಶ ಅವರ ಸಂಪುಟಕ್ಕಿದೆ.

ಗೆಹಲೋತ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಜಯ್ ಮಾಕನ್ ಮತ್ತು ರಾಜಸ್ಥಾನ ಕಾಂಗ್ರೆಸ್ ಅಧ್ಯಕ್ಷ ಗೋವಿಂದ್ ಸಿಂಗ್ ಡೋಟಾಸ್ರಾ ಅವರು ಶನಿವಾರ ಬೆಳಗ್ಗೆ 'ಕಿಸಾನ್ ವಿಜಯ್ ದಿವಸ್' ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಶುಕ್ರವಾರ ಸಂಜೆಯೇ ಜೈಪುರಕ್ಕೆ ತೆರಳಿದ್ದ ಗೆಹಲೋತ್ ಮತ್ತು ಮಾಕನ್ ಪ್ರತ್ಯೇಕವಾಗಿ ಸಭೆ ನಡೆಸಿದ್ದರು.

'ಎಲ್ಲಾ ಸಚಿವರು ಸಭೆಯಲ್ಲಿ ರಾಜೀನಾಮೆ ನೀಡಿದೆವು. ಭಾನುವಾರ ಮಧ್ಯಾಹ್ನ ಎರಡು ಗಂಟೆಗೆ ಕಾಂಗ್ರೆಸ್ ಕಚೇರಿಗೆ ಹೋಗಲು ಹೇಳಲಾಗಿದೆ. ಅಲ್ಲಿಗೆ ಹೋದ ಬಳಿಕ ಮುಖ್ಯಮಂತ್ರಿಯಿಂದ ಮುಂದಿನ ಸೂಚನೆ ಸಿಗಲಿದೆ' ಎಂದು ಅಜಯ್ ಮಾಕನ್, ಗೋವಿಂದ್ ಸಿಂಗ್ ಮತ್ತು ರಾಜೀನಾಮೆ ನೀಡಿರುವ ಇತರ ನಾಯಕರು ಹೇಳಿದರು.

ಕೆಲ ದಿನಗಳ ಹಿಂದಷ್ಟೇ ಗೆಹಲೋತ್ ಮತ್ತು ಪೈಲಟ್ ಇಬ್ಬರೂ ಪಕ್ಷದ ಮುಖ್ಯಸ್ಥೆ ಸೋನಿಯಾ ಗಾಂಧಿ ಹಾಗೂ ಪಕ್ಷದ ಇತರ ನಾಯಕರೊಂದಿಗೆ ಪ್ರತ್ಯೇಕವಾಗಿ ಚರ್ಚೆ ನಡೆಸಿದ್ದರು. 'ಒಬ್ಬ ವ್ಯಕ್ತಿ, ಒಂದು ಹುದ್ದೆ' ಎಂಬ ಸೂತ್ರವನ್ನು ರಾಜಸ್ಥಾನ ಸರ್ಕಾರದಲ್ಲಿ ಅಳವಡಿಸಲು ಕೇಂದ್ರ ನಾಯಕತ್ವ ಸೂಚಿಸಿತ್ತು. ಅದರಂತೆ ಡೋಟಾಸ್ರಾ, ಹರೀಶ್ ಚೌಧರಿ ಮತ್ತು ರಾಘು ಶರ್ಮ ಮತ್ತು ಎಲ್ಲಾ ಸಚಿವರು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ಶುಕ್ರವಾರವೇ ಲಿಖಿತ ರೂಪದಲ್ಲಿ ರಾಜೀನಾಮೆಯನ್ನು ನೀಡಿದ್ದರು.

ಸೋನಿಯಾ ಗಾಂಧಿ ಅವರ ಜೊತೆ ಸಭೆಯಲ್ಲಿ ಪಾಲ್ಗೊಂಡಿದ್ದ ಬಳಿಕ ಮಾತನಾಡಿದ್ದ ಪೈಲಟ್, 'ವಿಶ್ವಾಸಾರ್ಹತೆ, ಪ್ರದರ್ಶನ, ಪ್ರಾದೇಶಿಕ ಪ್ರಾಮುಖ್ಯ ಮತ್ತು ಜಾತಿ ಸಂಯೋಜನೆಗಳನ್ನು ಗಮನದಲ್ಲಿರಿಸಿಕೊಂಡು ಪಕ್ಷವು ಸಚಿವರ ಆಯ್ಕೆ ಮಾಡುತ್ತದೆ' ಎಂದು ಹೇಳಿದ್ದರು.

ಕೆಲವು ತಿಂಗಳ ಹಿಂದೆ ಪೈಲಟ್ ಅವರನ್ನು ಉಪಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿ, ಅವರ ಬೆಂಬಲಿಗರಿಂದ ಸಚಿವ ಸ್ಥಾನ ಕಿತ್ತುಕೊಳ್ಳಲಾಗಿತ್ತು. ಇದಾದ ಬಳಿಕ ಪೈಲಟ್ ಬಣವು ದೆಹಲಿ ಸೇರಿದಂತೆ ಇತರ ಕಡೆಗೆ ತೆರಳಿ ಸರ್ಕಾರವನ್ನು ಉರುಳಿಸುವ ಬೆದರಿಕೆ ಒಡ್ಡಿತ್ತು. ಈ ಬೆಳವಣಿಗೆಗಳ ಬಳಿಕ ಸಚಿವ ಸಂಪುಟ ಪುನರ್‌ರಚನೆ ಮಾಡಲಾಗುತ್ತಿದೆ.

ಓಲಾ ಇ–ಸ್ಕೂಟರ್: ಟೆಸ್ಟ್ ರೈಡ್ ಸೌಲಭ್ಯ ವಿಸ್ತರಣೆ

ನವದೆಹಲಿ (ಪಿಟಿಐ): ಓಲಾ ಎಲೆಕ್ಟ್ರಿಕ್ ಕಂಪನಿಯು ತನ್ನ ವಿದ್ಯುತ್ ಚಾಲಿತ ಸ್ಕೂಟರ್‌ಗಳನ್ನು ಗ್ರಾಹಕರಿಗೆ 'ಟೆಸ್ಟ್ ರೈಡ್' ನೀಡುವುದನ್ನು ದೇಶದಾದ್ಯಂತ ವಿಸ್ತರಣೆ ಮಾಡಿರುವುದಾಗಿ ಶನಿವಾರ ತಿಳಿಸಿದೆ.

ಒಂದು ಸಾವಿರಕ್ಕೂ ಅಧಿಕ ನಗರಗಳು ಮತ್ತು ಪಟ್ಟಣಗಳಲ್ಲಿನ ಗ್ರಾಹಕರು 'ಓಲಾ ಎಸ್1' ಎಲೆಕ್ಟ್ರಿಕ್ ಸ್ಕೂಟರ್ ಚಲಾಯಿಸಿ ಪರಿಶೀಲಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನವೆಂಬರ್ 10ರಂದು ಬೆಂಗಳೂರು, ದೆಹಲಿ, ಅಹಮದಾಬಾದ್ ಮತ್ತು ಕೋಲ್ಕತ್ತಾದಲ್ಲಿ ಮೊದಲ ಬಾರಿಗೆ ಈ ಸೌಲಭ್ಯಕ್ಕೆ ಚಾಲನೆ ನೀಡಲಾಯಿತು. ಆ ಬಳಿಕ ನವೆಂಬರ್ 19ರಂದು ಚೆನ್ನೈ, ಹೈದರಾಬಾದ್, ಕೊಚ್ಚಿ, ಮುಂಬೈ ಮತ್ತು ಪುಣೆ ನಗರಗಳಿಗೂ ವಿಸ್ತರಿಸಲಾಯಿತು. ಇದೀಗ ಡಿಸೆಂಬರ್ 15ರ ಒಳಗಾಗಿ ಎಲ್ಲಾ ಗ್ರಾಹಕರೂ ಸ್ಕೂಟರ್ ಚಲಾಯಿಸಿ ನೋಡುವಂತೆ ಆಗಬೇಕು ಎನ್ನುವ ಸಲುವಾಗಿ ಈ ಸೌಲಭ್ಯವನ್ನು ದೇಶದಾದ್ಯಂತ ವಿಸ್ತರಣೆ ಮಾಡಲಾಗಿದೆ ಎಂದು ಹೇಳಿದೆ.

ಬಿಎಸ್‌ಎನ್‌ಎಲ್, ಎಂಟಿಎನ್‌ಎಲ್: ₹ 970 ಕೋಟಿ ಮೌಲ್ಯದ ಆಸ್ತಿ ಮಾರಾಟಕ್ಕೆ

ನವದೆಹಲಿ: ಬಿಎಸ್‌ಎನ್‌ಎಲ್ ಮತ್ತು ಎಂಟಿಎನ್‌ಎಲ್ ಕಂಪನಿಗಳ ₹ 970 ಕೋಟಿ ಮೌಲ್ಯದ ಆಸ್ತಿಗಳನ್ನು ಕೇಂದ್ರ ಸರ್ಕಾರವು ಮಾರಾಟ ಮಾಡಲಿದೆ ಎನ್ನುವ ಮಾಹಿತಿಯು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆ (ಡಿಐಪಿಎಎಂ) ಜಾಲತಾಣದಲ್ಲಿ ಅಪ್‌ಲೋಡ್ ಮಾಡಿರುವ ದಾಖಲೆಪತ್ರಗಳಿಂದ ತಿಳಿದುಬಂದಿದೆ.

ಬಿಎಸ್‌ಎನ್‌ಎಲ್‌ಗೆ ಸೇರಿದ ಹೈದರಾಬಾದ್, ಚಂಡೀಗಡ, ಭಾವನಗರ ಮತ್ತು ಕೋಲ್ಕತ್ತದಲ್ಲಿನ ₹ 660 ಕೋಟಿ ಮೌಲ್ಯದ ಆಸ್ತಿಗಳನ್ನು ಮಾರಾಟಕ್ಕೆ ಇಡಲಾಗಿದೆ. ಎಂಟಿಎನ್‌ಎಲ್‌ಗೆ ಸೇರಿದ ಮುಂಬೈನ ವಾಸರಿ ಹಿಲ್ ಬಳಿ ಇರುವ ₹310 ಕೋಟಿ ಮೌಲ್ಯದ ಆಸ್ತಿಗಳು ಮಾರಾಟಕ್ಕೆ ಇಡಲಾಗಿದೆ. ಡಿ. 14ರಂದು ಎಂಟಿಎನ್‌ಎಲ್ ಆಸ್ತಿಗಳ ಇ–ಹರಾಜು ನಡೆಯಲಿದೆ.

'ಆಸ್ತಿ ನಗದೀಕರಣದ ಮೊದಲ ಹಂತ ಇದಾಗಿದೆ. ಬಿಎಸ್‌ಎನ್‌ಎಲ್‌ನ ₹ 660 ಕೋಟಿ ಮೌಲ್ಯದ ಹಾಗೂ ಎಂಟಿಎನ್‌ಎಲ್‌ನ ₹ 310 ಕೋಟಿ ಮೌಲ್ಯದ ಆಸ್ತಿಗಳನ್ನು ಮಾರಾಟ ಮಾಡಲು ಬಿಡ್ ಆಹ್ವಾನಿಸಲಾಗುವುದು. ಒಂದೂವರೆ ತಿಂಗಳಿನ ಒಳಗಾಗಿ ಎಲ್ಲಾ ಪ್ರಕ್ರಿಯೆಯನ್ನೂ ಪೂರ್ಣಗೊಳಿಸುವ ಯೋಜನೆ ಹೊಂದಲಾಗಿದೆ' ಎಂದು ಬಿಎಸ್‌ಎನ್‌ಎಲ್ ಪಿ.ಕೆ. ಪೂರ್ವರ್ ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ 20-11-2021	
ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9350-9450
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1370 (1370)
ಒಂದು ವಾರದ ಡೆಲಿವರಿ	1365 (1365)
ಸೋಯಾ ಕಚ್ಚಾ	1202 (1197)
ಪಾಮ್ ವಾರದ ಡೆಲಿವರಿ	1203 (1203)
ಸೂರ್ಯಕಾಂತಿ ಎಣ್ಣೆ ಕಚ್ಚಾ	1215 (1210)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	48,800 (49,000)
ಬೆಳ್ಳಿ ಕೆ.ಜಿ	65,700 (65,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಶ್ರೀಕಾಳು ಮೆಣಸು	530
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-52000
ಕಾರ್ಕಳ	
ಹೊಸತು	35000-42500
ಹಳತು	46000-50500
ಪುತ್ತೂರು	
ಕೋಕ	10500-26000
ಹೊಸತು	27500-42500
ಶಿರಸಿ	
ಬೆಟ್ಟೆ	32199-40699
ಬಿಳಿಗೋಟು	24399-41599
ಚಾಲಿ	47899-48899
ರಾಶಿ	46899-48869
ತುಮಕೂರು	
ರಾಶಿ	45000-46500
ಮಂಗಳೂರು	
ಹಳತು	49000-52000
ಹೊಸತು	38000-42500
ಕೋಕ	32500-37500
ರಾಮನಗರ ರೇಷ್ಮೆ	
ಮಿಶ್ರತಳಿ	275-540
ದ್ವಿತಳಿ	180-696

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14400	14000	---	233.50 ಸೆಂಟ್ಸ್
ಎಸಿ	6125	5300	---	
ಆರ್‌ಪಿ	6200	---	6300	ಲಂಡನ್
ಆರ್‌ಸಿ	3640	3250	3675	2245ಡಾಲರ್ಸ್

'ಮರ ಕಡಿಯಲು ಗೌಪ್ಯವಾಗಿ ಅನುಮತಿ ನೀಡುವುದು ಸರಿಯಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮರಗಳನ್ನು ಕಡಿಯಲು ಕಾನೂನು ಪ್ರಕಾರವೇ ಅನುಮತಿ ನೀಡುವುದು ಹಾಗೂ ಅದನ್ನು ರಹಸ್ಯವಾಗಿಡುವುದು ಉತ್ತರದಾಯಿತ್ವ ಇಲ್ಲದಂತೆ ಮಾಡುತ್ತದೆ. ಇಂಥ ಕ್ರಮ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ಕಾನೂನಿಗೆ ವ್ಯತಿರಿಕ್ತವಾದುದು' ಎಂದು ಸುಪ್ರೀಂಕೋರ್ಟ್ ಹೇಳಿದೆ.

ಈ ಕುರಿತ ಅರ್ಜಿಯೊಂದರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್, ಸೂರ್ಯ ಕಾಂತ್ ಹಾಗೂ ವಿಕ್ರಮ್ ನಾಥ್ ಅವರನ್ನು ಒಳಗೊಂಡ ನ್ಯಾಯಪೀಠ, 'ಮರಗಳನ್ನು ಕಡಿಯಲು ರಹಸ್ಯವಾಗಿ ಅನುಮತಿ ನೀಡುವುದು ಉತ್ತಮ ಆಡಳಿತಕ್ಕೆ ವಿರುದ್ಧವಾದುದು' ಎಂದೂ ಹೇಳಿತು.

ಉತ್ತರಾಖಂಡ ಹಾಗೂ ಉತ್ತರಪ್ರದೇಶ ರಾಜ್ಯಗಳ ಮೂಲಕ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿ 72ಎ ನಿರ್ಮಾಣಕ್ಕೆ ಮರಗಳನ್ನು ಕಡಿಯಲು ಡೆಹ್ರಾಡೂನ್ ಜಿಲ್ಲಾ ಅರಣ್ಯ ಅಧಿಕಾರಿ ಆಗಸ್ಟ್ 27ರಂದು ಅನುಮತಿ ನೀಡಿದ್ದರು. ಈ ಕ್ರಮವನ್ನು ಪ್ರಶ್ನಿಸಿ 'ಸಿಟಿಜನ್ಸ್ ಫಾರ್ ಗ್ರೀನ್ ಡೂನ್' ಎಂಬ ಎನ್‌ಜಿಒ ಅರ್ಜಿ ಸಲ್ಲಿಸಿತ್ತು.

ನ. 26ರ ವರೆಗೆ ಮರಗಳನ್ನು ಕಡಿಯದಂತೆ ತಡೆಯಾಜ್ಞೆ ನೀಡಿದ ನ್ಯಾಯಪೀಠ, ಈ ಸಂಬಂಧ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸುವಂತೆ ಎನ್‌ಜಿಒಗೆ ಸೂಚಿಸಿತು.

'ಮರಗಳನ್ನು ಕಡಿಯಲು ಅನುಮತಿ ನೀಡುವುದನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಹೀಗೆ ಮಾಡುವುದರಿಂದ ನೊಂದವರು ಸಹ ಅಧಿಕಾರಿಗಳ ಇಂಥ ಕ್ರಮವನ್ನು ಪ್ರಶ್ನಿಸುವ ಹಕ್ಕು ಹೊಂದಿದ್ದಾರೆ ಎಂಬುದನ್ನು ಖಾತ್ರಿ ಪಡಿಸಲು ಸಾಧ್ಯವಾಗುತ್ತದೆ ಎಂಬುದೇ ಇದರ ಉದ್ದೇಶ' ಎಂದೂ ನ್ಯಾಯಪೀಠ ಹೇಳಿತು.

ಇಮ್ರಾನ್ ಖಾನ್ ದೊಡ್ಡಣ್ಣನಂತೆ: ಸಿಧು ಹೇಳಿಕೆಗೆ ಬಿಜೆಪಿ ವಾಗ್ದಾಳಿ

ನವದೆಹಲಿ (ಪಿಟಿಐ): ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ ನವಜೋತ್ ಸಿಂಗ್ ಸಿಧು ಅವರು ಪಾಕ್ ಪ್ರಧಾನಿ ಇಮ್ರಾನ್ ಖಾನ್ ಅವರನ್ನು 'ದೊಡ್ಡ ಅಣ್ಣ' ಎಂದು ಕರೆದಿದ್ದನ್ನು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಕಟುವಾಗಿ ಟೀಕಿಸಿದ್ದಾರೆ.

ಕರ್ತಾರ್‌ಪುರ ಸಾಹಿಬ್ ಗೆ ಭೇಟಿ ನೀಡಿದ ವೇಳೆ ಸಿಧು ಅವರು ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಹಿರಿಯ ಅಣ್ಣ ಎಂದು ಕರೆದಿದ್ದರು. ಇದಕ್ಕೆ ಬಿಜೆಪಿ ಶನಿವಾರ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದೆ.

ಸಿಧು ಭೇಟಿ: ಪಾಕಿಸ್ತಾನದ ಪವಿತ್ರ ಗುರುದ್ವಾರ ದರ್ಬಾರ್ ಸಾಹಿಬ್‌ಗೆ ಸಿಧು ಶನಿವಾರ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ಭಾರತ ಮತ್ತು ಪಾಕಿಸ್ತಾನದ ನಡುವೆ ಹೊಸ ವ್ಯಾಪಾರ ಸಂಬಂಧ ಮತ್ತು ಹೊಸ ಸ್ನೇಹದ ಅಧ್ಯಾಯವೊಂದು ತೆರೆದುಕೊಳ್ಳಬೇಕಿದೆ ಎಂದು ಹೇಳಿದರು.

'74 ವರ್ಷಗಳಿಂದ ಭಾರತ ಮತ್ತು ಪಾಕಿಸ್ತಾನದ ನಡುವೆ ನಿರ್ಮಾಣವಾಗಿರುವ ಗೋಡೆಗಳಲ್ಲಿ ಕಿಂಡಿಗಳನ್ನು ತೆರೆಯಬೇಕಿದೆ. ಎರಡು ದೇಶಗಳ ಮಧ್ಯೆ ವ್ಯಾಪಾರ ಸಂಬಂಧ ವೃದ್ಧಿಸಬೇಕಿದೆ' ಎಂದು ಸಿಧು ಪ್ರತಿಪಾದಿಸಿದರು.

ಕರ್ತಾರ್‌ಪುರ ಕಾರಿಡಾರ್ ತೆರೆಯಲು ಒಪ್ಪಿಗೆ ನೀಡಿದ ಪಾಕಿಸ್ತಾನ ಪ್ರಧಾನ ಮಂತ್ರಿ ಇಮ್ರಾನ್ ಖಾನ್‌ಗೆ ಧನ್ಯವಾದ ಸಲ್ಲಿಸಿದ ಸಿಧು, 'ಇಮ್ರಾನ್ ಅವರು ನನ್ನ ಹಿರಿಯ ಅಣ್ಣನಂತೆ. ನಮಗೆ ಅಪಾರ ಗೌರವ ನೀಡಿದ ಅವರನ್ನು ನಾನು ಬಹಳ ಗೌರವಿಸುತ್ತೇನೆ' ಎಂದು ಹೇಳಿದರು.

ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿ; ರೋಹನ್ ಕದಂ ಅಬ್ಬರ

ಫೈನಲ್‌ಗೆ ಮನೀಷ್ ಪಾಂಡೆ ಪಡೆ

ನವದೆಹಲಿ (ಪಿಟಿಐ): ದಕ್ಷಿಣ ಭಾರತದ ಬದ್ಧ ಎದುರಾಳಿಗಳಾದ ಕರ್ನಾಟಕ ಮತ್ತು ತಮಿಳುನಾಡು ಕ್ರಿಕೆಟ್ ತಂಡಗಳು ಈ ಬಾರಿಯ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶನಿವಾರ 87ನಡೆದ ಸೆಮಿಫೈನಲ್ ಪಂದ್ಯದಲ್ಲಿ ಮನೀಷ್ ಪಾಂಡೆ ಬಳಗವು ವಿದರ್ಭ ಎದುರು 4 ರನ್‌ಗಳ ರೋಚಕ ಜಯ ಸಾಧಿಸಿತು. ನಾಲ್ಕರ ಘಟ್ಟದ ಇನ್ನೊಂದು ಪಂದ್ಯದಲ್ಲಿ ತಮಿಳುನಾಡು ತಂಡವು 8 ವಿಕೆಟ್‌ಗಳಿಂದ ಹೈದರಾಬಾದ್ ವಿರುದ್ಧ ಜಯಿಸಿತು. ಸೋಮವಾರ ನಡೆಯುವ ಫೈನಲ್‌ನಲ್ಲಿ ಉಭಯ ತಂಡಗಳು ಪ್ರಶಸ್ತಿಗಾಗಿ ಹಣಾಹಣಿ ನಡೆಸಲಿವೆ.

ಮಧ್ಯಾಹ್ನ ನಡೆದ ಪಂದ್ಯದಲ್ಲಿ ಆರಂಭಿಕ ಜೋಡಿ ರೋಹನ್ ಕದಂ (87; 56ಎಸೆತ, 7ಬೌಂಡರಿ, 4ಸಿಕ್ಸರ್) ಮತ್ತು ಮನೀಷ್ ಪಾಂಡೆ (54; 42ಎಸೆತ, 2ಬೌಂಡರಿ, 3ಸಿಕ್ಸರ್) ಮೊದಲ ವಿಕೆಟ್ ಜೊತೆಯಾಟದಲ್ಲಿ 132 ರನ್ ಗಳಿಸಿದರು. ಈ ಬುನಾದಿಯ ಮೇಲೆ ಕರ್ನಾಟಕ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 176 ರನ್ ಗಳಿಸಿತು. ಕೊನೆಯ ಓವರ್‌ನಲ್ಲಿ ಸತತ ನಾಲ್ಕು ವಿಕೆಟ್‌ಗಳನ್ನು ಕಬಳಿಸಿದ ದರ್ಶನ್ ನಾಲ್ಕಂಡೆ (28ಕ್ಕೆ4) ಕರ್ನಾಟಕ ಮೊತ್ತ ಮತ್ತಷ್ಟು ಬೆಳೆಯದಂತೆ ಕಡಿವಾಣ ಹಾಕಿದರು.

ಗುರಿ ಬೆನ್ನಟ್ಟಿದ ವಿದರ್ಭ ತಂಡವು ಇನಿಂಗ್ಸ್‌ನ ಕಡೆಯ ಓವರ್‌ನವರೆಗೂ ಹೋರಾಡಿತು. ಆದರೆ ತಂಡಕ್ಕೆ 20 ಓವರ್‌ಗಳಲ್ಲಿ 6ಕ್ಕೆ 172 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಕೊನೆಯ ಓವರ್‌ನಲ್ಲಿ ಗೆಲುವಿಗಾಗಿ 14 ರನ್‌ಗಳ ಅವಶ್ಯಕತೆ ಇದ್ದಾಗ, ವಿದ್ಯಾಧರ್ ಪಾಟೀಲ ಬೌಲಿಂಗ್ ಮಾಡಿದರು. ಕ್ರೀಸ್‌ನಲ್ಲಿದ್ದ ಅಕ್ಷಯ್ ಕರ್ಣೇಶ್ವರ್ (22; 12ಎಸೆತ) ಮೊದಲ ಎಸೆತದಲ್ಲಿಯೇ ಅವರು ಬೌಂಡರಿ ದಾಟಿಸಲು ಯತ್ನಿಸಿದರು. ತಮ್ಮ ಮೇಲಿಂದ ಶರವೇಗದಲ್ಲಿ ಸಾಗುತ್ತಿದ್ದ ಚೆಂಡನ್ನು ಜಿಗಿದು ಹಿಡಿತಕ್ಕೆ ಪಡೆದ ಅಭಿನವ್ ಮನೋಹರ್ ಮಹತ್ವದ ತಿರುವು ನೀಡಿದರು. ನಂತರದ ಐದು ಎಸೆತಗಳಲ್ಲಿ ಹತ್ತು ರನ್‌ಗಳನ್ನು ಎದುರಾಳಿಗಳು ಗಳಿಸಿದರೂ ಗೆಲುವಿನ ದಡ ಮುಟ್ಟಲು ಸಾಧ್ಯವಾಗಲಿಲ್ಲ.

ಮನೀಷ್ ಪಾಂಡೆ

ಮುಖ್ಯಾಂಶಗಳು

- ಎರಡು ಬಾರಿ ಪ್ರಶಸ್ತಿ ಗೆದ್ದಿರುವ ಕರ್ನಾಟಕ
- ಸ್ಪಿನ್ನರ್ ಕೆ.ಸಿ. ಕಾರ್ಯಪ್ಪಗೆ ಎರಡು ವಿಕೆಟ್
- ಇನಿಂಗ್ಸ್ ಆರಂಭಿಸಿದ ಮನೀಷ್ ಪಾಂಡೆ

ಪಾಂಡೆ ಆಟದ ರಂಗು: ಕ್ವಾರ್ಟರ್‌ಫೈನಲ್‌ನಲ್ಲಿ ಗೆಲುವಿನ ರೂವಾರಿಯಾಗಿದ್ದ ನಾಯಕ ಪಾಂಡೆ ಈ ಪಂದ್ಯದಲ್ಲಿಯೂ ತಮ್ಮ ಬ್ಯಾಟಿಂಗ್, ಯೋಜನೆ ಮತ್ತು ಫೀಲ್ಡಿಂಗ್ ಮೂಲಕ ಗಮನ ಸೆಳೆದರು. ಸತತ ಎರಡು ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿದ್ದ ಬಿ.ಆರ್. ಶರತ್ ಅವರನ್ನು ಆರನೇ ಕ್ರಮಾಂಕಕ್ಕೆ ಕಳಿಸಿ ರೋಹನ್ ಜೊತೆಗೆ ಇನಿಂಗ್ಸ್ ಆರಂಭಿಸಿ ಯಶಸ್ವಿಯಾದರು. ಮೂರನೇ ಕ್ರಮಾಂಕದಲ್ಲಿ ಅಭಿನವ್ ಮನೋಹರ್ (27; 13ಎಸೆತ) ನೀಡಿದ್ದ ಕ್ರಮವೂ ಯಶಸ್ವಿಯಾಯಿತು.

ರೋಹನ್ ಕದಂ

ಗುರಿ ಬೆನ್ನಟ್ಟಿದ ವಿದರ್ಭಕ್ಕೆ ಅಥರ್ವ ತೈಡೆ ಮತ್ತು ಗಣೇಶ್ ಸತೀಶ್ ಉತ್ತಮ ಆರಂಭ ನೀಡಿದರು. ಅವರ ಬಿರುಸಿನಾಟಕ್ಕೆ ಕೇವಲ ಐದು ಓವರ್‌ಗಳಲ್ಲಿ 43 ರನ್‌ಗಳು ಸೇರಿದವು. ಸ್ಪಿನ್ನರ್ ಕಾರ್ಯಪ್ಪ ಹಾಕಿದ ಐದನೇ ಓವರ್‌ನಲ್ಲಿ ಲಾಂಗ್ ಆನ್ ಬೌಂಡರಿ ಲೈನ್‌ನಲ್ಲಿ ಪಾಂಡೆ ಶ್ರಮಪಟ್ಟು ಪಡೆದ ಕ್ಯಾಚ್‌ನಿಂದಾಗಿ ಜೊತೆಯಾಟ ಮುರಿದುಬಿತ್ತು. ಶುಭಂ ದುಬೆ ಮತ್ತು ಅಕ್ಷಯ್ ವಾಡಕರ್ ಅವರಿಬ್ಬರ ಕ್ಯಾಚ್‌ಗಳನ್ನೂ ಫೀಲ್ಡರ್ ವಿದ್ಯಾಧರ್ ಕೈಚೆಲ್ಲಿದ್ದರು. ಆದ್ದರಿಂದಾಗಿ ಪಂದ್ಯವು ಕೊನೆಯ ಓವರ್‌ನವರೆಗೆ ಬೆಳೆಯಿತು.

ರೋಹನ್ ಅಬ್ಬರ: ಮಯಂಕ್ ಅಗರವಾಲ್ ಮತ್ತು ದೇವದತ್ತ ಪಡಿಕ್ಕಲ್ ಅನುಪಸ್ಥಿತಿಯಲ್ಲಿ ಇನಿಂಗ್ಸ್ ಆರಂಭಿಸುವ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದ ರೋಹನ್ ಮೊದಲ ಓವರ್‌ನಲ್ಲಿ ಸಿಕ್ಕ ಜೀವದಾನವನ್ನು ಸಮರ್ಥವಾಗಿ ಬಳಸಿಕೊಂಡರು. ತಂಡಕ್ಕೆ ಭದ್ರ ಬುನಾದಿ ಹಾಕಿದರು.

ಸ್ಕೋರ್ ಕಾರ್ಡ್

ಕರ್ನಾಟಕ 7ಕ್ಕೆ 176 (20 ಓವರ್)

ರೋಹನ್ ಸಿ ವಾಂಖಡೆ ಬಿ ಲಲಿತ್ 87 (56ಎ, 4X7, 6X4), ಪಾಂಡೆ ಸಿ ವಾಖರೆ ಬಿ ಲಲಿತ್ 54 (42ಎ, 4X2, 6X3), ಅಭಿನವ್ ಸಿ ಅಥರ್ವ್ ಬಿ ನಲ್ಕಂಡೆ 27 (13ಎ, 4X2, 6X2), ಕರುಣ್ ಸಿ ವಾಡ್ಕರ್ ಬಿ ಠಾಕೂರ್ 5 (3ಎ, 4X1), ಅನಿರುದ್ಧ ಸಿ ಠಾಕೂರ್ ಬಿ ನಲ್ಕಂಡೆ 1 (3ಎ), ಶರತ್ ಸಿ ವಾಡ್ಕರ್ ಬಿ ನಲ್ಕಂಡೆ 0 (1ಎ), ಸುಚಿತ್ ಸಿ ವಾಂಖಡೆ ಬಿ ನಲ್ಕಂಡೆ 0 (1ಎ), ವಿಜಯಕುಮಾರ್ ಔಟಾಗದೆ 1 (1ಎ), ದರ್ಶನ್ ಔಟಾಗದೆ 0 (0 ಎ)

ಇತರೆ (ವೈಡ್ 1) 1

ವಿಕೆಟ್ ಪತನ: 1–132 (ರೋಹನ್ ಕದಂ, 15.1), 2–156 (ಮನೀಷ್ ಪಾಂಡೆ, 17.3), 3–174 (ಕರುಣ್ ನಾಯರ್, 18.5), 4–175 (ಅನಿರುದ್ಧ ಜೋಶಿ, 19.2), 5–175 (ಜಗದೀಶ್ ಸುಚಿತ್, 19.4), 7–175 (ಅಭಿನವ್ ಮನೋಹರ್, 19.5)

ಬೌಲಿಂಗ್: ದರ್ಶನ್ ನಲ್ಕಂಡೆ 4–0–28–4, ಯಶ್ ಠಾಕೂರ್ 4–0–35–1, ಲಲಿತ್ ಯಾದವ್ 4–0–36–2, ಅಕ್ಷಯ್ ಕರ್ನೇವಾರ್ 4–0–39–0, ಅಕ್ಷಯ್ ವಾಖರೆ 3–0–32–0, ಅಥರ್ವ್ ತಾಯಿಡೆ 1–0–6–0

ವಿದರ್ಭ 6ಕ್ಕೆ 172 (20 ಓವರ್)

ಅಥರ್ವ್ ಸಿ ಪಾಂಡೆ ಬಿ ಕಾರ್ಯಪ್ಪ 32 (16ಎ, 4X3, 6X2), ಗಣೇಶ್ ಸಿ ವಿದ್ಯಾಧರ್ ಬಿ ಸುಚಿತ್ 31 (27ಎ, 4X2, 6X1), ವಾಡ್ಕರ್ ಬಿ ಕರುಣ್ 15 (15ಎ, 6X1), ಶುಭಂ ಸಿ ಶರತ್ ಬಿ ಕಾರ್ಯಪ್ಪ 24 (16ಎ, 4X1, 6X1), ಜೀತೇಶ್ ಸಿ ಕಾರ್ಯಪ್ಪ ಬಿ ದರ್ಶನ್ 12 (9ಎ, 6X1), ವಾಂಖಡೆ ಔಟಾಗದೆ 27 (22ಎ, 4X1, 6X1), ಕರ್ನೇವಾರ್ ಸಿ ಮನೋಹರ್ ಬಿ ವಿದ್ಯಾಧರ್ 22 (12ಎ, 4X1, 6X2), ನಲ್ಕಂಡೆ ಔಟಾಗದೆ 5 (3ಎ, 4X1)

ಇತರೆ (ಬೈ 1, ಲೆಗ್ ಬೈ 3, ನೋಬಾಲ್ 1, ವೈಡ್ 8) 13

ವಿಕೆಟ್ ಪತನ: 1–143 (ಅಥರ್ವ್ ತಾಯಿಡೆ, 4.6), 2–67 (ಗಣೇಶ್ ಸತೀಶ್, 8.1), 3–99 (ಅಕ್ಷಯ್ ವಾಡ್ಕರ್, 11.6), 4–103 (ಶುಭಂ ದುಬೆ, 12.2), 5–122 (ಜೀತೇಶ್ ಶರ್ಮಾ, 14.5), 6–163 (ಅಕ್ಷಯ್ ಕರ್ನೇವಾರ್, 19.1)

ಬೌಲಿಂಗ್: ಎಂ.ಬಿ.ದರ್ಶನ್ 3–0–39–1, ವಿದ್ಯಾಧರ್ ಪಾಟೀಲ್ 4–0–29–1, ಕೆ.ಸಿ.ಕಾರ್ಯಪ್ಪ 4–0–27–2, ವಿಜಯಕುಮಾರ್ ವೈಶಾಖ್ 3–0–31–0, ಜಗದೀಶ್ ಸುಚಿತ್ 4–0–34–1, ಕರುಣ್ ನಾಯರ್ 2–0–10–1

ಫಲಿತಾಂಶ: ಕರ್ನಾಟಕಕ್ಕೆ 4 ರನ್‌ಗಳ ಜಯ; ಫೈನಲ್ ಪ್ರವೇಶ

ನಾಲ್ಕು ಎಸೆತಗಳಲ್ಲಿ ನಾಲ್ಕು ವಿಕೆಟ್

ವಿದರ್ಭ ತಂಡದ ಮಧ್ಯಮವೇಗಿ ದರ್ಶನ್ ನಾಲ್ಕಂಡೆ ಕರ್ನಾಟಕದ ಎದುರಿನ ಪಂದ್ಯದಲ್ಲಿ ಸತತ ನಾಲ್ಕು ವಿಕೆಟ್ ಗಳಿಸಿ ದಾಖಲೆ ಮಾಡಿದರು.

20ನೇ ಓವರ್‌ನಲ್ಲಿ ಅನಿರುದ್ಧ ಜೋಶಿ, ಬಿ.ಆರ್. ಶರತ್, ಜೆ. ಸುಚಿತ್ ಮತ್ತು ಅಭಿನವ್ ಮನೋಹರ್ ಅವರ ವಿಕೆಟ್‌ಗಳನ್ನು ಗಳಿಸಿದರು.

'ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯಲ್ಲಿ ಬೌಲರ್‌ವೊಬ್ಬರು ಸತತ ನಾಲ್ಕು ಎಸೆತಗಳಲ್ಲಿ ನಾಲ್ಕು ವಿಕೆಟ್ ಪಡೆದ ಎರಡನೇ ಬೌಲರ್ ದರ್ಶನ್ ಅವರಾಗಿದ್ದಾರೆ. 2019–20ರ ಟೂರ್ನಿಯಲ್ಲಿ ಸೂರತ್‌ನಲ್ಲಿ ಹರಿಯಣಾ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಕರ್ನಾಟಕದ ಅಭಿಮನ್ಯು ಮಿಥುನ್ ಸತತ ನಾಲ್ಕು ವಿಕೆಟ್ ಗಳಿಸಿದ್ದ ದಾಖಲೆ ಮಾಡಿದ್ದರು' ಎಂದು ಕ್ರಿಕೆಟ್ ಅಂಕಿ ಅಂಶ ತಜ್ಞ ಎಚ್.ಆರ್. ಗೋಪಾಲಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದರು.

ಯುವ ಆಟಗಾರರಿಗೆ ಅವಕಾಶ?

ಭಾರತ–ನ್ಯೂಜಿಲೆಂಡ್ ಟಿ20: ಕೊನೆಯ ಪಂದ್ಯ ಇಂದು

ಕೋಲ್ಕತ್ತ (ಪಿಟಿಐ): ನಾಯಕತ್ವ ವಹಿಸಿಕೊಂಡ ಚೊಚ್ಚಲ ಟ್ವೆಂಟಿ–20 ಕ್ರಿಕೆಟ್ ಸರಣಿಯನ್ನು ಕೈವಶ ಮಾಡಿಕೊಂಡಿರುವ ರೋಹಿತ್ ಶರ್ಮಾ ಈಗ ಕ್ಲೀನ್‌ಸ್ವೀಪ್ ಮೇಲೆ ಕಣ್ಣಿಟ್ಟಿದ್ದಾರೆ.

ಈಡನ್ ಗಾರ್ಡನ್‌ನಲ್ಲಿ ಭಾನುವಾರ ನಡೆಯಲಿರುವ ನ್ಯೂಜಿಲೆಂಡ್ ಎದುರಿನ ಸರಣಿಯ ಕೊನೆಯ ಪಂದ್ಯದಲ್ಲಿ ಉದಯೋನ್ಮುಖ ಆಟಗಾರರೊಂದಿಗೆ ಭಾರತವು ಕಣಕ್ಕಿಳಿಯುವ ಸಾಧ್ಯತೆ ಇದೆ. ರೋಹಿತ್ ಮತ್ತು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಯುವ ಆಟಗಾರರಿಗೆ ಅವಕಾಶ ಕೊಡುವುದು ಬಹುತೇಕ ಖಚಿತವಾಗಿದೆ.

ಮುಂದಿನ ವಾರ ನಡೆಯಲಿರುವ ಟೆಸ್ಟ್ ಸರಣಿಯಲ್ಲಿ ಆಡಲಿರುವ ರಿಷಭ್ ಪಂತ್, ಆರ್. ಅಶ್ವಿನ್, ಮೊಹಮ್ಮದ್ ಸಿರಾಜ್ ಮತ್ತು ಕೆ.ಎಲ್. ರಾಹುಲ್ ಅವರಿಗೆ ವಿಶ್ರಾಂತಿ ನೀಡುವ ನಿರೀಕ್ಷೆ ಇದೆ. ಇದರೊಂದಿಗೆ ರೋಹಿತ್ ಜೊತೆಗೆ ಇನಿಂಗ್ಸ್ ಆರಂಭಿಸಲು ಮತ್ತು ವಿಕೆಟ್‌ಕೀಪಿಂಗ್ ಹೊಣೆ ನಿಭಾಯಿಸಲು ಇಶಾನ್ ಕಿಶನ್‌ಗೆ ಅವಕಾಶ ದೊರಕಬಹುದು ಅಥವಾ ಋತುರಾಜ್ ಗಾಯಕವಾಡ್‌ಗೆ ಪದಾರ್ಪಣೆ ಮಾಡುವ ಅವಕಾಶ ಲಭಿಸುವ ಸಾಧ್ಯತೆಯೂ ಇದೆ.

ತಮ್ಮ ಪದಾರ್ಪಣೆ ಪಂದ್ಯದಲ್ಲಿಯೇ ಶ್ರೇಷ್ಠ ಆಟಗಾರನ ಗೌರವ ಗಳಿಸಿದ ಮಧ್ಯಮವೇಗಿ ಹರ್ಷಲ್ ಪಟೇಲ್, ಸ್ಪಿನ್ನರ್ ಅಕ್ಷರ್ ಪಟೇಲ್, ದೀಪಕ್ ಚಾಹರ್ ಅವರಿಗೆ ಮತ್ತೊಂದು ಅವಕಾಶ ಸಿಗಬಹುದು.

ಯಜುವೇಂದ್ರ ಚಾಹಲ್ ಕೂಡ ಆಡುವ ಸಾಧ್ಯತೆ ಇದೆ. ಕಿವೀಸ್ ತಂಡವು ಸಮಾಧಾನಕರ ಗೆಲುವಿಗಾಗಿ ಹೋರಾಡಲು ಬೌಲಿಂಗ್ ವಿಭಾಗದಲ್ಲಿ ಕೆಲವು ಬದಲಾವಣೆಗಳೊಂದಿಗೆ ಕಣಕ್ಕೆ ಇಳಿಯಬಹುದು. ಹೋದ ಪಂದ್ಯದಲ್ಲಿ ನಾಯಕ ಟಿಮ್ ಸೌಥಿ ಒಬ್ಬರೇ ಮೂರು ವಿಕೆಟ್ ಗಳಿಸಿದ್ದರು. ಉಳಿದ ಬೌಲರ್‌ಗಳಿಗೆ ವಿಕೆಟ್ ಪಡೆಯಲು ಸಾಧ್ಯವಾಗಿರಲಿಲ್ಲ.

ಈಡನ್ ಗಾರ್ಡನ್‌ನಲ್ಲಿ ರಿವರ್ಸ್ ಸ್ವಿಂಗ್ ಪ್ರಯೋಗಿಸುವ ಬೌಲರ್‌ಗಳಿಗೆ ಹೆಚ್ಚು ನೆರವು ನೀಡುವಂತಹ ಪಿಚ್ ಇದೆ. ಅದರಿಂದಾಗಿ ಇನಿಂಗ್ಸ್ ಕೊನೆಯ ಹಂತದ ಓವರ್‌ಗಳಲ್ಲಿ ರನ್ ಗಳಿಸುವುದು ಬ್ಯಾಟರ್‌ಗಳಿಗೆ ಹೆಚ್ಚು ಸವಾಲಿನದ್ದಾಗಬಹುದು. ಮುಸ್ಸಂಜೆಯಿಂದ ಸುರಿಯುವ ಇಬ್ಬನಿ ಕೂಡ ಮಹತ್ವದ ಅಂಶವಾಗಲಿದೆ. ಆದ್ದರಿಂದ ಟಾಸ್ ಗೆದ್ದ ನಾಯಕ ತೆಗೆದುಕೊಳ್ಳುವ ನಿರ್ಣಯವೂ ಪಂದ್ಯದ ಫಲಿತಾಂಶದ ಮೇಲೆ ಪರಿಣಾಮ ಬೀರುವುದು ಖಚಿತ.

ರೋಹಿತ್ ಶರ್ಮಾ



ಟಿಮ್ ಸೌಥಿ

ತಂಡಗಳು: ಭಾರತ: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್, ಇಶಾನ್ ಕಿಶನ್, ವೆಂಕಟೇಶ್ ಅಯ್ಯರ್, ಯಜುವೇಂದ್ರ ಚಾಹಲ್, ಆರ್. ಅಶ್ವಿನ್, ಅಕ್ಷರ್ ಪಟೇಲ್, ಆವೇಶ್ ಖಾನ್, ಭುವನೇಶ್ವರ್ ಕುಮಾರ್, ದೀಪಕ್ ಚಾಹರ್, ಹರ್ಷಲ್ ಪಟೇಲ್, ಮೊಹಮ್ಮದ್ ಸಿರಾಜ್, ಋತುರಾಜ್ ಗಾಯಕವಾಡ್.

ನ್ಯೂಜಿಲೆಂಡ್: ಟಿಮ್ ಸೌಥಿ (ನಾಯಕ), ಟಾಡ್ ಆಸ್ಟ್ಲ, ಟ್ರೆಂಟ್ ಬೌಲ್ಟ್, ಮಾರ್ಕ್ ಚಾಪಮನ್, ಲಾಗಿ ಫರ್ಗ್ಯುಸನ್, ಮಾರ್ಟಿನ್ ಗಪ್ಟಿಲ್, ಆ್ಯಡಂ ಮಿಲ್ನೆ, ಡೆರಿಲ್ ಮಿಚೆಲ್, ಜಿಮ್ಮಿ ನಿಶಾಮ್, ಗ್ಲೆನ್ ಫಿಲಿಪ್ಸ್, ಮಿಚೆಲ್ ಸ್ಯಾಂಟನರ್, ಟಿಮ್ ಸೀಫರ್ಟ್, ಈಶ್ ಸೋಧಿ.

ಪಂದ್ಯ ಆರಂಭ: ರಾತ್ರಿ 7ರಿಂದ

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಪಾಕ್‌ಗೆ ಸರಣಿ

ಢಾಕಾ: ಬಾಂಗ್ಲಾದೇಶ ಎದುರಿನ ಎರಡನೇ ಪಂದ್ಯದಲ್ಲಿ ಎಂಟು ವಿಕೆಟ್‌ಗಳ ಜಯ ಗಳಿಸಿದ ಪಾಕಿಸ್ತಾನ 2–0 ಮುನ್ನಡೆಯೊಂದಿಗೆ ಟ್ವೆಂಟಿ–20 ಸರಣಿಯ ತನ್ನದಾಗಿಸಿಕೊಂಡಿತು.

ಮೀರ್‌ಪುರದಲ್ಲಿ ನಡೆದ ಪಂದ್ಯದಲ್ಲಿ 109 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ತಂಡ ಇನ್ನೂ 11 ಎಸೆತ ಬಾಕಿ ಇರುವಾಗ ಗೆಲುವಿನ ನಗೆ ಸೂಸಿತು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 7ಕ್ಕೆ 108 (ನಜ್ಮುಲ್ ಹೊಸೇನ್ 40; ಶಹೀನ್ ಶಾ ಅಫ್ರಿದಿ 15ಕ್ಕೆ2, ಶಾದಬ್ ಖಾನ್ 22ಕ್ಕೆ2); ಪಾಕಿಸ್ತಾನ: 18.1 ಓವರ್‌ಗಳಲ್ಲಿ 2ಕ್ಕೆ 109 (ಮೊಹಮ್ಮದ್ ರಿಯಾಜ್ 39). ಫಲಿತಾಂಶ: ಪಾಕಿಸ್ತಾನಕ್ಕೆ 8 ವಿಕೆಟ್‌ಗಳ ಜಯ.

ಹಸನ್‌ಗೆ ವಾಗ್ದಂಡನೆ; ಬಾಂಗ್ಲಾಗೆ ದಂಡ: ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ (ಐಸಿಸಿ) ನಿಯಮ ಉಲ್ಲಂಘಿಸಿದ ಆರೋಪದಡಿ ಪಾಕಿಸ್ತಾನದ ವೇಗದ ಬೌಲರ್ ಹಸನ್ ಅಲಿ ಅವರನ್ನು ವಾಗ್ದಂಡನೆಗೆ ಒಳಪಡಿಸಲಾಗಿದೆ. ನಿಧಾನಗತಿಯಲ್ಲಿ ಬೌಲಿಂಗ್ ಮಾಡಿದ ಬಾಂಗ್ಲಾದೇಶಕ್ಕೆ ದಂಡ ವಿಧಿಸಲಾಗಿದೆ.

ಮೊದಲ ಪಂದ್ಯದಲ್ಲಿ ಬಾಂಗ್ಲಾ ಬ್ಯಾಟರ್ ನೂರುಲ್ ಹಸನ್ ವಿಕೆಟ್ ಗಳಿಸಿದ ಹಸನ್ ಅಲಿ ಗೇಲಿ ಮಾಡುವ ರೀತಿಯಲ್ಲಿ ಸಂಭ್ರಮಿಸಿದ್ದರು.

ಇಂಡೊನೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿ

ಎರಡೂ ಗೇಮ್‌ಗಳಲ್ಲಿ ಸಿಂಧುಗೆ ತಮ್ಮ ನೈಜ ಸಾಮರ್ಥ್ಯ ತೋರಲು ಆಗಲಿಲ್ಲ. ಎರಡನೇ ಗೇಮ್‌ನಲ್ಲಿ ಕೆಲವು ಪಾಯಿಂಟ್ ಗಳಿಸಿ ಸ್ವಲ್ಪ ಪ್ರತಿರೋಧ ತೋರಿದರು.

ಅಕಾನೆಗೆ ಮಣಿದ ಸಿಂಧು

ಬಾಲಿ, ಇಂಡೊನೇಷ್ಯಾ (ಪಿಟಿಐ): ಜಪಾನ್ ದೇಶದ ಅಕಾನೆ ಯಾಮಗುಚಿ ಎದುರು ಸುಲಭವಾಗಿ ಸೋಲನ್ನಪ್ಪಿದ ಭಾರತದ ಪಿ.ವಿ.ಸಿಂಧು ಇಂಡೊನೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯಿಂದ ಹೊರನಡೆದರು. ಕಿದಂಬಿ ಶ್ರೀಕಾಂತ್ ಕೂಡ ನಿರಾಸೆ ಅನುಭವಿಸಿದರು.

ಶನಿವಾರ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ಸಿಂಧು 13-21, 9-21ರಿಂದ ಅಕಾನೆ ಎದುರು ಮುಗ್ಗರಿಸಿದರು. ಕೇವಲ 32 ನಿಮಿಷಗಳಲ್ಲಿ ಹಣಾಹಣಿ ಕೊನೆಗೊಂಡಿತು.

ಅಕಾನೆ ಯಾಮಗುಚಿ – ಎಎಫ್‌ಪಿ ಚಿತ್ರ

ವಿಶ್ವ ಚಾಂಪಿಯನ್ ಸಿಂಧು ಈ ಹಿಂದೆ ಜಪಾನ್ ಆಟಗಾರ್ತಿ ಎದುರು ಆಡಿದ 19 ಪಂದ್ಯಗಳಲ್ಲಿ 12ರಲ್ಲಿ ಜಯ ಸಾಧಿಸಿದ್ದರು. ಅಲ್ಲದೆ ಈ ವರ್ಷ ಕಣಕ್ಕಿಳಿದ ಎರಡೂ ಪಂದ್ಯಗಳಲ್ಲಿ ಭಾರತದ ಆಟಗಾರ್ತಿಗೆ ಜಯ ಒಲಿದಿತ್ತು. ಆದರೆ ಈ ಸೆಣಸಾಟದಲ್ಲಿ ಅಕಾನೆ ಸವಾಲು ಮೀರಲು ಸಿಂಧು ಅವರಿಗೆ ಸಾಧ್ಯವಾಗಲಿಲ್ಲ.

ಜಪಾನ್ ಆಟಗಾರ್ತಿಯು ಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ, ಕೊರಿಯಾ ಆಟಗಾರ್ತಿ ಆ್ಯನ್ ಸೆಯುಂಗ್ ಮತ್ತು ಥಾಯ್ಲೆಂಡ್‌ನ ಫಿಟ್ಟಾಯಪಾರ್ನ್ ಚೈವಾನ್ ನಡುವಣ ಸೆಮಿಫೈನಲ್ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಪುರುಷರ ಸಿಂಗಲ್ಸ್ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಶ್ರೀಕಾಂತ್ 14-21, 9-21ರಿಂದ ಡೆನ್ಮಾರ್ಕ್‌ನ ಆ್ಯಂಡರ್ಸ್ ಆ್ಯಂಟನ್ಸನ್ ಎದುರು ಕೈಚೆಲ್ಲಿದರು.

ವಿಜಯೋತ್ಸವ ಕಾರ್ಯಕ್ರಮದಲ್ಲಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ತಂಡದ ನಾಯಕ ಮಹೇಂದ್ರಸಿಂಗ್ ಧೋನಿ ಅವರನ್ನು ಅಭಿನಂದಿಸಿದರು –ಪಿಟಿಐ ಚಿತ್ರ

ಧೋನಿಗೆ ಚೆನ್ನೈನಲ್ಲಿ ಕೊನೆಯ ಟಿ20 ಆಡುವ ಆಸೆ

ಚೆನ್ನೈ (ಪಿಟಿಐ): ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರಸಿಂಗ್ ಧೋನಿ ತಮ್ಮ ವೃತ್ತಿಜೀವನದ ಕೊನೆಯ ಟಿ20 ಪಂದ್ಯವನ್ನು ಚೆನ್ನೈನಲ್ಲಿ ಆಡುವ ಆಸೆ ವ್ಯಕ್ತಪಡಿಸಿದ್ದಾರೆ.

ಈಚೆಗೆ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ)ನಲ್ಲಿ ನಡೆದ ಐಪಿಎಲ್‌ನಲ್ಲಿ ಅವರ ನಾಯಕತ್ವದ ಸಿಎಸ್‌ಕೆ ತಂಡವು ಚಾಂಪಿಯನ್ ಆಗಿತ್ತು. ಶನಿವಾರ ಇಲ್ಲಿ ನಡೆದ 'ಚಾಂಪಿಯನ್ಸ್ ಕಾಲ್' ವಿಜಯೋತ್ಸವದಲ್ಲಿ ಅವರು ಮಾತನಾಡಿದರು.

'ಕ್ರಿಕೆಟ್ ಜೀವನವನ್ನು ಶಿಸ್ತಿನಿಂದ ಯೋಜಿಸಿದ್ದೇನೆ. ಕೊನೆಯ ಅಂತರರಾಷ್ಟ್ರೀಯ ಏಕದಿನ ಪಂದ್ಯವನ್ನು ತವರೂರು ರಾಂಚಿಯಲ್ಲಿ ಆಡಿದ್ದೆ. ಟಿ20 ಮಾದರಿಯ ಪಂದ್ಯವನ್ನು ಚೆನ್ನೈನಲ್ಲಿ ಆಡುವ ಆಸೆ ಇದೆ. ಅದು ಮುಂದಿನ ವರ್ಷವೂ ಆಗಬಹುದು ಅಥವಾ ಐದು ವರ್ಷಗಳ ನಂತರವೂ ಆಗಬಹುದು' ಎಂದು ಧೋನಿ ಹೇಳಿದ್ದಾರೆ.

ಮುಂದಿನ ವರ್ಷದ ಐಪಿಎಲ್‌ಗೆ ಆಲ್‌ರೌಂಡರ್ ರವೀಂದ್ರ ಜಡೇಜ ಮತ್ತು ಋತುರಾಜ್ ಗಾಯಕವಾಡ್ ಅವರನ್ನು ಉಳಿಸಿಕೊಂಡಿದೆ.

ಬ್ಯಾಸ್ಕೆಟ್‌ಬಾಲ್ ಲೀಗ್ ಉದ್ಘಾಟನೆ: ಮುಖ್ಯಮಂತ್ರಿ ಭರವಸೆ

'ಐಎನ್‌ಬಿಎಲ್‌ಗೆ ಸಂಪೂರ್ಣ ನೆರವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೊದಲ ಬಾರಿ ಆಯೋಜಿಸಲು ಉದ್ದೇಶಿಸಿರುವ ಇಂಡಿಯನ್ ನ್ಯಾಷನಲ್ ಬ್ಯಾಸ್ಕೆಟ್‌ಬಾಲ್ ಲೀಗ್‌ಗೆ ರಾಜ್ಯದಲ್ಲಿ ಎಲ್ಲ ರೀತಿಯ ಸಹಕಾರ, ನೆರವು ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಇಂಡಿಯನ್ ನ್ಯಾಶನಲ್ ಬ್ಯಾಸ್ಕೆಟ್‌ಬಾಲ್ ಲೀಗ್‌ನ (ಐಎನ್‌ಬಿಲ್) ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ದೇಶದಲ್ಲಿ ಕ್ರಿಕೆಟ್, ಕಬಡ್ಡಿ, ಫುಟ್‌ಬಾಲ್ ಲೀಗ್‌ಗಳು ಯಶಸ್ವಿಯಾಗಿರುವಂತೆಯೇ ಬ್ಯಾಸ್ಕೆಟ್‌ಬಾಲ್ ಕ್ರೀಡೆ ಅಭಿವೃದ್ಧಿ ಹೊಂದಬೇಕು; ಯಶಸ್ಸು ಸಾಧಿಸಬೇಕು. ಈ ನಿಟ್ಟಿನಲ್ಲಿ ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ (ಬಿಎಫ್‌ಐ) ಲೀಗ್ ಆಯೋಜನೆಗೆ ಮುಂದಾಗಿರುವುದಕ್ಕೆ ಸಂಸ್ಥೆಯನ್ನು ಅಭಿನಂದಿಸುತ್ತೇನೆ. ಲೀಗ್‌ನಿಂದಾಗಿ ಅಂತರರಾಷ್ಟ್ರೀಯ ಮಟ್ಟದ ಖ್ಯಾತ ಆಟಗಾರರು ಬೆಂಗಳೂರಿಗೆ ಬಂದು ಆಡುವಂತಾಗಬೇಕು' ಎಂದರು.

ರಾಜ್ಯಪಾಲ ಥಾವರ್‌ಚಂದ್ ಗೆಹಲೋಟ್ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಲೀಗ್ ಉದ್ಘಾಟಿಸಿದರು. ನಟ ಯಶ್, ಬಿಎಫ್‌ಐ ಅಧ್ಯಕ್ಷ ಕೆ.ಗೋವಿಂದರಾಜು, ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ ಇದ್ದರು – ಪ್ರಜಾವಾಣಿ ಚಿತ್ರ

'ಟೋಕಿಯೊ ಒಲಿಂಪಿಕ್ಸ್‌ನಲ್ಲಿ ದೇಶದ ಅಥ್ಲೀಟ್‌ಗಳು ಉತ್ತಮ ಸಾಧನೆ ತೋರಿದರು. ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವ ಸಾಮರ್ಥ್ಯ ಇರುವ 75 ಅಥ್ಲೀಟ್‌ಗಳನ್ನು ಆಯ್ಕೆಮಾಡಿ ತರಬೇತಿ ನೀಡುವ ಯೋಜನೆಯ ಪ್ರಕ್ರಿಯೆ ರಾಜ್ಯದಲ್ಲಿ ಈಗಾಗಲೇ ಆರಂಭಿಸಲಾಗಿದೆ' ಎಂದರು.

ಸಮಾರಂಭದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋಟ್, ರಾಜ್ಯ ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಸಕ್ಕರೆ ಮತ್ತು ಜವಳಿ ಖಾತೆ ಸಚಿವ ಶಂಕರ್ ಪಾಟೀಲ ಮುನೇನಕೊಪ್ಪ, ಕ್ರೀಡಾ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಶಾಲಿನಿ ರಜನೀಶ್, ಬಿಎಫ್‌ಐ ಅಧ್ಯಕ್ಷ ಕೆ.ಗೋವಿಂದರಾಜು, ಪ್ರಧಾನ ಕಾರ್ಯದರ್ಶಿ ಚಂದ್ರಮುಖಿ ಶರ್ಮಾ, ಗಾಯಕ ವಿಜಯಪ್ರಕಾಶ್, ನಟ ಯಶ್ ಮತ್ತಿತರರಿದ್ದರು.

ಬ್ಯಾಂಕ್ ಆಫ್ ಬರೋಡಾಗೆ ಜಯ: ಲೀಗ್ ಪ್ರಯೋಗಾರ್ಥ ನಡೆದ ಬೆಂಗಳೂರು ಓಪನ್ 3X3 ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಬ್ಯಾಂಕ್ ಆಫ್ ಬರೋಡಾ ತಂಡವು ಪ್ರಶಸ್ತಿ ಜಯಿಸಿತು. ಮಹಿಳೆಯರ ವಿಭಾಗದಲ್ಲಿ ಬಾಲರ್ಸ್ ತಂಡಕ್ಕೆ ಪ್ರಶಸ್ತಿ ಒಲಿಯಿತು.

ಬ್ಯಾಡ್ಮಿಂಟನ್: ಪ್ರತೀಕ್, ಸುಹಿನಾ ಚಾಂಪಿಯನ್

ಮೈಸೂರು: ಬೆಂಗಳೂರಿನ ಪ್ರತೀಕ್ ಕೌಂಡಿಲ್ಯ ಹಾಗೂ ಸುಹಿನಾ ರಾಯ್ ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆ ಆಶ್ರಯದಲ್ಲಿ ಇಲ್ಲಿ ನಡೆದ ರಾಜ್ಯ ಸಬ್ ಜೂನಿಯರ್ (13 ವರ್ಷದೊಳಗೆ) ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದಾರೆ.

ಬಾಲಕರ ವಿಭಾಗದ ಸಿಂಗಲ್ಸ್ ಫೈನಲ್‌ನಲ್ಲಿ ಅಗ್ರಶ್ರೇಯಾಂಕದ ಪ್ರತೀಕ್ 21–9, 21–10ರಲ್ಲಿ ಎಂ.ಪ್ರಣವ್ ಅವರನ್ನು ಪರಾಭವಗೊಳಿಸಿದರು. ಸೆಮಿಫೈನಲ್ ಪಂದ್ಯಗಳಲ್ಲಿ ಪ್ರತೀಕ್ 21–10, 21–12ರಲ್ಲಿ ಸಾಯಿ ಪುಷ್ಕರ್ ಎದುರೂ, ಪ್ರಣವ್ 21–19, 21–17ರಲ್ಲಿ ಆರ್.ಹಾರ್ದಿಕ್ ದಿವ್ಯಾಂಶು ವಿರುದ್ಧವೂ ಗೆದ್ದರು.

ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಸುಹಿನಾ 21–17, 21–11ರಲ್ಲಿ ಸಿಯೋನಾ ಶರ್ಮ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು. ಸೆಮಿ ಫೈನಲ್ ಹಣಾಹಣಿಯಲ್ಲಿ ಸಿಯೋನಾ 21–15, 22–20ರಲ್ಲಿ ಅಗ್ರಶ್ರೇಯಾಂಕದ ಆಟಗಾರ್ತಿ ಅದಿತಿ ದೀಪ್ ರಾಜ್ ಮೇಲೂ, ಸುಹಿನಾ 21–19, 21–7ರಲ್ಲಿ ಹಿತೈಶ್ರೀ ಎಲ್.ರಾಜಯ್ಯ ಎದುರೂ ಜಯ ಗಳಿಸಿದರು.

ಬಾಲಕರ ಡಬಲ್ಸ್ ಫೈನಲ್‌ನಲ್ಲಿ ಎನ್.ಅಮಿತ್ ರಾಜ್ ಹಾಗೂ ಹಾರ್ದಿಕ್ ದಿವ್ಯಾಂಶು 21–14, 21–14ರಲ್ಲಿ ಪ್ರತೀಕ್ ಕೌಂಡಿಲ್ಯ ಹಾಗೂ ಎಂ.ಪ್ರಣವ್ ಅವರನ್ನು ಮಣಿಸಿ ಚಾಂಪಿಯನ್ ಆದರು. ಬಾಲಕಿಯರ ಡಬಲ್ಸ್ ಫೈನಲ್‌ನಲ್ಲಿ ವೃದ್ಧಿ ಪೊನ್ನಮ್ಮ ಹಾಗೂ ಅದಿತಿ ದೀಪಕ್ ರಾಜ್ 21–13, 21–15ರಲ್ಲಿ ಆಕಿಯಾ ಶೆಟ್ಟಿ ಹಾಗೂ ಪಲ್ಲವಿ ವೆಂಕಟೇಶ್ ಅವರನ್ನು ಸೋಲಿಸಿ ಪ್ರಶಸ್ತಿ ಜಯಿಸಿದರು.

ಐಎಸ್‌ಎಲ್: ಬೆಂಗಳೂರು ಶುಭಾರಂಭ

ಬ್ಯಾಂಬೊಲಿಮ್: ಸಂಘಟಿತ ಆಟ ವಾಡಿದ ಬೆಂಗಳೂರು ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಜಯದ ಆರಂಭ ಮಾಡಿತು. ಶನಿವಾರ ನಡೆದ ಪಂದ್ಯದಲ್ಲಿ 4–2ರಿಂದ ನಾರ್ತ್ ಈಸ್ಟ್ ಯುನೈಟೆಡ್ ಎಫ್‌ಸಿ ಎದುರು ಗೆದ್ದಿತು.

ಕ್ಲೇಟನ್ ಸಿಲ್ವಾ (14ನೇ ನಿಮಿಷ), ಜಯೇಶ್ ರಾಣೆ (42ನೇ ನಿ) ಹಾಗೂ ಪ್ರಿನ್ಸ್ ಇಬಾರಾ (81ನೇ ನಿ) ಕಾಲ್ಚಳಕ ತೋರಿದರು. ಒಂದು ಗೋಲು ಮಶೂರ್ ಶರೀಫ್ (22ನೇ ನಿ) ಅವರಿಂದ 'ಉಡುಗೊರೆ'ಯಾಗಿ ಬಂದಿತು.

ನಾರ್ತ್‌ಈಸ್ಟ್ ಪರ ದೇಶಾನ್ ಬ್ರೌನ್ (17ನೇ ನಿ) ಮತ್ತು ಮಥಿಯಾಸ್ (25ನೇ) ಗೋಲು ದಾಖಲಿಸಿದರು.

ಕ್ಲೇಟನ್ ಸಿಲ್ವಾ ಸಂಭ್ರಮ

ಈಸ್ಟ್ ಬೆಂಗಾಲ್–ಜೆಎಫ್‌ಸಿ ಪಂದ್ಯ: ಎಸ್‌ಸಿ ಈಸ್ಟ್ ಬೆಂಗಾಲ್ ತಂಡ ಜೆಮ್ಶೆಡ್‌ಪುರ ಎಫ್‌ಸಿಯನ್ನು ಭಾನುವಾರ ಎದುರಿಸಲಿದೆ. ಪಂದ್ಯವು ಮುಂದಿನ ಶನಿವಾರ ಎಟಿಕೆ ಮೋಹನ್ ಬಾಗನ್ ಎದುರು ನಡೆಯಲಿರುವ ಕೋಲ್ಕತ್ತ ಡರ್ಬಿಗೆ ಮೊದಲಿನ 'ಅಭ್ಯಾಸ'ವಾಗಲಿದ್ದು ಜಯದ ಮೂಲಕ ಭರವಸೆ ಹೆಚ್ಚಿಸಿಕೊಳ್ಳಲು ಈಸ್ಟ್ ಬೆಂಗಾಲ್ ಪ್ರಯತ್ನಿಸಲಿದೆ.

ಕಳೆದ ಬಾರಿ ಈಸ್ಟ್ ಬೆಂಗಾಲ್ ಕೇವಲ ಮೂರು ಪಂದ್ಯಗಳಲ್ಲಿ ಜಯ ಸಾಧಿಸಿ ಲೀಗ್ ಹಂತದ ಪಾಯಿಂಟ್ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನಕ್ಕೆ ಕುಸಿದಿತ್ತು.

ಜೆಮ್ಶೆಡ್‌ಪುರ ಕಳೆದ ಆವೃತ್ತಿಯಲ್ಲಿ ಕೇವಲ ನಾಲ್ಕು ಪಾಯಿಂಟ್‌ಗಳಿಂದ ಸೆಮಿಫೈನಲ್ ಅವಕಾಶ ಕಳೆದುಕೊಂಡಿತ್ತು. ಈ ವರ್ಷ ಮತ್ತೆ ಗೆಲುವಿನ ಓಟ ಮುಂದುವರಿಸಲು ತಂಡ ಪ್ರಯತ್ನಿಸಲಿದೆ. ಹೀಗಾಗಿ ಈ ಪಂದ್ಯ ಕುತೂಹಲಕ್ಕೆ ಕಾರಣವಾಗಿದೆ.

ಮಹಿಳೆಯರ ಏಕದಿನ ಕ್ರಿಕೆಟ್ ಟೂರ್ನಿ: ಕರ್ನಾಟಕ ತಂಡಕ್ಕೆ ಸೋಲು

ರೈಲ್ವೇಸ್‌ಗೆ ಚಾಂಪಿಯನ್ ಪಟ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೈಲ್ವೇಸ್ ತಂಡ ಬಿಸಿಸಿಐ ಆಯೋಜಿಸಿದ್ದ ಮಹಿಳೆಯರ ಏಕದಿನ ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡಿತು.

ಶನಿವಾರ ನಡೆದ ಪಂದ್ಯದಲ್ಲಿ ಕರ್ನಾಟಕವನ್ನು 74 ರನ್‌ಗಳಿಗೆ ಆಲೌಟ್ ಮಾಡಿದ ರೈಲ್ವೇಸ್ ಎಂಟು ವಿಕೆಟ್‌ಗಳಿಂದ ಗೆಲುವು ಸಾಧಿಸಿತು.

ಸುಲಭ ಗುರಿ ಬೆನ್ನತ್ತಿದ ರೈಲ್ವೇಸ್‌ನ ಆರಂಭಿಕ ಬ್ಯಾಟರ್ ಪೂನಂ ರಾವತ್ ಕೇವಲ ಎರಡು ರನ್ ಗಳಿಸಿ ಔಟಾಗಿದ್ದರು. ಆದರೆ ಮೇಘನಾ ಮತ್ತು ನುಶತ್ ಪರ್ವೀನ್ ಅವರು ಅಮೋಘ ಬ್ಯಾಟಿಂಗ್ ಮೂಲಕ ಮಿಂಚಿದರು. ಮೇಘನಾ (36; 43 ಎಸೆತ, 5 ಬೌಂಡರಿ, 1 ಸಿಕ್ಸರ್) ಔಟಾದ ನಂತರ ನುಶತ್ ಮತ್ತು ಹೇಮಲತಾ ಜೊತೆಗೂಡಿ ತಂಡವನ್ನು ದಡ ಸೇರಿಸಿದರು.

ರೇಣುಕಾ ಸಿಂಗ್ –ಟ್ವಿಟರ್ ಚಿತ್ರ

ಟಾಸ್ ಗೆದ್ದ ರೈಲ್ವೇಸ್ ನಾಯಕಿ ಮಿಥಾಲಿ ರಾಜ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದ್ದರು. ಎರಡನೇ ಓವರ್‌ನ ಕೊನೆಯ ಎಸೆತದಲ್ಲೇ ಕರ್ನಾಟಕ ವಿಕೆಟ್ ಕಳೆದುಕೊಂಡಿತು. ನಂತರ ಬ್ಯಾಟರ್‌ಗಳನ್ನು ಸತತವಾಗಿ ರೈಲ್ವೇಸ್ ಕಾಡಿತು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 38 ಓವರ್‌ಗಳಲ್ಲಿ 74ಕ್ಕೆ ಆಲೌಟ್ (ದಿವ್ಯಾ 12, ಪ್ರತ್ಯೂಷಾ 16, ನಿಕ್ಕಿ ಪ್ರಸಾದ್ 21; ಮೇಘನಾ ಸಿಂಗ್ 21ಕ್ಕೆ2, ರೇಣುಕಾ ಸಿಂಗ್ 14ಕ್ಕೆ4, ಸ್ನೇಹ್ ರಾಣಾ 10ಕ್ಕೆ2, ಸ್ವಾಗತಿಕಾ ರಥ್ 7ಕ್ಕೆ2); **ರೈಲ್ವೇಸ್:** 22.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 76 (ಮೇಘನಾ 36, ನುಶತ್ ಪರ್ವೀನ್ 20, ಹೇಮಲತಾ 17; ಸಹನಾ ಪವಾರ್ 19ಕ್ಕೆ1, ಎಸ್.ಆರ್.ಪಾಟೀಲ್ 15ಕ್ಕೆ1). ಫಲಿತಾಂಶ: ರೈಲ್ವೇಸ್‌ಗೆ 8 ವಿಕೆಟ್‌ಗಳ ಗೆಲುವು; ಪ್ರಶಸ್ತಿ.

ಮುಂದಿನ ಐಪಿಎಲ್ ಭಾರತದಲ್ಲಿ: ಶಾ

ನವದೆಹಲಿ: ಮುಂದಿನ ವರ್ಷ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯನ್ನು ಭಾರತದಲ್ಲೇ ಆಯೋಜಿಸಲಾಗುವುದು ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ತಿಳಿಸಿದ್ದಾರೆ.

ಎರಡು ಹೊಸ ತಂಡಗಳ ಸೇರ್ಪಡೆಯೊಂದಿಗೆ ಟೂರ್ನಿ ಮತ್ತಷ್ಟು ರೋಚಕವಾಗಲಿದೆ. ಹರಾಜಿನ ನಂತರ ಹೊಸ ತಂಡಗಳ ಬಗ್ಗೆ ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದು ಜಯ್ ಶಾ ತಿಳಿಸಿರುವುದಾಗಿ 'ಎಎನ್‌ಐ' ಸುದ್ದಿಸಂಸ್ಥೆ ವರದಿ ಮಾಡಿದೆ.

ಕೋವಿಡ್ ಸಾಂಕ್ರಾಮಿಕದ ಮಧ್ಯೆ 2021ರ ಐಪಿಎಲ್ ಟೂರ್ನಿ ಭಾರತದಲ್ಲಿ ಆರಂಭಗೊಂಡಿತ್ತು. ಆದರೆ ಬಯೋಬಬ ಲ್‌ನಲ್ಲಿ ಕೆಲವು ಆಟಗಾರರಿಗೆ ಸೋಂಕು ಕಾಣಿಸಿಕೊಂಡ ಕಾರಣ ಟೂರ್ನಿಯನ್ನು ಅರ್ಧದಲ್ಲೇ ಸ್ಥಗಿತಗೊಳಿಸಲಾಗಿತ್ತು. ನಂತರ, ಉಳಿದ ಪಂದ್ಯಗಳನ್ನು ಯುಎಇಯಲ್ಲಿ ಆಯೋಜಿಸಲಾಗಿತ್ತು. ಚೆನ್ನೈ ಸೂಪರ್ ಕಿಂಗ್ಸ್ (ಸಿಎಸ್‌ಕೆ) ತಂಡವು ಪ್ರಶಸ್ತಿ ಗೆದ್ದುಕೊಂಡಿತ್ತು.

ಚೀನಾ ಸರ್ಕಾರದ ಮೇಲೆ ಅಂತರರಾಷ್ಟ್ರೀಯ ಟೆನಿಸ್ ಆಟಗಾರರ ಒತ್ತಡ

ಟೆನಿಸ್ ತಾರೆ ಫೆಂಗ್ ಶುಯಿ ಎಲ್ಲಿ?

ನ್ಯೂಯಾರ್ಕ್ (ಎಪಿ): 'ಒಲಿಂಪಿಯನ್ ಟೆನಿಸ್ ಆಟಗಾರ್ತಿ ಪೆಂಗ್ ಶುಯಿ ಎಲ್ಲಿದ್ದಾರೆ' ಎಂದು ಚೀನಾ ಸರ್ಕಾರವನ್ನು ಟೆನಿಸ್ ತಾರೆಯರು ಪ್ರಶ್ನಿಸಿದ್ದಾರೆ.

ಕಳೆದ ಕೆಲ ದಿನಗಳಿಂದ ಪೆಂಗ್ ಶುಯಿ ನಾಪತ್ತೆಯಾಗಿರುವುದು ಈಗ ವಿಶ್ವಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಚೀನಾ ಸರ್ಕಾರದ ಕುರಿತು ಮತ್ತೊಮ್ಮೆ ಅನುಮಾನಗಳು ವ್ಯಕ್ತವಾಗುತ್ತಿವೆ. ಕಮ್ಯುನಿಸ್ಟ್ ಪಕ್ಷದ ಪ್ರಭಾವಿ ನಾಯಕ ಝೂಂಗ್ ಗವೊಲಿ ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದರೆಂದು ಪೆಂಗ್ ಎರಡು ವಾರಗಳ ಹಿಂದೆ ಆರೋಪಿಸಿದ್ದರು.

ಅದರಿಂದಾಗಿ 'ವೇರ್ ಇಸ್ ಪೆಂಗ್ ಶುಯಿ' ಎಂಬ ಹ್ಯಾಷ್‌ಟ್ಯಾಗ್ ನಡಿ ಅಭಿಯಾನ ಟೆನಿಸ್ ತಾರೆಯರು, ಟೆನಿಸ್ ಆಡಳಿತ ಸಂಸ್ಥೆಗಳು, ಅಥ್ಲೀಟ್‌ಗಳು ಮತ್ತು ಮಾಜಿ ಆಟಗಾರರು ಆರಂಭಿಸಿದ್ದಾರೆ. ಆಡಳಿತಾರೂಢ ಕಮ್ಯುನಿಸ್ಟ್ ಪಕ್ಷದ ಮೇಲೆ ಒತ್ತಡ ಹೇರುತ್ತಿದ್ದಾರೆ.

'ಸೆನ್ಸಾರ್‌ಷಿಪ್ ಯಾವುದೇ ಕಾರಣಕ್ಕೂ ಇರಬಾರದು' ಎಂದು ಜಪಾನಿನ ಟೆನಿಸ್ ತಾರೆ ನವೋಮಿ ಒಸಾಕಾ ಟ್ವೀಟ್ ಮಾಡಿದ್ದಾರೆ.

ಪೆಂಗ್ ಶುಯಿ

ಅದಕ್ಕೆ ಬೆಂಬಲಿಸಿರುವ ಸೆರೆನಾ ವಿಲಿಯಮ್ಸ್, 'ಪ್ರಕರಣದ ಸಮಗ್ರ ತನಿಖೆಯಾಗಬೇಕು' ಎಂದಿದ್ದಾರೆ.

'ಇದು ಭಯಾನಕವಾದದ್ದು. ಒಬ್ಬ ವ್ಯಕ್ತಿ ಕಾಣೆಯಾಗುವುದೆಂದರೇನು' ಎಂದು ನೊವಾಕ್ ಜೊಕೊವಿಚ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಇದೇ ಸ್ಥಿತಿ ಮುಂದುವರಿದರೆ, ಚೀನಾದಲ್ಲಿ ನಡೆಯಲಿರುವ ಡಬ್ಲ್ಯುಟಿಎ ಟೆನಿಸ್ ಟೂರ್ನಿಗಳನ್ನು ರದ್ದುಪಡಿಸಲಾಗುವುದು' ಎಂದು ಮಹಿಳಾ ಟೆನಿಸ್ ಅಸೋಸಿಯೇಷನ್ ಮುಖ್ಯಸ್ಥ ಸ್ಟೀವ್ ಸೈಮನ್ ಎಚ್ಚರಿಕೆ ನೀಡಿದ್ದಾರೆ.

ಪೆಂಗ್ ಬೆಂಬಲಕ್ಕೆ ಇಡೀ ಟೆನಿಸ್ ಕ್ಷೇತ್ರ ಒಂದಾಗಿ ನಿಲ್ಲಬೇಕು ಎಂದು ವೃತ್ತಿಪರ ಟೆನಿಸ್ ಆಟಗಾರರ ಸಂಘಟನೆ ಕರೆ ನೀಡಿದೆ.

'ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ)ಯು ತನ್ನ ವಿಶೇಷಾಧಿಕಾರ ಬಳಸಬೇಕು. ಪೆಂಗ್ ಶುಯಿ ಅವರು ಎಲ್ಲಿದ್ದಾರೆ ಎಂಬ ಕುರಿತ ಮಾಹಿತಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಬಹಿರಂಗ ಮಾಡಬೇಕೆಂದು ಚೀನಾದ ಮೇಲೆ ಒತ್ತಡ ಹೇರಬೇಕು ಪಾರದರ್ಶಕ ತನಿಖೆಗೆ ಒತ್ತಾಯಸಿಬೇಕು' ಎಂದು ಗ್ಲೋಬಲ್ ಅಥ್ಲೀಟ್ ಮುಖ್ಯಸ್ಥ ರಾಬ್ ಕೊಯೆಲರ್ ಹೇಳಿದ್ದಾರೆ.

ಇನ್ನು ಎರಡೂವರೆ ತಿಂಗಳ ನಂತರ ಚೀನಾದಲ್ಲಿ ಚಳಿಗಾಲದ ಒಲಿಂಪಿಕ್ಸ್ ನಡೆಯಲಿದೆ. ಚೀನಾದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ, ಯೈಗುರ್ ಮುಸ್ಲಿಂ ಸಮುದಾಯ ಮತ್ತು ಮೂಲನಿವಾಸಿಗಳ ಮೇಲೆ ದೌರ್ಜನ್ಯ ನಡೆದಿರುವುದನ್ನು ಖಂಡಿಸಿ, ಚಳಿಗಾಲದ ಒಲಿಂಪಿಕ್ಸ್ ಬಹಿಷ್ಕರಿಸಬೇಕೆಂಬ ಒತ್ತಾಯ ಹೆಚ್ಚಾಗುತ್ತಿದೆ. ಎನ್‌ಬಿಎ ಬ್ಯಾಸ್ಕೆಟ್‌ಬಾಲ್ ಆಟಗಾರ ಎನೆಸ್ ಕಾಂಟರ್ ಈ ಕುರಿತು 'ಕ್ರೂರ ಸರ್ವಾಧಿಕಾರಿ' ಎಂದು ಈಚೆಗೆ ಖಂಡಿಸಿದ್ದರು.

ಪೆಂಗ್ ಸುರಕ್ಷಿತವಾಗಿದ್ದಾರೆ: ಕಮ್ಯುನಿಸ್ಟ್ ಪಕ್ಷದ ಮುಖವಾಣಿಯಾಗಿರುವ ಪಿಪಲ್ಸ್ ಡೇಲಿ ಪತ್ರಿಕೆಯ ಸಂಪಾದಕ ಹು ಷಿನ್, 'ಪೆಂಗ್ ಶುಯ್ ತಮ್ಮ ಮನೆಯಲ್ಲಿ ಸುರಕ್ಷಿತವಾಗಿದ್ದಾರೆ. ಶೀಘ್ರದಲ್ಲಿಯೇ ಅವರು ಎಲ್ಲರ ಮುಂದೆ ಬರಲಿದ್ದಾರೆ' ಎಂದು ವೀ ಚಾಟ್‌ನಲ್ಲಿ ಸಂದೇಶ ಹಾಕಿದ್ದಾರೆ. ಜೊತೆಗೆ ಪೆಂಗ್ ಅವರು ತಮ್ಮ ಬೆಕ್ಕು ಮತ್ತು ಗೊಂಬೆಗಳೊಂದಿಗೆ ಆಟವಾಡುತ್ತಿರುವ ಚಿತ್ರಗಳನ್ನೂ ಪೋಸ್ಟ್ ಮಾಡಿದ್ದಾರೆ.

‘3 ವರ್ಷಗಳ ಹಿಂದೆಯೇ ಪೇನ್ ದಂಡಿಸಬೇಕಿತ್ತು’

ಟಿಮ್ ಪೇನ್ –ರಾಯಿಟರ್ಸ್ ಚಿತ್ರ

ಸಿಡ್ನಿ (ಪಿಟಿಐ): ಲೈಂಗಿಕ ಮನಸ್ಥಿತಿಯಿಂದ ಸಂದೇಶಗಳನ್ನು ಕಳುಹಿಸಿದ ಟಿಮ್ ಪೇನ್ ಅವರನ್ನು ಮೂರು ವರ್ಷಗಳ ಹಿಂದೆ ಕ್ರಿಕೆಟ್ ಆಸ್ಟ್ರೇಲಿಯಾವೇ ನಾಯಕತ್ವದಿಂದ ಹೊರಹಾಕಬೇಕಾಗಿತ್ತು ಎಂದು ಅಧ್ಯಕ್ಷ ರಿಚರ್ಡ್ ಫ್ರುಡೆನ್‌ಸ್ಟೇನ್ ಶನಿವಾರ ಅಭಿಪ್ರಾಯಪಟ್ಟಿದ್ದಾರೆ.

ತಂಡದ ನೆರವು ಸಿಬ್ಬಂದಿಗೆ ಸಂದೇಶ ಕಳುಹಿಸಿದ ಆರೋಪದ ಹಿನ್ನೆಲೆಯಲ್ಲಿ ಪೇನ್ ಅವರು ಟೆಸ್ಟ್ ನಾಯಕತ್ವಕ್ಕೆ ಶುಕ್ರವಾರ ರಾಜೀನಾಮೆ ನೀಡಿದ್ದರು. ಈ ಕುರಿತು ಶನಿವಾರ ಮಾತನಾಡಿದ ಫ್ರುಡೆನ್‌ಸ್ಟೇನ್ 'ತನಿಖೆ ಆರಂಭವಾದ ಸಂದರ್ಭದಲ್ಲೇ ಅವರ ವಿರುದ್ಧ ಕ್ರಮ ಕೈಗೊಳ್ಳದೇ ಇದ್ದುದು ಕ್ರಿಕೆಟ್ ಆಸ್ಟ್ರೇಲಿಯಾ ಮಾಡಿರುವ ದೊಡ್ಡ ಲೋಪ' ಎಂದಿದ್ದಾರೆ.

ಸ್ಟೀವ್ ಸ್ಮಿತ್‌ಗೆ ಅವಕಾಶ?: ಬ್ಯಾಟಿಂಗ್ ದಿಗ್ಗಜ ಸ್ಟೀವ್ ಸ್ಮಿತ್ ಅವರನ್ನು ಆಸ್ಟ್ರೇಲಿಯಾ ಟೆಸ್ಟ್ ತಂಡದ ನಾಯಕನಾಗಿ ನೇಮಕ ಮಾಡುವ ಸಾಧ್ಯತೆ ಇದೆ. ಪೇನ್ ರಾಜೀನಾಮೆ ಹಿನ್ನೆಲೆಯಲ್ಲಿ ಆಯ್ಕೆ ಸಮಿತಿ ಶನಿವಾರ ಕ್ರಿಕೆಟ್ ಆಸ್ಟ್ರೇಲಿಯಾವನ್ನು ಸಂಪರ್ಕಿಸಿದ್ದು ಸ್ಮಿತ್ ಅವರ ಹೆಸರನ್ನು ಸೂಚಿಸಿದ್ದಾರೆ.

2018ರಲ್ಲಿ ದಕ್ಷಿಣ ಆಫ್ರಿಕಾ ಎದುರು ನಡೆದ ಟೆಸ್ಟ್ ಪಂದ್ಯದಲ್ಲಿ ಚೆಂಡು ವಿರೂಪಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿ ಸ್ಟೀವ್ ಸ್ಮಿತ್ ಅವರ ಮೇಲೆ ಒಂದು ವರ್ಷ ನಿಷೇಧ ಹೇರಲಾಗಿತ್ತು. ಆದ್ದರಿಂದ ಅವರು ಆಗ ನಾಯಕ ಸ್ಥಾನ ತೊರೆಯಬೇಕಾಗಿ ಬಂದಿತ್ತು.

ಭಾರತಕ್ಕೆ ಬಂದ ಪಾಕ್ ಹಾಕಿ ತಂಡ

ನವದೆಹಲಿ (ಪಿಟಿಐ): ಪಾಕಿಸ್ತಾನದ ಜೂನಿಯರ್ ಹಾಕಿ ತಂಡವು ಶನಿವಾರ ಭಾರತಕ್ಕೆ ಬಂದಿಳಿಯಿತು.

ಇದೇ 24ರಿಂದ ಭುವನೇಶ್ವರದಲ್ಲಿ ನಡೆಯಲಿರುವ ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯಲ್ಲಿ ಆಡಲು ತಂಡವು ಆಗಮಿಸಿದೆ ಎಂದು ಪಾಕಿಸ್ತಾನ ಹೈಕಮಿಷನರ್ ತಿಳಿಸಿದ್ದಾರೆ.

'ವಿದೇಶ ವ್ಯವಹಾರಗಳ ಹೈಕಮಿಷನ್ ಅಧಿಕಾರಿ ಆಫ್ತಾಬ್ ಹಸನ್ ಖಾನ್ ಅವರು ಪಾಕ್ ಜೂನಿಯರ್ ಹಾಕಿ ತಂಡವನ್ನು ಸ್ವಾಗತಿಸಿದ್ದಾರೆ. ಅವರ ಕಚೇರಿ ಇರುವ ಚಾನ್ಸರಿ ಸಂಕೀರ್ಣದಲ್ಲಿಯೇ ಆಟಗಾರರಿಗೆ ಮಧ್ಯಾಹ್ನ ಭೋಜನಕೂಟ ಆಯೋಜಿಸಲಾಗಿತ್ತು' ಎಂದು ಪಾಕಿಸ್ತಾನ ಹೈಕಮಿಷನ್ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಎಟಿಪಿ ಫೈನಲ್ಸ್: ಪ್ರಶಸ್ತಿ ಸುತ್ತಿಗೆ ಮೆಡ್ವೆಡೆವ್

ಮೆಡ್ವೆಡೆವ್

ಟುರಿನ್ (ರಾಯಿಟರ್ಸ್): ಹಾಲಿ ಚಾಂಪಿಯನ್, ರಷ್ಯಾದ ಡೇನಿಯಲ್ ಮೆಡ್ವೆಡೆವ್ ಅವರು ಎಟಿಪಿ ಫೈನಲ್ಸ್ ಟೂರ್ನಿಯ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿದ್ದಾರೆ.

ಶನಿವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಅವರು 6-4, 6-2ರಿಂದ ನಾರ್ವೆಯ ಕಾಸ್ಪರ್ ರೂಡ್ ಅವರನ್ನು ಪರಾಭವಗೊಳಿಸಿದರು.

ಫೈನಲ್ ಪಂದ್ಯದಲ್ಲಿ ಸರ್ಬಿಯಾದ ನೊವಾಕ್ ಜೊಕೊವಿಚ್ – ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ನಡುವಣ ನಾಲ್ಕರ ಘಟ್ಟದ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ನಿಂದನೆ: ಅಜೀಂ ರಫೀಕ್ ಕ್ಷಮೆ ಯಾಚನೆ

ಲಂಡನ್ (ಪಿಟಿಐ): ಜನಾಂಗೀಯ ನಿಂದನೆಯ ಸಂದೇಶ ಕಳುಹಿಸಿದ ಆರೋಪಕ್ಕೆ ಒಳಗಾಗಿರುವ ಯಾರ್ಕ್‌ಶೈರ್ ತಂಡದ ಮಾಜಿ ಆಟಗಾರ ಅಜೀಮ್ ರಫೀಕ್ ಶುಕ್ರವಾರ ಕ್ಷಮೆ ಕೋರಿದ್ದಾರೆ.

2011ರಲ್ಲಿ ತಾವು ಕಳುಹಿಸಿದ ಸಂದೇಶ ಕ್ಷಮೆಗೆ ಅರ್ಹವಾದುದಲ್ಲ. ಆ ಸಂದೇಶದ ಬಗ್ಗೆ ವಿಷಾದವಿದೆ ಎಂದು ಅವರು ಹೇಳಿದ್ದಾರೆ.

ಈಚೆಗೆ ನನ್ನ ಖಾತೆಯನ್ನು ಪರಿಶೀಲಿಸಿದಾಗ ಅದು ಗಮನಕ್ಕೆ ಬಂದಿದೆ. ಅದು ಕಂಡು ನಾಚಿಕೆಯಾಯಿತು. ಆದ್ದರಿಂದ ಅಳಿಸಿಹಾಕಿದ್ದೇನೆ' ಎಂದು ರಫೀಕ್ ಹೇಳಿಕೊಂಡಿದ್ದಾರೆ.

NAME CHANGE ANNOUNCEMENT
Log on to :
dhclassifieds.com